ಸಂವಾದ

ಆಗಸ್ಟ್ 2003 ರೂ. 10/- ಮಾಸ ಪತ್ರಿಕೆ





ಜಾನು ಎಂಬ ಬೆಂಕಿ

ಅರಸು ನೆನಪು

ಮೀಸಲಾತಿ ಟೈಟಾನಿಕ್ ಹಡಗು

ಅವಲೋಕನ

- ಡಾ|| ಜಿ.ಎಸ್. ಶಿವರುದ್ರಪ್ಪ
- ಹೆಚ್.ಎಸ್. ದೊರೆಸ್ವಾಮಿ
- ಡಾ|| ಹಿ.ಶಿ. ರಾಮಚಂದ್ರೇಗೌಡ

ಚಂದ್ರಬಾನ್ ಪ್ರಸಾದ್‌ರ

ದಲಿತ್ ಡೈರಿ

ನನಗೆಲ್ಲಿ ಸ್ವಾತಂತ್ರ್ಯ?

ಸಂವಾದ

ಮಾಸ ಪತ್ರಿಕೆ

ಸಂಪುಟ 1   ಸಂಚಿಕೆ 10

ಆಗಸ್ಟ್ 2003

ಸಂಪಾದಕ :

ಇಂದೂಧರ ಹೊನ್ನಾಪುರ

ನೆರವು :

ಕೆಪಿ ದೊಡ್ಡಿ ಶಿವರಾಂ

ಹಾಲ್ಕುರಿಕೆ ಶಿವಶಂಕರ್

ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ

ಬೆಂಗಳೂರು - 560 091

ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
ANJANANAGARA, MAGADI ROAD
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 3
- ಅಂತರಂಗ 5
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್ 8
- ಮುಕ್ತ ಉದ್ಯಮಗಳ ಭರಾಟೆ 10
- ಆದಿವಾಸಿ ನಾಯಕಿ ಜಾನು 12
- ಝಿನ್-ಝಿಲಕ್
  - ಕೆ.ವಿ. ಸುಬ್ಬಣ್ಣ 15
- ದ್ರಾವಿಡ ಜನಾಂಗದ ಸಾಂಸ್ಕೃತಿಕ ವಾರಸುದಾರರು
  - ವೈ. ಮರಿಸ್ವಾಮಿ 16
- ಮೀಸಲಾತಿ ಎಂಬ ಟೈಟಾನಿಕ್ ಹಡಗು
  - ನಾ. ದಿವಾಕರ್ 18



- ದುರ್ಬಲರ ದನಿಯಾದ ಅರಸು
  - ಡಾ|| ಚಂದ್ರಮಾ ಎಸ್. ಕಣಗಲಿ 26
- ಮಾತಂಗನನ್ನು ಅರ್ಥೈಸುವ ಬಗೆ
  - ಗೇಲ್ ಒಂ ವಿಡ್ತ್ 30
- ಬ್ರಹ್ಮನ ಭ್ರೂಣ ಬೆಳೆದಿದ್ದೆಲ್ಲಿ
  - ಪಿ.ಜಿ. ಪಾಟೀಲ್ 36
- ಮೈಲಿಗೆಯೆ ಮಹಾ ಧರ್ಮ; ಅದೇ ಬ್ರಹ್ಮ ಜ್ಞಾನ
  - ಸ್ವಾಮಿ ವಿವೇಕಾನಂದ 38
- ಮೇರಾ ಭಾರತ್ ಮಹಾನ್ 41
- ಬೌದ್ಧ ಧಮ್ಮದ ಪರಿಕಲ್ಪನೆ
  - ಬಿಕ್ಕು ಎಸ್. ಧಮ್ಮಿಕ 42
- ಅವಲೋಕನ-ಸಂವಾದ 22
  - ಡಾ|| ಜಿ.ಎಸ್. ಶಿವರುದ್ರಪ್ಪ
  - ಹೆಚ್.ಎಸ್. ದೊರೆಸ್ವಾಮಿ
  - ಡಾ|| ಪಿ.ಶಿ. ರಾಮಚಂದ್ರೇಗೌಡ

ಕವನಗಳು :

- ನನಗೆಲ್ಲಿ ಸ್ವಾತಂತ್ರ್ಯ 11
- ಗತಿ-ಚಿತ್ರ - 14
- ಬುದ್ಧ 34
- ಅಮರ ಚಿಂತಗ ಹಾಡುಗಳು - 35



ಮುಖಪುಟ ವಿನ್ಯಾಸ : ರಾಥೋಡ್

ಅರಳಿಕಟ್ಟೆ ಕೆಳಗೆ ಕುಳಿತು ಹಳೇ ಗೆಳತಿ ನೋಡಿದಂತಾಯ್ತು

ಪ್ರೀತಿಯ ಇಂದೂಧರರವರಿಗೆ
ವಂದನೆಗಳು.

ಅಸ್ಪೃಶ್ಯತೆಯನ್ನು ನಾರುಬೇರಿನ ಸಹಿತ ದುಡಿಸಿಕೊಳ್ಳುವುದೇ ತಮ್ಮ ಆಜನ್ಮ ಸಿದ್ಧ ಹಕ್ಕು ಮಾಡಿಕೊಂಡಿರುವ ವೈದಿಕ ಶಾಹಿಗೆ ತಿರುಗೇಟು ಕೊಡುವಂತ ಶಕ್ತಿಯ ಪ್ರಾಕಾರಗಳು ಹುಟ್ಟಿ ಬರುವ ಬಗೆ ಹೇಗೆ? ಎಂತು? ಕಣ ಕಣವಾಗಿ ಸಂಚಿತವಾಗ ಬೇಕಾದ ಗಟ್ಟಿಶಕ್ತಿಗೆ, ಕಾಲ ಸಂಚಯವೂ ಅಗತ್ಯವಿದೆಯೇನೋ ಬೌದ್ಧ ಧರ್ಮ ಅಪ್ಪಿಕೊಳ್ಳುವ ನೆಲೆಯಲ್ಲಿ ಬೀಜ ಬಿತ್ತನೆ, ತಮ್ಮಂತಹವರ ಪ್ರಯತ್ನ ಅಸೇತು ಹಿಮಾಚಲ ಪರ್ಯಂತ ಮುಗ್ಧ ಸಮೂಹದ ದಲಿತ ಮನಸು ರೆಡಿಯಾಗುವ ಕ್ರಿಯೆಯಲ್ಲಿ ಅಂಬೇಡ್ಕರ್ ಅಹಿಂದಾಗಳ ಅನಂತ ಪ್ರಯತ್ನಗಳು ಇಂದು ಸಾಧ್ಯವಾಗಬೇಕಲ್ಲಾ, ಹುಳಿಯಾರ್, ಕಮಲಹಂಪನಾ, ಬಿ.ಟಿ. ಲಲಿತಾ, ಸಿದ್ದಲಿಂಗಯ್ಯ ಇವರ ಬರಹ 'ಸಂವಾದ'ದಲ್ಲಿ ಓದಿ, ಒಂದು ಅಂಶವನ್ನು ಆಳಕ್ಕಿಳಿದು ಯೋಚಿಸುವಾಗ ಜಾತಿ ಬೇಧವ ಮಾಡಬೇಡಣ್ಣ ಎನ್ನುವ ತಂಬೂರಿ ದಾಸಯ್ಯನಿಂದ ಹಿಡಿದು ಪ್ರಮುಖ ಘಟ್ಟಗಳ ದಾಖಲೆಗಳಲ್ಲಿ ನಾಸ್ತಿಕವಾದ, ಸಾಮಾಜಿಕ ಬದಲಾವಣೆಯ ಜೋಗಯ್ಯ ತತ್ವಗಳ ಸಿದ್ಧಾಂತ, ವೈಚಾರಿಕ ನೆಲೆಯಿಂದ, ವಚನ ಸಂದರ್ಭ ಮೂಲೆ ಮೂಲೆಗಳ ಜಾಗರಣೆ, ಆಧುನಿಕ ಸಂಘರ್ಷಗಳು ಇವೆಲ್ಲವುಗಳ ಚಕಮಕಿಯಲ್ಲಿ ಮುಕ್ಕಾಲು ಭಾಗದ ಮುಗ್ಧ ಸಮುದಾಯಗಳನ್ನು ನೋಡಿದಾಗ ಮುಗ್ಧ ಸಮುದಾಯ ಎತ್ತು ಏರಿಗೆಳೆದರೆ ಕೋಣ ರಾಡಿಗೇ ಮುಗಿಬಿದ್ದಂತ ವಸ್ತುಸ್ಥಿತಿ ಈ ನೆಲದ್ದು ಅನಿಸುತ್ತದೆ. ಮೊನ್ನೆ ಚಿಂತಾಮಣಿಯಲ್ಲಿ ತಾವು ಹೇಳಿದ ಯಾವ ಧರ್ಮದ ಅಸ್ತಿತ್ವವೂ ಇಲ್ಲದ ದಲಿತರಿಗೆ ಬೌದ್ಧ ಧಮ್ಮ ಜನ್ಮದ ಪರಿಷ್ಕರಣೆ ಕೊಡುತ್ತೆ ಅಂದಿರಿ. ನಮ್ಮಂತಹವರಿಗೆ ಖಂಡಿತಾ ಅದೇ ಮೋಕ್ಷದ ಹಾದಿ ಎನಿಸಿತು.

ಅಲ್ಲಿ ಹಿಂಭಾಗದಲ್ಲಿ ಕುಳಿತಿದ್ದ ಹಳ್ಳಿಗಳ ಹೊಲೆ ಮಾದಿಗ ಹೆಣ್ಣು ಮಕ್ಕಳು ಬೆಟ್ಟದ ವ್ಯಾಗಿನ ತಿಮ್ಮಪ್ಪ, ಊರ ಮುಂದಿನ ಮಾರಮ್ಮನಿಗೆ ಕಾಯಿ ಕರ್ಪೂರ ಪೂಜೆ ಮಾಡುವಂತೆ ನಾವೆಲ್ಲಾ ಹೋಗಿ ಬುದ್ಧಪ್ಪನ ಗುಡಿನಾಗ ಮಾಡಕ ಆತದಾ? ಸಾಡಮ್ಮ, ಗಂಗಮ್ಮನಿಗೆ ಕೋಣ ಕುರಿ ಬಲಿ ಎಂಗ ಒಪ್ಪಿಸಾವು ಅಂತಿದ್ರು. ಹಿಂಸೆ ಇಲ್ಲದ ಅಹಿಂಸೆಯ ಮಹಾನ್ ಬೌದ್ಧ ತತ್ವ ಕೇವಲ ಸೆಮಿನಾರುಗಳಿಗೆ ಮಾತ್ರ ಸಾಧ್ಯವಾ? ಅದೆಂಗಪ್ಪೋ ಸೋಮೇ ಈಗೀಗ ಅಲ್ಪ ಸ್ವಲ್ಪ ಬುದ್ಧಿ ಬುರ್ರೆಗೆ ನಾಟುತ್ತಿರೋ ನಮ್ಮಂತವರಿಗೆ 'ಸಂವಾದ' ಚಾವಡಿ ಕಟ್ಟೆ ಅರಳಿಕಟ್ಟೆಯ ಕೆಳಗೆ ನೆರಳಿಗೆ ಕುಂತಾಗ ಹಳೇ (ಹಲೋ) ಗೆಳತಿ 'ಸುದ್ದಿ ಸಂಗಾತಿ' ಸುಖಾ ದುಃಖಾ ವಿಚಾರಿಸಿದಂತೆ ತಂಪು ಎರೆದಿದೆ.

ಉತ್ತನೂರು ರಾಜಮ್ಮ ವಿ. ಶೆಟ್ಟಿ,
ಚಿಂತಾಮಣಿ

ಅಂತರಾಳಕ್ಕಿಳಿದ ವಿಮರ್ಶೆ

ಪ್ರಿಯ ಇಂದೂಧರ ಹೊನ್ನಾಪುರ ಅವರೆ

'ಸಂವಾದ'ದ ಇತ್ತೀಚಿನ ಸಂಚಿಕೆಗಳನ್ನು ನೋಡುತ್ತಿದ್ದೇನೆ. ಈ ಸಂಚಿಕೆಯಲ್ಲಿ ನನ್ನ 'ಭಗವದ್ಗೀತೆ...'ಯನ್ನು ಕುರಿತ ಅರವಿಂದ ಚೊಕ್ಕಾಡಿಯವರ ವಿಮರ್ಶೆಯೂ ಇದೆ. ನನ್ನ ಕೃತಿಯ ಅಂತರಾಳವನ್ನು ಅವರು ಚೆನ್ನಾಗಿ ಗ್ರಹಿಸಿ ಅದನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸಿ ವ್ಯಾಖ್ಯಾನಿಸಿದ್ದಾರೆ. ನಿಮಗೂ ಅವರಿಗೂ ನನ್ನ ವಂದನೆಗಳು.

ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಯನ್ನು ಕುರಿತು ಚಂದ್ರಬಾನ್ ಪ್ರಸಾದ್ ಸಾಕಷ್ಟು ಬರೆದಿದ್ದಾರೆ. ನಾನು ಅದರಿಂದ ಆರಿಸಿದ ಕೆಲವು ಭಾಗಗಳನ್ನು ಹಂಪಿ ಕನ್ನಡ ವಿ.ವಿ.ಧ. ಒಂದು ಪಠ್ಯ ಪುಸ್ತಕದಲ್ಲಿ ಸೇರಿಸಿದ್ದೇನೆ. ಅದರ ಪ್ರತಿಯನ್ನು ಪ್ರತ್ಯೇಕ ಅಂಚೆಯಲ್ಲಿ ಕಳಿಸುತ್ತೇನೆ. ಗಮನಿಸಿ, ಸೂಕ್ತವೆನಿಸಿದಂತೆ ಬಳಸಿಕೊಳ್ಳಿ.

ಶುಭಾಶಯಗಳೊಡನೆ, ನಿಮ್ಮವ
ಬಿ.ವಿ. ವೀರಭದ್ರಪ್ಪ, ದಾವಣಗೆರೆ

ಭಾರತದ ಒಂದು ಉತ್ತಮ ಮಾಸಿಕ

ಮಾನ್ಯ ಸಂಪಾದಕರೆ,

ನಿಮ್ಮ "ಸಂವಾದ"ದಂಥ ಮಾಸಪತ್ರಿಕೆ ಭಾರತದ ಉತ್ತಮ ಮಾಸಿಕಗಳಲ್ಲಿ ಒಂದು. ಅದಕ್ಕೆ ಸಮಾನವಾಗಬಲ್ಲುದು ಕರ್ನಾಟಕದಲ್ಲಂತೂ ಇನ್ನೊಂದಿಲ್ಲ.

ಡಾ. ಎಲ್. ಬಸವರಾಜು, ಮೈಸೂರು

ರಾಷ್ಟ್ರಮಟ್ಟದಲ್ಲಿ ಬರಲಿ

ಸಂಪಾದಕರು, ಇಂದೂಧರ ಹೊನ್ನಾಪುರ ಅವರಲ್ಲಿ ಸಪ್ರೇಮ ವಂದನೆಗಳು.

'ಸಂವಾದ' ಎರಡನೆಯ ಸಂಚಿಕೆ ಬಂದು ಮುಟ್ಟಿದೆ. 'ಸಂವಾದ'ದಂಥ ಪತ್ರಿಕೆಗಳು ಅಖಿಲ ಭಾರತ ಮಟ್ಟದಲ್ಲಿ ಬರುವುದು ಅವಶ್ಯಕವಾಗಿದೆ. ಇನ್ನು ಮುಂದೆ 'ಬುದ್ಧ ಮಹಾಕಾವ್ಯ'ದಿಂದ ಕೆಲವು ಪದ್ಯಗಳನ್ನು ಕಳಿಸಿಕೊಡುತ್ತೇನೆ. ಬುದ್ಧ ಮಹಾಕಾವ್ಯ ಮುಕ್ತಾಯದ ಹಂತದಲ್ಲಿದ್ದು, ಸುಮಾರು 200-250 ಪುಟಗಳಷ್ಟು ಮಾತ್ರ ಆಗಬಹುದು. ಇದೊಂದು ಹಾಡಬಹುದಾದ ಜನಕ್ಕೆ ಮುಟ್ಟಬಹುದಾದ ಮಹಾಕಾವ್ಯ ಎಂದು ಭಾವಿಸಿದ್ದೇನೆ. ನಿಮಗೆ ಇನ್ನೊಮ್ಮೆ ಧನ್ಯವಾದಗಳು.

ಡಾ. ಬುದ್ಧಣ್ಣ ಹಿಂಗಮಿರೆ, ಧಾರವಾಡ

"ದಲಿತರ ಒಗ್ಗಟ್ಟಿನ Platform"

ಪ್ರಿಯ ಇಂಧೂದರ

'ಸಂವಾದ' ಬರ್ತಾ ಇದೆ. ಈ ಹಿಂದಿನ 'ಪಂಚಮ' ನೋಡಿದಂತಾಯಿತು. ಅನೇಕಾನೇಕ ಗುಂಪುಗಳಲ್ಲಿ ಒಡೆದು ಹೋಳಾಗಿರುವ ದಲಿತರಿಗೆ ಅಭಿವ್ಯಕ್ತಿಸಲು ಒಂದು ಸೂಕ್ತವಾದ Platform ಬೇಕಾಗಿತ್ತು. ಈ ಎಲ್ಲರ ಒದರಾಟಗಳ ಗಲಾಟೆ ಮುಗಿದ ನಂತರ ಒಂದೇ ಒಂದಾದ, ಅರ್ಥವತ್ತಾದ ಧ್ವನಿ ಪ್ರಕಟವಾಗುತ್ತದೆಂಬ ವಿಶ್ವಾಸ ನನಗಿದೆ; ಅದನ್ನು 'ಸಂವಾದ' ಸಾಧಿಸಲಿ ಎಂದು ಹಾರೈಸುವೆ.

ಸರಜೂ ಕಾಟ್ಕರ್, ಬೆಳಗಾವಿ

ಗಟ್ಟಿ ಧ್ವನಿ, ದಿಟ್ಟ ಪ್ರಯತ್ನ

ಪ್ರಿಯ ಇಂದೂಧರ ಅವರೆ

'ಸಂವಾದ' ಎರಡು ಸಂಚಿಕೆಗಳು ಕೈ ಸೇರಿವೆ.

ಒಂದು ಹೊಸ ಗಟ್ಟಿ ಧ್ವನಿ, ಒಂದು ದಿಟ್ಟ ಪ್ರಯತ್ನಗಳು 'ಸಂವಾದ' ಮಾಸಿಕದ ಗುರುತು. ಶೋಷಿತ ಹೃದಯದ ಮಿಡಿತ ಪ್ರತಿಯೊಂದು ಲೇಖನದ ಹೂರಣ.

ನನ್ನದೊಂದು ಅಭಿಪ್ರಾಯ, ಶೋಷಿತರಿಗಾಗಿ ದುಡಿದ, ಸಣ್ಣ ದೊಡ್ಡ ಘಟನೆ, ವ್ಯಕ್ತಿಗಳನ್ನು ಕುರಿತು ಬರೆದರೆ, ಪತ್ರಿಕೆಯಲ್ಲಿ ಒಂದು ಹಣತೆಯನ್ನು ಬೆಳಗಿಸಿದಂತೆ, ಇಂಥ ಒಂದು ನಿಯಮಿತ ಕಾಲಂ ಇದ್ದರೆ ಸಮಾಧಾನ ಎನ್ನಿಸುತ್ತದೆ. ಜಗತ್ತಿನ ಯಾವುದೇ ಸ್ಥಳ, ಕಾಲ ಇದ್ದರೂ ವಿವರಣಾತ್ಮಕ ಅಭಿಪ್ರಾಯವನ್ನು ನಂತರ ಬರೆಯುತ್ತೇನೆ. 3 ತಿಂಗಳ ಅವಧಿಗೆ ವಿದೇಶಕ್ಕೆ ಹೊರಟಿರುವೆ, ಕ್ಷಮಿಸಿ ದೀರ್ಘವಾಗಿ ಬರೆಯಲಾಗಿಲ್ಲ

'ಸಂವಾದ' ಚಿರಾಯುವಾಗಲಿ ಎಂಬ ಹಾರೈಕೆಯೊಂದಿಗೆ

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಆರೋಗ್ಯಪೂರ್ಣ ಮನಸ್ಥಿತಿ ರೂಪಿಸಲಿ

ಪ್ರಿಯ ಇಂದೂಧರ್,

ನಮಸ್ಕಾರಗಳು, ಸಂವಾದ ಚೆನ್ನಾಗಿ ಬರುತ್ತಿದೆ. ವೈಚಾರಿಕ ಲೇಖನಗಳು ಪ್ರಕಟವಾಗುತ್ತಿವೆ, ಆರೋಗ್ಯಪೂರ್ಣ ವಾತಾವರಣವನ್ನು, ಮನಸ್ಥಿತಿಯನ್ನು ರೂಪಿಸಲು 'ಸಂವಾದ' ಪ್ರಯತ್ನಿಸುತ್ತಿರುವದನ್ನು ಓದುಗರು ಕಾಣಬಹುದು. ಅದು ಯಶಸ್ವಿಯಾಗಲೆಂದು ಆಶಿಸುತ್ತೇನೆ.

ಡಾ. ಕೆ.ಎಸ್. ಭಗವಾನ್, ಮೈಸೂರು

SOMEವಾದ ಪತ್ರಿಕೆಗಳಿಗಿಂತ ಭಿನ್ನ 'ಸಂವಾದ'

ಮಾನ್ಯ ಇಂದೂಧರ ಮತ್ತು ಸಂಗಾತಿಗಳಿಗೆ ನನ್ನ ಧನ್ಯವಾದಗಳು.

ನಿಮ್ಮ ಸಂವಾದ ಪತ್ರಿಕೆಯ ಎರಡು ಸಂಚಿಕೆಗಳು ಬಂದು ತಲುಪಿದವು. (ಮೇ-ಜೂನ್ 2003) ಪತ್ರಿಕೆ ವಿನ್ಯಾಸದಿಂದ ಹಿಡಿದು ಎಲ್ಲಾ ವಿಷಯಗಳಲ್ಲೂ ಪತ್ರಿಕೆ ಉತ್ತಮವಾಗಿ ಹೊರಹೊಮ್ಮಿದೆ. ಬಹಳ ದಿನಗಳಿಂದಲೂ ದಲಿತರ ಸೂಕ್ಷ್ಮತೆಗಳನ್ನು ಪ್ರತಿಬಿಂಬಿಸುವ, ದಲಿತ ಸಮುದಾಯದ ಸಂವೇದನೆಯನ್ನು ಜನರಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಒಂದು ಪತ್ರಿಕೆ ಬರಬೇಕೆಂದು ನನ್ನ ವೈಯಕ್ತಿಕ ಆಶಯವಾಗಿತ್ತು. 'ಸಂವಾದ' ಈ ನಿಟ್ಟಿನಲ್ಲಿ ಹೆಸರಿಗೆ ತಕ್ಕಂತೆ ಸಮಾಜದಲ್ಲಿ ಸಂವಾದವನ್ನು ಪ್ರಾರಂಭಿಸುವಲ್ಲಿ ಈಗಾಗಲೇ ಯಶಸ್ವಿಯಾಗಿದೆ ಎಂದೆನಿಸುತ್ತದೆ.

'ಸಂವಾದ' ಹೀಗೆಯೇ ಮುಂದುವರೆದು, Someವಾದ, ಮಂಡಿಸುವ ಪತ್ರಿಕೆಗಳಿಗಿಂತಲೂ ವಿಭಿನ್ನವಾಗಿ ಹೊರಹೊಮ್ಮಿ, ದಲಿತ-ಶೋಷಿತ ಸಮುದಾಯಗಳಿಗೆ ಜಡ್ಡುಗಟ್ಟಿರುವ ಬುದ್ಧಿಜೀವಿಗಳಿಗೆ ಹೊಸ ಚೈತನ್ಯ ನೀಡುವುದೆಂದು ಆಶಿಸುತ್ತೇನೆ.

ಸಾ. ದಿವಾಕರ, ಬೆಳ್ಳೂರು

ಹೋರಾಟದ ಮಾರ್ಗದರ್ಶಿ

ಮಾನ್ಯ ಸಂಪಾದಕರೆ,

ದಲಿತ ಹೋರಾಟದ ರೂಪುರೇಷೆಗಳ ಮಾರ್ಗದರ್ಶಿಯಾಗಿ 'ಸಂವಾದ' ಮಾಸ ಪತ್ರಿಕೆ ಪ್ರಕಟವಾಗುತ್ತಿರುವುದಕ್ಕೆ ಸ್ವಾಗತಾರ್ಹ. ಈ 'ಸಂವಾದ' ದೀನ-ದಲಿತರ ಬಡವರ ನೋವುಗಳಿಗೆ ಕಷ್ಟಗಳಿಗೆ ಸ್ಪಂದಿಸಿ, ಪ್ರಜ್ಞೆ ಮೂಡಿಸಲು ಮಾರ್ಗದರ್ಶಿಯಾಗಬೇಕು. ಹಾಗೂ ಈ ಕೊಳಕು ಸಮಾಜದಿಂದ ಹೊರಬಂದು ಪ್ರೀತಿ, ಸಮಾನತೆ, ಸ್ವಾತಂತ್ರ್ಯವಿರುವ ಸಮಾಜವನ್ನು ರೂಪಿಸುವಲ್ಲಿ ಹಾಗೂ ದೀನ ದಲಿತರ ಏಳಿಗೆಗೆ ದಾರಿದೀಪವಾಗಿ ಎಲ್ಲರಿಗೂ ತಲುಪುವಂತಾಗಲಿ ಹಾಗೂ 'ಸಂವಾದ' ಯಾವಾಗಲೂ ಯಶಸ್ವಿನ ಹಾದಿಯಲ್ಲಿರಲಿ ಎಂದು ಹಾರೈಸುವ,

ಹೇಮಂತಕುಮಾರ್ ಮೇಣಾಗರ
ಮಂಡ್ಯ ಜಿಲ್ಲೆ

ಜನತೆಯನ್ನು ಎಚ್ಚರಿಸುವ ಪ್ರಯತ್ನ

ಗೆಳೆಯ ಇಂದೂಧರ ಹೊನ್ನಾಪುರರವರಿಗೆ

ನಿಮ್ಮ 'ಸಂವಾದ' ಪತ್ರಿಕೆಯ ಮೂರು ಸಂಚಿಕೆಗಳು ನನ್ನ ಕೈ ಸೇರಿದವು. ಓದಿ ಮಹಾದಾನಂದವಾಯ್ತು, ಇಂಥಹ ಸಂಧಿಗ್ಧ ಸಮಯದಲ್ಲಿ ಒಳ್ಳೆಯ ಲೇಖನಗಳನ್ನೊಳಗೊಂಡು, ಜನರನ್ನು ಎಚ್ಚರಿಸತಕ್ಕಂತಹ ಪತ್ರಿಕೆ ಬಂದಿರುವುದು ಇಂದಿನ ಸಮಾಜಕ್ಕೆ ಹಾಗೂ ನವ ಪೀಳಿಗೆಗೆ ಸ್ವಾಗತಾರ್ಹವೆಂದು ನನ್ನ ಅಭಿಪ್ರಾಯ.

ಬಹುಶಃ ನಾವು ಕೆಲ ದಿನಗಳಿಂದ ಭೆಟ್ಟಿಯಾಗಿಲ್ಲ ಎನ್ನುವುದಕ್ಕೆ ಬದಲು ಬಹಳ ವರ್ಷಗಳಿಂದ ಭೆಟ್ಟಿಯಾಗಿಲ್ಲ! ಆದರೂ ನಾನು ತಮ್ಮ ಸ್ಮೃತಿ ಪಟಲದಿಂದ ಅಳಿಯದೆ ಇರುವೆನೆಂಬುದೆ ನಮ್ಮೆಲ್ಲರ ಹೆಮ್ಮೆ ವಿಷಯ.

ಇನ್ನೂ ಕೆಲವು ದಿನಗಳಲ್ಲಿ ನನ್ನ ವಿಳಾಸ, ಬದಲಾಗಲಿದೆ. ನಂತರ ಖಾಯಂ ವಿಳಾಸ ಹಾಗೂ ಪತ್ರಿಕೆಯ ಚಂದಾ ಹಣವನ್ನು ಕಳುಹಿಸುತ್ತೇನೆ. ಇಂತಿ ಕ್ರಾಂತಿಕಾರಿ ವಂದನೆಗಳೊಂದಿಗೆ,

ರಾಚಪ್ಪ ಹಡಪದ, ಧಾರವಾಡ

ಮನುಷ್ಯ ತುಮುಲಗಳ ಚರ್ಚೆ

ಪ್ರೀತಿಯ ಹೊನ್ನಾಪುರ
ವಂದನೆ

ಕಳೆದೆರಡು ತಿಂಗಳಿಂದ ಸಂವಾದಕ್ಕೆ ಪ್ರತಿಕ್ರಿಯಿಸಲಾಗಿರಲಿಲ್ಲ. ಕ್ಷಮಿಸಿರಿ.

ಸಾಮಾಜಿಕ ಕಾಳಜಿ ಹೊತ್ತ ವೈಚಾರಿಕ ಲೇಖನಗಳನ್ನು ಸ್ವಾಗತಿಸುವೆ. ಭಿನ್ನವಾದ ಒಂದು ವೇದಿಕೆ ಸಂವಾದದ ಮೂಲಕ ಸಿದ್ಧಗೊಂಡಿದೆ. ಆ ಮಾಧ್ಯಮದಿಂದ ಮನುಷ್ಯ ತುಮುಲಗಳಿಗೆ ಚರ್ಚೆ, ವಿಚಾರಗಳ ಮೂಲಕ ಕೊಂಚ ಪರಿಹಾರದ ನೆಮ್ಮದಿ ದೊರಕಬಹುದು. ಆ ದಿಕ್ಕಿನಲ್ಲಿ ಅದು ಯತ್ನಿಸುತ್ತಿದೆ ಎಂದೆನಿಸುತ್ತದೆ.

ಡಿ.ಎಸ್. ಚೌಗಲೆ, ಬೆಳಗಾವಿ

ಸಂದರ್ಭೋಚಿತ ಸಂಪಾದಕೀಯ

ಮಾನ್ಯ ಸಂಪಾದಕರೆ

ನಮ್ಮೂರಿನಲ್ಲಿರುವ ನವ ಕರ್ನಾಟಕ ಪಬ್ಲಿಕೇಶನ್ ಪುಸ್ತಕ ಭಂಡಾರದಲ್ಲಿ "ಹೊಸತು"ವನ್ನು ಕೊಂಡು ಕೊಂಡಾಗ, ಆಕಸ್ಮಿಕವೆನ್ನುವಂತೆ "ಸಂವಾದ"ವನ್ನು ತೋರಿಸಿದರು. ಅದೂ ನನಗೆ ಹೊಸತೆನಿಸಿತು. ಬಿಡಿಸಿ ಓದಿದಾಗ ಅದು 9ನೆಯ ಸಂಚಿಕೆಯಾಗಿತ್ತು. ಹಿಂದಿನ ಸಂಚಿಕೆಗಳನ್ನು ಗಮನಿಸದಿದ್ದುದಕ್ಕೆ ಪಶ್ಚಾತ್ತಾಪವೆನಿಸಿತು.

ಒಂದೂರಿನಲ್ಲಿ, ಮಡಿ-ಮೈಲಿಗೆ, ಉತ್ತಮ-ಅಧಮಗಳನ್ನು ಮೈಮನಗಳಿಗೆ ಮೆತ್ತಿಕೊಂಡಿರುವ ಒಬ್ಬನೇ ಒಬ್ಬ ರಾಜಕಾರಣಿಯಿದ್ದರೆ ಆ ಊರಿನ ಮೇಲ್ವರ್ಗದವರೆನಿಸಿಕೊಂಡಿರುವವರಿಗೆ, ತಮ್ಮಿಚ್ಛೆ ಪೂರೈಕೆಗೆ ಸುಗ್ಗಿ. ಅನಕ್ಷರಸ್ಥ ಮುಗ್ಧ ಮಂದಿಯು ಅಕ್ಷರಸ್ಥರಾದರೆ ಉಳಿವರು ಇಲ್ಲದವರು ಎನ್ನುವ ಪರಂಪರೆಯು ಅಳಿಯುತ್ತದೆ ಎನ್ನುವುದನ್ನು ಮನಗಂಡಿರುವ ಸನಾತನವಾದಿಗಳು ಅಕ್ಷರ ದಾಸೋಹವನ್ನು ಅಧಾರ್ಮಿಕವೆಂದು ಪರಿಗಣಿಸುತ್ತಾರೆ. ಅವರು ನಂಬಿಕೊಂಡು ಬಂದಿರುವ ಮತ್ತು ಆಚರಿಸುತ್ತಿರುವ ಅಸ್ಪೃಶ್ಯತೆಯು ಧಾರ್ಮಿಕಾಚರಣೆ, ವಿಧಿ, ಪರಂಪರೆಯಾಗಿದೆ. ಇದು ಸ್ವಾತಂತ್ರ್ಯದೊಂದಿಗೆ ಭಾರತ ದೇಶಕ್ಕೆ ಎದುರಾಗಿರುವ ದುರಂತವಾಗಬಾರದೆನ್ನುವ ಸಂದೇಶವನ್ನೀಯುವ 'ಸಂವಾದ' ಸಂಪಾದಕೀಯವು ಸಂದರ್ಭೋಚಿತವಾಗಿದೆ. ಅದಕ್ಕೆ ಹಾರ್ದಿಕ ಅಭಿನಂದನೆಗಳು.

ಪಿ. ಗೋಕುಲ್‌ದಾಸ್, ಮಂಗಳೂರು

ದಾರಿ ದೀಪವಾಗಲಿ

ಪೂಜ್ಯನೀಯ ಸಂಪಾದಕರಿಗೆ ನಮನಗಳು

ತಾವು ಕಳುಹಿಸಿದ 'ಸಂವಾದ' ಮಾಸ ಪತ್ರಿಕೆ ಬಂದು ತಲುಪಿದೆ. ತುಂಬಾ ಧನ್ಯವಾದಗಳು. ಪತ್ರಿಕೆಯ ಎಲ್ಲಾ ಲೇಖನಗಳೂ ಚೆನ್ನಾಗಿ ಮೂಡಿಬಂದಿವೆ. ಬಿ.ಟಿ. ಲಲಿತಾನಾಯಕ್ ಹಾಗೂ ಕೆ.ಎಸ್. ಶ್ರೀನಿವಾಸ ರೆಡ್ಡಿಯವರು ಹೆಣ್ಣಿನ ಬಗ್ಗೆ ಬರೆದಿರುವ ವಿಚಾರ ತುಂಬಾ ಚಿಂತನಾರ್ಹವಾಗಿವೆ. ಇಂದಿನ ಜಗತ್ತಿನಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪುರುಷನಿಗೆ ಸರಿ ಸಮಾನಳಾಗಿ ಸೇವೆ ಸಲ್ಲಿಸುತ್ತಿರುವ ಹೆಣ್ಣು ನಿಜವಾಗಿಯೂ 'ಕಲ್ಪವೃಕ್ಷ' ಎಂಬುದನ್ನು ಇಡೀ ಸಮಾಜ ಅರಿಯಬೇಕು. ಆಗಲೇ ನಮ್ಮ ದೇಶಕ್ಕೆ ಪ್ರಥಮ ಸ್ಥಾನ!

ಇಂದಿನ ಜನತೆಯಲ್ಲಿ ಅಸಮಾನತೆ ತೊಲಗಿಸಲು ದೂಷಣೆ-ಶೋಷಣೆಗಳ ವಿರುದ್ಧ ಹೋರಾಡಲು ಧರೆಯಲ್ಲಿ ದಲಿತರ ಪ್ರಗತಿಗಾಗಿ ಶ್ರಮಿಸುವ ರಕ್ಷಣಾ ಮಾರ್ಗ ತೋರಿಸುವ ದಾರಿದೀಪವಾಗಿ ತಮ್ಮ ಪತ್ರಿಕೆ ಮೂಡಿ ಬರಲಿ.

ಆರ್. ಸತ್ಯಪ್ರೇಮ, ಯರಂಬಾಡಿ
ಕೊಳ್ಳೇಗಾಲ ತಾಲ್ಲೂಕು
ಚಾಮರಾಜನಗರ ಜಿಲ್ಲೆ

ಸಂವಾದ

ಚಂದಾ ವಿವರ

ಬಿಡಿ ಪ್ರತಿ : ರೂ. 10/-
ವಾರ್ಷಿಕ : ರೂ. 100/-
ವಿಶೇಷ ವಾರ್ಷಿಕ ಚಂದಾ: ರೂ. 500/-
ಆಜೀವ : ರೂ. 5,000/-

ಚಂದಾ ಹಣವನ್ನು ಅಂಚೆ ಮೂಲಕ ಕಳುಹಿಸುವವರು ಡಿಡಿ, ಎಂ.ಓ., ಮೂಲಕ ಮಾತ್ರ ಕಳುಹಿಸಬೇಕು

ಚಂದಾ ಕಳಿಸಬೇಕಾದ ವಿಳಾಸ :
ಸಂವಾದ ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು-91

ಅಂತರಂಗ

ಮುಖವಾಡದ ಮನುಷ್ಯರು ಮತ್ತು ಸಮಾನ ನಾಗರಿಕ ಸಂಹಿತೆ

56ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ಪ್ರಧಾನ ಮಂತ್ರಿ ವಾಜಪೇಯಿ ಅವರ ಮತ್ತೊಂದು ಮುಖವಾಡ ಕಳಚಿ ಬಿದ್ದಿದೆ. ಅಯೋಧ್ಯೆಯ 'ರಾಮ ಜನ್ಮಭೂಮಿ'ಯಲ್ಲೇ ರಾಮಮಂದಿರ ಕಟ್ಟೇ ತೀರುವ ಘೋಷಣೆಯನ್ನು ಅವರು ಹಾಕಿದ್ದಾರೆ. ಸಮಯಕ್ಕೆ ತಕ್ಕಂತೆ ತನ್ನ ವರಸೆಯನ್ನು ಬದಲಾಯಿಸಿಕೊಳ್ಳುವ ವಾಜಪೇಯಿ, ಚುನಾವಣೆ ಹತ್ತಿರವಾಗುತ್ತಿದ್ದಂತೆ ಹಿಂದೂ ತೀವ್ರಗಾಮಿಯಂತೆ ಮಾತಾಡುತ್ತಿದ್ದಾರೆ. ನ್ಯಾಯಾಲಯದ ತೀರ್ಪಿಗೆ ಬದ್ಧರಾಗುವುದಾಗಿ ಒಮ್ಮೆ ಹೇಳುವ ವಾಜಪೇಯಿ, ಸಂಧಾನದ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವ ಬಗ್ಗೆ ಕೂಡ ಆಗಾಗ ಮಾತಾಡುತ್ತಿದ್ದರು. ಈಗ ಇದ್ದಕ್ಕಿದ್ದಂತೆ ವಿಶ್ವ ಹಿಂದೂ ಪರಿಷತ್ತಿನ ವಕ್ತಾರರಂತೆ ರಾಮಂದಿರ ಕಟ್ಟುವ ಘೋಷಣೆ ಮಾಡಿ ಧರ್ಮನಿರಪೇಕ್ಷ ರಾಜ್ಯಾಂಗದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ.

ಸಂವಿಧಾನ ಬದ್ಧವಾಗಿ ನಡೆಯುವ ಪ್ರತಿಜ್ಞೆಯೊಡನೆ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳೂ ಅದರ ಆಶಯಗಳಿಗೆ ವಿರುದ್ಧವಾಗಿಯೇ ನಡೆದುಕೊಳ್ಳುತ್ತಿವೆ. ಸಂವಿಧಾನವನ್ನು, ಜನರ ಆಶೋತ್ತರಗಳನ್ನು, ಈಡೇರಿಸುವ ಮಾರ್ಗದರ್ಶಿಯನ್ನಾಗಿ ಮಾಡಿಕೊಳ್ಳದೆ, ಕೇವಲ ಕೆಲಸಕ್ಕೆ ಬಾರದ ಸರ್ಕಾರಿ ಪುಸ್ತಕವೆನ್ನುವಂತೆ ಆಳುವ ವರ್ಗ ನೋಡುತ್ತಿದೆ. ಸಂವಿಧಾನದ ಮೂಲ ಆಶಯಗಳಂತೆ ಸರ್ಕಾರಗಳು ಕೆಲಸ ಮಾಡಿದ್ದರೆ ಇಂದು ಬಹುತೇಕ ಸಮಸ್ಯೆಗಳು ನಿವಾರಣೆಯಾಗುತ್ತಿದ್ದವು. ಆದರೆ ಎಲ್ಲವನ್ನು ತಮ್ಮ ಸ್ವಾರ್ಥಕ್ಕೆ ಮಾತ್ರ ಬಳಸಿಕೊಳ್ಳುವ ರಾಜಕೀಯ ಪಕ್ಷಗಳು ಇದರತ್ತ ತಪ್ಪಿಯೂ ಯೋಚಿಸುತ್ತಿಲ್ಲ.

ಭಾರತೀಯ ಜನತಾ ಪಕ್ಷದ ನಾಯಕತ್ವದೊಂದಿಗೆ ಆಡಳಿತ ನಡೆಸುತ್ತಿರುವ ಎನ್‌ಡಿಎ ಸರ್ಕಾರವಂತೂ ಸಂವಿಧಾನದ ಮೂಲ ಆಶಯಗಳಿಗೆ ಕಿಂಚಿತ್ತೂ ಬೆಲೆ ನೀಡುತ್ತಿಲ್ಲ. ಇಡೀ ದೇಶದಲ್ಲಿ ಆಂತರಿಕ ಕ್ಷೋಭೆ ಹೆಚ್ಚಿಸಿ ಉರಿವ ಬೆಂಕಿಯಲ್ಲಿ ಮೈಕಾಯಿಸಿಕೊಳ್ಳುವ ಕೆಲಸದಲ್ಲಿ ತೃಪ್ತಿ ಕಾಣುತ್ತಿದೆ. ಬಹು ಭಾಷೆ-ಸಂಸ್ಕೃತಿಗಳೇ ತುಂಬಿರುವ ನಾಡಿನಲ್ಲಿ ಕೆಲವೇ ಜನರ ಏಕ ಸಂಸ್ಕೃತಿಯನ್ನು ಹೇರುವ ತರಾತುರಿಯಲ್ಲಿ ಸರ್ಕಾರ ನಿಂತಿದೆ. ನಿರಂತರ ಸಾಂಸ್ಕೃತಿಕ ದಬ್ಬಾಳಿಕೆಯನ್ನು ಸರ್ಕಾರವೇ ಮುಂದೆ ನಿಂತು ಮಾಡಿಸುತ್ತಿದೆ. ಬಹು ಜನರ ಆಚಾರ-ವಿಚಾರ-ಬದುಕನ್ನು ನಾಶಪಡಿಸಿ, ಮೂಲಭೂತವಾದವೇ ಬದುಕನ್ನು ನಿಯಂತ್ರಿಸುವಂತೆ ಪ್ರೇರೇಪಿಸಲಾಗುತ್ತಿದೆ.

ಏಕ ರೂಪ ನಾಗರಿಕ ಸಂಹಿತೆ ವಿಚಾರವನ್ನೇ ನೋಡಿ. ಸಂವಿಧಾನದ 44ನೇ ವಿಧಿಯಲ್ಲಿ ಸೂಚಿತವಾಗಿರುವ ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವ ಹೊಣೆ ಈ ನಾಡಿನ ಎಲ್ಲರಿಗೆ ಸೇರಿದ್ದು. ಅದು ಕೇವಲ ಆರೆಸ್ಸೆಸ್-ಬಿ.ಜೆ.ಪಿ.ಗಳ ಗುತ್ತಿಗೆಯಲ್ಲ. ಸಂವಿಧಾನ ಆಶಯವೇನೋ ಉದಾತ್ತವಾದದ್ದೇ. ಆದರೆ ಹಲವು ಹತ್ತು ಧರ್ಮ-ಜಾತಿ-ಆಚಾರ-ವಿಚಾರಗಳಲ್ಲಿ ಸೇರಿಹೋಗಿರುವ ಜನರನ್ನು ಏಕರೂಪದ ನಾಗರಿಕ ಸಂಹಿತೆಯಿಂದ ಬಂಧಿಸಿಡಲು ಸಾಧ್ಯವೆ? ಅದು ನ್ಯಾಯವೇ? ಎಂಬ ಸಾಮಾನ್ಯ ಜ್ಞಾನವಾದರೂ ಬೇಕಲ್ಲ. ನ್ಯಾಯಾಲಯ ಈ ಸಲಹೆಯನ್ನು ಮುಂದಿಟ್ಟಕೂಡಲೇ ಈ ಕ್ಷಣದಲ್ಲೇ ಅದು ಜಾರಿಯಾಗಬೇಕೆಂದು ಅಬ್ಬರಿಸುತ್ತಿರುವ ಮನುವಾದಿಗಳಿಗೆ, ಕನಿಷ್ಟ ತಾವು ಬಡಬಡಿಸುತ್ತಿರುವ 'ಹಿಂದೂ ಧರ್ಮ'ದಲ್ಲಾದರೂ ಏಕರೂಪದ ಸ್ವಾಭಿಮಾನ, ಸಮಾನತೆಯ ಬದುಕಿಗೆ ಎಲ್ಲರಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕೆಂಬ ಕನಿಷ್ಠ ಪ್ರಜ್ಞೆಯಾದರೂ ಬೇಡವೆ?

ರಾಜ್ಯಾಂಗವನ್ನು ಅಂಗೀಕರಿಸಿದ ಐದು ದಶಕಗಳ ನಂತರ ಕೂಡ ಪಂಚಾಂಗವನ್ನು ಹಿಡಿದು ದೇಶ ಆಳಲು ಪ್ರಯತ್ನಿಸುತ್ತಿರುವವರಿಗೆ ಇಂಥ ವಿಚಾರಗಳನ್ನು ಪ್ರತಿಪಾದಿಸಲು ಕನಿಷ್ಠ ನಾಚಿಕೆಯಾದರೂ ಅಡ್ಡ ಬರಬೇಕು. ಆದರೆ ಭಂಡತನವೇ ಬಂಡವಾಳವಾಗಿರುವವರಿಗೆ ಇಂಥ ನಾಗರಿಕ ವಿಚಾರಗಳು ಅರಿವಾಗುವುದಾದರೂ ಹೇಗೆ? 'ಹಿಂದೂ ಧರ್ಮ' ಎಂದು ಗುರುತಿಸಿರುವ ಧರ್ಮದಲ್ಲೇ ಅಧಿಕೃತವಾಗಿ ಸುಮಾರು 640 ಜಾತಿಗಳಿವೆ. ಅಂದರೆ 640 ಆಚಾರ-ವಿಚಾರಗಳಿವೆ. ಅಲ್ಲದೆ ಭಾರತದಲ್ಲಿ ಎಂಟು ಧರ್ಮಗಳಿವೆ. ಹಿಂದೂ ಹಾಗೂ ಇಸ್ಲಾಂ ಪ್ರಮುಖ ಧರ್ಮಗಳಾದರೆ, ಕ್ರೈಸ್ತ, ಬೌದ್ಧ, ಜೈನ, ಸಿಖ್, ಝುರಾತುಷ್ಟ ಹಾಗೂ ಯಹೂದಿ ಧರ್ಮಗಳಿಗೆ ಸೇರಿದ ಜನರೂ ಇಲ್ಲಿದ್ದಾರೆ. ಈ ಎಲ್ಲಾ ಧರ್ಮಗಳಿಂದ ಹೊರಗಿರುವ ಅಸ್ಪೃಶ್ಯರು, ಆದಿವಾಸಿಗಳೂ ಇದ್ದಾರೆ. ಇವರುಗಳ ಸಂಸ್ಕೃತಿ-ಆಚಾರ-ವಿಧಿ-ವಿಧಾನಗಳಲ್ಲಿ ಸಾಮ್ಯತೆಯೇ ಇಲ್ಲ.

ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವ ಮುನ್ನ ಸಂವಿಧಾನದ ಇತರೆ ಮೂಲ ಆಶಯಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರಬೇಕಾಗಿದೆ. ಅಲ್ಪಸಂಖ್ಯಾತರನ್ನು, ಬಹುಸಂಸ್ಕೃತಿಯ ಮೂಲ ನಿವಾಸಿಗಳನ್ನು, ಸದೆ ಬಡಿಯುವ ಏಕೋದ್ದೇಶದಿಂದ ಇದನ್ನು ಜಾರಿಗೊಳಿಸಲು ಮುಂದಾದರೆ, ಅದರಂತ ದುರಂತ ಮತ್ತೊಂದಿಲ್ಲ. ನ್ಯಾಯಾಲಯದ ಮುಚ್ಚಿದ ಕಣ್ಣುಗಳಿಗೆ ಈ ವಾಸ್ತವಾಂಶ ಗೋಚರಿಸದಿದ್ದರೆ ಅದು ಕಾಲಮಾನದ ವ್ಯಂಗ್ಯವೇ ಸರಿ. ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು ಎನ್ನುವ ಸಂವಿಧಾನದ ಆಶಯವೇ ಅಪ್ರಸ್ತುತವಾದರೆ ಭಾರತೀಯ ಸಮಾಜವೇ ಕುಸಿದು ಬೀಳುತ್ತದೆ.

ಎಲ್ಲ ಅರ್ಥದಲ್ಲೂ ಸಮ ಸಮಾಜ ನಿರ್ಮಾಣಗೊಂಡಾಗ ಮಾತ್ರ ಸಮಾನ ನಾಗರಿಕ ಸಂಹಿತೆಗೊಂದು ಅರ್ಥ ಬರುತ್ತದೆ. ಎಲ್ಲ ಧರ್ಮದವರೂ, ಅವರವರ ಉಳಿವಿಗಾಗಿ ಮೂಲಭೂತವಾದಿಗಳಾಗಿ, ಜನರನ್ನು ಮತ್ತಷ್ಟು ಕರ್ಮಠ ಕಂದಾಚಾರಿಗಳನ್ನಾಗಿ ಮಾಡುತ್ತಿದ್ದಾರೆಯೇ ಹೊರತು ಅವರನ್ನು 'ಮಾನವ'ರನ್ನಾಗಲು ಬಿಡುತ್ತಿಲ್ಲ. ಇಸ್ಲಾಂ ಧರ್ಮದ ಬಗ್ಗೆಯಂತೂ ಹಿಂದೂ ಮತೀಯವಾದಿಗಳಲ್ಲಿ ಅಪಾರ ಅಸಹನೆ ತುಂಬಿದೆ. ಮದುವೆ-ಬಹುಪತ್ನಿತ್ವ-ಮಕ್ಕಳು ಇತ್ಯಾದಿ ವಿಚಾರಗಳಲ್ಲಂತೂ ಸುಳ್ಳಿನ ಕಂತೆಗಳೇ ಇವೆ. ಭಾರತ ಸರ್ಕಾರ ಈಚೆಗೆ ಪ್ರಕಟಿಸಿದ ಅಂಕಿ ಅಂಶಗಳಲ್ಲಿ ಇಂದಿಗೂ ಬಹುಪತ್ನಿತ್ವ ಹೆಚ್ಚಿನ ಪ್ರಮಾಣದಲ್ಲಿರುವುದು ಹಿಂದೂಗಳಲ್ಲಿ. ಹಿಂದೂಗಳಲ್ಲಿ ಶೇ. 15ರಷ್ಟು ಬಹುಪತ್ನಿತ್ವ ಅಸ್ತಿತ್ವದಲ್ಲಿದ್ದರೆ ಮುಸ್ಲಿಮರಲ್ಲಿ ಅದು ಕೇವಲ ಶೇ. 5ರಷ್ಟು ಮಾತ್ರ ಇದೆ.

ಎಲ್ಲ ಧರ್ಮಗಳಲ್ಲಿನ ಮೂಲಭೂತವಾದಿಗಳನ್ನು ಮೀರಿ, ಉದಾರವಾದಿಗಳು ಬೆಳೆಯದಿದ್ದರೆ, ಇಡೀ ಸಾಮಾಜಿಕ ವ್ಯವಸ್ಥೆಯೇ ಅರಾಜಕವಾಗುತ್ತದೆ. ಅಗ್ಗದ ಪ್ರಚಾರ ಮತ್ತು ಗಿಮಿಕ್‌ಗಳ ಮೂಲಕ ಮುಖ್ಯವಾಹಿನಿಯನ್ನು ನಿಯಂತ್ರಿಸುವ ಮೂಲ ಭೂತವಾದಿಗಳನ್ನು ಜನತೆ ತಿರಸ್ಕರಿಸಬೇಕು. ಭಾರತೀಯ ಸಮಾಜದ ಎಲ್ಲರಿಗೂ ಎಲ್ಲವೂ ಮುಕ್ತವಾದಾಗ ಮಾತ್ರ ಸಮಾನ ನಾಗರಿಕ ಸಂಹಿತೆ ಕುರಿತು ಯೋಚಿಸಬಹುದು.

ಇಂದೂಧರ ಹೊನ್ನಾಪುರ
ಸಂಪಾದಕ

ಪಾಲು ಕೇಳಿದಾಕ್ಷಣ ಹೊಟ್ಟೆ ಉರಿ ಏಕೆ?

ದಿನಾಂಕ ಜುಲೈ 13ರಂದು ವಿಜಯ ಕರ್ನಾಟಕದ ಅಂಕು-ಡೊಂಕು ಅಂಕಣದಲ್ಲಿ ನಮ್ಮ 'ಸಂವಾದ'ದಲ್ಲಿ ಪ್ರಕಟವಾದ ಬ್ರಾಹ್ಮಣರ ಕಷ್ಟದಲ್ಲಿ ದಲಿತರ ಪಾಲು ಸಿಗಲಿ ಎಂಬ ನಟರಾಜ್ ಅವರ ಪ್ರತಿಕ್ರಿಯೆಗೆ ಸಿ.ಎನ್. ಕೃಷ್ಣಮಾಚಾರ್ ವ್ಯಂಗ್ಯವಾಡಿದ್ದೀರಿ. ಸಂತೋಷ. ನೀವು ಹೀಗೆ ಕಿಚಾಯಿಸುವುದರಲ್ಲಿ ನಿಮಗೆ ಆನಂದವೂ ಇದೆ ಈರ್ಷೆಯೂ ಇದೆ ಎನ್ನುವುದು ನನಗೆ ಗೊತ್ತು. ನಾನು ನಿಮ್ಮೊಡನೆ ಕೆಲಸ ಮಾಡಿದವನು. ನಾವು ಅನೇಕ ಬಾರಿ ದಲಿತರ, ಬ್ರಾಹ್ಮಣರ ಬಗ್ಗೆ ಚರ್ಚಿಸಿದ್ದೇನೆ. ಇರಲಿ, ಮೊದಲಿಗೆ ನಾನು ಕೇಳಬೇಕೆಂದಿದ್ದು ಈ ಪ್ರತಿಕ್ರಿಯೆಯನ್ನು 'ಸಂವಾದ'ಕ್ಕೆ ಕಳುಹಿಸಬಹುದಿತ್ತು. ಆದರೆ ಕನ್ನಡದ ನಂಬರ್ ಒನ್ ಪತ್ರಿಕೆಗೆ ಬರೆದು 'ಸಂವಾದ'ದ ಗಂಭೀರತೆಯನ್ನು ಹೆಚ್ಚಿಸಿದ್ದೀರಿ, ಅಥವಾ ಪತ್ರಿಕೆ ಸಂಪಾದಕರ ಸರ್ವೇಜನೋ ಸುಖಿನೋಭವಂತು ಎನ್ನುವುದನ್ನು ಸಾಬೀತು ಪಡಿಸಿದ್ದೀರಿ. ಈ ಪತ್ರಿಕೆಯಲ್ಲಿ ದಲಿತರ ಬಗ್ಗೆ ಬರೆಯುವುದು ಅಪರೂಪ. ನಾನು ಅದರಲ್ಲಿ ಚಂದನ್ ಮಿತ್ರ ಬರೆಯುವುದನ್ನು ನೋಡುತ್ತಿರುತ್ತೇನೆ. ನನಗೆ ಆಶ್ಚರ್ಯವಾಗಿದ್ದು ನಾವಿನ್ನು ಪಾಲೇ ಪಡೆದಿಲ್ಲ, ಹೀಗೆ ಬರೆದಾಕ್ಷಣ ಬ್ರಾಹ್ಮಣರು ತಮ್ಮ ಪಾಲನ್ನು ಕೊಡುವುದಿಲ್ಲ, ಬದಲಾಗಿ ಪಾಲು ಕೇಳಿದಾಕ್ಷಣ ನಿಮ್ಮ ಹೊಟ್ಟೆಯಲ್ಲಿ ಉರಿ ಶುರುವಾಯಿತು. ಇನ್ನೂ ಪರಮಾಶ್ಚರ್ಯವೆಂದರೆ ಈಗಾಗಲೇ ನೀವು ಖಾಸಗಿ ಕ್ಷೇತ್ರದಲ್ಲಿ ದಲಿತರ ನಿಷ್ಕ್ರಿಯತೆಯನ್ನು, ಖಾಸಗಿ ವಲಯದಲ್ಲಿ ಮೀಸಲಾತಿ ಕೊಡುವ ಮುಂಚೆಯೇ ಹೇಳಿದ್ದೀರಿಯೆಂದರೆ ಮುಂಜಾಗ್ರತೆಯ ನಿಮ್ಮ ಆಲೋಚನೆಯ ಬುದ್ಧಿವಂತಿಕೆಯನ್ನು ಮೆಚ್ಚಲೇಬೇಕು. ನಿಮ್ಮ ಸಮವಾಗಿ ದಲಿತರು ಬದುಕುವುದನ್ನು ನೀವು ಎಂದಿಗೂ ಸಹಿಸಿಕೊಳ್ಳಲೇ ಇಲ್ಲ ಎನ್ನುವುದನ್ನು ಇತಿಹಾಸ ಹೇಳಿದೆ. ಈಗಲೂ ನಿಮ್ಮಂತವರು ಗೊತ್ತೂ-ಗೊತ್ತಾಗದ ಹಾಗೆ ಹೇಳುತ್ತಿರುವುದನ್ನು ಕಾಣುತ್ತಿದ್ದೇವೆ.

ಈ ನಾಡಿನಲ್ಲಿ ದಲಿತರನ್ನು ಹರಿದು ಸುಟ್ಟು ತಿನ್ನುತ್ತಿರುವುದನ್ನು ದಿನವೂ ಪತ್ರಿಕೆಯಲ್ಲಿ ನೋಡುತ್ತಿದ್ದೀರಿ, ಆದರೂ ಸಿಆರ್‌ಇಸೆಲ್ ಬಗ್ಗೆ ಹೇಳುತ್ತೀರಿ. ಜಾತೀಯತೆ ಎನ್ನುವುದು ಹಳ್ಳಿಗೂ ದಿಲ್ಲಿಗೂ ವ್ಯತ್ಯಾಸವಿಲ್ಲ. ಅಂತಹ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಫ್ರಾನ್ಸ್‌ಗೆ ಭೇಟಿ ನೀಡಿದ್ದಾಗ ಇದೇ ಈ ನಾಡಿನ ಶ್ರೇಷ್ಠ ಪತ್ರಿಕೆಯ ಅಂಕಣಕಾರರು ಭಾರತದ ಅಸ್ಪೃಶ್ಯ ರಾಷ್ಟ್ರಪತಿಯೊಬ್ಬ ಫ್ರಾನ್ಸ್‌ಗೆ ಭೇಟಿ ಎಂದು ಬರೆದರು. ಸ್ವತಃ ನಾರಾಯಣನ್ ತಮ್ಮ ನೋವನ್ನು ಹೀಗೆ ತೋಡಿಕೊಂಡಿದ್ದಾರಂತೆ. ರಾಷ್ಟ್ರಪತಿ ಭವನದ ವಿಷಯಗಳೂ, ಪತ್ರಗಳೂ ನನಗೆ ತಲುಪುತ್ತಲೇ ಇರಲಿಲ್ಲ ಎಂದು. ಇನ್ನು ನನ್ನಂತಹವರು ಯಾವ ಲೆಕ್ಕ? ಊರಿನಲ್ಲಿರುವ ಬೈರ ತೃಣಕ್ಕೂ ಸಮಾನವಿಲ್ಲ. ಇಂತಹುದೆಲ್ಲ ಜೀವಂತವಾಗಿ ನಡೆಯುತ್ತಿರುವಾಗ ನೀವು ಬ್ರಾಹ್ಮಣರ ವಾರಾನ್ನದ ಬಗ್ಗೆ ಮಾತನಾಡುತ್ತೀರಿ. ಕೇಳಿ, ನಮ್ಮೂರಿನಲ್ಲಿ ಸೀನಯ್ಯ (ಬ್ರಾಹ್ಮಣರು) ತುಂಬಾ ಬಡತನದಲ್ಲಿದ್ದಾಗ ನಾನು ನನ್ನ ಕುಲವಾಡಿಕೆಯ ಪಡಿ ಎತ್ತಿದ ಅಕ್ಕಿಯನ್ನು ಅವರಿಗೆ ಕೊಟ್ಟಿದ್ದೇನೆ. ಖುರಾನಿನ ಒಂದು ಮಾತು ನೆನಪಾಗುತ್ತದೆ. ದಾನ ಮತ್ತು ಪ್ರಾರ್ಥನೆ ಯಾರಿಗೂ ತಿಳಿಯದಿದ್ದರೆ ಅದು ತನ್ನ ಸಾರ್ಥಕ್ಯ ಪಡೆಯುತ್ತದೆ ಎಂದು. ಆದರೆ ನಾನು ಇದನ್ನು ದಾನವಾಗಿ ಕೊಡಲಿಲ್ಲ. ಹಸಿವನ್ನು ಹಂಚಿಕೊಂಡಿದ್ದೇನೆ ಎಂದು ಹೇಳುತ್ತಿದ್ದೇನೆ. ಮೊನ್ನೆ ಅಗ್ನಿ ಪತ್ರಿಕೆಯಲ್ಲಿ ಈ ಕುರಿತು ಬರೆದಾಗ ಇದು ಅಪ್ಪನಿಗೆ ತಿಳಿದು ಇನ್ನೂ ಒಂದು ಘಟನೆ ನೆನಪು ಮಾಡಿಕೊಂಡಿದೆ. ಸೀನಯ್ಯನ ಮಗಳು ಕಾಯಿಲೆ ಬಿದ್ದಾಗ ನಮ್ಮ ಬಿಸಿ ನೀರಿನ ಮಡಕೆ (ಹಿತ್ತಾಳೆ) ಆ ಕಾಲಕ್ಕೆ ಮೂವತ್ತು ರೂಪಾಯಿ ಅಡವಿಟ್ಟು ಅದರಲ್ಲಿ ಇಪ್ಪತ್ತು ರೂ. ಅವರಿಗೆ ಕೊಟ್ಟು ಉಳಿದ ಹತ್ತು ರೂ.ಗಳನ್ನು ಅಪ್ಪನೆ ಇಟ್ಟುಕೊಂಡಿದ್ದು ಅದನ್ನು ತೀರಿಸಲಾಗದೆ, ಬಡ್ಡಿಯೆಲ್ಲ ಸೇರಿ 120ರೂ.ಗಳಾಗಿ ಕೊನೆಗೂ ತೀರಿಸಲಾಗದೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಪೊಲೀಸರೊಂದಿಗೆ ಹೋಗಿ ಅಪ್ಪ ಮೂವತ್ತು ರೂಪಾಯಿ ಕೊಟ್ಟು ಬಿಡಿಸಿಕೊಂಡಿತಂತೆ. ಈಗಲೂ ಆ ಪಾತ್ರೆ ನಮ್ಮ ಮನೆಯಲ್ಲಿದೆ. ಈಗ ತಿಳಿಯಿತಲ್ಲಾ, ದಲಿತರು ನಿಷ್ಕ್ರಿಯತೆ ಮತ್ತು ರಾಕ್ಷಸ ಗುಣಗಳನ್ನು ಹೇಗೆ ಮೈಗೂಡಿಸಿಕೊಂಡಿದ್ದರು ಎನ್ನುವುದು. ತುಂಬಾ ಬಡತನದಲ್ಲಿದ್ದ ಸೀನಯ್ಯನವರಿಗೆ ಜನತಾ ಮನೆ

ದಲಿತ ದನಿ

ದಲಿತರು ಎಂದ ಕೂಡಲೇ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಕೂಗು ಕುರಿತ ಈರ್ವರು ವಿಪರೀತ ಬುದ್ಧಿಜೀವಿಗಳ ವ್ಯರ್ಥಾಲಾಪ ಕಿವಿಯಲ್ಲಿ ಗುಂಯ್

ವಿಜಯ ಕರ್ನಾಟಕ

ಅಂಕು-ಡೊಂಕು

ಗುಡುತ್ತಿದೆ. ಖಾಸಗಿ ವಲಯದಲ್ಲಿ ದಲಿತರ ನರಳಿಕೆಗೆ ಕಾಳಜಿ ತೋರಿರುವ ಕಾಮ್ರೇಡ್ ಎನ್.ಕೆ. ಮೋಹನ್‌ರಾಮ್‌ರ ಮಹಾರೊಮ್ಯಾಂಟಿಕ್ ಅಘಾತಕ್ಕೆ ಡಾ।। ನಟರಾಜ್ ಹುಳಿಯಾರ್‌ರ ಪ್ರತ್ಯಾಘಾತ ಇದು-'ಬ್ರಾಹ್ಮಣರ 'ಕಷ್ಟ'ದಲ್ಲಿ ದಲಿತರಿಗೂ ಒಂದು ಪಾಲು ಸಿಗಲಿ. ಅವರನ್ನು 'ನವಬ್ರಾಹ್ಮಣರಂತೆ' ಕಂಡು, 25 ಸಾವಿರ ರೂಪಾಯಿ ವೇತನವನ್ನು ಇನ್ಫೋಸಿಸ್‌ನಲ್ಲಿ ಕೊಡಿಸಿಕೊಡಲಿ'. (ಇದು 'ಸಂವಾದ' ನಿಯತಕಾಲಿಕದಲ್ಲಿ ನಾ ಕಂಡ ಒಂದು ಬೌದ್ಧಿಕ ಚಕಮಕಿ).

ಖಾಸಗಿ ಕ್ಷೇತ್ರದಲ್ಲಿ ನೌಕರಿ ಪಡೆದ ಕೆಲ ದಲಿತರ ನಿಷ್ಕ್ರಿಯತೆಗಾಗಿ, ಅವರ ಬಗ್ಗೆ ಕ್ರಮ ತೆಗೆದುಕೊಂಡರೆ, ಜಾತಿಯ ನೆಪವೊಡ್ಡಿ ಸಿ.ಆರ್.ಇ. ಸೆಲ್‌ಗೆ ದೂರಿತ್ತರೇನು ಗತಿ ಎಂಬ ಭೀತಿ ಇನ್ಫೋಸಿಸ್‌ನಂತೆ ಹಲವಾರು ಸಂಸ್ಥೆಗಳನ್ನು ಕಾಡುತ್ತಿರಬಹುದು! ಪ್ರತಿಭೆಯ ಪಣವೊಡ್ಡುವಾಗೆಲ್ಲ ಈ ಸೂಕ್ಷ್ಮ ಬ್ರಾಹ್ಮಣರು, ಸರ್ವಂ ಭಕ್ಷಯಾಮಿ ಸಾಗರಂ ಭಕ್ಷಯಾಮಿ ಎಂದು ಎಲ್ಲ ಉದ್ಯೋಗಾವಕಾಶಗಳನ್ನು ಕಬಳಿಸುತ್ತಾರೆ. ನಮ್ಮ ದಲಿತ ಯುವಕರೂ ಸಹ ಸ್ವಪ್ರತಿಭೆಯಿಂದ ಅಂತಹ ಅವಕಾಶಗಳನ್ನು ಹಾರುವರಿಂದ ಕಸಿಯಬೇಕು. ಎಷ್ಟು ಶತಮಾನಗಳವರೆಗೆ ಮೀಸಲಾತಿಗೆ, ಸಂವಿಧಾನ ಹಕ್ಕು ಚಾಳ್ತಿಗೆ ಜೋತು ಬೀಳುವುದು? ಇದು ಆತ್ಮಗೌರವಕ್ಕೆ ಹಾನಿಕರವಲ್ಲವೆ?

ಮೀಸಲಾತಿ ಚಲಾಯಿಸಲೇಬೇಕೆಂಬ ಛಲವಿದ್ದರೆ, ಬಡ ಬ್ರಾಹ್ಮಣ ವಿದ್ಯಾರ್ಥಿಗಳು ಈಗಲೂ ಉಸಿರುಕಟ್ಟಿ ಸಾಯದಂತೆ ಉಳಿಯಲು ಉಣ್ಣುತ್ತಿರುವ ವಾರಾನ್ನ, ದರಿದ್ರ ಬ್ರಾಹ್ಮಣರು ಉದರಂಭರಣಕ್ಕಾಗಿ ಅವಲಂಬಿಸಿರುವ ಯಜ್ಞೋಪವೀತ ವಿಕ್ರಯವೃತ್ತಿ, 'ದಲಿತ ಬ್ರಾಹ್ಮಣ'ರು ಸ್ವಹಿತ ಲೋಕಹಿತ ಬಗೆದು ಕೈಗೊಂಡಿರುವ ಪೌರೋಹಿತ್ಯ, ದೈವಭೀರು ಬ್ರಾಹ್ಮಣರು ಇಹ ಪರಾರ್ಥಕ್ಕಾಗಿ ನಡೆಸುತ್ತಿರುವ ಸಂಸ್ಕೃತ ವೇದಾಗಮ ಪಾಠಶಾಲೆಗಳು- ಇವೆಲ್ಲ ಇನ್ನೂ, ಈಗಲೂ, ಕೆಲವೆಡೆ ಖಾಸಗೀ ಕ್ಷೇತ್ರದಲ್ಲಿ ಇವೆ. ಅಲ್ಲಿ ಚಲಾಯಿಸಬಹುದೆ ಯೋಚಿಸಿ ನೋಡಿ. Educate, Organize and agitate ತಾರಕ ಮಂತ್ರ ನಿಮ್ಮನ್ನು ಕಾಯಲಿ.

ಆಗ ಹಾರುವರು ಹೆಂಡ ಮಾರಿ ಶ್ರೀಮಂತರಾಗುತ್ತಾರೆ. ಚಪ್ಪಲಿ ಹೊಲಿದು ಬಂಗಲೆ ಕಟ್ಟಿಸುತ್ತಾರೆ. ಉಳುಮೆ ಮಾಡಿ ಫಾರ್ಮ್ ಹೌಸ್‌ಗಳಲ್ಲಿ ಐಷಾರಾಮ ಜೀವನ ನಡೆಸುತ್ತಾರೆ. ಹೋಟೆಲ್ ನಡೆಸಿ ಕೋಟ್ಯಂತರ ರೂಪಾಯಿ ಗಳಿಸುತ್ತಾರೆ. ಮತ್ತೆ ಅಲ್ಲಿ ಈ ಮೀಸಲಾತಿಯ ಹಾಹಾಕಾರ ಇರದು.

○ ಸಿ.ಎನ್. ಕೃಷ್ಣಮಾಚಾರ್

ಕಟ್ಟಿಸಿಕೊಡಲು ನಮ್ಮ ದಸಂಸ ಗೆಳೆಯರ ಸಕ್ರೀಯ ಪಾತ್ರವಿದೆ. ಅವರಿಗೆ ವೃದ್ಧಾಪ್ಯ ವೇತನಕ್ಕೆ ಓಡಾಡಿದವನೇ ನಾನು ಎಂದು ಹೇಳಿಕೊಳ್ಳಲು ಮುಜುಗರವಾಗುತ್ತದೆ. ಇಷ್ಟೆಲ್ಲಾ ಆದ ಮೇಲೂ ಸ್ವತಂತ್ರ್ಯ ಬಂದು 54 ವರ್ಷಗಳಾಗಿವೆ. ಮೀಸಲಾತಿಯನ್ನು ಈ ದೇಶದಲ್ಲಿ ಎಷ್ಟುಮಟ್ಟಿಗೆ ಕನಿಷ್ಟ ಯಶಸ್ವಿಗೊಳಿಸಿದ್ದಾರೆ ಎನ್ನುವುದನ್ನು ಎಲ್ಲ ಇಲಾಖೆಗಳಿಗೂ ಒಮ್ಮೆ ನನಗಾಗಿ ತಪಾಸಣೆ ಮಾಡಿ, ನಿಮಗೆ ತಿಳಿಯುತ್ತದೆ. ನಾವು ಈ ದೇಶದಲ್ಲಿ ಶೇ. 30ರಷ್ಟಿದ್ದೇವೆ. ಆದರೆ ನೀವು ಅರ್ಧ ಶತಮಾನಕ್ಕೆಲ್ಲಾ ಇನ್ನೂ ಎಷ್ಟು ಶತಮಾನಗಳ ಕಾಲ ಮೀಸಲಾತಿ ಎಂದು ಕೇಳಿದ್ದೀರಿ. ಯಾಕಿಷ್ಟು ನಮ್ಮ ಮೇಲೆ ಅಸಮಾಧಾನ ನಿಮಗೆ. ನಿಮಗೇ ಬದುಕು ಕೊಟ್ಟಿಲ್ಲ ಎಂದರೆ ನೀವು ಹೀಗೆ ಮಾತನಾಡಬಹುದು. ನಾವು ನಮ್ಮ ಪಾಡಿಗೆ ಬದುಕುವುದು ತಪ್ಪೇ? ಆಚಾರ್ಯರೇ ನೀವು ಈ ದೇಶವನ್ನು ಆಳಲು ಹುಟ್ಟಿದವರು. ಈ ದೇಶದ, ಈ ಜಗತ್ತಿನ ಹಾಗು-ಹೋಗುಗಳ ಬಗ್ಗೆ ಭವಿಷ್ಯ ನುಡಿಯುವವರು ಮತ್ತು ಭವಿಷ್ಯವನ್ನು ನಿರ್ಧರಿಸುವವರು. ಹಾಗೆ ದೇವರಿಗೆ ಸಂದೇಶವನ್ನು ತಿಳಿಸುವವರು. ನಿಮ್ಮ ಜಾಣ್ಮೆ, ತಾಳ್ಮೆ, ನಿಮ್ಮ ಶ್ರೇಷ್ಟತನಕ್ಕೆ ಸಾಟಿಯೇ ನಾವೆಲ್ಲ? ದಲಿತರು ಯಾರಿಗೂ ನೋವು ಕೊಟ್ಟವರಲ್ಲ. ನೋವು ಅನುಭವಿಸಿದವರು. ನಟರಾಜ್ ಹೇಳಿದ್ದು ಅಪರಾಧವೇನಲ್ಲ. ನಾವೆಲ್ಲರೂ ಬದುಕುವ ಹಕ್ಕನ್ನು ಪಡೆದವರು, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವುದನ್ನು ಸೂಚ್ಯವಾಗಿ ಹೇಳಿದ್ದಾರೆ ಅಷ್ಟೆ. ಆದರೆ ನೀವು ಬ್ರಾಹ್ಮಣರ ಮನೆಯ ಬಾಗಿಲನ್ನೇ ಹೊಡೆದು ಅವರ ಸಂಪತ್ತನ್ನು ಅಪಹರಿಸಿಕೊಂಡು ಹೋದ ಹಾಗೆ ಪ್ರತಿಕ್ರಿಯಿಸಿದ್ದೀರಿ. ಇದೆಲ್ಲಾ ನನ್ನಂತ ಸಾಮಾನ್ಯನಿಗೆ ನಿಮ್ಮ ಆಲೋಚನೆ ನೋವನ್ನುಂಟುಮಾಡುತ್ತದೆ. ನೀವು ಮುಂದುವರಿದು, ನಮ್ಮ ದಲಿತ ಯುವಕರು ಹಾರುವರ ಯುವಕರಿಂದ ಉದ್ಯೋಗ ಅವಕಾಶಗಳನ್ನು ಕಸಿಯಬೇಕೆಂದಿದ್ದೀರಿ. ನೀವು ನಿಮ್ಮ "ದಲಿತ ಯುವಕರು" ಎಂದಿದ್ದಕ್ಕೆ ಧನ್ಯವಾದಗಳು. ಖಾಸಗೀ ಕ್ಷೇತ್ರದಲ್ಲಿ ಉದ್ದಿಮೆದಾರರು ಯಾವ ಜಾತಿಯವರು, ಯಾವ ಜಾತಿಯವರು ಬಂಡವಾಳ ತೊಡಗಿಸಿದ್ದಾರೆ ಮತ್ತು ನಡೆಸುತ್ತಿದ್ದಾರೆ ಎಂಬುದನ್ನು ಯೋಚಿಸಿ. ಈ ದೇಶದಲ್ಲಿ ಜಾತಿ ಧರ್ಮ ಇಲ್ಲದ ಯಾವ ಬಯೋಡೇಟಾಗಳೂ ಇಲ್ಲ. ಆದ್ದರಿಂದ ದಲಿತನಿಗೆ ಪ್ರತಿಭೆ ಇದ್ದರೂ, ತನ್ನ ಜಾತಿಯಿಂದ ಕನಿಷ್ಟನಾಗುತ್ತಾನೆ. ಬ್ರಾಹ್ಮಣ ಪ್ರತಿಭೆ ಇಲ್ಲದಿದ್ದರೂ ಜಾತಿಯಿಂದ ಶ್ರೇಷ್ಟನಾಗಿ ಕೆಲಸಕ್ಕೆ ಆಯ್ಕೆಯಾಗುತ್ತಾನೆ. ಇನ್ಫೋಸಿಸ್‌ನಲ್ಲಿ ಡ್ರೈವರ್ ಕೂಡ ಇನ್ಫೋಸಿಸ್ ಜಾತಿಯವರೇ ಇದ್ದಾರೆಂದು ಕೇಳಿದ್ದೇನೆ. ದಲಿತರಲ್ಲಿ ಡ್ರೈವರುಗಳು ರಾಸಿ ರಾಸಿ ಬಿದ್ದಿದ್ದಾರೆ. ಕನಿಷ್ಟ ಅವರಿಗಾದರೂ ಕೆಲಸ ಸಿಗಬೇಕಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರು ನನ್ನ ಕಾರನ್ನು ಓಡಿಸುವವನು ಕೀಳು

ನಮ್ಮೂರಿನಲ್ಲಿ ಸೀನಯ್ಯ (ಬ್ರಾಹ್ಮಣರು) ತುಂಬಾ ಬಡತನದಲ್ಲಿದ್ದಾಗ ನಾನು ನನ್ನ ಕುಳವಾಡಿಕೆಯ ಪಡಿ ಎತ್ತಿದ ಅಕ್ಕಿಯನ್ನು ಅವರಿಗೆ ಕೊಟ್ಟಿದ್ದೇನೆ. ಖುರಾನಿನ ಒಂದು ಮಾತು ನೆನಪಾಗುತ್ತದೆ. ದಾನ ಮತ್ತು ಪ್ರಾರ್ಥನೆ ಯಾರಿಗೂ ತಿಳಿಯದಿದ್ದರೆ ಅದು ತನ್ನ ಸಾರ್ಥಕ್ಯ ಪಡೆಯುತ್ತದೆ ಎಂದು. ಆದರೆ ನಾನು ಇದನ್ನು ದಾನವಾಗಿ ಕೊಡಲಿಲ್ಲ. ಹಸಿವನ್ನು ಹಂಚಿಕೊಂಡಿದ್ದೇನೆ ಎಂದು ಹೇಳುತ್ತಿದ್ದೇನೆ.

ಜಾತಿಯವನಾದರೆ ನನ್ನ ಸಾರಥಿ ಅವನಾದಂತೆ ಎಂದಿದ್ದರಂತೆ ಎನ್ನುವುದು ನೆನಪಾಗುತ್ತದೆ. ಇನ್ನು ಬ್ರಾಹ್ಮಣರು ಹೆಂಡ ಮಾರಿಯಾದರೂ ಬದುಕುತ್ತಾರೆ ಎಂದು ಹೇಳಿದ್ದೀರಿ. ಖಂಡಿತಾ ಬದುಕುತ್ತಾರೆ. ನಿಮಗೊಂದು ಸಣ್ಣ ಪ್ರಶ್ನೆ, ಹೊಲೆ-ಮಾದಿಗರ ಹೋಟೆಲ್ ಇಡೀ ದೇಶದಲ್ಲಿ ಎಲ್ಲಾದರೂ ಇದ್ದು ಅದು ನಡೆಯುತ್ತಿದೆಯೆ ಕೇಳಿ ನೋಡಿ.

ಜಾತಿಯ ಕಾರಣಕ್ಕೆ ಎಂಟು ದಿನಗಳ ಹಸುಳೆಯನ್ನು ಕೊಂದ ನಾಡಿನಲ್ಲಿ ನಾನು ನಿಮಗೆ ಹೇಗೆ ಪ್ರತಿಕ್ರಿಯಿಸಲಿ. ಇನ್ನೂ ಒಂದೆರಡು ಘಟನೆಗಳನ್ನು ಹೇಳಿ ನನ್ನ ಪ್ರತಿಕ್ರಿಯೆಯನ್ನು ಮುಗಿಸುತ್ತೇನೆ. ಸಾಲು ಮರದ ತಿಮ್ಮಕ್ಕನ ಹೆಸರನ್ನು ಕೇಳಿರಬೇಕಲ್ಲ. ಖಂಡಿತಾ ಕೇಳಿರುತ್ತೀರಿ. ಬೇಕಾದರೆ ಆಕೆಯ ಬಗ್ಗೆ ಒಂದು ಪುಸ್ತಕವನ್ನು ಬರೆದು ಪ್ರಶಸ್ತಿ ಗಿಟ್ಟಿಸುತ್ತೀರಿ. ಆದರೆ ಇದೇ ಸಾಲು ಮರದ ತಿಮ್ಮಕ್ಕನನ್ನು ಆಕೆ ದಲಿತೆ ಎಂಬ ಕಾರಣಕ್ಕೆ ದೇವಸ್ಥಾನದಿಂದ ಆಚೆಗಿಟ್ಟಾಗ ನೀವು ಸಣ್ಣ ಪ್ರತಿಕ್ರಿಯೆಯನ್ನು ಕೂಡ ಬರೆಯಲಿಲ್ಲ. ಆದರೆ ಬ್ರಾಹ್ಮಣರ ಕಷ್ಟದಲ್ಲಿ ದಲಿತರಿಗೆ ಪಾಲು ಎಂದಾಕ್ಷಣ ನಿಮ್ಮ ಜಾತಿ ಧರ್ಮ ಎಲ್ಲ ನೆನಾಪಾಗುತ್ತದೆಯಾ ಸಾರ್? ಆಕೆ ತನಗೆ ಬಂದ ಪ್ರಶಸ್ತಿ ಹಣವನ್ನು ಬರೀ ದಲಿತರಿಗೆ ಮಾತ್ರ ಮೀಸಲಿಟ್ಟಳೆ? ಇಲ್ಲ. ತಾನು ಮಕ್ಕಳನ್ನು ಹೆರುವ ನೋವ ಅನುಭವಿಸದಿದ್ದರೂ ಇಡೀ ಹೆಣ್ಣುಮಕ್ಕಳಿಗೆ ಮಾದರಿಯಾಗುವಂತೆ ತನ್ನ ಊರಿನಲ್ಲಿನ ಹೆರಿಗೆ ಆಸ್ಪತ್ರೆಗಾಗಿ ಒಂದು ಲಕ್ಷ ಹಣವನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಹೋಗ್ನಿಬಿಡೋ ಅದ್ಯಾವ ಸಾಲು ಮರದ ತಿಮ್ಮಕ್ಕ ಎನ್ನಬಹುದು. ಇನ್ನು ನನ್ನದೊಂದು ಸಣ್ಣ ಘಟನೆ ಹೇಳಿ ಇದಕ್ಕೆ ಮಂಗಳ ಹಾಡುತ್ತೇನೆ. ಕೆಲವು ವರ್ಷಗಳ ಹಿಂದೆ ನನ್ನ ಹೆಂಡತಿ ಮನೆಯಲ್ಲಿ ಇರುವುದು ಬೋರಾಗುತ್ತದೆ, ಏನಾದರೂ ಬಿಸಿನೆಸ್ ಮಾಡುತ್ತೇನೆಂದು ಹೇಳಿದಾಗ ವ್ಯವಹಾರ ಜ್ಞಾನ ನಮಗಿಲ್ಲ ಅದೆಲ್ಲ ಬೇಡ ಎಂದೆ. ಆದರೂ ಕೇಳದೆ ಹಟ ಮಾಡಿ ಒಂದು ಸಣ್ಣ ಪ್ರಾವಿಷನ್ ಸ್ಟೋರನ್ನು ಕಾವಲ್‌ಬೈರಸಂದ್ರದಲ್ಲಿ (ಅಂಬೇಡ್ಕರ್ ಮೆಡಿಕಲ್ ಕಾಲೇಜ್ ರಸ್ತೆ) ಪ್ರಾರಂಭಿಸಿದೆವು. ಪ್ರತಿದಿನ ಒಂದಿಷ್ಟು ವ್ಯಾಪಾರ ನಡೆಯುತ್ತಿತ್ತು. ಬಂದ ಹಣವನ್ನೆಲ್ಲಾ ವ್ಯಾಪಾರಕ್ಕೆ ಹಾಕಿ ಇನ್ನಷ್ಟು ಕುದುರುವಂತೆ ಕಷ್ಟಪಟ್ಟೆವು. ಅಂಗಡಿ ಸ್ವಲ್ಪ ಇಂಪ್ರೂ ಆಯಿತು. ನಮ್ಮ ಅಂಗಡಿಯ ಎದುರಿಗೆ ಒಂದು ಮೇಲ್ಜಾತಿ ಅಂಗಡಿ ಕೂಡ ಇತ್ತು. ಅದು ಹೇಗೂ ಇವರಿಗೆ ನಮ್ಮ ಜಾತಿ ತಿಳಿಯಿತು. ನಾವು ಅಂಗಡಿ ಬಾಗಿಲು ಹಾಕಿದ ಸಮಯದಲ್ಲಿ ಅವರ ಅಂಗಡಿಗೆ ಬಂದವರಿಗೆಲ್ಲಾ ಅದು ಮಾದಿಗರ ಅಂಗಡಿ ಎಂದು ಹೇಳಿ ಬರುವ ಗಿರಾಕಿಗಳನ್ನು ತನ್ನತ್ತಾ ಸೆಳೆದುಕೊಂಡರು. ನಮ್ಮ ವ್ಯಾಪಾರ ಇದ್ದಕ್ಕಿದ್ದ ಹಾಗೆ ಕುಂಠಿತಗೊಂಡಿತು. ಅವರ ಅಂಗಡಿಗೆ ಬಂದ ವ್ಯಾಪಾರಸ್ಥರು ನಮ್ಮ ಕಡೆ ನೋಡಿ ನಗುತ್ತಿದ್ದ ನೆನಸಿಕೊಂಡರೆ ಕರುಳು ಕಿತ್ತು ಬರುವಂತಾಗುತ್ತಿತ್ತು. ಕೊನೆಗೂ ನಮ್ಮ ಅಂಗಡಿ ಬಾಗಿಲು ಮುಚ್ಚಿತು. ಈ ನಾಡಿನಲ್ಲಿ ಹುಟ್ಟಿದ್ದಕ್ಕೆ ಸಾರ್ಥಕವೆನಿಸಿತು. ಈಗ ಹೇಳಿ ನಾವು ಎಲ್ಲಿ ಬದುಕಬೇಕೆಂದು. ಇಂಥ ಘಟನೆಗಳು ನೂರಾರು ಇವೆ. ಅದನ್ನೆಲ್ಲಾ ನುಂಗಿಕೊಂಡು ಬದುಕುತ್ತಿದ್ದೇವೆ. ಆದರೂ ನಿಮಗೆ ಸಮಾಧಾನವಾಗುತ್ತಿಲ್ಲ. ಇದನ್ನೆಲ್ಲಾ ಕೇಳಿಯೂ ನಿಮಗೇನಾದರೂ ಹೇಳಲು ಉಳಿದಿದೆಯೇ? ●

○ ಸುಬ್ಬು ಹೊಲೆಯಾರ್

ಪ್ರಿಯ ದಲಿತೇತರರೇ, ದಯವಿಟ್ಟು ಕೇಳಿ

ಚಂದ್ರ ಬಾನ್ ಪ್ರಸಾದ್

ದಲಿತ್ ಡೈರಿ

ನವ ದೆಹಲಿ ಮತ್ತು ಲಕ್ನೋಗಳಿಂದ ಪ್ರಕಟವಾಗುವ ದೇಶದ ಪ್ರತಿಷ್ಠಿತ ಇಂಗ್ಲೀಷ್ ದಿನಪತ್ರಿಕೆ 'ದಿ ಪಯನೀರ್' ನಲ್ಲಿ ಖ್ಯಾತ ದಲಿತ ಲೇಖಕ, ಚಿಂತಕ ಚಂದ್ರ ಬಾನ್ ಪ್ರಸಾದ್ ಅವರು ಬರೆಯುತ್ತಿರುವ ವಿಚಾರ ಪ್ರಚೋದಕ ಜನಪ್ರಿಯ ಅಂಕಣ 'ದಿ ದಲಿತ್ ಡೈರಿ'. ಅತ್ಯಂತ ಜನಪ್ರಿಯವಾಗಿರುವ ಈ ಅಂಕಣ ತೆಲುಗಿನ 'ವಾರ್ತಾ' ದಿನ ಪತ್ರಿಕೆಯಲ್ಲೂ ಪ್ರಕಟವಾಗುತ್ತಿದೆ. 'ಸಂವಾದ'ಕ್ಕಾಗಿ ಪ್ರಸಾದ್ ಅವರು ಇನ್ನು ಮುಂದೆ ಪ್ರತಿ ತಿಂಗಳು ಬರೆಯಲಿದ್ದಾರೆ.

ಕನ್ನಡಕ್ಕೆ : ಕೆ.ವಿ. ರೈ

ನೀವು, ಇಂಗ್ಲೀಷ್, ಮಾತನಾಡುವ ದಲಿತೇತರರು ಅಥವಾ ಸಂಸ್ಕೃತೀಕರಣಗೊಂಡ ದಲಿತೇತರರು ಜಾಣರೆಂದು ನಮಗೆ ಗೊತ್ತಿದೆ. ಆದರೆ ನೀವು ಬೌದ್ಧಿಕವಾಗಿ ಎಷ್ಟು ವಕ್ರರಿದ್ದೀರಿ ಎಂಬುದನ್ನು ಈಗ ನಾವು ಅರ್ಥಮಾಡಿಕೊಳ್ಳಲು ಆರಂಭಿಸಿದ್ದೇವೆ. ಮೊದಲಿಗೆ ನಾವು ಸಂಶಯದ ಲಾಭವನ್ನು ನಿಮಗೆ ಬಿಟ್ಟುಕೊಟ್ಟಿದ್ದೇವೆ. ನಾವು ನಿಮ್ಮ ಉದ್ದೇಶದ ಬಗ್ಗೆ ಸಂಶಯಪಡುತ್ತಿಲ್ಲ. ನಿಮ್ಮ ಬೌದ್ಧಿಕ ವಿಕಾರಕ್ಕೆ ನಾಲ್ಕರಷ್ಟು ಮಾತನ್ನು ಆರೋಪಿಸಬಹುದು. ರಸ್ತೆಮಾರ್ಗದಲ್ಲಿ ತಿರುನೆಲ್ವೇಲ್ಲಿ-ಸೇಲಂ-ಧರ್ಮಪುರಿ-ಕಾಂಚಿಪುರಂನಿಂದ ಚೆನ್ನೈಗೆ ನನ್ನ ಇತ್ತೀಚಿನ ತಮಿಳುನಾಡಿನ ಪ್ರವಾಸವು, ನೀವು ನಿಶ್ಚಯವಾಗಿಯೂ ಬೌದ್ಧಿಕವಾಗಿ ಪ್ರಶ್ನಿಸುವವರೆಂಬ ನಂಬಿಕೆಯನ್ನು ನನ್ನಲ್ಲಿ ತಂದಿಟ್ಟಿದೆ. ನಾವು ಪ್ರಭುತ್ವಕ್ಕಾಗಿ ಹೋರಾಟಮಾಡಬೇಕೆಂದು ಪ್ರೇರೇಪಿಸಿದವರು ನೀವು. ಪ್ರಭುತ್ವವು ಮೂಲಭೂತವಾಗಿ ಭ್ರಷ್ಟಸಂಸ್ಥೆಯಾಗಿದ್ದು, ಆಳುವ ವರ್ಗಗಳ ಕೈಯಲ್ಲಿ ಶೋಷಿತರನ್ನು ಶೋಷಣೆಗೆ ಮತ್ತು ಹಿಂಸೆಗೆ ಉಪಕರಣವಾಗುತ್ತದೆ ಎಂಬುದನ್ನು ನೀವು ಅರ್ಥೈಸುತ್ತೀರಿ. ಭಾರತೀಯ ಸಮಾಜವು ನಾಗರೀಕತೆಯನ್ನು ಸಾಧಿಸಿದ ಯೂರೋಪಿಯನ್ ಸಮಾಜ ಆಗಬೇಕೆಂದು ಕುತಂತ್ರದಿಂದ ಭಾವಿಸಿದ್ದೀರಿ. ಅಲ್ಲದೆ ಇದರಿಂದಾಗಿ ಅದು ಭಾರತೀಯ ರಾಜ್ಯಾಂಗಕ್ಕಿಂತ ಹೆಚ್ಚು ಮುಂದುವರಿದದ್ದು ಮತ್ತು ಪ್ರಗತಿಪರವಾದದ್ದು ಎಂದು ವಾದಿಸುತ್ತೀರಿ.

ನಾಗರೀಕ ಸಮಾಜಗಳಲ್ಲಿ, ಪ್ರಭುತ್ವ ಸಂಸ್ಥೆಯು ನಿಷ್ಠುರತೆಯ ಸಾಮಾಜಿಕ ಮೇಲ್ವಿಚಾರಣೆಗೆ ಒಳಪಟ್ಟಿದೆ. ಪ್ರಭುತ್ವವು ವ್ಯಕ್ತಿಯನ್ನು ಶಿಕ್ಷಿಸಬೇಕು. ಸಮಾಜವು ರಾಜ್ಯಾಂಗದ ನೈತಿಕ ಪೋಷಕನಂತೆ ಕಾರ್ಯನಿರ್ವಹಿಸಬೇಕು ಮತ್ತು ಪ್ರಭುತ್ವವು ಬದಲಾಗುವ ಸಂದರ್ಭದಲ್ಲಿ ಬದಲಾಗುತ್ತಿರಬೇಕು. ಪ್ರೀತಿಯ ದಲಿತೇತರರೇ! ಮೊದಲ ಹಂತವನ್ನು ನೀವು ಪರ್ಯಾಲೋಚಿಸಿ, ಮಹತ್ವದ ಫ್ರೆಂಚ್ ಕ್ರಾಂತಿಯ ನಂತರ, ಪ್ರಭುತ್ವವು ಜನತೆಯ ಆಜ್ಞೆಯ ಮೇರೆಗೆ ಸಮಾಜದ ವ್ಯವಹಾರಗಳನ್ನು ನಿಯಂತ್ರಿಸುವುದು, ಪ್ರಜೆಗಳ ಸಾಮಾಜಿಕ ವರ್ತನೆಯ ಮಾನದಂಡಗಳನ್ನು ರೂಪಿಸಿತು. ಉದಾರವಾದಿ ಪ್ರಜಾಸತ್ತಾತ್ಮಕ ರಾಜಕೀಯ ಸಂಸ್ಥೆಗಳ ಅಭಿವೃದ್ಧಿಗೆ ಅವಕಾಶ ನೀಡಿತು. ಪ್ರಭುತ್ವವು ಸಮಾಜವನ್ನು ಪುನರ್ ರಚಿಸಿತು. ಮೌಢ್ಯ ತುಂಬಿದ ಪ್ರತಿಗಾಮಿಗಳನ್ನು ನಿರ್ನಾಮಗೊಳಿಸಿ, ಭ್ರಷ್ಟ ಸಿದ್ಧಾಂತಗಳನ್ನು / ಸಂಸ್ಥೆಗಳನ್ನು ನಿರ್ಮೂಲ ಮಾಡಿತು. ಪ್ರಭುತ್ವದ ನಿಯಂತ್ರಣದ ಕಾನೂನಿನಂತೆ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳು ಸಾಂಸ್ಥೀಕರಣದ ಕಠಿಣ ಪ್ರಕ್ರಿಯೆಯಲ್ಲಿ ನಾಗರೀಕ ಸಮಾಜವಾಗುವತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಹೀಗೆಯೇ ಯುರೋಪ್ ಕತ್ತಲೆಯಿಂದ, ಮಧ್ಯಕಾಲೀನ ಭೂತದಿಂದ ವರ್ತಮಾನದ ಸ್ವಯಂ ತಂತ್ರವಾದಕ್ಕೆ ಮಾಡಿದ ಪ್ರಯಾಣವಾಗಿತ್ತು.

ಪ್ರಿಯ ದಲಿತೇತರರೇ, ನೀವು, ಯಾವುದೇ ನಾಚಿಕೆ ಪ್ರಜ್ಞೆ ಅಥವಾ ಸ್ವಗೌರವವಿಲ್ಲದೆ ಪ್ರಜಾಸತ್ತೆಯು ಪ್ರಾರಂಭವಾದ ಜನವರಿ 26, 1950ರಿಂದ ಅದು ಕತ್ತಲೆಯೆಡೆಗೆ ಸಾಗಲು ಕಾರಣರಾಗಿದ್ದೀರಿ. ಸಂವಿಧಾನದ ಪೀಠಿಕಾಭಾಗವು ಆ ಸಂವಿಧಾನದ ಗುರಿಯನ್ನು ಹೇಳುತ್ತದೆ. ಸಂವಿಧಾನವು ಜನರ ಸಾಮುದಾಯಿಕ ಇಚ್ಛೆಯನ್ನು ಪ್ರತಿನಿಧಿಸುತ್ತದೆ. ಮತ್ತು ಪ್ರಭುತ್ವಕ್ಕೆ ವಹಿಸಿರುವ ಆಜ್ಞೆಯು ಸಂವಿಧಾನದ ತೀರ್ಮಾನವಾಗಿದೆ. ಪ್ರಭುತ್ವವು ಸಾರ್ವತ್ರಿಕ ನ್ಯಾಯದ ನೆಲೆಯಲ್ಲಿ ಸಮಾಜವನ್ನು ಪುನರ್ ಸಂಘಟಿಸುವುದು ಭಾರತೀಯ ಸಂವಿಧಾನದ ಆಜ್ಞೆಯಾಗಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ-ಹೀಗೆ ಜೀವನದ ಎಲ್ಲ ರಂಗಗಳಲ್ಲಿ ನ್ಯಾಯವು ಪ್ರಧಾನವಾಗಿರಬೇಕು. ಇದು ತನ್ನ ಎಲ್ಲ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ನೀಡಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಎಲ್ಲ ಭಾರತೀಯರನ್ನು ಪೂರ್ಣ ಪ್ರಜೆಗಳೆಂದು ಘೋಷಿಸಿದೆ. ಅದಕ್ಕಿಂತ ಮುಂಚೆ ಅಥವಾ ಚಾರಿತ್ರಿಕವಾಗಿ, ಅಸ್ಪೃಶ್ಯರು ಮತ್ತು ಆದಿವಾಸಿಗಳು ಪ್ರಜೆಗಳಾಗಿರಲಿಲ್ಲ.

ನನ್ನ ಪ್ರೀತಿಯ ದಲಿತೇತರರೇ, ಒಂದೇ ದಿನದಲ್ಲಿ ನೀವು ಬೌದ್ಧಿಕವಾಗಿ ಪ್ರಾಮಾಣಿಕರಾಗಬೇಕೆಂದು ನಾವು ಅಪೇಕ್ಷಿಸುವುದಿಲ್ಲ. ಈಗಿಂದೀಗಲೇ ನಿಮಗಾಗಿ ನೀವು ಯಾವುದೇ ನೈತಿಕ ಮಾನದಂಡಗಳಿಂದ ಹೊರಹೊಮ್ಮಬೇಕೆಂದು ಸಹ ನಾವು ಬಯಸುವುದಿಲ್ಲ. ನಿಮಗೆ ನಿಮ್ಮದೇ ಆದ ಒಂದು ದೀರ್ಘ ಇತಿಹಾಸವಿದೆ. ನೀವು ಆ ಚರಿತ್ರೆಯ ಪಾರಂಪರ್ಯವನ್ನು ಪಡೆದವರು. ಇದು ನಿಮ್ಮ ಮನಸ್ಸಿನ ಯಾವುದೇ ಮುಕ್ತತೆಯನ್ನು ಪ್ರತಿಭಟಿಸುತ್ತಿದೆ. ನೀವು ಇಂಗ್ಲೀಷಿನಲ್ಲಿ ಮಾತನಾಡುವುದನ್ನು ನೋಡಿದಾಗ, ನೀವು ಸಂಸ್ಕೃತೀಕರಣಕ್ಕೆ ಒಳಗಾಗಿರುವುದು ಗೊತ್ತಾಗುತ್ತದೆ. ಮತ್ತು ಸಾಕ್ಸ್‌ಗಳನ್ನು ಧರಿಸುವುದು ಹೇಗೆಂದು ನೀವು ತಿಳಿದಿದ್ದೀರಿ. ಮೂರು ತುಂಡಿನ ಸೂಟನ್ನು ಹಾಕಿಕೊಳ್ಳುವುದು ನಿಮಗೆ ಗೊತ್ತಿದೆ ಮತ್ತು ನಿಮ್ಮ ಕತ್ತಿನ ಸುತ್ತ ಟೈ ಹಾಕಿಕೊಳ್ಳಲು ಗೊತ್ತು. ಟೇಬಲ್ ಮ್ಯಾನರ್‌ಗಳನ್ನು ಮತ್ತು ಫೋರ್ಕನ್ನು (ಚಮಚ) ಹೇಗೆ ಉಪಯೋಗಿಸಬೇಕೆಂದು ಗೊತ್ತಿದೆ. ನಿಮ್ಮ ಅವತಾರವು ಅಂತಿಮವಾಗಿ ನೀಲಿ ಜೀನ್ಸ್‌ನಲ್ಲಿರುತ್ತದೆ. ನೀವು ಆಧುನಿಕೋತ್ತರದ ಬಗ್ಗೆ ಮಾತಾಡುವಾಗ ಅಕ್ಷರಮಟ್ಟಿಗೆ ಬದಲಾಗಿರುತ್ತೀರಿ. ನಿಮ್ಮ ಡ್ರಾಯಿಂಗ್ ರೂಮಿನಲ್ಲಿ ಮೊನಾಲಿಸಳ ಪ್ರತಿ ಇರುತ್ತದೆ. ನೀವು ಸಂಪೂರ್ಣವಾಗಿ ಸಭ್ಯ ಮನುಷ್ಯರೆಂದು ತಪ್ಪಾಗಿ ಭಾವಿಸಿದ್ದೇವೆ.

ಮತ್ತೊಂದು ದಿನ, ಕಪ್ಪು ಜನರ ವಿರುದ್ಧ ವಿರುವ, ಬಿಳಿಯರ ಯಜಮಾನ್ಯದ ವಿರುದ್ಧ ಒಮ್ಮೊಮ್ಮೆ ಬಾಯ್ತೆರೆಯುತ ನೋಮಾಚಾಮಸ್ಕಿಯಿಂದ ಬೋಧನೆಯನ್ನು ತೆಗೆದುಕೊಳ್ಳಲು ಅಪಾರ ಸಂಖ್ಯೆಯಲ್ಲಿ ಸೇರಿರುವ ಸಭೆಯಲ್ಲಿ ನೀವಿರುತ್ತೀರಿ. ನಿಮ್ಮ ಲೂಯಿಸ್‌ಫಿಲಿಫ್ ಶರ್ಟಿನ ಒಳಗೆ ಅಡಗಿರುವ ವರ್ಣ ಲಕ್ಷಣಗಳನ್ನು ಅಥವಾ ಶೂದ್ರರಾಗಿದ್ದರೆ ನಿಮ್ಮ ಮೈಮೇಲಿನ ಬರೆಗಳನ್ನು ನಾವು ನಿಜವಾಗಿ ಗುರುತಿಸುತ್ತಿರುತ್ತೇವೆ.

ಪ್ರಭುತ್ವದ ವಿರುದ್ಧ, ತಮ್ಮ ವಿರುದ್ಧ

ಪ್ರೀತಿಯ ದಲಿತೇತರರೇ, ನಾವು ಪ್ರಭುತ್ವಕ್ಕೆ ಹೋರಾಟ ಮಾಡಲು ಬೋಧನೆ ಮಾಡಿದ್ದೀರಿ. ಇದರ ಪರಿಣಾಮವಾಗಿ, ಅನೇಕ ಅದ್ಭುತ ದಲಿತ ಮನಸ್ಸುಗಳು ಸ್ವತಂತ್ರವಾಗಿ ಆಲೋಚಿಸುವ ಸಾಮರ್ಥ್ಯವನ್ನು ಪಡೆದುಕೊಂಡಿವೆ. ಅವರು ಪ್ರಭುತ್ವದ ವಿರುದ್ಧವಿದ್ದಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ತಮಗೆ ವಿರುದ್ಧವಾಗಿದ್ದಾರೆ, ತಮ್ಮ ಜನರ ವಿರುದ್ಧ ಇದ್ದಾರೆ, ನಾನು ನನ್ನ ಸುತ್ತಮುತ್ತ, ನೆರೆಹೊರೆ, ನಾನು ಜೀವಿಸುತ್ತಿರುವ ಪಟ್ಟಣ, ಇಡೀ ಉತ್ತರಭಾರತ ಮತ್ತು ದಕ್ಷಿಣದ ಹೆಚ್ಚಿನ ಭಾಗಗಳನ್ನು ಸಹ ನೋಡುತ್ತಿದ್ದೇನೆ. ಆದರೆ ಸಂತೋಷದ ಒಂದು ದಲಿತ ಮುಖ, ಒಳ್ಳೆಯ ಬಟ್ಟೆ ಧರಿಸಿರುವ ದಲಿತ, ಉತ್ತಮವಾದ ಮನೆಯಲ್ಲಿ ವಾಸಿಸುವ ದಲಿತ ಮತ್ತು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸುತ್ತಿರುವ ದಲಿತನು

ಕಂಡುಬಂದಿಲ್ಲ. ಈ ದಲಿತರು ಹೀಗಿರಲು ಕಾರಣ ಖಾಸಗಿ ವಲಯವೇ! ಜೀವನದಲ್ಲಿ ಸ್ವಲ್ಪ ಸಂತೋಷ ಹೊಂದಿರುವ ಯಾರೇ ದಲಿತನಿದ್ದರೆ, ಅದು ಸರ್ಕಾರಿ ಉದ್ಯೋಗದಿಂದಾಗಿ ಅಥವಾ ಅವಳು/ಅವನು ಮೀಸಲಾತಿ ಮೂಲಕ ಶಾಸನಾತ್ಮಕ ಸಂಸ್ಥೆಯಲ್ಲಿರುವುದೇ ಆಗಿದೆ. ರಾಜ್ಯಾಂಗವು ದಲಿತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳನ್ನು ನೀಡುತ್ತದೆ. ಅಲ್ಪಸಂಖ್ಯೆಯಲ್ಲಾದರೂ ಇದುವರೆಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಮೀಸಲಾತಿಯನ್ನು ನೀಡಿದೆ. ಖಾಸಗಿ ವಲಯದ ಶಾಲೆಯು ಅಂಥಹುದೇ ಸೌಕರ್ಯಗಳನ್ನು ನೀಡುತ್ತದೆಯೇ? ಟಾಟಾ, ಬಿರ್ಲಾ, ರಿಲಯನ್ಸ್, ವಿಪ್ರೊ ಅಥವಾ ಇನ್‌ಫೋಸಿಸ್‌ಗಳು ಉದ್ಯೋಗದಲ್ಲಿ ದಲಿತ ಮೀಸಲಾತಿ ಹಕ್ಕನ್ನು ಒಪ್ಪುತ್ತದೆಯೇ? ಇದಕ್ಕೆ ವಿರುದ್ಧವಾಗಿ ಖಾಸಗಿ ವಲಯವು ರಾಜ್ಯಾಂಗದ ದೃಢೀಕೃತ ಸಕಾರಾತ್ಮಕ ನೀತಿಗಳನ್ನು ವಿರೋಧಿಸುತ್ತಿದೆ.

ಪ್ರೀತಿಯ ದಲಿತೇತರರೇ, ಧೈರ್ಯವಾಗಿ ಹೇಳಿ, ಪ್ರಭುತ್ವ ಮತ್ತು ಸಮಾಜ ಈ ಎರಡು ಸಂಸ್ಥೆಗಳ ನಡುವೆ ಯಾವುದು ಹೆಚ್ಚು ಭ್ರಷ್ಟವಾಗಿದೆ?' ಅಸ್ಪೃಶ್ಯತೆಯನ್ನು ಪ್ರಭುತ್ವವು ಅನುಸರಿಸುತ್ತಿದೆಯೇ ಅಥವಾ ಸಮಾಜವೇ? ದಲಿತರಿಗೆ ದೇವಾಲಯಗಳ ಬಾಗಿಲುಗಳನ್ನು ಮುಚ್ಚಿದ್ದು ಪ್ರಭುತ್ವವೇ ಅಥವಾ ಸಮಾಜವೇ? ಪ್ರಭುತ್ವವು ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗದಿಪಡಿಸಿದೆ. ಆದರೆ ಕಾರ್ಮಿಕರಿಗೆ ಕನಿಷ್ಠ ಮಜೂರಿ ಸಂದಾಯ ಮಾಡುವುದನ್ನು ನಿರಾಕರಿಸುವವರು ಯಾರು? ರಾಜ್ಯಾಂಗವೇ ಅಥವಾ ಸಮಾಜವೇ? ಸಾಮಾನ್ಯವಾಗಿ ದಲಿತ ಶಾಸನವೆಂದು ಕರೆಯಲಾಗುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರತಿಬಂಧ ಶಾಸನವನ್ನು ಪ್ರಭುತ್ವವು ಹೊಂದಿದೆ. ಸಮಾಜವು ಯಾವ ಶಾಸನವನ್ನು ಹೊಂದಿದೆ? ಸಮಾಜದ ಸಾಮಾಜಿಕ ಸಂಹಿತೆ ಯಾವುದು? ರಾಜ್ಯಾಂಗವು ದಲಿತರನ್ನು ಓಡಿಸುತ್ತದೆ. ಆದರೆ ಸಮಾಜವು ಅವರನ್ನು ರಕ್ಷಿಸುತ್ತದೆ ಇದು ನಿಜವೇ? ಅಥವಾ ಇದಕ್ಕೆ ತದ್ವಿರುದ್ಧವಾಗಿದೆಯೇ? ದಲಿತ ಶಾಸನದಂಥ ಶಾಸನವು ಯಾರ ವಿರುದ್ಧವಾಗಿದೆ ಇದು ಜಾತಿ ಸಂಹಿತೆಯನ್ನು ಒತ್ತಾಯಿಸುವ ಸಮಾಜದ ಸದಸ್ಯರ ವಿರುದ್ಧವಿಲ್ಲವೇ.

ಪ್ರೀತಿಯ ದಲಿತೇತರರೇ, ವಕ್ರ ಸ್ವಭಾವ ನಿಮ್ಮದು, ಆದ್ದರಿಂದ ನಿಮ್ಮನ್ನು ದಂಡನೆಗೊಳಪಡಿಸಿದಾಗಲಷ್ಟೆ ಒಪ್ಪುವವರಾಗಿದ್ದೀರಿ. ಆದರೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಈ ವಿಧಾನವನ್ನು ನಿಷೇಧಿಸಿದೆ. ನಾವು ನಿಮ್ಮೊಂದಿಗೆ ಪ್ರಶ್ನೆ ಕೇಳುವುದರಿಂದ ಸತ್ಯ ಹೊರಬರುವುದಿಲ್ಲ. ವಾದವನ್ನು ಸಮಾಜದ ಪರವಾಗಿ ಕೊಂಡೊಯ್ಯುತ್ತೀರಾ, ಪ್ರಭುತ್ವಕ್ಕೆ ಶಿಸ್ತಿಲ್ಲ ಅಥವಾ ಪ್ರಭುತ್ವವು ದಲಿತರ ಪರವಾಗಿ ನೀತಿಗಳನ್ನು ಅನುಷ್ಠಾನಗೊಳಿಸುವಾಗ ನಿಧಾನಮಾಡುತ್ತದೆ ಎಂದು ಮೊದಲಿಗೆ ನೀವು ಹೇಳುತ್ತೀರಿ. ಆದರೆ ಇದು ವಾಸ್ತವಾಂಶವನ್ನು ಹೇಳುತ್ತಿಲ್ಲ, ಪ್ರಭುತ್ವದ ಮೊದಲ ಹೆಜ್ಜೆಗಳಿಗೆ ತಡೆಯೊಡ್ಡುವವರು ಯಾರು? ತನ್ನ ಪ್ರೀತಿಯ ದಲಿತೇತರರೇ, ನೀವು ಕುತಂತ್ರದಿಂದ, ಪೊಲೀಸರು ದಲಿತರ ವಿರುದ್ಧ ದೌರ್ಜನ್ಯ ನಡೆಸಿದ ಕೆಲವು ಘಟನೆಗಳನ್ನು ಉದಾಹರಿಸಬಹುದು. ಆದರೆ ಅಂಥ ಘಟನೆಗಳನ್ನು ಅನುಷ್ಠಾನಗೊಳಿಸುವಾಗ ಪೊಲೀಸ್ ಸಿಬ್ಬಂದಿಯು ಒಳಗಾಗಲು ಯಾರ ಅಜೆಂಡಾ ಕಾರಣವೆಂದು ನೀವು ವಿವರಿಸುವುದಿಲ್ಲ. ಪ್ರಭುತ್ವವು ದಲಿತರನ್ನು ಹಿಂಸಿಸಲು ಪೊಲೀಸ್ ಪಡೆಗೆ ನಿರ್ದೇಶನ ನೀಡುವುದಿಲ್ಲ. ಪ್ರಭುತ್ವವು ದಲಿತರ ವಿರುದ್ಧ ಹಿಂಸೆಗೆ ಸಂವಿಧಾನಾತ್ಮಕ/ ಕಾನೂನಾತ್ಮಕ ಕ್ರಮಗಳನ್ನು ಹೊಂದಿದೆ. ಅಂಥ ಎಲ್ಲ ಕ್ರಮಗಳನ್ನು ಸಮಾಜವು ರೂಪಿಸಿದ ಅಜೆಂಡಾವನ್ನು ಅನುಸರಿಸುವವರು ನಿರ್ದೇಶಿಸುತ್ತಾರೆ.

> **ಪ್ರಿಯ ದಲಿತೇತರರೇ, ನೀವು, ಯಾವುದೇ ನಾಚಿಕೆ ಪ್ರಜ್ಞೆ ಅಥವಾ ಸ್ವಗೌರವವಿಲ್ಲದೆ ಪ್ರಜಾಸತ್ತೆಯು ಪ್ರಾರಂಭವಾದ ಜನವರಿ 26, 1950ರಿಂದ ಅದು ಕತ್ತಲೆಯೆಡೆಗೆ ಸಾಗಲು ಕಾರಣರಾಗಿದ್ದೀರಿ. 'ಸಂವಿಧಾನದ ಪೀಠಿಕಾಭಾಗವು ಆ ಸಂವಿಧಾನದ ಗುರಿಯನ್ನು ಹೇಳುತ್ತದೆ. ಸಂವಿಧಾನವು ಜನರ ಸಾಮುದಾಯಿಕ ಇಚ್ಛೆಯನ್ನು ಪ್ರತಿನಿಧಿಸುತ್ತದೆ. ಮತ್ತು ಪ್ರಭುತ್ವಕ್ಕೆ ವಹಿಸಿರುವ ಆಜ್ಞೆಯು ಸಂವಿಧಾನದ ತೀರ್ಮಾನವಾಗಿದೆ. ಪ್ರಭುತ್ವವು ಸಾರ್ವತ್ರಿಕ ನ್ಯಾಯದ ನೆಲೆಯಲ್ಲಿ ಸಮಾಜವನ್ನು ಪುನರ್ ಸಂಘಟಿಸುವುದು ಭಾರತೀಯ ಸಂವಿಧಾನದ ಆಜ್ಞೆಯಾಗಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ-ಹೀಗೆ ಜೀವನದ ಎಲ್ಲ ರಂಗಗಳಲ್ಲಿ ನ್ಯಾಯವು ಪ್ರಧಾನವಾಗಿರಬೇಕು. ಇದು ತನ್ನ ಎಲ್ಲ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ನೀಡಿದೆ.**

ಸಂರಕ್ಷಕರು/ಭಕ್ಷಕರು

ಪ್ರಭುತ್ವಕ್ಕೆ ಮಸಿಬಳಿಯಲು ದಲಿತರ ವಿರುದ್ಧ ಪೊಲೀಸ್ ದೌರ್ಜನ್ಯಗಳನ್ನು ಎತ್ತಿ ಹಿಡಿದು ಸಮಾಜವನ್ನು ರಕ್ಷಿಸುತ್ತೀರಾ, ಅಂತಿಮವಾಗಿ ಈ ಎಲ್ಲ ಕೆಡುಕುಗಳ ಮಧ್ಯೆಯು ಹತ್ತಿರದ ಪೊಲೀಸ್ ಠಾಣೆಯು ದಲಿತರನ್ನು ರಕ್ಷಿಸಲು ಬರುತ್ತದೆ. ಆದರೆ ಹತ್ತಿರದ ದಲಿತರ ಸಮಾಜವು ಬರುವುದಿಲ್ಲ. ವಾಸ್ತವವಾಗಿ, ಪೊಲೀಸ್ ರಕ್ಷಣೆಯನ್ನು ಹತ್ತಿರದ ದಲಿತೇತರ ಸಮಾಜದ ವಿರುದ್ಧ ಪಡೆಯಬೇಕಾಗುತ್ತದೆ. ಆದರೆ ನೀವು ವಕ್ರಮನಸ್ಸಿನವರಾಗಿ, ದಲಿತರನ್ನು ರಕ್ಷಿಸುವುದು ಹತ್ತಿರದ ಪೊಲೀಸರ ಜವಾಬ್ದಾರಿಯಾಗುತ್ತದೆ ಮತ್ತು ಪೊಲೀಸರು ಯಾರ ಪರವಾಗಿಯೂ ಇದನ್ನು ಮಾಡಿಲ್ಲ' ಎಂದು ತಕ್ಷಣವೇ ಹೇಳುತ್ತೀರಿ. ಆದರೆ ನೀವು ಹತ್ತಿರದ ದಲಿತೇತರ ಸಮಾಜದ ಜವಾಬ್ದಾರಿಯ ಬಗ್ಗೆ ಹೇಳುವುದಿಲ್ಲ. ಇದು ದಲಿತರನ್ನು ಹಿಂಸಿಸುವುದಲ್ಲದೇ ಅಥವಾ ಕೊಲ್ಲುವುದಲ್ಲವೇ? ಇದನ್ನು ದಯವಿಟ್ಟು ನಿಮ್ಮಿಂದ ವಿವರಿಸಲಾದೀತೇ?

ಪ್ರೀತಿಯ ಆತ್ಮಹೀನ ದಲಿತೇತರರೇ, ಸಮಾಜವು ಏನನ್ನು ಬಯಸುತ್ತಿದೆ? ಸಮಾಜವು ಪ್ರಭುತ್ವದ ಮೇಲೆ, ಸಾರ್ವಜನಿಕ ವಲಯದಲ್ಲಿನ ತನ್ನ ಹಿಡಿತವನ್ನು ಬಿಟ್ಟು ಕೊಡಲು ಒತ್ತಡ ಹೇರುತ್ತಿದೆ. ಇದು ಪ್ರಭುತ್ವವು ಆರೋಗ್ಯ ಸೇವೆಗಳನ್ನು ಮತ್ತು ಅನಾನುಕೂಲತೆ ಹೊಂದಿದ ಗುಂಪುಗಳು ಪ್ರಯೋಜನ ಪಡೆಯುವ ಇತರ ಸಾಮಾಜಿಕ ಕ್ರಮಗಳನ್ನು ಹಿಂತೆಗೆದುಕೊಳ್ಳಲು ಒತ್ತಡ ಹೇರುತ್ತಿದೆ. ನಿಮ್ಮ ಈ ರೀತಿಯ ಪ್ರಭುತ್ವದ ಖಂಡನೆಯು ಸಂಘಪರಿವಾರದ ಕುಯುಕ್ತಿಗಳಿಗೆ ಕುಮ್ಮಕ್ಕು ಕೊಟ್ಟು ಪ್ರಭುತ್ವವು ನಶಿಸಿ ವರ್ಣಾಶ್ರಮದ ಪುರಾತನ ನಿಯಮಾವಳಿಗಳಿಗೆ ಸಮಾಜವು ನಡೆಯುವಂತೆ ಮಾಡುತ್ತೀರಿ. ನಿಮ್ಮ ಈ ಅವಿರತ ಪ್ರಭುತ್ವದ ಖಂಡನೆಯು ನೈತಿಕತೆಯಿಲ್ಲದ ಅನೈತಿಕ ಸಮಾಜವನ್ನು ಪ್ರಚೋದಿಸಿ, ಚಾತುರ್ವರ್ಣ ವ್ಯವಸ್ಥೆಯ ತತ್ತ್ವವನ್ನು ಎತ್ತಿಹಿಡಿಯುತ್ತದೆ. ಪ್ರಭುತ್ವದ ಅಧಿಕಾರವು ಶಿಥಿಲಗೊಂಡರೆ, ಅದರ ಪಾತ್ರವು ಕಡಿಮೆಯಾದರೆ ಅಂತಿಮವಾಗಿ ತೊಂದರೆಗೀಡಾಗುವವರು ದಲಿತರು, ಇಂಥ ಒಂದು ಪರಿಸ್ಥಿತಿಯಲ್ಲಿ ಸಮಾಜವು ಮುಕ್ತವಾಗಿ ಗೂಳಿಯಂತೆ ನುಗ್ಗುತ್ತದೆ.

ಪ್ರಿಯ ದಲಿತೇತರರೇ, ನೀವು ಬೌದ್ಧಿಕವಾಗಿ ಪ್ರಶ್ನಿಸಬಹುದೆಂಬುದನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಆದರೆ, ವಂಚನೆಯು ನಿಮ್ಮ ಅಂತಿಮ ಅಸ್ತ್ರವಾಗುತ್ತದೆ. ಪ್ರಭುತ್ವವು 'ಶೋಷಣೆಯ ಸಾಧನ'ವೆಂದು ನೀವು ವಿವರಿಸುವಾಗ, ಪ್ರಭುತ್ವದ ಸಂಸ್ಥೆಯಡಿಯಲ್ಲಿ ಆಸರೆ ಪಡೆದಿರುವ ದಲಿತರನ್ನು ದೂಷಿಸುತ್ತೀರಿ. ಅಂಥ ದಲಿತರನ್ನು ಪ್ರಭುತ್ವವು ತನ್ನ ಕಡೆಗೆ ಸೇರಿಸಿಕೊಂಡಿದೆಯೆಂದು (ಕೋ ಆಪ್ಟ್ ಮಾಡಿಕೊಂಡಿದೆಯೆಂದು) ವಿವರಿಸುತ್ತೀರಿ. ನಿಮ್ಮ ಪ್ರಕಾರ ಡಾ|| ಅಂಬೇಡ್ಕರರನ್ನು ಬ್ರಿಟಿಷ್ ವಸಾಹತುಶಾಹಿಗಳು ತನ್ನ ಕಡೆ ಒಲಿಸಿಕೊಂಡಿದ್ದರು. ಬಾಬು ಜಗಜೀವನರಾಮರನ್ನು ಕಾಂಗ್ರೆಸ್ ತನ್ನತ್ತ ಸೆಳೆದಿತ್ತೆಂದು ಅವರ ವಿರುದ್ಧ ಆರೋಪಮಾಡಬಹುದು. ಅಂಥಹುದೇ ಅಂಶವನ್ನು ಬಂಗಾರು ಲಕ್ಷ್ಮಣ್ ವಿರುದ್ಧ ಹೇಳುವುದಿಲ್ಲವಲ್ಲವೇ? ಈಗ ನೀವು ಇದನ್ನೇ ಮಾಯಾವತಿ ಬಗ್ಗೆ ಹೇಳುತ್ತೀರಿ.

ಪ್ರಿಯ ದಲಿತೇತರರೇ, ನೀವೂ ಯಾವತ್ತಾದರೂ ಪತ್ರಕರ್ತರ ನೇಮಕಾತಿಯಲ್ಲಿ ಸಕಾರಾತ್ಮಕ ಕ್ರಿಯೆಯನ್ನು ಅನುಷ್ಠಾನಗೊಳಿಸದಿರುವ, ಹಿಂದೂ ಸಮೂಹದ ವೃತ್ತಪತ್ರಿಕೆಗಳ ಅಥವಾ ಹಿಂದೂಸ್ತಾನ್ ಟೈಮ್ಸ್ ಬಗ್ಗೆ ಆರೋಪ ಮಾಡಿದ್ದೀರಾ, ಆದರೆ ಪ್ರಭುತ್ವವು ತನ್ನ ಬಹಳಷ್ಟು ಶಾಖೆಗಳಲ್ಲಿ ಇದನ್ನು ಮಾಡಿದೆ. ಸಕಾರಾತ್ಮಕ ಕ್ರಮಗಳನ್ನು ಅನುಷ್ಠಾನಗೊಳಿಸುವಂಥ ಸಂಸ್ಥೆಗಳನ್ನು

(33ನೇ ಪುಟಕ್ಕೆ)

ಮುಕ್ತ ಉದ್ಯಮಗಳ ಭರಾಟೆ

ಭಾರತ ತಾಂತ್ರಿಕವಾಗಿ, ಆರ್ಥಿಕವಾಗಿ ವಿಶ್ವದ ಶ್ರೀಮಂತ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲು ಪ್ರಯತ್ನಿಸುತ್ತಾ, ಹೆಚ್ಚು ಕಮ್ಮಿ ಯಶಸ್ವಿಯೂ ಆಗಿರುವ ಬಗ್ಗೆ ಜಗತ್ತಿನಾದ್ಯಂತ ಜಾಗಟೆ ಬಾರಿಸುತ್ತಿದ್ದು, ಈ ತನ್ನ ಘನ ಕಾರ್ಯಕ್ಕಾಗಿ ಮಾಡಿರುವ ಸಾಹಸವೆಂದರೆ, ಸಬ್ಸಿಡಿ ಮತ್ತು ದುರ್ಬಲರ ಅಭಿವೃದ್ಧಿಗಾಗಿ ಮೀಸಲಿರಿಸಿದ್ದ ಯೋಜನೆಗಳನ್ನು ಮತ್ತು ಹಣವನ್ನು ಏಕಾಏಕಿ ಗಣನೀಯವಾಗಿ ಕಡಿತಗೊಳಿಸಿದೆ. ಹೀಗಿದ್ದೂ, ಭಾರತ ಬಡರಾಷ್ಟ್ರವೆಂದು ನಮ್ಮೆಲ್ಲರನ್ನೂ ನಂಬಿಸುತ್ತಾ ಇತರೆ ರಾಷ್ಟ್ರಗಳೆದುರು ಭಿಕ್ಷೆ ಬೇಡುವ ರಾಷ್ಟ್ರ ವಿಶ್ವಬ್ಯಾಂಕಿಗೆ 'ಸಾಲ' ಕೊಟ್ಟಿದೆ ಎಂದರೆ ನಂಬುತ್ತೀರಾ? ಅತೀ ಹೆಚ್ಚು ಬಡವರಿಂದ ಕೂಡಿರುವ ಶ್ರೀಮಂತ ರಾಷ್ಟ್ರವಾದ ಭವ್ಯ ಭಾರತ ಅಂತರಾಷ್ಟ್ರೀಯ ಹಣಕಾಸು ನಿಧಿಗೆ ಸಾಲ ಕೊಟ್ಟಿರುವ ಕುರಿತು ವರದಿ ಇಲ್ಲಿದೆ.

○ ಎನ್.ಎಸ್. ಜಗನ್ನಾಥನ್ ಕನ್ನಡಕ್ಕೆ : ಜಿ. ಪಾಂಡುನಾಯಕ್

ಜಾಗತಿಕರಣ ಮತ್ತು ಖಾಸಗೀಕರಣಗಳಿಂದ ಭಾರತದಲ್ಲಿ ಪ್ರಗತಿಯಾಗಿದೆ. ಆದರೆ ಈ ಅಭಿವೃದ್ಧಿ ಸಾಧನೆಗಳ ಬಗ್ಗೆ ಸಮೂಹ ಮಾಧ್ಯಮಗಳು ಬರೆಯುತ್ತಿಲ್ಲ.

ಚಿಕಾಗೊ ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆಯ ಮಾಲಿಕರೊಮ್ಮೆ ತಮ್ಮ ಸುದ್ದಿ ಸಂಪಾದಕರ ಕೊಠಡಿಗೆ ದಿಢೀರನೇ ಭೇಟಿ ಇಟ್ಟು ಸಂಪಾದಕರನ್ನು ಕೇಳಿದರು "ಏನಿದು ನಾವು ಯಾವಾಗಲೂ ಅಪರಾಧ, ಕೊಲೆ, ದರೋಡೆ, ದುರಂತ, ರಾಜಕಾರಿಣಿಗಳ ಅವ್ಯವಹಾರ ಇತ್ಯಾದಿ ಕೆಟ್ಟ ಸುದ್ದಿಗಳನ್ನೇ ಬರೆಯುತ್ತೇವೆಂದು ನನ್ನ ಸ್ನೇಹಿತರು ಗೇಲಿ ಮಾಡುತ್ತಾರೆ. ಸ್ವಲ್ಪ ಬದಲಾವಣೆಗೆ ಅಭಿವೃದ್ಧಿ, ಉಲ್ಲಾಸ, ಸಾಧನೆ ಇತ್ಯಾದಿಯಾಗಿ ಒಳ್ಳೆಯ ಘಟನಗೆಳ ಬಗ್ಗೆ ಸಹ ಬರೆಯಿರಿ" ಎಂದು ಕಿವಿ ಮಾತು ಹೇಳಿ ಹೊರಬಂದರು. ಮಾರನೆಯ ದಿನ ಪತ್ರಿಕೆಯ ಮುಖಪುಟದ ದಪ್ಪಕ್ಷರದಲ್ಲಿ ಬರೆದ ಮುಖ್ಯ ಸುದ್ದಿ "ಚಿಲಿ ದೇಶದಲ್ಲಿ ಸಣ್ಣ ಭೂಕಂಪ ಸಾವು ನೋವುಗಳು ಕಡಿಮೆ" ಎಂದಿತ್ತು.

ಈ ತಮಾಷೆಯ ನಿಜಾಂಶವೇನೆಂದರೆ ಸುದ್ದಿ ಕೊಠಡಿಯಲ್ಲಿನ ಆಲೋಚನೆಯೇ ಹಾಗೆ. ಪ್ರಗತಿಯ ವಿಚಾರಗಳನ್ನು ದಪ್ಪಕ್ಷರದಲ್ಲಿ ಬರೆದರೂ ಸಹ ಅವು ಜನರ ಮನಸ್ಸಿನಲ್ಲಿ ಇಳಿಯುವುದು ತಡವಾಗುತ್ತದೆ. ಆದರೆ ದುರಂತ, ಅಪರಾಧ, ಮೋಸ ಇತ್ಯಾದಿ ಕೆಟ್ಟ ಘಟನೆಗಳನ್ನು ಜನರು ಕಾತುರದಿಂದ ತಿಳಿಯ ಬಯಸುತ್ತಾರೆ. ಸುದ್ಧಿಗೆ ಘಟನೆಗಳು ಸೂಕ್ತವೆ ಹೊರತು ನಡೆದು ಬರುತ್ತಿರುವ ಕಥಾನಕಗಳಲ್ಲ. ಉದಾಹರಣೆಗೆ ಸೆಪ್ಟೆಂಬರ್ 11ರ ಬಾಂಬ್ ಮತ್ತು ವಿಮಾನ ದಾಳಿಗಳು ಮತ್ತು ತತ್ಪರಿಣಾಮವಾಗಿ ನ್ಯೂಯಾರ್ಕ್‌ನಲ್ಲಿ ನೆಲಸಮವಾದ ವಿಶ್ವ ವ್ಯಾಪಾರ ಕೇಂದ್ರದ ಗೋಪುರಗಳು ನೀಡುವಷ್ಟು ಬಿಸಿ ಸುದ್ಧಿಯನ್ನು ಆರ್ಥಿಕ ಅಭಿವೃದ್ಧಿ ಅಥವಾ ಸಾಮಾಜಿಕ ಪ್ರಗತಿಯಂತಹ ವಿಚಾರ ಮಂಥನಗಳು ನೀಡಲಾರವು. ಆರ್ಥಿಕ ಅಭಿವೃದ್ಧಿ ಅಥವಾ ಸಾಮಾಜಿಕ ಪ್ರಗತಿಯ ಬಗ್ಗೆ ಬರೆಯುವುದೊಂದು 'ಸಗಣಿ ಪತ್ರಿಕೋದ್ಯಮ' ಎನ್ನುತ್ತಾರೆ ವಿಶ್ವಾದ್ಯಾಂತ ವರದಿಗಾರರಾಗಿ ಕೆಲಸ ಮಾಡುವ ನನ್ನ ಸ್ನೇಹಿತರೊಬ್ಬರು. ಆದ್ದರಿಂದ ನಮ್ಮ ಪತ್ರಿಕಾ ವರಿದಗಳು ದೇಶವು ಸಾಧಿಸಿರುವ ಪ್ರಗತಿಯನ್ನು ಸ್ಪಷ್ಟವಾಗಿ ಚಿತ್ರಿಸದಿರುವುದು ಸಹಜವೇ. ಕಳೆದ ಹತ್ತು ವರ್ಷಗಳಲ್ಲಿ ಒಂದು ಕಡೆ ಸೋವಿಯತ್ ಯೂನಿಯನ್ ಛಿದ್ರವಾಗಿ ಸಮಾಜವಾದದ ಪ್ರಾಬಲ್ಯ ಕೊನೆಯಾದರೆ ಮತ್ತೊಂದು ಕಡೆ ಜಾಗತಿಕರಣ, ಖಾಸಗಿಕರಣ ಮತ್ತು ಮುಕ್ತ ಆರ್ಥಿಕ ನೀತಿಗಳು ದೇಶದ ನೀತಿ ನಿರುಪಣೆಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿವೆ. ಈ ಬದಲಾದ ನೀತಿ ನಿಯಮಗಳಿಂದ ಬಡತನ, ಅನಕ್ಷರತೆ ಅಥವಾ ಅನಾರೋಗ್ಯಗಳಂತಹ ದೇಶದ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಿನ್ನಡೆಯಾಗಿದೆ. ಹೌದು ಆದರೆ ಇದುವರೆವಿಗೆ ಭಾರತೀಯರಲ್ಲಿ ಅವಿತು ಕುಳಿತಿದ್ದ ಮಹಾನ್ ಉದ್ಯಮಶೀಲತೆಗೆ ಪ್ರೋತ್ಸಾಹ ಸಿಕ್ಕಿ ಹಿಂದೆಂದು

(34ನೇ ಪುಟಕ್ಕೆ)

ಐ.ಎಂ.ಎಫ್.ಗೆ ಭಾರತದ ಸಾಲ

ಮುಂಬೈ, ಜೂನ್ 28 : ಬಹುಕಾಲದಿಂದಲೂ ಎ.ಎಂ.ಎಫ್‌ನಿಂದ ಸಾಲ ಪಡೆಯುತ್ತಾ ಬಂದಿರುವ ದೇಶಗಳೆಲ್ಲೊಂದಾಗಿರುವ ಭಾರತ, ಪ್ರಸ್ತುತ ಎ.ಎಂ.ಎಫ್ ಸಂಸ್ತೆಗೇ ಸಾಲ ನೀಡುವ ಹಂತ ತಲುಪಿದೆ. ಭಾರತವು 291.70 ಮಿಲಿಯನ್ ಡಾಲರ್ ಹಣವನ್ನು ಮೇ ಮತ್ತು ಜೂನ್ ತಿಂಗಳುಗಳಲ್ಲಿ ಎರಡು ಕಂತುಗಳಲ್ಲಿ ಎ.ಎಂ.ಎಫ್‌ಗೆ ಸಾಲವಾಗಿ ನೀಡಿದೆ.

'ಭಾರತ ಈಗ ಐಎಂಎಫ್‌ಗೆ ಸಾಲ ಕೊಡುವಂತಾಗಿದೆ ಎನ್ನುತ್ತದೆ ಭಾರತೀಯ ರಿಸರ್ವ್ ಬ್ಯಾಂಕ್. ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಾರ, ಭಾರತವನ್ನು ಸೆಪ್ಟೆಂಬರ್ ಅಕ್ಟೋಬರ್ ತಿಂಗಳುಗಳಿಂದ ಹಣಕಾಸು ಲೇವಾದೇವಿ ಯೋಜನೆ (Financial Transaction Plan -FTP)ಯ ಸದಸ್ಯನಾಗಲು ಐ.ಎಂ.ಎಫ್. ಆಯ್ಕೆ ಮಾಡಿದೆ.

ಅತಿ ಹೆಚ್ಚು ಬಾಕಿ ಹಣ ಉಳಿಸಿಕೊಂಡಿರುವ ಮತ್ತು ವಿದೇಶಿ ವಿನಿಮಯವನ್ನು ಉಳಿಸಿಕೊಂಡಿರುವ ದೇಶಗಳು ಹಣಕಾಸು ಲೇವಾದೇವಿ ಯೋಜನೆ (FTP)ಗೆ ಸಾಲ ನೀಡಲು ಆಯ್ಕೆಗೊಂಡಿದ್ದು, ಐ.ಎಂ.ಎಫ್ ಇತರೆ ದೇಶಗಳಿಗೆ ನೆರವು ನೀಡಬಲ್ಲ ಹಣವನ್ನು ಹೆಚ್ಚಿಸಲು ಇದು ಅವಶ್ಯಕವಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

"ಭಾರತ ಐ.ಎಂ.ಎಫ್‌ನಿಂದ ಮೊದಲ ಬಾರಿಗೆ ಹಣಕಾಸು ಲೇವಾದೇವಿ ಯೋಜನೆ (FTP)ಗೆ ಆಯ್ಕೆಗೊಂಡಿರುವುದು ದೇಶದ ಸಾಮರ್ಥ್ಯವನ್ನು ಸೂಚಿಸುತ್ತದೆ ಮತ್ತು ಅಂತರಾಷ್ಟ್ರೀಯ ಸಮುದಾಯದೊಂದಿಗಿನ ಅದರ ಸಂಬಂಧಗಳಿಗೆ ಸಂಬಂಧಿಸಿದಂತೆ ದೃಢ ಸಂಕೇತಗಳನ್ನು ರವಾನಿಸುತ್ತದೆ" ಎನ್ನುತ್ತದೆ ಭಾರತೀಯ ರಿಸರ್ವ್ ಬ್ಯಾಂಕ್.

ಹಣಕಾಸು ಲೇವಾದೇವಿ ಯೋಜನೆಯ ಸದಸ್ಯನಾಗುವ ಮೂಲಕ 205 ಮಿಲಿಯನ್ ಡಾಲರ್‌ಗಳ ವಿಶೇಷ ಹಿಂತೆಗೆತ ಹಕ್ಕುಗಳನ್ನು (Special drawing rights) ಪಡೆಯುವ ಮೂಲಕ ಭಾರತ ಈಗ ಐಎಂಎಫ್‌ಗೆ ಸಾಲ ನೀಡುವಂತಾಗಿದೆ. FTPನಲ್ಲಿ ಎಸ್‌ಡಿಆರ್ 5 ಮಿಲಿಯನ್ ಡಾಲರ್‌ನ ಮೊದಲ ವರ್ಗಾವಣೆಯನ್ನು ಮೇ 7, 2003ರಂದು ಮತ್ತು ಎಸ್‌ಡಿಆರ್ 200 ಮಿಲಿಯನ್ ಡಾಲರ್‌ನ ಎರಡೇ ವರ್ಗಾವಣೆಯನ್ನು ಜೂನ್ 17ರಂದು ಮಾಡುವುದರ ಮೂಲಕ ಭಾರತ ತನ್ನ ವಹಿವಾಟನ್ನು ಆರಂಭಿಸಿತು.

ಐ.ಎಂ.ಎಫ್‌ಗೆ ಈ SDR 5 ಮಿಲಿಯನ್ ಡಾಲರ್ ಮತ್ತು SDR 200 ಮಿಲಿಯನ್ ಡಾಲರ್‌ಗಳನ್ನು ವರ್ಗಾಯಿಸಲು ಭಾರತವು ಇದಕ್ಕೆ ಸಮಬೆಲೆಯುಳ್ಳ ವಿದೇಶಿ ವಿನಿಮಯವನ್ನು ತನ್ನ ಫಾರಿನ್ ಕರೆನ್ಸಿ ರಿಸರ್ವ್‌ನಿಂದ ಅದೇ ದಿನಾಂಕಗಳಂದು ತೆಗೆದುಕೊಂಡಿದೆ.

Reserve Tranche Position (RTP)ಯ ರೂಪದಲ್ಲಿ ಹೊಂದಲಾಗಿರುವ ವಿದೇಶಿ ಆಸ್ತಿಗಳು Foreign Exchange Reserveನ ಇತರೆ ಘಟಕಗಳಲ್ಲಿ ಸಮಾನವಾದವುಗಳಾಗಿದ್ದು, ಇವುಗಳಿಗೆ ಹಿಂದಕ್ಕೆ ನೀಡುವ ಹಣದ ಬೆಲೆಯನ್ನು ಕೂಡ ಐಎಂಎಫ್ ನಿರ್ಧರಿಸುತ್ತದೆ. ಅವುಗಳನ್ನು ಭಾರತ ಕೂಡ ಅವಶ್ಯವಿದ್ದಾಗ, ಉಪಯೋಗಿಸಿಕೊಳ್ಳಬಹುದಾಗಿದ್ದು ಬಾಕಿ ಹಣದ ವಹಿವಾಟನ್ನು ಕುರಿತಂತೆ ಭಾರತ ಸ್ವತಂತ್ರವಾಗಿ ವ್ಯವಹರಿಸಬೇಕಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ಸಾಪ್ತಾಹಿಕ ಅಂಕಿ ಅಂಶಗಳು, ಭಾರತದ ಹಣಕಾಸು ಲೇವಾದೇವಿ ಯೋಜನೆ (FTP)ಯು 291.71 ಮಿಲಿಯನ್ ಡಾಲರ್‌ನಷ್ಟು ಹೆಚ್ಚಾಗಿರುವುದನ್ನು ತೋರಿಸುತ್ತದೆ. ಇದರ ಸಮ ಬೆಲೆಯ ಹಣವನ್ನು ವಿದೇಶಿ ಕರೆನ್ಸಿ ಅಸೆಟ್ಸ್‌ನಿಂದ (FCA) ಪಡೆದಿದ್ದು ಇದು ಕೂಡ ಪ್ರಸಕ್ತ ವಾರದ ಅಂಕಿ-ಅಂಶಗಳಲ್ಲಿ ಪ್ರತಿಬಿಂಬಿತವಾಗಿದೆ.

(ಬ್ಯುಸಿನೆಸ್ ಲೈನ್) ಅನು : ಗೋವಿಂದರಾಜು ಟಿ.

ನನಗೆಲ್ಲಿಯ ಸ್ವಾತಂತ್ರ !



ಅನ್ನ ಕಾಣದ ಹೊಟ್ಟೆ
ಮೈಕಾಣದ ಬಟ್ಟೆ
ಯೊಂದಿಗೆ
ಕಾದು ಸುಣ್ಣವಾಗುತ್ತಿದ್ದೇವೆ
ನನ್ನನ್ನೂ ನಿಮ್ಮಂಥೆ
ಬದುಕಲು ಬಿಡಲೊಲ್ಲದ
(ರಾಮ) ರಾವಣ ರಾಜ್ಯದಲ್ಲಿ
ನನಗೆಲ್ಲಿಯ ಸ್ವಾತಂತ್ರ್ಯ

ಮಂದಿರ-ಮಸೀದಿ ಜಗಳದಲ್ಲಿ
ಧರ್ಮಾಂಧ ಜನನಾಯಕರೆದುರು
ನನ್ನಂತಹವರ ಮಾತು
ಮಕಾಡೆ ಮಲಗಿರುವಾಗ ಹೇಳಿ,
ನನಗೆಲ್ಲಿಯ ಸ್ವಾತಂತ್ರ್ಯ

ಈ ಆಗಸ್ಟ್ 15ರಂದು ನೀವಾರಿಸುವ ಬಾವುಟದ ಕೆಳಗೆ
ಮುಗ್ಧ ಹೆಣ್ಣುಗಳ ಮಾನ ಭಂಗವಾದರೆ
ಜಾತೀಯ ಕಾರಣಕ್ಕೆ
ಅಮಾಯಕರಿಗೆ ಹೇಲು ತಿನ್ನಿಸಿ
ಜೀವಂತ ಸುಡುವುದಾದರೆ
ನನಗೆಲ್ಲಿಯ ಸ್ವಾತಂತ್ರ್ಯ

ಟಾಟಾ, ಬಿರ್ಲಾ ನಾಣೆಗಳಂತ
ಸಿರಿವಂತರು ಕಟ್ಟಿಸುವ
ಪಾಯಖಾನೆ ಪಾಲಿಸಿಗಳಲ್ಲಿ
ಹಸಿದವರ ಕೂಗಿಗೆ
ದುಡಿವ ಜನರ ಪಾಲಿಗೆ
ಅದೆಲ್ಲಿಯ ಸ್ವಾತಂತ್ರ್ಯ

ಗೋಡ್ಸೆ-ಗೋಲ್ವಾಲ್‌ಕರ್‌ಗಳನ್ನು
ದೇಶಭಕ್ತರೆಂದು ಆರಾಧಿಸುತ್ತಾ
ನನ್ನಜ್ಜ ಅಂಬೇಡ್ಕರರನ್ನು
ಅವಮಾನಿಸುವ ನೀಚರ ಮಧ್ಯೆ
ನಿನಗೆಲ್ಲಿಯ ಸ್ವಾತಂತ್ರ್ಯ

ನೀವು ನೀಡುವ
ಬಿಸಿಯೂಟದ ಕಾಲಕ್ಕೆ ಬಯಲುಗೊಂಡ
ಅಸ್ಪೃಶ್ಯತೆ
ಮೀಸಲು ನೀತಿಗೆ ಮರಣ ಶಾಸನ
ಬರೆಯಲು ತೋರುತ್ತಿರುವ ನಿಮ್ಮ
ಕುಟಿಲತೆಗಳ ನಡುವೆ
ನನಗೆಲ್ಲಿಯ ಸ್ವಾತಂತ್ರ್ಯ

ಓ ಭಾರತ ಭಾಗ್ಯವಿಧಾತರೆ
ನೀವು ಕಂಠಮಟ್ಟ, ಕುಡಿದು ತಿಂದು
ತೇಗಿದ್ದು ಸಾಕು
ಇನ್ನಿಲ್ಲದಂತೆ ನನ್ನವರನ್ನು ಹಿಂಸಿಸಿದ್ದು
ಸಾಕು
ಇನ್ನಾದರೂ ಕಳಿಸುವಿರಾ ನೀವು
ಕಂಡುಂಡ ಸ್ವಾತಂತ್ರ್ಯವನ್ನು
ನನ್ನಲ್ಲಿಗೆ.

ನನ್ನವರಿಗಿಲ್ಲದ ಆ ಸ್ವಾತಂತ್ರ್ಯ
ನನ್ನವರಿಗೂ ಬರಲಿ !
ಚಿಂದಿ ಆರಿಸುವ ಚಿಣ್ಣರ
ಹಸಿವಿನಿಂದ ಕಂಗಾಲಾಗಿರುವ ಕಂದಮ್ಮಗಳ
ತಾ ದುಡಿದು ನಿಮಗನ್ನ ನೀಡುವ ರೈತರ
ನಿಮ್ಮಿಂದಾಗಿ ಭವಿಷ್ಯ ಕಳಕೊಂಡ
ಯುವ ಜನರ
ನಿಮ್ಮ ರಣ ನೀತಿಗೆ ಸಿಕ್ಕು ಹೈರಾಣವಾಗಿರುವ
ಹೆಣ್ಣುಗಳ
ಅಷ್ಟೇ ಏಕೆ ಬದುಕಿನ
ಆಸೆ ಬತ್ತುತ್ತಿರುವ ಅಸಂಖ್ಯ
ಜನರಲ್ಲಿ ಹೊಸ ಭರವಸೆ
ಮೂಡಿಸಲಿ.

○ **ಕೆ.ಪಿ. ದೊಡ್ಡಿ ಶಿವರಾಂ**

ಆದಿವಾಸಿಗಳ ಆದಿನಾಯಕಿ ಜಾನು

ಸ್ವಾತಂತ್ರ್ಯ ಬಂದು ಐದೂವರೆ ದಶಕಗಳು ಕಳೆಯುತ್ತಿದ್ದರೂ ಭಾರತದ ಅಸಂಖ್ಯ ಜನ ದಲಿತರು, ಆದಿವಾಸಿಗಳು ಮತ್ತು ಬುಡಕಟ್ಟು ಜನರ ಬದುಕು ಏನೇನೂ ಬದಲಾಗಿಲ್ಲದಿರುವುದು ಶೋಚನೀಯ. ತಮ್ಮದೇ ಆದ ಭೂಮಿ-ಬದುಕು ಯಾವುದೂ ಇಲ್ಲದೆ ಶಿಕ್ಷಣ ಮತ್ತು ಸಂವಿಧಾನದತ್ತ ನಾಗರೀಕ ಸೌಲಭ್ಯಗಳಿಂದ ವಂಚಿತವಾಗಿರುವ ಕೇರಳದ ಆದಿವಾಸಿ ಜನಾಂಗದಲ್ಲಿ ಬೆಳಕು ತರಲು ಶ್ರಮಿಸುತ್ತಿರುವ ಆದಿವಾಸಿಗಳ ಅಗ್ರನಾಯಕಿ ಸಿ.ಕೆ. ಜಾನು. ಕೇರಳ ಸರ್ಕಾರದ ದಬ್ಬಾಳಿಕೆ ವಿರುದ್ಧ ಕೆರಳಿ ನಿಂತಿರುವ ಜಾನು ಉಳ್ಳವರ ಪಾಲಿನ ಬೆಂಕಿ ಚೆಂಡು. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ಜಾನುರವರನ್ನು 'ಸಂವಾದ' ಮಾತನಾಡಿಸಿತು. ಅವರ ಮಾತಿನಲ್ಲೇ ಇರುವ, ಜಾನುರವರ ಅನುಭವ ಕಥನ ಇಲ್ಲಿದೆ.

ನಾನು ಇಲ್ಲಿನ ಎಲ್ಲಾ ಆದಿವಾಸಿಗಳ ಹಾಗೆ ಹಾಗೂ ಭತ್ತದ ಗದ್ದೆಗಳಲ್ಲಿ ದಿನಗೂಲಿ ಕೆಲಸಕ್ಕಿದ್ದೆ. 'ಕರ್ಶಕ ಕೊಳಲಾಲಿ ಯೂನಿಯನ್' ಸಂಘಟನೆಯಲ್ಲಿ ಜಿಲ್ಲಾ ಮಟ್ಟದ ಸದಸ್ಯೆ ಕೂಡ ಆಗಿದ್ದೆ. ಇದು ಸಿ.ಪಿ.ಎಂ. ಪಾರ್ಟಿಯ ವ್ಯವಸಾಯ ಕಾರ್ಮಿಕರ ವಿಭಾಗವಾಗಿತ್ತು. ನಾನು CPM ಪಾರ್ಲಿಮೆಂಬರ್ ಸಹ ಆಗಿದ್ದೆ.

CPM ವಿಭಾಗೀಯ ಕಮಿಟಿಗಳಲ್ಲಿ ನಾನು ಸಾಕಷ್ಟು ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದೆ. ನಾನು ಆದಿವಾಸಿಗಳ ಸಮಸ್ಯೆಗಳ ಬಗ್ಗೆ ಮಾತನಾಡಿದಾಗಲೆಲ್ಲಾ ಅವರಿಗೆ ಹಿಡಿಸುತ್ತಿರಲಿಲ್ಲ. ಹೀಗಾಗಿ ಕಮಿಟಿ ಮೀಟಿಂಗ್‌ಗಳಲ್ಲಿ ನಾನು ಒಂದು ಸಮಸ್ಯೆಯಾದೆ. CPMಯಿಂದ ನಿಧಾನವಾಗಿ ದೂರವಾಗಲು ಪ್ರಯತ್ನಿಸಿದೆ. CPM ಆಗಲಿ ಕಾಂಗ್ರೆಸ್ಸಾಗಲಿ, ವಯನಾಡಿನಲ್ಲಿ 10 ಆದಿವಾಸಿಗಳಷ್ಟು ಸಂಘಟಿಸಲು ಸಾಧ್ಯವಿಲ್ಲ, ನಿನಗೆ ಸಾಧ್ಯವೆ, ಎಂದು ನನ್ನನ್ನೇ ಪ್ರಶ್ನಿಸಿದರು. ನನ್ನನ್ನು ಅಪಹಾಸ್ಯ ಮಾಡಿದರು. ನಾನು ವಯನಾಡಿನ ಆದಿವಾಸಿಗಳನ್ನು ಸಂಘಟಿಸಿ ಇವರಿಗೆ ತೋರಿಸಬೇಕೆಂದು ನಿರ್ಧರಿಸಿದೆ.

ಸಾಕ್ಷರತಾ ಆಂದೋಲನದ ಸಮಯದಲ್ಲಿ ನಾನು ಸಾಕಷ್ಟು ಮೀಟಿಂಗ್‌ಗಳಲ್ಲಿ ಬೇರೆ ಬೇರೆ ವಯನಾಡಿನ ಭಾಗಗಳಿಂದ ಬಂದ ಆದಿವಾಸಿಗಳನ್ನು ಭೇಟಿಯಾದೆ. ಸಾಕ್ಷರತಾ ಕಾರ್ಯಕ್ರಮ ಮುಗಿಯಿತು, ಆದರೆ ನಾನು ಆ ಮೀಟಿಂಗ್‌ಗಳನ್ನು ನಡೆಸಿ, ಅದೇ ಜನರನ್ನು ಒಟ್ಟಿಗೆ ತಂದೆ. ಸಾಕ್ಷರತಾ ಆಂದೋಲನ ನನಗೆ ವಯನಾಡಿನ ಬೇರೆ ಬೇರೆ ಜಾಗಗಳಲ್ಲಿದ್ದ ಆದಿವಾಸಿಗಳನ್ನು ಸಂಪರ್ಕಿಸಲು ಸಹಾಯ ಮಾಡಿತು. 1992 ಆದಿವಾಸಿ ಸಂಗ್ರಾಮವೆಂಬ NGOಗಳಿಂದ ಬೆಂಬಲಿತವಾದ ಒಂದು 'Solidarity' ಸಂಸ್ಥೆ ಪ್ರಾರಂಭವಾಯಿತು. ಅವರು ಕರ್ನಾಟಕ ಹಾಗೂ ತಮಿಳುನಾಡಿನ ಆದಿವಾಸಿಗಳನ್ನು ಒಟ್ಟಿಗೆ ತರಲು ಪ್ರಯತ್ನಿಸಿದರು. ಅವರಿಗೆ ಇದನ್ನು ಮಾಡಲು ಎಲ್ಲಿಂದ ಹಣ ಸಹಾಯ ದೊರೆತಿತೆಂಬುದು ನನಗೆ ಗೊತ್ತಿಲ್ಲ. ಮೀಟಿಂಗ್‌ನ ನಂತರ ದಕ್ಷಿಣ ಭಾರತ ಆದಿವಾಸಿಗಳ ವೇದಿಕೆ ಎಂಬುದನ್ನು ಪ್ರಾರಂಭಿಸಿದರು. ಅಲ್ಲಿಗೆ ಬಂದ ತಮಿಳುನಾಡು ಹಾಗೂ ಕರ್ನಾಟಕದ ಆದಿವಾಸಿಗಳ ಹಿಂದೆ ಆಗಾಗಲೇ NGOಗಳಿದ್ದವು, ಆದರೆ ನನಗಂತಹ ಯಾವುದೇ ಹಿನ್ನಲೆ ಇರಲಿಲ್ಲ. ಅದಕ್ಕೆ ನನಗನಿಸುತ್ತದೆ ಈ ವೇದಿಕೆ ಹೆಚ್ಚು ಕಾಲ ಮುಂದುವರೆಯಲಿಲ್ಲ. ಈ ವೇದಿಕೆಯಲ್ಲಿದ್ದ ಆದಿವಾಸಿಗಳೆಲ್ಲಾ NGOಗಳ ಅಭಿಪ್ರಾಯಗಳನ್ನೆ ತಮ್ಮದೆಂದು ಹೇಳ್ತಿದ್ರು. ನನಗೆ ಇಲ್ಲಿ ಸಹ ಸಮಸ್ಯೆಗಳು ಕಾಡಿದವು. ಈ ಸಮಯದಲ್ಲಿ ನನ್ನನ್ನು ಈ ವೇದಿಕೆಯ ಚೇರ್‌ಮನ್ ಆಗಲು ಪ್ರಸ್ತಾಪಿಸಿದರು. CPMಗೆ ನಾನು ಆದಿವಾಸಿಗಳನ್ನು ಸಂಘಟಿಸಬಲ್ಲೆ ಎಂದು ತೋರಿಸಲು ಇದೊಂದು ಒಳ್ಳೆಯ ಅವಕಾಶವೆನಿಸಿತು. ಒಪ್ಪಿಕೊಂಡೆ, ಕರ್ನಾಟಕ, ತಮಿಳುನಾಡಿನಿಂದ ಸಾವಿರಾರು ಆದಿವಾಸಿಗಳು ವಯನಾಡಿಗೆ ಬಂದರು. ಚಿಕ್ಕಂದಿನಿಂದ ಅಂದು

ಕೊಂಡದ್ದನ್ನು ಸಾಧಿಸುವವಳೇ ನಾನು. ಮರುದಿನ CPMನ ಕೇಳಿದೆ ಜಾನು ಎಷ್ಟು ಜನರನ್ನು ಒಟ್ಟುಗೂಡಿಸಬಲ್ಲಳು ತಿಳಿದಿದೆಯೆ, ಹತ್ತು ಜನರಲ್ಲ, ನಿಮ್ಮಲ್ಲಿಗೆ ಕಳಿಸುತ್ತೇನೆ, ನೀವೇ ಎಣಿಸಿಕೊಳ್ಳಿ ಎಂದು. ಅವರು ನನ್ನ ಕೆಲಸವನ್ನು ನೋಡಿ ಮೆಚ್ಚಿಕೊಂಡರು. ನಿಮ್ಮೆಲ್ಲರಿಂದ ನನಗಾವ ಸರ್ಟಿಫಿಕೇಟೂ ಬೇಡವೆಂದೆ.

ಕೇರಳದ ವಿವಿಧ ಬಾಗಗಳಲ್ಲಿದ್ದ ಆದಿವಾಸಿಗಳು ಬೇರೆ ಬೇರೆ ರಾಜಕೀಯ ಪಕ್ಷಗಳೊಡನೆ ಕೆಲಸ ಮಾಡುತ್ತಿದ್ದರು. ಆದರೆ ಎಲ್ಲಾ ಆದಿವಾಸಿಗಳೂ ಬೇರೆ ಕಡೆ ದಿನಗೂಲಿ ಕೆಲಸವನ್ನೆ ಮಾಡುತ್ತಿದ್ದರು. ಈ ರಾಜಕೀಯ ಪಕ್ಷಗಳು ತಮ್ಮ ಸಮಸ್ಯೆಗೆ ಒಂದು ಕೊನೆ ಕಾಣಿಸುತ್ತಾರೆಂದು ಇವರೆಲ್ಲಾ ನಂಬಿದ್ರು. ಹೆಚ್ಚಿನ ಕೂಲಿ ಬಗ್ಗೆ ಯಾರು ಮಾತನಾಡುತ್ತಿದ್ರೊ, ಅವರೊಡನೆ ಆದಿವಾಸಿಗಳು ಸೇರಿಕೊಂಡರು. ಆದರೆ ರಾಜಕೀಯ ಪಕ್ಷಗಳು ಇವರನ್ನೆಲ್ಲಾ ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಂಡರು. ಕೆಲವು ಆದಿವಾಸಿಗಳು ಕ್ರಮೇಣವಾಗಿ ರಾಜಕೀಯ ಪಕ್ಷಗಳಿಂದ ದೂರವಾಗತೊಡಗಿದರು. ಕೆಲವರು ಇದಕ್ಕೇನು ಪರ್ಯಾಯ ಎಂದು ಯೋಚಿಸಲು ಪ್ರಾರಂಭಿಸಿದರು. ಆದಿವಾಸಿಗಳ ಮನೆಗಳಿಗೆ ರಾತ್ರಿ ಹೊತ್ತು ಭೇಟಿಕೊಟ್ಟು, ಅವರ ಸಮಸ್ಯೆಗಳ ಬಗ್ಗೆ ಮಾತನಾಡಲು ಪ್ರಾರಂಭಿಸಿದೆವು. ಆಗ ನಮ್ಮ ಪ್ರಮುಖ ಸಮಸ್ಯೆ ಭೂಮಿಯ ಸಮಸ್ಯೆ ಎಂದು ಹೊಳೆಯಿತು. ಒಂದು ಗೇಣಸನ್ನಾದರೂ ಬೆಳೆಯಲು ನಮ್ಮದೆನ್ನುವ ಭೂಮಿ ನಮಗಿಲ್ಲ. ಪ್ರತಿಯೊಂದಕ್ಕೂ ನಾವು ಹೊರಗಿನವರ ಮೇಲೆ ಅವಲಂಭಿತರಾಗಿದ್ದೇವೆ ಎಂಬುದು ಸ್ಪಷ್ಟವಾಯಿತು. ಆಗಿಂದ ಈ ವಿಚಾರದ ಬಗ್ಗೆ ಕೆಲಸ ಪ್ರಾರಂಭಿಸಿದೆವು. ಬೇರೆ ರಾಜಕೀಯ ಪಕ್ಷಗಳಂತೆ ನಾವೂ ಧರಣಿ, ಪ್ರತಿಭಟನಾ ರ‍್ಯಾಲಿಗಳನ್ನು ಮಾಡಿದೆವು. ಇದರಿಂದೇನೂ ಪ್ರಯೋಜನವಿಲ್ಲವೆನಿಸಿತು. 1949ರ ನಂತರ ನಾವು ಭೂಮಿಯನ್ನು ಆಕ್ರಮಿಸಲು ಪ್ರಾರಂಭಿಸಿ, ಅಲ್ಲಿ ಗುಡಿಸಲು ಕಟ್ಟಿದೆವು. ಈ ಭೂಮಿಯನ್ನು ಆಕ್ರಮಿಸುವ ಹೋರಾಟದ ಐಡಿಯಾ ಆದಿವಾಸಿಗಳಿಗೆ ಸರಿಯೆನಿಸಿ, ಅವರು ನಮ್ಮೊಡನೆ ಸೇರಿಕೊಂಡರು.

ನಾವು ಮೊದಲು ಆಕ್ರಮಿಸಿದ ಭೂಮಿ ಅಂಬುಕತ್ತಿ, 1994ರಲ್ಲಿ ಕೋಲಿಕ್ಕಾನ್ ಪಾಲಿ ಹೋರಾಟದ ನಂತರ, ಅಲ್ಲಿದ್ದ ಆದಿವಾಸಿಗಳಿಗೆ ಇರಲು ಸ್ಥಳವಿರಲಿಲ್ಲ. ಅಲ್ಲೆ ಬದಿಗಿದ್ದ ಭತ್ತದ ಗದ್ದೆಯಲ್ಲಿ ನಾಲ್ಕು ಬಿದಿರಿನ ಕಂಬಕಟ್ಟಿ ಮನೆಗಳನ್ನು ಮಾಡಿದೆವು. ಅಲ್ಲಿ 10 ಪರಿವಾರಗಳಿದ್ದವು, ನಾವು ಆಕ್ರಮಿಸಿದ್ದು 1 ಎಕರೆ ಜಮೀನು. ಪ್ರತಿಯೊಬ್ಬರಿಗೆ 10Cents ಭೂಮಿ ಸಿಕ್ಕಿತು, ಒಂದು ವರ್ಷದ ನಂತರ ಪ್ರತಿಯೊಬ್ಬರಿಗೂ ಪಟ್ಟ ಸಹ ದೊರೆಯಿತು. ಗೀತಾನಂದನನ್ನು ನಾನು 1999ರಲ್ಲಿ ಭೇಟಿಯಾದೆ. ಅವರು ನನ್ನನ್ನು ತಿರುವನ್ನಪುರಂನಲ್ಲಿ ಭೂಮಿಗಾಗಿ ದಲಿತರು ನಡೆಸುತ್ತಿರುವ ಹೋರಾಟಕ್ಕೆ ಸೇರಿಕೊಳ್ಳಲು ಆಹ್ವಾನಿಸಿದರು. ಅವರಿಗೆ ಆಗಲೆ ವಯನಾಡಿನಲ್ಲಿ ನಾನು ಪ್ರಾರಂಭಿಸಿದ್ದ ಭೂಮಿ ಆಕ್ರಮಣದ ಕಾರ್ಯಕ್ರಮದ ಬಗ್ಗೆ ತಿಳಿದಿತ್ತು. ಇದು ಗೀತಾನಂದರೊಡನೆ ನನಗಾದ ಮೊದಲ ಭೇಟಿ. ಅವರೊಡನೆ ನಾನೂ ಹೊರಟೆ. ನಾವು 9 ಎಕರೆ ಜಮೀನನ್ನು ಆಕ್ರಮಿಸಿದೆವು. ಪ್ರತಿಯೊಬ್ಬ ದಲಿತ ಪರಿವಾರಕ್ಕೆ 50Cents ಭೂಮಿ ಸಿಕ್ಕಿತು, ಸರ್ಕಾರದಿಂದ

ಪಟ್ಟ ಸಹ ಗಿಟ್ಟಿಸಿದರು. ನಂತರ ನಾವು ಭೂ ಹೋರಾಟ ಸಮಿತಿಯನ್ನು ಸ್ಥಾಪಿಸಿ, ಅಲಕೊಡೆ ಹೋರಾಟವನ್ನು ಕೈಗೆತ್ತಿಕೊಂಡೆವು. ಇದಾದ ನಂತರ ಆದಿವಾಸಿ ದಲಿತ ವಿಕೊಪನಾ ಸಮಿತಿ ಪ್ರಾರಂಭವಾಯಿತು. ಅದುವರೆಗೂ ಆದಿವಾಸಿಗಳ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದೆವು, ಈ ಆದಿವಾಸಿ-ದಲಿತ ಭೂಹೋರಾಟವನ್ನು ನಾವು ಕೇರಳದಾದ್ಯಂತ ಹರಡಬೇಕೆನಿಸಿತು. ಹೀಗಾಗಿ ಆದಿವಾಸಿ ಕಮಿಟಿಗಳನ್ನು ಎಲ್ಲೆಡೆ ನಿರ್ಮಿಸಿದೆವು, ದಲಿತ ಸಂಘಟನೆಗಳೂ ನಮ್ಮೊಡನೆ ಬಂದವು. ನಾವೆಲ್ಲಾ ಒಟ್ಟಿಗೆ ಆಗಿವಾಸಿ ದಲಿತ ಸಮರ ಸಮಿತಿ ಸ್ಥಾಪಿಸಿದೆವು. ನಮ್ಮ ಹೋರಾಟ ಮತ್ತಷ್ಟು ಗಟ್ಟಿಯಾಗಿಸಿ ಮುಂದೆ ನುಗ್ಗಲು ನಿರ್ಧರಿಸಿದೆವು.

ಆದಿವಾಸಿ, ದಲಿತರು ಹಾಗೂ ಭೂರಹಿತ ಕೂಲಿಗಾರರಿಗೆ ಭೂಮಿ ಕೊಡಲು ಕೇರಳ ಸರ್ಕಾರದ ಹತ್ತಿರ ಸಾಕಷ್ಟು ಭೂಮಿ ಇದೆ. ಸರ್ಕಾರ ಭೂಮಿ ಇಲ್ಲವೆಂದು ಹೇಳುತ್ತಲೆ ಟಾಟಾ, ಗೊಯೆಂಕಾ ಗುಂಪುಗಳಿಗೆ ಟೀ ಪ್ಲಾಂಟೇಶನ್ನುಗಳಿಗೆ ಕೊಡುತ್ತದೆ. ಸರ್ಕಾರದ ಅಡಿ ಎಲ್ಲಾ ಇಸ್ಲಾಂ ಲೇಖನಗಳು ಇಂದು ಕೇರಳದಲ್ಲಿ ನೆಲಕಚ್ಚುತಿವೆ. ಇದಕ್ಕಾಗಿ ಸಾವಿರಾರು ಗಟ್ಟಲೆ ಖರ್ಚು ಮಾಡಲಾಗುತ್ತದೆ. ಇದಕ್ಕಾಗಿ IMF World Bankಗಳಿಂದ ಸಾಲವನ್ನು ತೆಗೆದುಕೊಳ್ಳುತ್ತಾರೆ. ಈ ಭೂಮಿಯನ್ನು ಸರ್ಕಾರ ಆದಿವಾಸಿ, ದಲಿತರಿಗೆ ಹಂಚಿದರೆ ಸರ್ಕಾರಕ್ಕೆ ಸ್ವಲ್ಪ ಭಾರ ಕಡಿಮೆಯಾಗುತ್ತದೆ.

ಆದರೆ ಸರ್ಕಾರವೇ ಒಂದು ದೊಡ್ಡ ಭೂಮಾಲಿಕ. ಅವರಿಗೆ ತಮ್ಮ ಮತ ಪೆಟ್ಟಿಗೆಯ ಚಿಂತೆ. ನಾವು ರಾಜಕೀಯ ಪಕ್ಷಗಳಿಂದ ಬೆಂಬಲವನ್ನು ಪಡೆಯಲು ಈ ಹೋರಾಟ ಮಾಡುತ್ತಿಲ್ಲ. ನಾವು ಭೂರಹಿತ ಜನರ ಸಮಸ್ಯೆಯನ್ನು ನಿವಾರಿಸಲು ಪ್ರಯತ್ನಿಸುತ್ತಿದ್ದೇವೆ. ನಮ್ಮ ಬೇಡಿಕೆಗಳು ಎಷ್ಟು ವಾಸ್ತವಿಕವಾಗಿವೆ ಎಂಬ ಅರಿವೂ ನಮಗಿದೆ. ಜನರಿಗೆ ಹಂಚಲು ಎಲ್ಲೆಲ್ಲಿ ಭೂಮಿಯಿದೆ ಎಂಬುದರ ಪೂರ್ತಿ ವಿವರ, ಅಂಕಿ ಅಂಶಗಳು ನಮ್ಮಲ್ಲಿವೆ.

1999ರಲ್ಲಿ ಸೆಕ್ರೆಟೇರಿಯೆಟ್‌ನ ಎದುರು ನಾವು ಆದಿವಾಸಿ-ದಲಿತ ಸಮರ ಸಮಿತಿಯ ಹೆಸರಿನಡಿಯಲ್ಲಿ ನಮ್ಮ ಹೋರಾಟವನ್ನು ಪ್ರಾರಂಭಿಸಿದಾಗ, 300 ಪರಿವಾರಗಳು ವಯನಾಡು ಹಾಗೂ ಕಣ್ಣೂರಿನಿಂದ ಬಂದಿದ್ದವು. ಮೊದ ಮೊದಲೆ ಇಂತಹ ಉತ್ತಮ ಪ್ರತಿಕ್ರಿಯೆ ನಮಗೆ ದೊರೆಯುತ್ತದೆ ಎಂದು ನಾವು ನಿರೀಕ್ಷಿಸಿರಲಿಲ್ಲ. ಅದೇ ವರ್ಷ ಕೇರಳದಲ್ಲಿ ಹಸಿವಿನಿಂದ 40 ಜನ ಸತ್ತ ಪ್ರಕರಣಗಳು ನಡೆದವು, ಕೇರಳದ ಎಲ್ಲಾ ಭಾಗಗಳಿಂದ ಜನರ ಬೆಂಬಲ ದೊರೆಯಿತು. ಇಡೀ ಹೋರಾಟದಲ್ಲಿ ಆದಿವಾಸಿಗಳ ಅನನ್ಯತೆಯನ್ನು ಮಾತ್ರ ನಾವು ಬೆಳೆಸಿಕೊಳ್ಳಬೇಕೆಂದು ಅನಿಸಿತು. ಹೀಗಾಗಿ ನಾವು 35ಎಲ್ಲ ಆದಿವಾಸಿ ಸಮುದಾಯಗಳು ಹಾಗೂ ಬೇರೆ ಬೇರೆ ಹಳ್ಳಿಗಳಿಂದ ಬಂದ ಆದಿವಾಸಿ ಪ್ರಮುಖರನ್ನೂ, ಕಮಿಟಿಗಳನ್ನೂ ಒಟ್ಟಿಗೆ ಸೇರಿಸಿ ಆದಿವಾಸಿ ಗೋತ್ರ ಮಹಾ ಸಭಾ ಎಂಬುದನ್ನು ಸ್ಥಾಪಿಸಿದೆವು. ಪ್ರತಿಯೊಂದು ಆದಿವಾಸಿ ಹಾಡಿಯಲ್ಲಿ 3-4 ಆದಿವಾಸಿ ಸಮುದಾಯಗಳಿದ್ದು, ಈ

ಆದಿವಾಸಿ ಮಕ್ಕಳಿಗೆ ಹಾಡಿಗಳಲ್ಲೇ ಜಾನು ಅವರಿಂದ ಪಾಠ - ಹೋರಾಟ

ಎಲ್ಲಾ ಆದಿವಾಸಿ ಜನರ ಪ್ರತಿನಿಧಿತ್ವವನ್ನು ಗಳಿಸಲು ಪ್ರತಿ ಸಮುದಾಯಕ್ಕೊಂದು ಊರುಸಭವನ್ನು ಮಾಡಲಾಯಿತು. ಇದರಲ್ಲಿ 3 ಹೆಂಗಸರು, 3 ಗಂಡಸರಿದ್ದು, ಈ ಆಯ್ದ ಜನರು ಆದಿವಾಸಿ ಗೋತ್ರ ಮಹಾಸಭೆಯಲ್ಲಿ ತಮ್ಮ ಸಮುದಾಯವನ್ನು ಪ್ರತಿನಿಧಿಸುತ್ತಾರೆ.

ಇದಕ್ಕೆ ಚೇರ್‌ಮನ್ ಆಗಿ ನನ್ನನ್ನು ಆರಿಸಿದರು. ಆದರೆ ನನ್ನ ಊರು ಸಭೆಯವರು ನನ್ನನ್ನು ವಾಪಸ್ಸು ಕರೆದು, ಬೇರೆಯವರು ಆ ಸ್ಥಾನದಲ್ಲಿ ಇರಲೆಂದು ಹೇಳಬಹುದು. ನಮ್ಮದು ಪೂರ್ತಿಯಾಗಿ ಪ್ರಜಾಪ್ರಭುತ್ವದ ಮೌಲ್ಯಗಳನ್ನಾಧರಿಸಿದ ಸಂಘಟನೆ. ಯಾವುದೇ ಮುಖ್ಯಸ್ಥನ ಕೆಲಸದಿಂದ ಅತೃಪ್ತರಾದರೆ ಅವರನ್ನು ತಿರುಗಿ ವಾಪಸ್ಸಾಗುವಂತೆ ಕೇಳುವ ಅಧಿಕಾರ ನಿಜವಾದ ಪ್ರಜಾಪ್ರಭುತ್ವದಲ್ಲಿರಬೇಕು. ಗೋತ್ರ ಮಹಾಸಭಾದಲ್ಲಿ ನಿರ್ಧಾರಗಳು ಕೆಳಗಿಂದ ಮೇಲೆ ಬರುತ್ತವೆ. ಗೋತ್ರ ಸಭಾದ ಬೇಕಾದ ಊರು ಸಭೆಗೆ ರಾಜ್ಯ ಕಮಿಟಿಗಿಂತ ಹೆಚ್ಚು ಅಧಿಕಾರವಿದೆ. ಸೆಕ್ರೆಟೆರಿಯೆಟ್‌ನ ಎದುರು ನಡೆಸಿದ ಹೋರಾಟ ಗೆದ್ದಿತು. ಸರ್ಕಾರ 2002 ಡಿಸೆಂಬರ್ ಒಳಗಾಗಿ ನಮಗೆ ಭೂಮಿಯನ್ನು ಕೊಡುತ್ತೇವೆಂಬ ಒಪ್ಪಿಗೆಗೆ ಸಹಿ ಹಾಕಿತು.

ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ನೀಡಬಹುದಾದ ಭೂಮಿಯ ವಿವರಗಳನ್ನು ಕಳುಹಿಸಿಕೊಟ್ಟಿತು. ಅದು ಗುರುತಿಸಿದ್ದು ಕೇರಳದ ರಿಸರ್ವಡ್ ಅರಣ್ಯ ಭೂಮಿ. ಇದು ನಾವು ಗುರುತಿಸಿದ್ದ ಭೂಮಿಯಲ್ಲ, ರಾಜ್ಯ ಸರ್ಕಾರ ಇಲ್ಲಿ ಮೋಸದ ಆಟವನ್ನಾಡಿತು, ಕೇಂದ್ರ ಸರ್ಕಾರ ಈ ಪಟ್ಟಿಯನ್ನು ನಿರಾಕರಿಸಿ 25,000 ಎಕರೆ ಭೂಮಿಯನ್ನು ನೀಡಬೇಕೆಂಬ ಹೇಳಿಕೆ ಹೊರಡಿಸಿ ಮಾರನೆ ದಿನ ಸಚಿವ ಕೆ.ಎಂ. ಮಣಿ ಸರ್ಕಾರ 25,000 ಎಕರೆ ಭೂಮಿಯನ್ನು ಖಾಸಗಿ ಮಾಲೀಕರಿಗೆ ನೀಡುತ್ತದೆ ಎಂದು ಹೇಳಿಕೆ ನೀಡಿತು. ಕೇಂದ್ರ ಹಾಗೂ ರಾಜ್ಯ ಸರ್ಕಾರ ತಮ್ಮ ಲಾಭಕ್ಕಾಗಿ ಇದನ್ನು ತಿರುಗಿಸಿಕೊಂಡರು.

ಸರ್ಕಾರ ಭೂಮಿ ನೀಡುತ್ತೇವೆಂಬ ಮಾತನ್ನು ಪಾಲಿಸಲಿಲ್ಲ. ನಾವು ಮುತ್ತಂಗದ ಭೂಮಿಯನ್ನು ಆಕ್ರಮಿಸಲು ನಿರ್ಧರಿಸಿದೆವು.

ಮುತ್ತಂಗದ ಭೂಮಿ ನಮ್ಮ ಪೂರ್ವಿಕರದ್ದು, ಪನಿಯಾ, ಪೆಟ್ಟುವ ಕುರುವ ಆದಿವಾಸಿ ಸಮುದಾಯ ಬಾಳಿ ಬದುಕಿದ ಜಾಗ. ಇಂದೂ ಸಹ ಅವರ 6 ಆರಾಧ್ಯ ಜಾಗಗಳು ಇದಕ್ಕೆ ಸಾಕ್ಷಿಯಾಗಿದೆ. ಈ ಭೂಮಿ ನಮ್ಮದಾದುದರಿಂದ ನಾವದನ್ನು ಹಿಂದಿರುಗಿ ಪಡೆಯಲು ಹೊರಟೆವು. ಮುತ್ತಂಗದ ಕಾಡುಗಳು ಇಂದು ಬರಿದಾಗಿದೆ, ನಿಜವೇನೆಂದರೆ ಈ ಭೂಮಿಯನ್ನು ಸರ್ಕಾರ ಆದಿವಾಸಿಗಳಿಗೆ ಕೊಡಬಹುದು. ಪೊಲೀಸ್ ಹಾಗೂ ಇನ್ನಿತರ ಮಾರ್ಗಗಳಿಂದ ನಮ್ಮ ಹೋರಾಟವನ್ನು ಸರ್ಕಾರ ಹೊಸಕಿ ಹಾಕುತ್ತದೆ ಎಂದು ನಮಗೆಲ್ಲಾ ಗೊತ್ತಿತ್ತು. ಮುತ್ತಂಗ ಫೈಯರಿಂಗ್ ಆದ ಮೇಲೆ ರಾಜಕೀಯ ಪಕ್ಷಗಳು ಜನರಿಗೆ ನೀವು ಸಿ.ಕೆ. ಜಾನೂ ಜೊತೆ ಹೋದರೆ ಬಂದೂಕಿನ ಗುಂಡಿಗೆ ಬಲಿಯಾಗುತ್ತೀರೆಂದು ಪ್ರಚಾರ ಪ್ರಾರಂಭಿಸಿದರು. ಪುನ್ನಪ್ಪರ ಹಾಗೂ ವಲ್ಲಾರ್ ಜಾಗಗಳಲ್ಲಿರುವ ಆದಿವಾಸಿಗಳು ಕೇರಳದ CPMಗಾಗಿ ದುಡಿದವರು, ಅವರೂ ಈ ಹೋರಾಟದಲ್ಲಿ ಪ್ರಾಣಕೊಟ್ಟರು. ಆದರೆ ನಾವು ಪ್ರಾಣಕೊಟ್ಟದ್ದು ರಾಜಕೀಯ ಪಕ್ಷ ಒಂದನ್ನು ಕಟ್ಟಲು ಅಲ್ಲ, ನಾವು ಹೋರಾಡಿದ್ದು ನಮ್ಮ ಭೂಮಿಯ ಹಕ್ಕಿಗಾಗಿ.

1982ರಲ್ಲಿ 4 ಲಕ್ಷ ಆದಿವಾಸಿಗಳು ಕೇರಳದಲ್ಲಿದ್ದರು. 1992ರಲ್ಲಿ ಅವರ ಸಂಖ್ಯೆ 3.5 ಲಕ್ಷಕ್ಕೆ ಇಳಿಯಿತು. ಬೇರೆ ಎಲ್ಲಾ ಸಮುದಾಯದಲ್ಲಿ ಜನರ ಸಂಖ್ಯೆ ಹೆಚ್ಚಾದರೆ ನಮ್ಮಲ್ಲಿ ತಗ್ಗುತ್ತಿದೆ. ಕಾರಣ ತಿಳಿದಿಲ್ಲ. ಆದಿವಾಸಿಗಳ ಭೂಮಿ ಸಹ ಕಳೆಗಿಳಿದಿದೆ. ಪ್ರತಿ ವರ್ಷ 1970ಯಿಂದ ಹೊರಗಡೆಯಿಂದ ಬಂದ ಜನರಿಗೆ ಸರ್ಕಾರ ಪಟ್ಟ ಕೊಡುತ್ತಿದೆ, ಆದರೆ ಮಾನವ ಬದುಕು ಪ್ರಾರಂಭ ವಾದಾಗಲಿಂದ ಕಾಡಿನಲ್ಲಿದ್ದ ಜನರಿಗೆ ಮಾತ್ರ ಭೂಮಿಯಿಲ್ಲ.

ನಾವೀಗ ಜಾಗತೀಕರಣವನ್ನು ವಿರೋಧಿಸಿ ಎಂಬ ಘೋಷಣೆಯನ್ನು ಮುಂದಿಡುತ್ತಿದ್ದೇವೆ, ಇದನ್ನು ಕುರಿತು

ರಾಜ್ಯದ್ಯಂತ ಆಂದೋಲನಾ ಮೆರವಣಿಗೆಗಳು ನಡೆದಿವೆ. ಜಾಗತೀಕರಣ ಆದಿವಾಸಿ-ದಲಿತ ಆರ್ಥಿಕ ಕೂಪಗಳಿಗೆ ವಿರುದ್ಧವಾದುದು. ನಾವೀಗ ಭೂಮಿ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಮೇಲಿರುವ ನಮ್ಮ ಹಕ್ಕನ್ನು ಕೇಳುತ್ತಿದ್ದೇವೆ.

ಯಾರು ಉಳುತ್ತಾರೋ ಅವನ/ಳಿಗೆ ಭೂಮಿ ಸಿಗಬೇಕು ಇಂದು ನೀವು ಕೇರಳ ವ್ಯವಸಾಯವನ್ನು ನೋಡಿ. ಹೆಚ್ಚಾಗಿ ಇಂದು ನಾವು ರಬ್ಬರ್, ಕಾಫಿ, ಏಲಕ್ಕಿಯಂತಹ Cash Cropsಗಳನ್ನೇ ಬೆಳೆಯುತ್ತಿದ್ದೇವೆ. ಇವೆಲ್ಲಾ ಹೊರಗಿನ ಮಾರುಕಟ್ಟೆಗಾಗಿ, ನಮಗೆ ಬೇಕಾದ ಆಹಾರ, ಪದಾರ್ಥಗಳನ್ನು ಬೇರೆ ರಾಜ್ಯದಿಂದ ಪಡೆದುಕೊಳ್ಳುತ್ತಿದೆ. ನಮಗೆ ಬೇಕಾದ ಆಹಾರ ಬೆಳೆದರೆ, ಸಮುದಾಯಗಳು ತಮ್ಮಲ್ಲೆ ಬೀಜ, ಆಹಾರ ವಿನಿಮಯ ಮಾಡಿಕೊಳ್ಳುತ್ತಾರೆ. ಆಗ ನಾವು ಸ್ವಾಯತ್ತತೆಯನ್ನು ಪಡೆಯುತ್ತೇವೆ. ಕೇರಳ ಇಂದು ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಯನ್ನು ಕಾಪಾಡುತ್ತಿದೆ, ನಾವು ಪೂರ್ತಿಯಾಗಿ ಅವರ ಮೇಲೆ ಅವಲಂಬಿತರಾಗಿದ್ದೇವೆ. ಅವರನ್ನು ಇಲ್ಲಿಂದ ಓಡಿಸಬೇಕಾಗಿದೆ.

ಕಾಡುಗಳಲ್ಲಿ ಏಕರೀತಿಯ ಮರಗಳನ್ನು ಬೆಳೆಯುವ ಸಂಸ್ಕೃತಿ ಪ್ರಾರಂಭವಾಗಿದೆ. ಅರಣ್ಯ ಇಲಾಖೆ ನೀಲಗಿರಿ ಮರಗಳು ಹಾಗೂ ಇನ್ನಿತರ ಮರಗಳನ್ನು ಬೆಳೆಸುತ್ತಿದ್ದಾರೆ. ಅರಣ್ಯದ ಉತ್ಪನ್ನಗಳ ಮೇಲೆ ಆಧಾರಿತ ಆದಿವಾಸಿ ಬದುಕಿಗೆ ಇದರಿಂದ ಪೆಟ್ಟು ಬಿದ್ದಿದೆ. ಆದಿವಾಸಿಗಳಿಗೆ ಭೂಮಿ ಸಿಕ್ಕರೆ ಪ್ಲಾಂಟೇಶನ್ ಮಾಲೀಕರಿಗೆ ಕೂಲಿ ದೊರೆಯುವುದಿಲ್ಲ, ಸರ್ಕಾರಕ್ಕೆ ಆದಿವಾಸಿಗಳ ಹೆಸರಲ್ಲಿ ಫಂಡ್‌ಗಳು ಸಿಗುವುದಿಲ್ಲ. ಆದಿವಾಸಿಗಳೆ ಆಹಾರ ಧಾನ್ಯ ಹಾಗೂ ಇನ್ನಿತರ ಕೃಷಿ ಉತ್ಪನ್ನಗಳನ್ನು ಬೆಳೆಯಲು ಸಾಧ್ಯವಾದರೆ ಅವರು ಬೇರೆಯವರ ಮೇಲೆ ಅವಲಂಬಿಸಬೇಕಾಗಿಲ್ಲ, ಅವರು ಆಗ ತಮಗೆ ಏನು ಬೇಕೆಂದು ನಿರ್ಧರಿಸುವ ಶಕ್ತಿ ಪಡೆಯುತ್ತಾರೆ. ಮಾಲೀಕರೆಂದೂ ನೆಲದಲ್ಲಿ ದುಡಿಯುವುದಿಲ್ಲ, ಅದಕ್ಕಾಗಿಯೇ ಅವರು ನಮ್ಮನ್ನು ಜೀತದ ಆಳುಗಳನ್ನಾಗಿ ಸದಾ ಇಟ್ಟುಕೊಳ್ಳುತ್ತಾರೆ.

ಆದಿವಾಸಿಗಳು ಇಂದು ಆದಿವಾಸಿ ಎಂಬ ಅನನ್ಯತೆಯ ಕೆಳಗೇ ಒಂದಾಗಿ ಗುರುತಿಸಿಕೊಳ್ಳಬೇಕು. ಆದಿವಾಸಿಗಳಿಗಾಗಿ NGOಗಳು ಅನೇಕ ಪ್ರಾಜೆಕ್ಟುಗಳನ್ನು ಹಾಕಿಕೊಂಡು ಬರುತ್ತಿದ್ದಾರೆ. ಆದರೆ ಅವರು ಆದಿವಾಸಿಯೊಬ್ಬ ತನಗೇನು ಬೇಕೆಂದು ಯೋಚಿಸುವಂತೆ ಪ್ರೇರೇಪಿಸುವುದಿಲ್ಲ. ಅವರ ಪ್ರಾಜೆಕ್ಟ್ ಫೈಲು ಮುಚ್ಚಿದ ನಂತರ ಅಲ್ಲಿಂದ ಜಾಗ ಖಾಲಿ ಮಾಡುತ್ತಾರೆ-ಆದಿವಾಸಿಗಳು ಏನು ಮಾಡಬೇಕೆಂದು ದಿಕ್ಕು ತೋಚದೆ ಉಳಿಯುತ್ತಾರೆ. ಆದರೆ ಈ ಆದಿವಾಸಿ ಹೋರಾಟ ಗಟ್ಟಿಯಾಗುತ್ತಿದೆ. ಇಲ್ಲಿ NGOಗಳಿಗೆ ಜಾಗವಿಲ್ಲ, ಅವರೇ ಅರಿತು ಹೊರಗೆ ನಡೆದರೆ ಒಳ್ಳೆಯದು.

ಯಾರು ಆದಿವಾಸಿ-ದಲಿತರ ಸಮಸ್ಯೆಯ ಬಗ್ಗೆ ಮಾತನಾಡುತ್ತಾರೆಂದು ಗಮನಿಸಿ. ರಾಜಕೀಯ ಪಕ್ಷಗಳಲ್ಲಿ ಇವರ ಬಗ್ಗೆ ಪ್ರಶ್ನೆ ಎತ್ತುವವರು ಆದಿವಾಸಿ-ದಲಿತರಲ್ಲ. ಅವರ ಕಣ್ಣು ಮತ ಪೆಟ್ಟಿಗೆಯ ಮೇಲಿದೆ ಅಷ್ಟೇ. ನಮ್ಮಲ್ಲಿ ಆದಿವಾಸಿ-ದಲಿತ ಸಚಿವರಿದ್ದಾರೆ ನಿಜ. ಆದರೆ ಅವರು ಈ ವಿಚಾರಗಳ ಬಗ್ಗೆ ಮಾತನಾಡಿದರೆ ಅವರು ಅನುಭವಿಸುತ್ತಿರುವ ಅಧಿಕಾರದಿಂದ ಕೆಳಗಿಳಿಸಲಾಗುತ್ತದೆ. ಹೀಗಾಗಿ ಅವರ ಬಾಯಿ ತೆರೆಯುವುದಿಲ್ಲ. ಜನರಿಗೆ ಇಂದಿರುವ ರಾಜಕೀಯ ಪಕ್ಷಗಳಿಂದ ಉತ್ತರ ಸಿಗುವುದಿಲ್ಲವೆಂದು ತಿಳಿದುಬಂದಿದೆ. ನಾವಿಂದು ಈ ಹೋರಾಟ ನಡೆಸುತ್ತಿರುವುದು ಅಧಿಕಾರ ಪಡೆಯಲಿಲ್ಲ. ಅದಕ್ಕೆ ಜನರು ನಮ್ಮೊಡನೆ ಸೇರಿಕೊಳ್ಳುತ್ತಿದ್ದಾರೆ.

ನಮ್ಮೊಡನಿರುವ ಆದಿವಾಸಿಗಳು, ಬೇರೆಲ್ಲಾ ಆದಿವಾಸಿಗಳನ್ನು, ನಮ್ಮಂತೆಯೆ ಹೋರಾಡುತ್ತಿರುವ ಜನರನ್ನು ಒಟ್ಟಿಗೆ ತರುತ್ತಿದ್ದಾರೆ. ಆಗ ಅವರಿಗೆ ನಿಜವಾದ ಶಕ್ತಿ ದೊರೆಯುತ್ತದೆ.

ನಾವು ಇದೇ ರೀತಿಯ ಭೂ ಆಕ್ರಮಣ ಹೋರಾಟವನ್ನು ಕೇರಳದಲ್ಲಿ ಮುಂದುವರಿಸುತ್ತೇವೆ. ಸೆಪ್ಟೆಂಬರ್ 21, 2003ರಂದು ನಾವು ಮುತ್ತಂಗಾಗೆ ಮತ್ತೆ ಹೋಗುತ್ತಿದ್ದೇವೆ. ●

ಆದಿವಾಸಿ ಹಾಡಿಗಳಲ್ಲಿ ಪೊಲೀಸರ ಅಟ್ಟಹಾಸ

ಗತಿ - ಚಿತ್ರ

೧

ಜಾತಿ ಅಂತಸ್ತಿನ ಪ್ರಶ್ನೆ ನಿನ್ನಂಥ ವಿವೇಕಿಗೆ
ಸರಿಹೊಂದುವುದಿಲ್ಲ ಅಂದಿದ್ದಳು.
ಅಷ್ಟಕ್ಕೂ ಅವನೇನು ಕುಡುಕನೇ? ಡಕಾಯಿತನೇ?
ಸುಸಂಸ್ಕೃತ, ಸುಶಿಕ್ಷಿತ ಮಿಗಿಲಾಗಿ
'ಮನುಷ್ಯರೂಪದ ಮನುಷ್ಯನೇ' ಹೌದೆಂದಿದ್ದಳು.
ಜಪ್ಪೆನ್ನಲಿಲ್ಲ ಅಪ್ಪ.

೨

ಮಗಳು ಮನೆ ಬಿಟ್ಟು ದೂರದೂರು ಸೇರಿದ್ದಾಯ್ತು.
ವರ್ಷಗಟ್ಟಲೆ ಮನೆಯವರ ಒಪ್ಪಿಸಲು ಆಗಾಗ
ತವರೂರಿಗೆ ಅಲೆದದ್ದಾಯ್ತು.
'ದ್ವೇಷ ಸಾರ್ವಕಾಲಿಕವಲ್ಲ'
ಕಳೆದ ಕಾಲ ಮರಳಿ ಬರುವುದಿಲ್ಲ
ಇರುವೊಂದು ಬದುಕಿನುದ್ದ ನಮ್ಮ-ನಮ್ಮೊಳಗೆ
ಖಾಲಿತನದ ಕಾರ್ಮೋಡಗಳೇಕೆ?'
ಅಂಗಲಾಚಿದ್ದಳು ಮಗಳು.
ಜಪ್ಪೆನ್ನಲಿಲ್ಲ ಅಪ್ಪ

೩

ಮೊನ್ನೆ-ಮೊನ್ನೆ ಆಕ್ಸಿಡೆಂಟಿನಲಿ
ತೀರಿಹೋದದ್ದೇ ಅಳಿಯ
ಯಾಕೋ ಬಂದೇಬಿಟ್ಟ ಮಾವ
ಮಗಳಿಗಿನ್ನೂ ಹರೆಯ,
ಕಂಬನಿಗರೆದ ಅಪ್ಪ, ಕರೆದ.
ನಕ್ಕುಬಿಟ್ಟಳು ಹುಡುಗಿ
ಅವ ಬಿಟ್ಟು ಹೋದ 'ಉಸಿರಿ'ನೊಂದಿಗೆ
ಬದುಕುತ್ತಿದ್ದೇನೆ
"ಬರಲಾರೆ" ಅಂದಳು.

೪

ಹಳ್ಳಿಯಲ್ಲೀಗ ಮುದುಕನಿಗೆ ಮಗಳ ಬಾಲ್ಯದ್ದೇ
ಮೆಲುಕುಗಳು...

○ ಪ್ರಮೀಳಾ ಚೊಕ್ಕಾಡಿ

ಝೆನ್

ಅವಲೋಕನ
ಕಥೆ ಪ್ರಸಂಗ
ಸಂವಾದ
ಒಗಟು
ಮುಂಡಿಗೆಗಳು



○ ಕೆ.ವಿ. ಸುಬ್ಬಣ್ಣ

ಉತ್ತರ



ಕ್ಯೊಟೊ ನಗರದಲ್ಲಿ ಎರಡು ಝೆನ್ ದೇವಾಲಯಗಳಿದ್ದವು. ಒಂದು ಉತ್ತರ ದೇವಾಲಯ ಹಾಗೂ ಮತ್ತೊಂದು, ದಕ್ಷಿಣ ದೇವಾಲಯ, ಎರಡೂ ದೇವಾಲಯಗಳಲ್ಲಿ ಝೆನ್ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿರುತ್ತಿದ್ದರು. ಆಯಾ ದೇವಾಲಯದಲ್ಲಿ ಯಾವನು ಅತ್ಯಂತ ಮೇಧಾವಿಯಾದ ವಿದ್ಯಾರ್ಥಿಯೋ ಆತನನ್ನು, ಹೊರ ತಿರುಗಾಟಗಳಿಗೆ ನೇಮಕ ಮಾಡುತ್ತಿದ್ದರು.

ಉತ್ತರ ದೇವಾಲಯದ ಬುದ್ಧಿವಂತ ವಿದ್ಯಾರ್ಥಿಯೊಬ್ಬ ಪ್ರತಿದಿನವೂ ತರಕಾರಿ ತರುವುದಕ್ಕಾಗಿ ಹೊರಗೆ ಹೋಗುತ್ತಿದ್ದ. ಒಂದು ದಿನ, ದಾರಿಯಲ್ಲಿ ಆತನಿಗೆ ದಕ್ಷಿಣ ದೇವಾಲಯದ ವಿದ್ಯಾರ್ಥಿ ಭೇಟಿಯಾದ.

'ಎಲ್ಲಿಗೆ ಹೋಗುತ್ತಿದ್ದೀಯೆ?' ಎಂದು ಕೇಳಿದ, ದಕ್ಷಿಣ ದೇವಾಲಯದ ಹುಡುಗ.

'ಕಾಲುಗಳು ಎಲ್ಲಿಗೆ ಒಯ್ಯುತ್ತವೋ ಅಲ್ಲಿಗೆ' ಎಂದ. ಉತ್ತರ ದೇವಾಲಯದ ವಿದ್ಯಾರ್ಥಿ. ಈ ಹುಡುಗ ಹತಪ್ರಭನಾಗಿ ಮರಳಿದ. ನಡೆದ ಕಥೆಯನ್ನು ತನ್ನ ಗುರುವಿಗೆ ನಿವೇದಿಸಿದ. ಎದುರು ದೇವಾಲಯದ ವಿದ್ಯಾರ್ಥಿಯಿಂದ ಹೀಗೆ ಹತಪ್ರಭನಾಗಬಾರದು ಎಂದ ಗುರು. ಆತನಿಗೆ ಒಂದು ಉಪಾಯ ಹೇಳಿಕೊಟ್ಟ. 'ನಾಳೆ ಮತ್ತೆ ಆ ವಿದ್ಯಾರ್ಥಿಯನ್ನು ಭೇಟಿಯಾದಾಗ ಪುನಃ, ಅದೇ ಪ್ರಶ್ನೆಯನ್ನು ಕೇಳು. ಆತ ಅದೇ ಉತ್ತರವನ್ನು ಕೊಡುತ್ತಾನೆ. ಪ್ರತಿಯಾಗಿ ನೀನು-ಅಲ್ಲಯ್ಯಾ, ಒಂದು ವೇಳೆ ನಿನಗೆ ಕಾಲುಗಳೇ ಇದ್ದಿಲ್ಲ ಎಂದಿಟ್ಟುಕೋ; ಆಗ ನೀನು ಎಲ್ಲಿ ಹೋಗುತ್ತಿದ್ದೆ? ಎಂದು ಮರು ಪ್ರಶ್ನೆ ಮಾಡು. ಆಗ, ನಿನ್ನ ಬದಲು ಆತ ನಿರುತ್ತರನಾಗುತ್ತಾನೆ' ಎಂದು ಹೇಳಿಕೊಟ್ಟ.

ಮರುದಿನ, ದಾರಿಯಲ್ಲಿ ಪುನಃ ಇಬ್ಬರು ವಿದ್ಯಾರ್ಥಿಗಳು ಭೇಟಿಯಾದಾಗ, ಗುರುವಿನ ಆದೇಶದಂತೆ ಈತ ಕೇಳಿದ-'ಎಲ್ಲಿಗೆ ಹೋಗುತ್ತಿದ್ದೀಯೆ?' ಅಂತ;

'ಬೀಸುವ ಗಾಳಿ ಎಲ್ಲಿಗೆ ತೇಲಿಸಿಕೊಂಡೊಯ್ಯುತ್ತದೋ ಅಲ್ಲಿಗೆ' ಎಂದ ಆತ.

ಮತ್ತೆ ಈತ, ಏನೂ ಹೇಳಲೂ ತೋಚದೆ ನಿರುತ್ತರನಾಗಬೇಕಾಯ್ತು. ಮರಳಿದ ಮೇಲೆ ಮತ್ತೆ ತನ್ನ ಗುರುವಿಗೆ ನಡೆದದ್ದನ್ನು ನಿವೇದಿಸಿಕೊಂಡ. ಗುರು ಚಿಂತಿಸಿ ಹೇಳಿದ-'ಇರಲಿ, ತಕ್ಕ ಉಪಾಯ ಹೇಳುತ್ತೇನೆ. ನಾಳೆಯೂ ಇದೇ ಪ್ರಶ್ನೆ ಕೇಳು. ಅವನು ಉತ್ತರಿಸಿದ ಮೇಲೆ- ಅಯ್ಯಾ ಗಾಳಿಯೇ ಇದ್ದಿಲ್ಲ ಎಂದಿಟ್ಟುಕೋ, ಆಗ?-ಎಂದು ಪ್ರಶ್ನೆಮಾಡು' ಎಂದು ಹೇಳಿಕೊಟ್ಟ.

ಮಾರನೆಯ ದಿನ ಪುನಃ, ಯಥಾ ಪ್ರಕಾರ ಇಬ್ಬರೂ ಭೇಟಿಯಾದರು. ಈತ ಪ್ರಶ್ನೆ ಮಾಡಿದ-'ಎಲ್ಲಿಗೆ ಹೋಗುತ್ತಿದ್ದೀಯೆ?'

ಆ ವಿದ್ಯಾರ್ಥಿ ಉತ್ತರಿಸಿದ-'ತರಕಾರಿ ಕೊಳ್ಳಲಿಕ್ಕೆ'.

ಬುದ್ಧ ಬೆಂಕಿ ಬೂದಿ

ಸಂಚಾರದಲ್ಲಿದ್ದ ಗುರು ತಂಕಾ, ಒಂದು ರಾತ್ರಿ, ಒಂದು ದೇವಾಲಯದಲ್ಲಿ ಇಳಿದುಕೊಂಡಿದ್ದ. ಅಲ್ಲಿ ಚಳಿ ವಿಪರೀತವಾಗಿತ್ತು. ಬೆಂಕಿ ಉರಿಸಿ ಕೊಳ್ಳುತ್ತಿದ್ದರೂ ಈಗ ಅದು ಕ್ರಮೇಣ ಆರತೊಡಗಿತ್ತು. ಮತ್ತೆ ಉರಿಸಲು ಹತ್ತಿರ ಕಟ್ಟಿಗೆಯೂ ಇರಲಿಲ್ಲ. ತಂಕಾ, ಅಲ್ಲಿದ್ದ ಬುದ್ಧದೇವನ ಮರದ ವಿಗ್ರಹದಲ್ಲಿ ಒಂದನ್ನು ಎತ್ತಿಕೊಂಡು ಬೆಂಕಿಗೆ ಚಾಚಿದ. ಇದನ್ನು ಕಂಡ ದೇವಾಲಯದ ಅರ್ಚಕ, ಏನು ಹೇಳಲಿಕ್ಕೂ ತೋಚದೆ, ನಿಬ್ಬೆರಗಾಗಿ ನಿಂತುಕೊಂಡಿದ್ದ. ತಂಕಾ, ಆತನಿಗಾದ ಆಘಾತವನ್ನು ಗುರುತಿಸಿದ.

ಬೆಂಕಿ ಕೊಂಚ ಇಳಿಮುಖವಾಗುತ್ತಿದ್ದಂತೆ, ತಂಕಾ, ಒಂದು ಕಡ್ಡಿಯನ್ನೆತ್ತಿಕೊಂಡು ಬೂದಿಯನ್ನು ಕೆದರತೊಡಗಿದ. ಅರ್ಚಕ, ಕುತೂಹಲದಿಂದ, 'ಏನನ್ನೋ ಹುಡುಕುತ್ತೀದ್ದೀರಾ?' ಎಂದು ಕೇಳಿದ. 'ಹೌದು, ಬುದ್ಧದೇವನ ಶರೀರ (ಪವಿತ್ರ ಚಿತಾಭಸ್ಮ) ಹುಡುಕುತ್ತಿದ್ದೇ' ಎಂದ, ಗುರು ತಂಕಾ. 'ಮರದ ಪ್ರತಿಮೆ ಸುಟ್ಟರೆ ಪವಿತ್ರವಾದ ಶರೀರಭಸ್ಮ ಸಿಕ್ಕುತ್ತದೆಯೆ?' ಎಂದು ಮೆಲುನಕ್ಕ, ಅರ್ಚಕ.

ಆಗ, ಗುರು ಹೇಳಿದ-'ಹೌದಲ್ಲವೆ? ಹಾಗಿದ್ದರೆ, ಆ ಇನ್ನೆರಡು ಮರದ ಪ್ರತಿಮೆಗಳಿದ್ದಾವಲ್ಲ, ತಾ. ಬೆಂಕಿ ಉರಿಸಿಕೊಳ್ಳುತ್ತೇನೆ'.

ಯಾರು



ಜಿಜ್ಞಾಸುವಾದ ಒಬ್ಬ ಭಿಕ್ಷು, ಒಬ್ಬ ಗುರುವಿನ ಬಳಿಗೆ ಬಂದ. ಪ್ರಶ್ನೋತ್ತರಗಳು ನಡೆದವು, ಹೀಗೆ-

'ಗುರುವೇ ಮಾರ್ಗ ಯಾವುದು?'

'ನೇರ ನಿನ್ನ ಕಣ್ಣೆದುರೇ ಉಂಟು'

'ನನಗೇಕೆ ಅದು ಕಾಣಿಸುತ್ತಿಲ್ಲ?'

'ಏಕೆಂದರೆ, ನೀನು ನಿನ್ನ ಬಗ್ಗೆಯೇ ಯೋಚಿಸುತ್ತಿದ್ದೀಯೆ'

'ಹಾಗಾದರೆ ನೀವು' ಅದನ್ನು ಕಾಣುತ್ತಿದ್ದೀರಾ?'

'ನಾನು, ನೀನು-ಎಂಬುದಾಗಿ ದ್ವಂದ್ವವನ್ನೇ ಕಾಣುತ್ತಿರುವ ತನಕವೂ ನಿನ್ನ ಕಣ್ಣು ಮಂಜಾಗಿ ಬಿಟ್ಟಿರುತ್ತದೆ'.

'ನಾನು ಎಂಬುದಾಗಲೀ ನೀನು ಎಂಬುದಾಗಲೀ ಇಲ್ಲದೆಯೇ ಹೋದಾಗ ಅದನ್ನು ಕಾಣುವುದಕ್ಕಾದೀತೆ?'

'ನಾನು ಎಂಬುದಾಗಲೀ ನೀನು ಎಂಬುದಾಗಲೀ ಇಲ್ಲದೆಯೇ ಹೋದಾಗ, ಆಗ, ಅದನ್ನು ನೋಡಬೇಕು ಎಂದು ಅಪೇಕ್ಷಿಸುವವರಾದರೂ ಯಾರು?

ಗುಂಭ



ಗುರು ಗೆತ್ಸುಲನ್ ಒಮ್ಮೆ ತನ್ನ ಶಿಷ್ಯನಿಗೆ ಹೀಗೆ ಹೇಳಿದ-

'ಕೆಯುಚು, ವೊತ್ತ ವೊದಲು ಗಾಲಿಯನ್ನು ತಯಾರಿಸಿದನಲ್ಲ ಅವನು ಎರಡು ಗಾಲಿಗಳನ್ನು ಮಾಡಿದ. ಅವುಗಳಿಗೆ, ಮಧ್ಯದಲ್ಲಿ ಗುಂಭವಿತ್ತು; ಒಂದೊಂದಕ್ಕೂ ಗುಂಭದಿಂದ ಅಂಚುಪಟ್ಟಿಗೆ ಜೋಡಿಸುವ ಐವತ್ತು- ಐವತ್ತು ಕಾಲು (ಅಡ್ಡ ಕಡ್ಡಿ)ಗಳಿದ್ದವು. ಹೇಳು-ಒಂದು ಪಕ್ಷ ನೀನು ಅವುಗಳ ಮಧ್ಯದ ಗುಂಭವನ್ನು ಕತ್ತರಿಸಿದೆ ಎಂದಿಟ್ಟುಕೊ; ಆಮೇಲೆ ಗಾಲಿ ಉಳಿದಿರುತ್ತದೆಯೆ?'

ಕೊರಚರು ದಕಾಯಿತರಲ್ಲ;
ದ್ರಾವಿಡ ಜನಾಂಗದ ಸಾಂಸ್ಕೃತಿಕ ವಾರಸುದಾರರು!

ಜಾತಿವಾದಿಗಳು ಹಾಗೂ ಕೋಮುವಾದಿಗಳ ನಿರಂತರ ದಬ್ಬಾಳಿಕೆಗೆ ಸಿಕ್ಕಿ ನಲುಗಿ ಹೋಗುತ್ತಿರುವ ಭಾರತದ ಮೂಲನಿವಾಸಿಗಳಲ್ಲಿ ಕೊರಮ-ಕೊರಚ ಜನಾಂಗವೂ ಒಂದು. ಬ್ರಿಟಿಷರ ಕಾಲದಿಂದಲೂ 'ಅಪರಾಧಿ ಬುಡಕಟ್ಟು'ಗಳೆಂದು ಮೂಲೆ ಗುಂಪುಮಾಡಲಾಗಿದ್ದ ಈ ಜನಾಂಗ ಸಮಾಜದ ಮುಖ್ಯವಾಹಿನಿಗೆ ಬರಲು ನಡೆಸಿದ ಪ್ರಯತ್ನಗಳೆಲ್ಲ ಸರಿಯಾದ ಪೋಷಣೆ ಇಲ್ಲದೆ ವಿಫಲವಾಗುತ್ತಿವೆ. ಇತ್ತೀಚೆಗಂತೂ ಕಳ್ಳರು-ದಕಾಯಿತರು ಎಂಬ ಹಣೆ ಪಟ್ಟಿ ಕಟ್ಟಿ ಇಡೀ ಜನಾಂಗವನ್ನು ಅಪಮಾನಿಸುವ ಹೀನ ಕೃತ್ಯ ಪದೇ ಪದೇ ನಡೆಯುತ್ತಿವೆ. ಜನಾಂಗ ಕುರಿತ ಅಪರೂಪದ ಮಾಹಿತಿ ಇಲ್ಲಿದೆ.

○ ವೈ. ಮರಿಸ್ವಾಮಿ

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಬ್ಬಿರುವ ಕೊರಚ ಜನಾಂಗವನ್ನು ಕೊರವು, ಕೊರವರ್, ಕುಂಚಿಕೊರವ, ಗುಂಜಿ ಕೊರವ, ಕೈಕಾಡಿ, ಎರಾಕುಲ (ಆಂಧ್ರಪ್ರದೇಶ), ಭಜಂತ್ರಿ, ಕುರುವನ್ (ತಮಿಳುನಾಡು), ಉಚಲ್ಯಾ (ಮಹಾರಾಷ್ಟ್ರ) ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಹೈದ್ರಾಬಾದ್ ಕರ್ನಾಟಕದಲ್ಲಿ ಕೊರಸರು, ಕೊರವು ಅಡವಿ ಚುಂಚರು ಎಂದು ಇತರೆ ಜನಾಂಗದಿಂದ ಕರೆಸಿಕೊಳ್ಳುತ್ತಾರೆ. ಕಾವೇಡಿ, ಸಾತ್‌ಪೇಡಿ, ಮ್ಯಾನ್ ಪೇಡಿ ಮತ್ತು ಮ್ಯಾಗ್‌ಪೇಡಿ ಎಂಬ ನಾಲ್ಕು ಪ್ರಮುಖ ಪಂಗಡಗಳಿವೆ. ಸುಮಾರು 8ಕ್ಕಿಂತಲೂ ಜಾಸ್ತಿ ಉಪಪಂಗಡಗಳಿವೆ.

ಹೆಚ್ಚಾಗಿ ಬೆಟ್ಟಗುಡ್ಡಗಳಲ್ಲಿ ವಾಸ ಮಾಡುವ ಅಲೆಮಾರಿ ಬುಡಕಟ್ಟು ಜನಾಂಗದ ಕೊರಚರು ತಮ್ಮದೇ ಶೈಲಿಯ ವಿಶೇಷ ಭಾಷೆಯನ್ನು ಮಾತನಾಡುತ್ತಾರೆ. ಎಲ್ಲಾ ದ್ರಾವಿಡ ಭಾಷೆಗಳ ಮಿಶ್ರಣದಂತಿರುವ ಇವರ ಭಾಷೆಯಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳಂ, ಕೊಡವ ಮತ್ತು ತುಳುಭಾಷೆಗಳು ಮೇಳೈಸಿವೆ. ಭಾಷೆಯ ಆಧಾರದ ಮೇಲೆ ಇಡೀ ದ್ರಾವಿಡ ಜನಾಂಗವನ್ನು ಪ್ರತಿನಿಧಿಸುವ ಜನಾಂಗವೊಂದಿದ್ದರೆ, ಅದು ಕೊರಚ ಜನಾಂಗ ಮಾತ್ರ!

ಕೇವಲ ಭಾಷೆಯಿಂದ ಮಾತ್ರವಲ್ಲದೆ ದೈಹಿಕವಾಗಿಯೂ ದ್ರಾವಿಡ ಸಂಕೇತವನ್ನು ಹೊರಸೂಸುವ ಕಪ್ಪುಬಣ್ಣದ ಹುರಿಗಟ್ಟಿದ ಗಟ್ಟಿಮುಟ್ಟಿನ ಮೈಕಟ್ಟನ್ನು ಹೊಂದಿರುವ ಕೊರಚ ಜನಾಂಗದವರು, ಇಂದಿಗೂ ತಮ್ಮ ಕಪ್ಪುಮೂಲದ Identityಯನ್ನು ಜತನ ಮಾಡಿಕೊಂಡು ಬರುತ್ತಿದ್ದಾರೆ. ಮೂಲತಃ ಹೋರಾಟದ ಕಿಚ್ಚನ್ನು ತಮ್ಮ ರಟ್ಟೆಗಳಲ್ಲಿ ತುಂಬಿಕೊಂಡಿರುವ ಇವರು ಈ ಹಿಂದೆ ಬ್ರಿಟೀಷರ ಸರ್ವಾಧಿಕಾರದ ವಿರುದ್ಧ ಗೆರಿಲ್ಲಾ ಮಾದರಿಯ ಯುದ್ಧ ಮಾಡಿದ ನಿದರ್ಶನಗಳಿವೆ. ಇವರ Militant ಮೈಕಟ್ಟನ್ನು ಉಪಯೋಗಿಸಿಕೊಳ್ಳುತ್ತಿದ್ದ ಸ್ಥಳೀಯ ಅರಸರು ತಮ್ಮ ಎದುರಾಳಿ ರಾಜ್ಯದ ಖಜಾನೆಯನ್ನು ಕೊಳ್ಳೆ ಹೊಡೆದು, ತಮ್ಮ ಶತೃವನ್ನು ಆರ್ಥಿಕವಾಗಿ ಹತ್ತಿಕ್ಕಲು ಹವಣಿಸುತ್ತಿದ್ದರು. ಇಂದಿಗೂ ಈ ಜನಾಂಗದ ಯುವಕರಿಗೆ ಪೊಲೀಸ್ ಇಲ್ಲವೇ ಮಿಲಿಟರಿ ಸೇರುವುದೆಂದರೆ ಹಬ್ಬ. ಹತ್ತಾಳು ಮಾಡುವ ಕೆಲಸವನ್ನು ಒಬ್ಬ ಕೊರಚ ಜನಾಂಗದ ಯುವಕ ಸಲೀಸಾಗಿ ಮಾಡಿ ಮುಗಿಸುತ್ತಾನೆಂದರೆ, ಆತನ ದೈಹಿಕ ತಾಖತ್ತಿನ ಪ್ರಖರತೆ ಮತ್ತು ತೀವ್ರತೆ ಎಂಥಾದ್ದು ಎಂದು ನೀವೇ ಊಹಿಸಿಕೊಳ್ಳಿ. ಧೃಡಕಾಯರಾದ ಇವರನ್ನು ಸ್ಥಳೀಯ ಅರಸರು, ಬ್ರಿಟೀಷರು ಮತ್ತು ಮೇಲ್ಜಾತಿಯವರು ಕಠಿಣ ಕೆಲಸಗಳಿಗೆ ದುಡಿಸುತ್ತಾ ಬಂದಿದ್ದಾರೆ. ದಕ್ಷಿಣ ಭಾರತದಲ್ಲಿ ರೈಲ್ವೈಹಳಿಗಳನ್ನು ಹಾಕಿದ ಶ್ರಮದಲ್ಲಿ ಕೊರಚರದು ಸಿಂಹ ಪಾಲಿದೆ.

ಭಾರತದ ದ್ರಾವಿಡ ಜನಾಂಗದ ತಳಸಮುದಾಯದ ಜೀವಂತ ಸೆಲೆಯಾಗಿರುವ ಕೊರಚ ಜನಾಂಗದ ಭಾಷೆ, ವೃತ್ತಿ, ಸಾಂಸ್ಕೃತಿಕ ಆಚರಣೆ, ಜೀವನ ವಿಧಾನಗಳಲ್ಲಿ ಮಿಶ್ರ ಸಂಬಂಧಗಳಿವೆ. ಇತ್ತೀಚೆಗೆ ತಮ್ಮಲ್ಲಿನ ಬೇರೆ ಬೇರೆ ಪಂಗಡ, ಉಪಪಂಗಡಗಳೊಂದಿಗೆ ವಿವಾಹ ಸಂಬಂಧಗಳು ಕುದುರುತ್ತಿವೆ. ಹೆಣ್ಣು ದೇವತೆಗಳನ್ನು ಆರಾಧಿಸುವ ಇವರು, ಕೆಲವೆಡೆ ಪ್ರಾಣಿ ಬಲಿ ಕೊಡುವ ಸಂಪ್ರದಾಯವಿದೆ. ಸತ್ಯಮ್ಮ ಕೊರಚರ ಅಚ್ಚುಮೆಚ್ಚಿನ ದೇವತೆ. ವಡ್ಡರಿಗೆ ಇಲಿ ಮಾಂಸ ರುಚಿಕಟ್ಟಾಗಿದ್ದರೆ, ಕೊರಚರಿಗೆ ಬೆಕ್ಕಿನ ಮಾಂಸ ಪ್ರಿಯವಾದದ್ದು. ಆದರೆ ಎಲ್ಲಾ ಕೊರಚರು ಮಾರ್ಜಾಲ ಭಕ್ಷಕರು ಎಂದು ತೀರ್ಮಾನಿಸುವುದು ಸಮಂಜಸವಲ್ಲ. ಕಾಡಿನಲ್ಲಿ ಸಿಕ್ಕುವ ತರಾವರಿ ಪ್ರಾಣಿಪಕ್ಷಿಗಳ ಮಾಂಸ ಸೇವಿಸುವುದರ ಜೊತೆಗೆ ಕೆಲವಡೆ ಹಂದಿಸಾಕಾಣಿಕೆ ಮತ್ತು ಮಾರಾಟ ಮಾಡುವ ಕಸುಬು ನಡೆಸುತ್ತಿದ್ದಾರೆ.

ವೃತ್ತಿ-ಕಸುಬುಗಳ ಆಯ್ಕೆಯಲ್ಲಿ ವಿಭಿನ್ನ ಜಾಡು ಹಿಡಿದಿರುವ ಕೊರಚಜನಾಂಗ, ಯಾವುದೋ ಒಂದು ಸೀಮಿತ, ನಿರ್ಧಿಷ್ಟ ಕೆಲಸಕ್ಕೆ ಅಂಟಿಕೊಂಡಿಲ್ಲ. ಇದು ಅವರ ಕುಶಲತೆ ಮತ್ತು ನೈಪುಣ್ಯತೆಗೆ ಹಿಡಿದ ಕನ್ನಡಿಯಾಗಿದೆ. ಇಂದಿಗೂ ಬಡವರ ಮಂಚ, ಬೆಡ್-ಟೂಇನ್‌ವನ್ ಆಗಿರುವ ಗರಿಗರಿ ಚಾಪೆ ಇವರ ಕುಶಲತೆಯ ಪ್ರತೀಕ. ಈಚಲು ಮರದ ಗರಿಗಳನ್ನು ಕೊಯ್ದು ತಂದು ಒಣಗಿಸಿ, ಅವುಗಳನ್ನು ನೀರನಲ್ಲಿ ಹದಮಾಡಿ, ನಿರ್ಧಿಷ್ಟ ಆಕಾರದ ಪಟ್ಟಿಯನ್ನು ಕಟ್ಟಿ, ಸುರುಳಿಯಾಗಿ ಮಾಡಿ ನಂತರ 'ಚಾಪೆ' ಎಂಬ ಆಕಾರ ಬರುವಂತೆ ಮಾಡಲು ಅಪಾರ ಪರಿಶ್ರಮ ಮತ್ತು ಏಕಾಗ್ರತೆ ಅತ್ಯಗತ್ಯ. ಮನೆಯಲ್ಲಿ ಕಸದ ಬುಟ್ಟಿಗೆ, ಪೊರಕೆಗೆ ಎಂಥ ಮಹತ್ವವಿದೆ ಎಂಬುದು ಸಾಮಾನ್ಯರಿಗೆ ಗೊತ್ತಿರುವ ವಿಷಯ. ಈ ಬುಟ್ಟಿ ಕೃಷಿ ಚಟುವಟಿಕೆಗಳಲ್ಲೂ ಗಮನಾರ್ಹ ಪಾತ್ರವಹಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಕಸಬಾರಿಗೆ, ಹುಲ್ಲುಬಾರಿಗೆ ಎಂದು ಕರೆಯಲ್ಪಡುವ ಪೊರಕೆಯಿದ್ದರೇನೆ ಮನೆಚಂದ. ಅಂಗಳ ಚಂದ, ಬುಟ್ಟಿ-ಪೊರಕೆ ಜೀವತಳೆಯುವುದೇ ಕೊರಚರ ಹಟ್ಟಿಯ ಅಂಗಳದಲ್ಲಿ. ಹಗ್ಗ ಹೊಸೆಯುವ ಕಸುಬಿನಲ್ಲಿ ಕೊರಚರದು

ಎತ್ತಿದ ಕೈ. ಬಹುಪಯೋಗಿ ವಸ್ತುವಾಗಿರುವ ಹಗ್ಗ, ಕಟ್ಟಿಗೆ ಕಟ್ಟುವುದರಿಂದ ನೇಣುಕುಣಿಕೆಗೆ ಬಳಸಲ್ಪಡುವ ಹಗ್ಗ; ಇಂದು ಗ್ರಾಮೀಣ ಜನತೆಯ ಅವಿಭಾಜ್ಯ ಅಂಗ. ನನ್ನ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮರಿಯಮ್ಮನಹಳ್ಳಿ ಎಂಬ ಗ್ರಾಮದ ಕೊರಚರು, ಹಗ್ಗ ಹೊಸೆಯುವುದರಲ್ಲಿ ಆ ಭಾಗದಲ್ಲೇ ಹೆಸರು ಮಾಡಿದ್ದಾರೆ. ತಮ್ಮ ಬುದ್ಧಿಶಕ್ತಿಯಿಂದ ಹಗ್ಗ ಹೊಸೆಯುವ ಅಗ್ಗದ ಬೆಲೆಯ ಕಬ್ಬಿಣದ ಯಂತ್ರವೊಂದನ್ನು ರೂಪಿಸಿದ ಶಿಲ್ಪಿಗಳು ಇವರು!

ಹಂದಿ ಸಾಕಾಣಿಕೆ ಕೊರಚರ ಒಂದು ಹವ್ಯಾಸ ಮತ್ತು ಗಂಧೆ. ಕರ್ನಾಟಕದ, ಅದರಲ್ಲೂ ಉತ್ತರ ಕರ್ನಾಟಕದ ಮಹಾನಗರಗಳನ್ನು ಶುಚಿಯಾಗಿಡುವ ಪರ್ಮನೆಂಟ್ ಮತ್ತು ಹಾನೆಸ್ಟ್ ಪೌರಕಾರ್ಮಿಕರೆಂದರೆ-ಹಂದಿಗಳು! ಹಂದಿಗಳ ಅನುಪ ಸ್ಥಿತಿಯಲ್ಲಿ ಈ ನಗರಗಳ ಸ್ಥಿತಿಯನ್ನು ಒಮ್ಮೆ ನೆನಿಸಿಕೊಂಡರೆ ಮೂರ್ಛೆ ಹೋಗಬೇಕಾಗುತ್ತದೆ. ಸರ್ಕಾರ ಯಾವುದೇ ಬಂದು ಹೋದರೂ ಖರೆ ಅರ್ಥದಲ್ಲಿ ಪರ್ಮನೆಂಟ್ ಪೌರಾಡಳಿತ ಮಂತ್ರಿಗಳೆಂದರೆ-ಕೊರಚರೇ! ಆದರೆ ಅವರನ್ನು ಗುರುತಿಸುವ ಹೃದಯವಂತಿಕೆ ಈ ಸಮಾಜ ಮತ್ತು ಸರ್ಕಾರಕ್ಕಿಲ್ಲ. ಕುರಿ ಸಾಕಾಣಿಕೆ ಮತ್ತು ಎತ್ತುಗಳ ಮಾರಾಟ ಮಾಡುವ ದಂಧೆಯಲ್ಲಿ ಇವರದು ಎತ್ತಿದ ಕೈ. ಇನ್ನು, ಕಣಿ ಕೇಳಬೇಕಾ? ಬನ್ನಿ ಅದಕ್ಕೂ ಸೈ. ಕೈಯಲ್ಲಿ ಬುಟ್ಟಿ ಮತ್ತು ಕಡ್ಡಿ ಹಿಡಿದು ಕುಳಿತು ಕಣಿ ಪ್ರಾರಂಭಿಸಿದರೆ, ತಲೆದೂಗುವ ಸರದಿ, ಕೇಳುಗನದು!

ಆರ್ಥಿಕವಾಗಿ ಸ್ವಲ್ಪ ಸುಸ್ಥಿತಿಯಲ್ಲಿರುವ ಕೊರವರು ಉತ್ತರ ಕರ್ನಾಟಕದ ಕಡೆ ಗೌಡರ-ಧಣಿಗಳ ತೋಟಗಳನ್ನು ಗುತ್ತಿಗೆ ಹಿಡಿಯುತ್ತಾರೆ. ಅವುಗಳಲ್ಲಿ ಬೆಳೆಯುವ ಹಣ್ಣು ಹಂಪಲುಗಳನ್ನು ಮಾರಿ ಹೊಟ್ಟೆಹೊರೆಯುತ್ತಾರೆ. ಇವರು ಬೆಳೆಯುವ ತರಕಾರಿ ಹಣ್ಣು ಹಂಪಲುಗಳನ್ನು ಮಾರ್ಕೆಟ್‌ಗೆ! ಬಜಾರ್‌ಗೆ ಹೊತ್ತೊಯ್ಯುವ ವಾಹನ-ಕತ್ತೆ, ಒಬ್ಬ ಶ್ರಮಜೀವಿಯ ಹೆಗಲಿಗೆ ಮತ್ತೊಬ್ಬ ಶ್ರಮಜೀವಿಯ ನೊಗ! ಈ ಅಡವಿ ತಾಯಿಯ ಮಕ್ಕಳು ರಾತ್ರಿಯ ವೇಳೆ ತಮ್ಮ ನೋವನ್ನು ಮರೆಯಲು ಸಂಗೀತಕ್ಕೆ ಮೊರೆಹೋಗುತ್ತಾರೆ. ಕಲ್ಯಾಣಮಂಟಪಗಳ ಆಡಂಭರದ ಕೃತಕ ವೈಭವದ ಸಾಂಸ್ಕೃತಿಕ ಧಿಮಾಕಿನಿಂದ ಈಗಲೂ ದೂರವಿರುವ ಹೈದ್ರಾಬಾದ್ ಕರ್ನಾಟಕದ ಜನರು, ಎಷ್ಟೇ ಸ್ಥಿತಿವಂತರಿದ್ದರೂ ತಮ್ಮ ಮನೆಯ ಮುಂದೆಯೇ ಚಪ್ಪರ ಹಾಕಿಸಿ ವಾಲ್ಗ ಊದಿಸುವುದರ ಮೂಲಕ ಮದುವೆ ಮಾಡುತ್ತಾರೆ. ಈ ತಾಜಾ ಕಳೆಯ ಮದುವೆಗಳಲ್ಲಿ ಭಾಜಾಬಜಂತ್ರಿ ಬಾರಿಸುವವರು-ಈ ಭಜಂತ್ರಿಗಳೇ! ಶಹನಾಯಿ ನುಡಿಸುವವರು-ಈ ಕೊರಚರ ಹಟ್ಟಿಯಲ್ಲಿ ಬೆಳೆದ ಸನಾದಿ ಅಪ್ಪಣ್ಣಾಗಳೇ! ತಮ್ಮ ವಿವಿಧ ರಾಗ ನರ್ತನಗಳಿಂದ ಲಗ್ನಕ್ಕೆ ರಂಗೇರಿಸುವವರು. ಗುಡ್ಡಗಾಡಿನ ಈ ಅಡವಿ ಮಕ್ಕಳೇ! ಡಾ. ರಾಜ್ ಅಭಿಯನದ ಸನಾದಿ ಅಪ್ಪಣ್ಣ ಸಿನೇಮಾ ಕೊರಚರ ಸಂಸ್ಕೃತಿ ಮತ್ತು ಅದರ ಪಲ್ಲಟವನ್ನು ಪ್ರತಿಬಿಂಬಿಸುವ ಒಂದು ಮನೋಜ್ಞ ದೃಶ್ಯಾವಳಿಯಾಗಿದೆ.

ದ್ರಾವಿಡ ಸಂಸ್ಕೃತಿಯ ವಾರಸುದಾರರಾಗಿರುವ ಕೊರಚ ಜನಾಂಗ-ತಳ ಸಮುದಾಯದ ತಾಯ್ತನದ ಸಂಕೇತವಾಗಿದೆ.



ಇಂದಿಗೂ ಬಡವರ ಮನೆಯ ಲಕ್ಷಾಂತರ ಕೂಸುಗಳು ಕೊರಚರು ತಯಾರಿಸಿದ ಬಿದಿರಿನ ತೊಟ್ಟಿಲುಗಳಲ್ಲೇ ಅಳುತ್ತಾ-ನಗುತ್ತಾ ಬೆಳೆಯುತ್ತವೆ. ತನ್ನ ಕರಕುಶಲ ವಸ್ತುಗಳಿಂದ ಜಾತಿ, ಧರ್ಮ, ಭಾಷೆ ಇತ್ಯಾದಿ ಸಣ್ಣತನದ ಕೃತಕರೇಖೆಗಳನ್ನು ದಾಟಿ; ಒಟ್ಟಾರೆಯಾಗಿ ಮಾನವ ಜನಾಂಗಕ್ಕೆ ಅಗತ್ಯವಾದ ಸೇವೆಗಳನ್ನು ಒದಗಿಸುವುದರಲ್ಲಿ, ಕೊರಚ ಜನಾಂಗ ಪ್ರಪಂಚದಲ್ಲಿಯೇ ಮುಂಚೂಣಿಯಲ್ಲಿದೆ ಎಂದರೆ ಅತಿಶಯೋಕ್ತಿಯಾಗಲಾರದು! "ನಾನಾರಿಗಲ್ಲ ದವಳು, ಬಿದಿರು ನಾನಾರಿಗಲ್ಲದವಳು" ಎನ್ನುವ ಹಾಡಿನ ಸಾಲಿನಂತೆ, ಕೊರಚರು ಸಮಾಜದ ಸಮಸ್ತರಿಗೆ ಬೇಕಾದ ತಾಯಿಯ ಸ್ಥಾನದಲ್ಲಿರುವ ಹೆಣ್ಣೆರುಳಿನವರು. ಬಿದಿರಿನೊಂದಿಗೆ ಅವಿನಾಭಾವ ಸಂಬಂಧವಿರುವ ಈ ಜನರ ಸಂಕೇತವೇ-ಬಿದಿರು! ಮನೆ ಕಟ್ಟುವುದರಿಂದ ಹಿಡಿದು ಚಟ್ಟಕಟ್ಟುವವರೆಗೆ ಉಪಯೋಗಕ್ಕೆ ಬರುವ ಬಿದಿರು ಮನುಷ್ಯನಿಗೆ ಎಷ್ಟು ಅಗತ್ಯವೋ, ಹಾಗೆಯೇ ಸಮಾಜಕ್ಕೆ ಕೊರಚರೂ ಕೂಡ! ಬಿದಿರು ಹೆಚ್ಚಾಗಿ ಸಿಗುವ ಕಾಡುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಇವರು ವಾಸಮಾಡುವುದಕ್ಕೂ ಇವರ ವೃತ್ತಿ ಮತ್ತು ತಾಯ್ತತನಕ್ಕೂ ಎಷ್ಟೊಂದು ವೈಜ್ಞಾನಿಕ ಸೇತುವೆಯಿದೆಯಲ್ಲವೆ?

ಕೈಯಲ್ಲಿ ಇಷ್ಟೊಂದು ವಿಭಿನ್ನ ಕಸುಬುಗಳಿದ್ದರೂ ಕೊರಚ ಜನಾಂಗ ಆರ್ಥಿಕವಾಗಿ ದರಿದ್ರ ಸ್ಥಿತಿಯಲ್ಲಿದೆ. ಬಿದಿರಿನ ಜಾಗಕ್ಕೆ ಪ್ಲಾಸ್ಟಿಕ್ ಬಂದಿದೆ. ಜಾಗತೀಕರಣದ ರಭಸಕ್ಕೆ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆ ಇಲ್ಲವಾಗಿದೆ. ಬಿದಿರಿನ ವಸ್ತುಗಳ ಬೆಲೆಗಿಂತ ಕಚ್ಚಾ ಬಿದಿರು ದುಬಾರಿಯಾಗಿದೆ. ಇದರಿಂದಾಗಿ ಬಿದಿರು ಸಂಬಂಧಿತ ದಂಧೆ ಹಳ್ಳ ಹಿಡಿದಿದೆ. ಸೌದೆ ಬದಲು ಗ್ಯಾಸ್ ಹಳ್ಳಿಗಳಿಗೆ ಕಾಲಿಟ್ಟಾಗಿದೆ. ರೆಡಿಮೇಡ್ ಹಗ್ಗ ಅಗ್ಗವಾಗುತ್ತಿವೆ. ಕೃಷಿ ಚಟುವಟಿಕೆಗಳಲ್ಲಿ ಎತ್ತಿನ ಸ್ಥಾನವನ್ನು ಟ್ರ್ಯಾಕ್ಟರ್‌ಗಳು ಅಲಂಕರಿಸಿವೆ. ಹೀಗೆ, ಜಾಗತೀಕರಣ, ಯಾಂತ್ರೀಕರಣ ಮತ್ತು ಮುಕ್ತ ಮಾರುಕಟ್ಟೆಯ ಮಾರಿ ಕೊರಚರ ಕರುಳನ್ನೇ ಕಿವುಚಿಹಾಕುತ್ತಿದೆ. ಇವರ ಶ್ರಮ ಮತ್ತು ಕುಶಲತೆಗೆ ಸರ್ಕಾರದ ಆಸರೆ ಸಿಗುತ್ತಿಲ್ಲ. ಉದ್ಯೋಗವನ್ನರಸಿ ಕರುಳಿನ ಚೀಲ ತುಂಬಿಸಲು ಅನೇಕ ಜನ ಆಂಧ್ರ, ಮಹಾರಾಷ್ಟ್ರ, ಕೇರಳ, ಗೋವ ಇತ್ಯಾದಿ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಭೂಹೀನರಾಗಿರುವ ಕೊರಚರಿಗೆ ಸರ್ಕಾರ ಭೂಮಿಯನ್ನೇನಾದರೂ ಕೊಟ್ಟರೆ, ಈ ವಲಸೆಯ ಪ್ರಮಾಣವನ್ನು ತಗ್ಗಿಸಬಹುದಿತ್ತು. ಕೊರಚರ ಬಗೆಗಿನ ಸರ್ಕಾರದ ತಾತ್ಸಾರದ ಧೋರಣೆ ಮತ್ತು ಈ ಜನಾಂಗದಲ್ಲಿನ ರಾಜಕೀಯ ಮತ್ತು ಸಂಘಟನಾತ್ಮಕ ನಾಯಕತ್ವದ ಕೊರತೆ ಕೊರಚರನ್ನು ಮತ್ತಷ್ಟು ಪ್ರಪಾತಕ್ಕೆ ತಳ್ಳಲು ಪೈಪೋಟಿ ನಡೆಸಿವೆ.

ತಮ್ಮ ಬದುಕಿನ ಅಸ್ತಿತ್ವಕ್ಕಾಗಿ ವಿಭಿನ್ನ ಆರ್ಥಿಕ ಆಯಾಮಗಳನ್ನರಸುತ್ತಿರುವ ಕೊರಚರು ರಕ್ತದ ಬೆವರನ್ನು ಬಸಿದು ಬದುಕನ್ನು ಕಟ್ಟಿಕೊಳ್ಳಲು ಹೆಣಗುತ್ತಿರುವ ಛಲವಂತರು ಮಾತ್ರವಲ್ಲ-ಸ್ವಾಭಿಮಾನಿಗಳೂ ಹೌದು. ಇಂಥವರಿಗೆ 'ಡಕಾಯಿತರು' ಎಂಬ ಲೇಬಲ್ ಅಂಟಿಸಲು ಹೊರಟಿರುವ ಏಡ್ಸ್ ಪತ್ರಕರ್ತ, ಸುಳ್ಳಿನ ಸರದಾರ 'ರಬೆ' ಮೆದುಳಿನಲ್ಲಿ ಬುದ್ಧಿಯ ಬದಲು ಲದ್ದಿಯೇ ತುಂಬಿಕೊಂಡಿರಬೇಕು? ಒಟ್ಟಾರೆಯಾಗಿ ಕೊರಚರನ್ನು Cribe Tribe ಎಂದು ಹೀಗಳೆದಿರುವ 'ಪತ್ರಿಕಾರಂಗದ ಉಪೇಂದ್ರ'-ಭಾರತದ ಮೂಲನಿವಾಸಿಗಳಾದ ದ್ರಾವಿಡ ಜನಾಂಗವನ್ನೇ ಅವಮಾನಿಸಿದ್ದಾನೆ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪ್ರಕಾರ "ಬ್ರಾಹ್ಮಣರ ಅಧಿಪತ್ಯವನ್ನು-ಯಜಮಾನಿಕೆಯನ್ನು ಧಿಕ್ಕರಿಸಿ ಕಾಡಿಗೆ ಅಟ್ಟಲ್ಪಟ್ಟವರು ಬುಡಕಟ್ಟು ಜನಾಂಗ ಆದಿವಾಸಿಗಳು ಎಂದು ಕರೆಯಲ್ಪಟ್ಟರು. ಸಂಪೂರ್ಣವಾಗಿ (Tribal Community) ಬ್ರಾಹ್ಮಣರ ಆಳ್ವಿಕೆಯನ್ನು ಪ್ರತಿಭಟಿಸಿ ಊರುಗಳಲ್ಲೇ ಉಳಿದವರು ಅಸ್ಪೃಶ್ಯರಾದರು" ಹೀಗೆ ಕಾಡಿಗೆ ಅಟ್ಟಲ್ಪಟ್ಟ ಗುಡ್ಡಗಾಡುಗಳಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡ ಕೊರಚರನ್ನು; ಬ್ರಿಟೀಷರು ಕಾಡಿನ ಸಂಪತ್ತನ್ನು ಲೂಟಿ ಮಾಡಲು ಕೆಲವು ಕ್ರೂರ ಶಾಸನಗಳನ್ನು ಜಾರಿಗೆ ತಂದು ಕಾಡಿನಿಂದಲೇ ಓಡಿಸಿದರು. ದಿಢೀರನೆ ಕಾಡಿನಿಂದ ಹೊರಬಿದ್ದ ಕೊರಚರ ಬದುಕು ನೀರಿನಿಂದ ಹೊರಬಿದ್ದ ಮೀನಿನಂತಾಯಿತು. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ವಿದೇಶಿ ಬ್ರಿಟೀಷರೊಂದಿಗೆ ಮಾತ್ರವಲ್ಲದೆ ಸ್ವದೇಶಿ ಜಾತಿವಾದಿಗಳ ಜೊತೆಗೆ ಏಕಕಾಲಕ್ಕೆ ಬಡಿದಾಡುವಂತಾಯಿತು. (21ನೇ ಪುಟಕ್ಕೆ)

ಮೀಸಲಾತಿ ಎಂಬ ಟೈಟಾನಿಕ್ ಹಡಗು



ಶತಮಾನಗಳಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕವಾದ ಅವಕಾಶಗಳಿಂದ ವಂಚಿತವಾಗಿದ್ದ ಜನಸಮುದಾಯದ ಹಿತಕಾಯಲು ಸಂವಿಧಾನ ಬದ್ಧವಾಗಿ ನೀಡಲಾದ ಅವಕಾಶಗಳೇ ಮೀಸಲಾತಿ.

ಇತ್ತೀಚಿನ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ದಾಳಿ, ಅವಕಾಶವಾದಿ ಮೇಲ್ಜಾತಿ ಜನರ ಕುತಂತ್ರ ಮತ್ತು ಆಳುವ ಸರ್ಕಾರಗಳ ನಿಷ್ಕ್ರಿಯತೆಯಿಂದಾಗಿ ಮೀಸಲಾತಿಯ ಕಲ್ಪನೆ ಮೂಲೆ ಗುಂಪಾಗುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಮೀಸಲಾತಿಯ ಫಲಾನುಭವಿಗಳಲ್ಲೇ ನಡೆಯುತ್ತಿರುವ ಸಂಘರ್ಷಗಳ ನಡುವೆ ಮೀಸಲಾತಿಯ ವಾಸ್ತವ ಸ್ಥಿತಿ ಕುರಿತ ಚಿತ್ರಣ ಇಲ್ಲಿದೆ.

○ ನಾ. ದಿವಾಕರ್

ಭಾರತದಲ್ಲಿ ಯಾವುದೇ ಸಂದರ್ಭದಲ್ಲಿ, ಎಲ್ಲೆಡೆಯಿಂದ, ತೀವ್ರವಾದ ಭಾವನೆಗಳನ್ನು ಕೆರಳಿಸುವ ವಿಷಯವೆಂದರೆ ಮೀಸಲಾತಿ ಎಂದು ಹೇಳಬಹುದು. ಈ ಭಾವನೆಗಳು ಎಷ್ಟು ಪರಿಣಾಮಕಾರಿಯಾಗಿ ವ್ಯಕ್ತವಾಗಿದೆಯೆಂದರೆ, ಮೀಸಲಾತಿ ನೀತಿಯ ಬಗ್ಗೆ ಒಂದು ಪ್ರಜಾತಾಂತ್ರಿಕ ಚರ್ಚೆ ಇದುವರೆಗೂ ಸಾಧ್ಯವಾಗಿಲ್ಲ. ಯಾವುದೇ ವೇದಿಕೆಯಲ್ಲಿ ಮೀಸಲಾತಿ ವಿವಾದ ಮಂಡನೆಯಾದರೆ, ಕೇವಲ ಪರ-ವಿರೋಧ ಅಭಿಪ್ರಾಯಗಳು ವ್ಯಕ್ತವಾಗುವುದೇ ಹೊರತು, ಭಾರತವನ್ನು ಒಂದು ಉತ್ತಮ ಪ್ರಜಾತಾಂತ್ರಿಕವಾದ, ಸಮಾನತೆಯನ್ನು ಪ್ರತಿಬಿಂಬಿಸುವ, ಸಮಾಜವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಯಾವುದೇ ಚರ್ಚೆ ನಡೆಯುವುದಿಲ್ಲ. ಸಂವಿಧಾನದ ಕರ್ತೃಗಳು ಮೀಸಲಾತಿ ನೀತಿಯನ್ನು ಅನುಷ್ಠಾನಗೊಳಿಸುವುದರ ಹಿಂದೆ ಇದೇ ಉದ್ದೇಶವಿತ್ತೆಂಬುದು ಗಮನಿಸಬೇಕಾದ ಅಂಶ. ಆ ಉದ್ದೇಶಗಳು ಫಲಿಸಿರುವುದು ಚರ್ಚಾಸ್ಪದ ಅಂಶವಾದರೂ, ಮಂಡಲ್ ಬೆಳವಣಿಗೆಗಳ ನಂತರ ಇಡೀ ಮೀಸಲಾತಿ ನೀತಿಯೇ ವಿವಾದಾಸ್ಪದವಾಗಿರುವುದಂತೂ ಸತ್ಯ.

1990ರಲ್ಲಿ ಅಂದಿನ ಪ್ರಧಾನಿ ವಿ.ಪಿ.ಸಿಂಗ್‌ರವರು ಮಂಡಲ್ ವರದಿಯನ್ನು ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ನೋಡಿದಾಗ ಮಂಡಲ್ ವರದಿಯ ಪರ ಹಾಗೂ ವಿರೋಧ ಗುಂಪುಗಳೆರಡೂ ತೀವ್ರವಾದ ಭಾವನೆಗಳ ಮೂಲಕ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದು ಈಗ ಇತಿಹಾಸ. ಮಂಡಲ್ ವರದಿಯ ನಂತರದ ಬೆಳವಣಿಗೆಗಳು, ಗಲಭೆಗಳು, ಪ್ರಮುಖ ಸುದ್ದಿಯಾಗಿ ಮೂಡಿಬಂದರೂ ಎಲ್ಲಕ್ಕಿಂತಲೂ ಮಿಗಿಲಾಗಿ ಈ ಬೆಳವಣಿಗೆಗಳು ಪಟ್ಟಣದ ಮೇಲ್ವರ್ಗದವರಲ್ಲಿ ಜಾತಿ ಪ್ರಜ್ಞೆಯನ್ನು ಗಟ್ಟಿಗೊಳಿಸಿದವು. ಅಲ್ಲದೆ ಜಾತಿಪ್ರಜ್ಞೆಯಿಂದ ಕೂಡಿದ ಸಮುದಾಯಗಳ ನಡುವೆ ದ್ವೇಷ-ಅಸೂಯೆಗಳನ್ನು ಹೆಚ್ಚಿಸಿತು. ಪರಿಣಾಮವಾಗಿ ಜಾತಿ ರಾಜಕೀಯ, ಭಾರತೀಯ ರಾಜಕಾರಣದಲ್ಲಿ ಭದ್ರವಾಗಿ ನೆಲೆಯೂರಿತು. ಮಂಡಲ್‌ಗೆ ಮುನ್ನ ಜಾತಿ ರಾಜಕಾರಣ ಬೇರೊಂದು ರೂಪದಲ್ಲಿ, ಪ್ರಚಲಿತವಾಗಿದ್ದರೂ, ಮಂಡಲ್ ನಂತರದ ಬೆಳವಣಿಗೆ ಬೇರೊಂದು ಸ್ವರೂಪವನ್ನೇ ಪಡೆಯಿತು. ದೇಶದ 55 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಎಂದೂ ಕಾಣದಂತೆ, ಇಂದು ರಾಜಕಾರಣವು ಜಾತಿಯಾಧಾರಿತವಾಗಿದ್ದು, ಮೀಸಲಾತಿ ನೀತಿಯು ಸಾಮಾಜಿಕ ನ್ಯಾಯವನ್ನು ಸಾಧಿಸುವ ಬದಲು ರಾಜಕೀಯ ಯಶಸ್ಸಿಗೆ ಮೆಟ್ಟಿಲುಗಳಾಗಿ ಪರಿಣಮಿಸಿದೆ. ನಿದರ್ಶನ ರೂಪದಲ್ಲಿ ನೋಡುವುದಾದರೆ ಲೋಕಸಭೆಯ 545 ಸ್ಥಾನಗಳ ಪೈಕಿ 122 ಸ್ಥಾನಗಳನ್ನು ಹೊಂದಿರುವ ಬಿಹಾರ, ಉತ್ತರಪ್ರದೇಶಗಳಲ್ಲಿ, ಬಲಿಷ್ಠ ಹಿಂದುಳಿದ ವರ್ಗಗಳು ತಮ್ಮ ಹಿಂದುಳಿವಿಕೆಯನ್ನು ನಿರೂಪಿಸಲು ಪೈಪೋಟಿ ನಡೆಸುತ್ತಿದ್ದು ಅದರಿಂದ ಮೀಸಲಾತಿಯ ಸೌಕರ್ಯಗಳನ್ನು ಸವಲತ್ತುಗಳನ್ನು ಕಬಳಿಸಲೆತ್ನಿಸುತ್ತಿದೆ. ಇದರಿಂದ ಈಗಾಗಲೇ ಶಿಥಿಲವಾಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಕಂದಕಗಳನ್ನು ತೋಡಿದಂತಾಗುತ್ತಿದೆ. ಈ ಗೊಂದಲಮಯ ಸನ್ನಿವೇಶದಲ್ಲಿಯೇ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಲೋಟ್‌ರವರು ಮೇಲ್ಜಾತಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ. 14ರಷ್ಟು ಮೀಸಲಾತಿ ಘೋಷಿಸಿರುವುದು, ಮೀಸಲಾತಿ ವಿವಾದಕ್ಕೆ ಹೊಸ ತಿರುವು ನೀಡಿದೆ. ಸಮೀಪಿಸುತ್ತಿರುವ ರಾಜ್ಯ ವಿಧಾನ ಸಭಾ ಚುನಾವಣೆಗಳ ದೃಷ್ಟಿಯಿಂದ ಕೈಗೊಂಡಿರುವ ಗೇಲೋಟ್‌ರವರ ಈ ನಿರ್ಧಾರದಿಂದ ಭಾಜಪ ಕೊಂಚ ವಿಚಲಿತಗೊಂಡರೂ, ಕಾಂಗ್ರೆಸ್ ತನ್ನದೇ ನೀತಿಯನ್ನು ಅನುಸರಿಸುತ್ತಿದೆ ಎಂಬ ಗುಂಗಿನಲ್ಲಿ ತೇಲುತ್ತಿದೆ.

ರಾಜಸ್ಥಾನದ ಜಾತಿ ರಾಜಕೀಯ

ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಲೋಟ್‌ರವರ ಮೀಸಲಾತಿ ನಿರ್ಧಾರ ಹಠಾತ್ತನೆ ಕೈಗೊಂಡದ್ದೆಂದು ಮೇಲ್ನೋಟಕ್ಕೆ ಕಂಡುಬಂದರೂ ಈ ನಿರ್ಧಾರದ ಹಿಂದಿನ ರಾಜಕೀಯ ಪಿತೂರಿ ಬಹಳ ಕುತೂಹಲಕಾರಿಯಾಗಿದೆ. ರಾಜಸ್ಥಾನದಲ್ಲಿ ಸುಮಾರು ನಾಲ್ಕು ವರ್ಷಗಳ ಹಿಂದೆ, ರಾಜಕಾರಣಿಗಳು ಹಾಗೂ ಸಮುದಾಯದ ನಾಯಕರನ್ನೊಳಗೊಂಡ ಸಾಮಾಜಿಕ ನ್ಯಾಯ ವೇದಿಕೆ ಅಸ್ತಿತ್ವಕ್ಕೆ ಬಂದಿತ್ತು. ಈ ವೇದಿಕೆಯ ಪ್ರಮುಖ ಬೇಡಿಕೆ ಮೇಲ್ಜಾತಿಯವರಿಗೆ ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ನೀಡುವುದಾಗಿತ್ತು. ಈ ವೇದಿಕೆಯ ಮೀಸಲಾತಿ ಚಳುವಳಿಗೆ ಬಹಳಷ್ಟು ಜನ ಬೆಂಬಲವೂ ದೊರಕಿತ್ತು. ಕಳೆದ ಲೋಕಸಭಾ ಚುನಾವಣೆಗಳ ಸಮಯದಲ್ಲಿ ಈ ವೇದಿಕೆಯ ಸಾರ್ವಜನಿಕ ಸಭೆಗಳಲ್ಲಿ ಅಪಾರ ಜನಸ್ತೋಮ ಕಂಡುಬರುತ್ತಿತ್ತು. ಪಕ್ಷಾತೀತವಾಗಿ ರಾಜಕಾರಣಿಗಳು ಈ ಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿಯೇ ತಮ್ಮ ಎಲ್ಲಾ ಸಮಸ್ಯೆಗಳಿಗೂ ಮೂಲ ಕಾರಣ ಎಂದು ವಾದಿಸುವ ಮೇಲ್ಜಾತಿಯವರೇ ಈ ವೇದಿಕೆಯ ಬೆನ್ನೆಲುಬಾಗಿದ್ದರೂ ಈಗ ಇನ್ನು ಆರು

ತಿಂಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುವುದರಿಂದ, ಕಾಂಗ್ರೆಸ್ ಭಾಜಪಗಳಿಗೆ ಪ್ರತಿಯೊಂದು ಜಾತಿಯ ಬೆಂಬಲ ಅಗತ್ಯವಾಗಿದೆ. ಹಾಗಾಗಿಯೇ ಮೇಲ್ಜಾತಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವುದರ ಬಗ್ಗೆ ಹೆಚ್ಚು ಒಲವು ತೋರಲಾಗುತ್ತಿದೆ. ಈ ಸನ್ನಿವೇಶವನ್ನು ಉಪಯೋಗಿಸಿಕೊಂಡ ಅಶೋಕ ಗೆಲೋಟ್ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದೂ ಕಳೆದ ಮೇ 21ರಂದು ಮೇಲ್ಜಾತಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ. 14ರಷ್ಟು ಮೀಸಲಾತಿ ಪ್ರಕಟಿಸಿದರು. ಈಗ ರಾಜಸ್ಥಾನದಲ್ಲಿ ಒಟ್ಟಾರೆ ಶೇ. 49ರಷ್ಟು ಮೀಸಲಾತಿ ನೀಡಲಾಗಿದೆ. ಪರಿಶಿಷ್ಟ ಜಾತಿ ಶೇ. 16ರಷ್ಟು, ಪರಿಶಿಷ್ಟ ವರ್ಗ 12, ಶೇ. ಇತರ ಹಿಂದುಳಿದ ವರ್ಗ (ಒಬಿಸಿ) 21 ಶೇ. ಈ ಹಿಂದುಳಿದ ವರ್ಗಗಳ ಸಂಖ್ಯೆ ರಾಜಸ್ತಾನದಲ್ಲಿ ಶೇ. 53ರಷ್ಟಿದೆ. 316 ಜಾತಿಗಳ ಪೈಕಿ ಹನ್ನೊಂದು ಉಳಿದಂತೆ ಎಲ್ಲಾ ಜಾತಿಗಳವರನ್ನು ಈಗ ಮೀಸಲಾತಿಯಲ್ಲಿ ಸೇರಿಸಲಾಗಿದೆ.

ಈ ಅಂಕಿ ಅಂಶಗಳಿಂದಾಚೆಗೆ ನೋಡಿದಾಗ ಗ್ರಹಿಸಬಹುದಾದ ಅಂಶವೆಂದರೆ ಸಾಮಾಜಿಕ ನ್ಯಾಯ ವೇದಿಕೆಯ ಕೇವಲ ಈ ಮೀಸಲಾತಿಗಾಗಿ ಆಗ್ರಹಿಸಲಿಲ್ಲ. ಈಗಾಗಲೇ ಮೀಸಲಾತಿ ಪಡೆದವರಿಗೆ ಹೊಸ ಅಭ್ಯರ್ಥಿಗಳಿಂದ ರಕ್ಷಣೆ ನೀಡುವಂತೆಯೂ ಆಗ್ರಹಿಸಿತ್ತು. ಈ ಚಳುವಳಿಯ ಮುಖ್ಯ ಉದ್ದೇಶ ಆರ್ಥಿಕವಾಗಿ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಇತರ ಹಿಂದುಳಿದ ಜಾತಿಗಳಿಗಿಂತಲೂ ಬಲಿಷ್ಠವಾಗಿರುವ ಜಾಟ್ ಸಮುದಾಯಕ್ಕೆ ಮೀಸಲಾತಿ ನೀಡುವುದೇ ಆಗಿತ್ತು. ಅಚ್ಚರಿಯ ಅಂಶವೆಂದರೆ ಜಾಟ್ ಪಂಗಡವು ಒಬಿಸಿ ಪಟ್ಟಿಯಲ್ಲಿ ಸೇರಿದ್ದರಿಂದ ಗುಜ್ಜಾರ್ ಮಾಲಿ, ರಾವತ್ ಪಂಗಡಗಳು ಹೆಚ್ಚು ನಷ್ಟ ಅನುಭವಿಸಿದರಾದರೂ, ಹಿಂದುಳಿದ ವರ್ಗಗಳನ್ನು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಬಿಹಾರ್‌ಗಳಲ್ಲಿ ಮಾಡಿದಂತೆ ಎರಡು ವರ್ಗಗಳನ್ನಾಗಿ ವಿಂಗಡಿಸುವಂತೆ ಒತ್ತಾಯ ಮಾಡಿದ್ದು ಮೇಲ್ಜಾತಿಯೆನಿಸಿಕೊಂಡಿರುವ ರಜಪೂತರು.

ರಜಪೂತರು ಈ ಬೇಡಿಕೆ ಮುಂದಿಡಲು ಹಲವಾರು ಸಾಮಾಜಿಕ ಕಾರಣಗಳನ್ನು ಗುರುತಿಸಬಹುದು. ರಾಜಸ್ತಾನದ ರಾಜಕೀಯದಲ್ಲಿ ರಜಪೂತರಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ಸಮುದಾಯ ಎಂದರೆ ಜಾಟ್ ಸಮುದಾಯವೇ. ಹಾಗಾಗಿ ಜಾಟ್‌ಗಳಿಗೆ ಮೀಸಲಾತಿ ಸಿಗುವುದರಿಂದ ಸಮಾಜದ ಮೇಲೆ, ರಾಜಕೀಯದಲ್ಲಿ ಅವರ ಅಧಿಪತ್ಯ ಹೆಚ್ಚಾಗುತ್ತದೆ ಎಂದು ಗ್ರಹಿಸಿದ ರಜಪೂತರು, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ ನೀಡಿದಾಗ ತಮ್ಮ ಈ ಚಾಣಕ್ಯ ತಂತ್ರವನ್ನು ನಿರೂಪಿಸಿದ್ದರು. ಸಾಮಾಜಿಕ ನ್ಯಾಯ ವೇದಿಕೆಯ ಮುಖ್ಯ ಬೆಂಬಲಿಗರೆಂದರೆ ಕ್ಷತ್ರಿಯ ಮಹಾಸಭಾ, ರಜಪೂತ ರಕ್ಷಣಾ ವೇದಿಕೆ, ಬ್ರಾಹ್ಮಣ ಮಹಾಸಭಾ, ವೈಶ್ಯ ಮಹಾಸಭೆ, ಮೂಲ (ಸೈನಿ) ಮಹಾಸಭಾ ಮುಂತಾದವು ಈ ಸಂಘಟನೆಗಳ ಹಿಂದೆ ಭಾಜಪದ ವಿಜಯರಾಜೇ ಸಿಂಧಿಯಾ ಇದ್ದಿದ್ದು ಒಂದು ವಿಶೇಷವಷ್ಟೆ.

1999ರ ಲೋಕಸಭಾ ಚುನಾವಣೆಗಳ ಸಮಯದಲ್ಲಿ ಜಾಟ್ ಮಹಾಸಭಾ ಮೀಸಲಾತಿಗಾಗಿ ಹೋರಾಟ

ನಡೆಸಿದ್ದಾಗ ಭಾಜಪ ಅವರ ಆಗ್ರಹವನ್ನು ಮನ್ನಿಸಿ ರಾಜಕೀಯ ಲಾಭಗಳಿಸಿತ್ತು. ಈಗ ಕಾಂಗ್ರೆಸ್ ಸರ್ಕಾರ ಇನ್ನೊಂದು ಪಂಗಡದವರಿಗೆ ಮೀಸಲಾತಿ ನೀಡಿ ಪುನಃ ರಾಜಕೀಯ ಮಾಡುತ್ತಿದೆ. ಈ ಮೀಸಲಾತಿಯ ನಾಟಕ ರಾಜಸ್ಥಾನದಲ್ಲಿ ನಡೆದಿದ್ದರೂ ಇತರ ರಾಜ್ಯಗಳಲ್ಲೂ ಇದೇ ರೀತಿಯ ರಾಜಕೀಯ ನಡೆದಿರುವುದನ್ನು ಗಮನಿಸಬಹುದು.

ಮೀಸಲಾತಿ ಮತ್ತು ಸಂವಿಧಾನ

ಸಂವಿಧಾನದ ವಿಧಿ 14ರ ಪ್ರಕಾರ ಕಾನೂನಿನ ದೃಷ್ಟಿಯಲ್ಲಿ ಎಲ್ಲರನ್ನೂ ಸಮಾನರಂತೆ ಕಾಣಲಾಗುತ್ತದೆ. ವಿಧಿ 15ರ ಪ್ರಕಾರ ಧರ್ಮ ಜಾತಿ ಪಂಗಡ ಜನಾಂಗ ಲಿಂಗ ಅಥವಾ ಜನ್ಮಸ್ಥಳವನ್ನು ಆಧರಿಸಿದ ಯಾವುದೇ ರೀತಿಯ ಪಕ್ಷಪಾತ ನಿಷಿದ್ಧವಾಗಿದೆ. ಆದರೂ ವಿಧಿ 15(3)ರನ್ವಯ ಮಹಿಳೆಯರಿಗೆ ಮಕ್ಕಳಿಗೆ ಪ್ರಭುತ್ವವು ವಿಶೇಷ ಕಾಯಿದೆಗಳನ್ನು ಜಾರಿಗೊಳಿಸಲು ಅವಕಾಶವಿದೆ. ವಿಧಿ 16(4)ರ ಪ್ರಕಾರ ಪ್ರಭುತ್ವವು ಪರಿಶಿಷ್ಟ ಜಾತಿ ಪಂಗಡದವರಿಗೆ ಸರ್ಕಾರಿ ನೌಕರಿಯಲ್ಲಿ ಬಡ್ತಿ ನೀಡುವಲ್ಲಿ ಯಾವುದೇ ರೀತಿಯಲ್ಲಿ ಮೀಸಲಾತಿ ನೀಡಬಹುದಾಗಿದೆ. ಪ್ರಾರಂಭಿಕ ಹಂತದಲ್ಲಿ ಸಂವಿಧಾನವು ಮೊದಲ 10 ವರ್ಷಗಳ ಕಾಲ ಮೀಸಲಾತಿ ನೀಡಬಹುದೆಂದು ನಿರ್ದೇಶಿಸಿತ್ತು. ನಂತರ ಈ ನೀತಿಯನ್ನು ಆಗಾಗ ವಿಸ್ತರಿಸಲಾಗುತ್ತಿದೆ.

ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಬಗ್ಗೆ ಸಂವಿಧಾನದಲ್ಲಿದ್ದ ನ್ಯೂನತೆ 1951ರಲ್ಲಿ ನಿರೂಪಿತವಾಗಿತ್ತು. ಅಂದಿನ ಮದ್ರಾಸ್ ಸರ್ಕಾರ ಕೆಲವು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿದಾಗ ಸರ್ವೋಚ್ಚ ನ್ಯಾಯಾಲಯವು ಸರ್ಕಾರದ ಕ್ರಮವನ್ನು ಅಸಿಂಧುವೆಂದು ತಳ್ಳಿ ಹಾಕಿತ್ತು. ಈ ಪ್ರಕರಣವನ್ನು ದಕ್ಷಿಣದ ರಾಜ್ಯಗಳಲ್ಲಿ ವ್ಯಾಪಕವಾದ ಪ್ರತಿಭಟನೆ ವ್ಯಕ್ತವಾಗಿದ್ದ ಹಿನ್ನೆಲೆಯಲ್ಲಿ ಸಂವಿಧಾನದಲ್ಲಿ ತಿದ್ದುಪಡಿ ಮಾಡಿ, ವಿಧಿ 15(4)ನ್ನು ಅನುಷ್ಠಾನಗೊಳಿಸಲಾಯಿತು. ವಿಧಿ 15(4)ರನ್ವಯ "ಈ ವಿಧಿ 15 ಅಥವಾ ವಿಧಿ 29ರ 2ನೆಯ ಅಂಶವು ಸರ್ಕಾರವು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಅಥವಾ ಪರಿಶಿಷ್ಟ ಜಾತಿ ವರ್ಗಗಳಿಗೆ ವಿಶೇಷವಾದ ಮೀಸಲಾತಿ ನೀಡುವುದನ್ನು ಯಾವುದೇ ರೀತಿಯಲ್ಲೂ ನಿರ್ಬಂಧಿಸುವುದಿಲ್ಲ" ಎಂದು ಹೇಳಲಾಗಿದೆ.

80ರ ದಶಕದ ಅಂತ್ಯದವರೆಗೂ ಕೇವಲ ಪರಿಶಿಷ್ಟ ಜಾತಿ ಪಂಗಡಗಳವರು ಮಾತ್ರ ಮೀಸಲಾತಿಯ ಸವಲತ್ತು ಪಡೆಯುತ್ತಿದ್ದರು. 80ರ ದಶಕದ ಅಂತ್ಯದಲ್ಲಿ ಮಂಡಲ್ ಸಮಿತಿಯು ಇತರ ಹಿಂದುಳಿದ ವರ್ಗಗಳಿಗೆ ಶೇ. 27ರಷ್ಟು ಮೀಸಲಾತಿ ನೀಡುವಂತೆ ಶಿಫಾರಸ್ಸು ಮಾಡಿದಾಗ ಈ ವರದಿಯನ್ನು ನ್ಯಾಯಾಲಯದಲ್ಲಿ ವಿರೋಧಿಸಲಾಯಿತು. ಅಂದು ಸರ್ವೋಚ್ಚ ನ್ಯಾಯಾಲಯವು ಎಲ್ಲಾ ವರ್ಗಗಳಿಗೂ ಸೇರಿದಂತೆ ಒಟ್ಟು ಮೀಸಲು ಶೇ. 50ಕ್ಕಿಂತಲೂ ಹೆಚ್ಚಾಗಬಾರದು ಎಂದು ತೀರ್ಪು ನೀಡಿದ್ದೇ ಅಲ್ಲದೆ ಹಿಂದುಳಿದ ವರ್ಗಗಳಲ್ಲಿನ ಮೇಲ್ವರ್ಗದ ಶ್ರೀಮಂತರನ್ನು ಮೀಸಲಾತಿ ನೀತಿಯಿಂದ ಹೊರಗಿಡುವಂತೆ ಆದೇಶಿಸಿತು. ಅದೇ ಅವಧಿಯಲ್ಲಿ ಕೇಂದ್ರ ಸರ್ಕಾರವು ಇತರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ. 10ರಷ್ಟು ಮೀಸಲಾತಿ ನೀಡುವ ತೀರ್ಮಾನವನ್ನು ನ್ಯಾಯಾಲಯವು ಅಸಿಂಧುಗೊಳಿಸಿತ್ತು.

ಆದಾಗ್ಯೂ ಸಂವಿಧಾನದ 46ನೆಯ ವಿಧಿ ನಿರ್ದೇಶಕ ತತ್ವಗಳ ಪ್ರಕಾರ ಪ್ರಭುತ್ವವು ಆರ್ಥಿಕವಾಗಿ ಹಿಂದುಳಿದ ವರ್ಗಗಳ ರಕ್ಷಣೆಗಾಗಿ ಸಾಮಾಜಿಕ ನ್ಯಾಯಕ್ಕಾಗಿ ಯಾವುದೇ ರೀತಿಯ ನೀತಿಯನ್ನು ಅನುಸರಿಸಬಹುದೆಂದು ಹೇಳಲಾಗಿದೆ. ಆದರೆ ಯಾವುದೇ ಸರ್ಕಾರವು ಈ ನಿಟ್ಟಿನಲ್ಲಿ ವಸ್ತುನಿಷ್ಠವಾಗಿ ಯೋಚಿಸಿಯೇ ಇಲ್ಲ. ಕೇವಲ ಮೀಸಲಾತಿ ಒಂದೇ ಪರಿಹಾರವೆಂಬಂತೆ ಸರ್ಕಾರಗಳು ವರ್ತಿಸಿವೆ. 1980ರಲ್ಲಿ ತಮಿಳುನಾಡಿನಲ್ಲಿ ಎಂಜಿಆರ್ ಸರ್ಕಾರವು ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಲು ಯತ್ನಿಸಿದಾಗ ತೀವ್ರ ವಿರೋಧ ಎದುರಿಸಿ ಯೋಜನೆಯನ್ನು ಕೈಬಿಡಬೇಕಾಯಿತು. ಮೀಸಲಾತಿ ನೀತಿಯನ್ನು ಅತಿಯಾಗಿ ವಿಸ್ತರಿಸುವ ಎಲ್ಲಾ ಪ್ರಯತ್ನಗಳನ್ನು ಸರ್ವೋಚ್ಚ ನ್ಯಾಯಾಲಯವು ನಿಷ್ಫಲಗೊಳಿಸಿದ್ದರೂ ಪ್ರತಿಬಾರಿಯೂ ಸಂವಿಧಾನದ ತಿದ್ದುಪಡಿಯ ಮೂಲಕ ಸಾಧಿಸಲಾಗಿದೆ. ಈ ಬಾರಿಯೂ ಅದೇ ರೀತಿ ಸಂವಿಧಾನದ ತಿದ್ದುಪಡಿ ಆದರೂ ಹೆಚ್ಚೇನಿಲ್ಲ ತಮಿಳುನಾಡಿನಲ್ಲಿ ಈಗಾಗಲೇ ನ್ಯಾಯಾಲಯದ ಆದೇಶಕ್ಕೆ ವ್ಯತಿರಿಕ್ತವಾಗಿ ಶೇ. 69ರಷ್ಟು ಮೀಸಲಾತಿ ನೀಡಿದ್ದು ಅದನ್ನು ಸಂವಿಧಾನದ 9ನೆಯ ಪರಿಚ್ಛೇದದಲ್ಲಿ ಸೇರಿಸಲಾಗಿದೆ. ಇತರ ರಾಜ್ಯಗಳೂ ಇದೇ ನೀತಿ ಅನುಸರಿಸಿದರೂ ಹೆಚ್ಚೇನಿಲ್ಲ.

ಇತಿಹಾಸದಲ್ಲಿ ಇಣುಕಿ ನೋಡಿದರೆ, 20ನೆಯ ಶತಮಾನದ ಆರಂಭದಲ್ಲಿಯೇ ಪಶ್ಚಿಮದ ಕೊಲ್ಹಾಪುರ, ದಕ್ಷಿಣ ಮೈಸೂರು ಪ್ರಾಂತ್ಯಗಳಲ್ಲಿ ಹಿಂದುಳಿದ ಶೋಷಿತ ವರ್ಗಗಳಿಗೆ ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ನೀಡಿರುವುದು ಕಂಡುಬರುತ್ತದೆ ನಂತರ ಮದ್ರಾಸ್ ಪ್ರಾಂತ್ಯದಲ್ಲೂ ಜಾರಿಯಲ್ಲಿದ್ದ ಮೀಸಲಾತಿ ನೀತಿ ಪೂನಾ ಒಪ್ಪಂದದ ಮೂಲಕ ಸಂವಿಧಾನದೊಳಗೆ ನುಸುಳಿತೆಂದು ಹೇಳಬಹುದು. ಪರಿಶಿಷ್ಟ ಜಾತಿ ಪಂಗಡಗಳು ಸಾಮಾಜಿಕ ಉನ್ನತಿ, ಆರ್ಥಿಕ ಸ್ಥಿರತೆಯ ದೃಷ್ಟಿಯಿಂದ ಅನುಷ್ಠಾನಗೊಳಿಸಲಾದ ಮೀಸಲಾತಿ ನೀತಿಯ ನಿಜವಾದ ಧ್ಯೇಯೋದ್ದೇಶಗಳು ಕೊಂಚಮಟ್ಟಿಗೆ ಈಡೇರಿದೆ ಯಾದರೂ, ಅರ್ಧ ಶತಮಾನದ ನಂತರವೂ ಸಂವಿಧಾನದ ಕರ್ತೃಗಳ ಮೂಲ ಧ್ಯೇಯ ಪೂರ್ತಿಯಾಗಿ ಕೈಗೂಡಿಲ್ಲ.

ನೆಹರೂರವರ ಆಧುನಿಕ ಭಾರತದ ದೇವಾಲಯಗಳಾದ ಸಾರ್ವಜನಿಕ ಉದ್ದಿಮೆಗಳಲ್ಲಿ ನೌಕರಿಗಳಿಸುವ ಮೂಲಕ ಪರಿಶಿಷ್ಟ ಜಾತಿ ಪಂಗಡಗಳು ಆರ್ಥಿಕವಾಗಿ ಸ್ಥಿರತೆಗಳಿಸಿ ಸಾಮಾಜಿಕವಾಗಿ ಉನ್ನತಿ ಹೊಂದಿದರೂ ಇತರ ಜಾತಿಗಳ ಸರಿಸಮಾನ ಸ್ಥಾನಗಳಿಸಲಾಗಲಿಲ್ಲ. ಇದಕ್ಕೆ ಕಾರಣವೆಂದರೆ ಸಂವಿಧಾನದ ಕರ್ತೃಗಳಿಗಿದ್ದ ಸಾಮಾಜಿಕ ಕಳಕಳಿ ಸಂವೇದನೆ ಬದ್ಧತೆ ನಂತರದ ರಾಜಕೀಯ ನಾಯಕರುಗಳಲ್ಲಿ ಕಂಡುಬರಲಿಲ್ಲ. ದಲಿತರ, ಶೋಷಿತರ ಹಿಂದುಳಿದವರ ಬಗ್ಗೆ ಇರುವ ಕಾಳಜಿಗಿಂತಲೂ ರಾಜಕೀಯ ಅನಿವಾರ್ಯತೆ, ಸಮಯ ಸಾಧಕತೆ, ಒಣ ಪ್ರತಿಷ್ಠೆಗಳು ಮೀಸಲಾತಿ ನೀತಿಯ ರೂವಾರಿಗಳಾದವು. ಇತ್ತೀಚೆಗೆ ರಾಜಸ್ಥಾನದ ಮುಖ್ಯಮಂತ್ರಿ ಗೆಲೋಟ್ ಕೈಗೊಂಡ ನಿರ್ಧಾರ ಒಂದು ನಿದರ್ಶನವಷ್ಟೆ. ಕಾಂಗ್ರೆಸ್ ಭಾಜಪ ನಡುವಿನ ಪೈಪೋಟಿಯಲ್ಲಿ ಗೆಲೋಟ್ ಕಾಂಗ್ರೆಸ್ಸನ್ನು ಗೆಲ್ಲಿಸಿದ್ದಾರೆಂದು ಹೇಳಬಹುದೇ ಹೊರತು, ಕಾಂಗ್ರೆಸ್ ಅಥವಾ ಭಾಜಪ ಶೋಷಿತರ ಪರ ಎಂದು ಹೇಳಲಾಗುವುದಿಲ್ಲ.

ಆದರೆ ಹಲವಾರು ಸಮಾಜ ಶಾಸ್ತ್ರ ತಜ್ಞರೂ ಹೇಳುವಂತೆ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವ ನೀತಿ ಸಮರ್ಥನೀಯವಾಗಲಾರದು. ಜಾತಿ ಆಧಾರಿತ ಮೀಸಲಾತಿಯ ಅನುಷ್ಠಾನದಲ್ಲಿ ನ್ಯೂನತೆಗಳು ಇದ್ದರೂ ಸಹಾ ಶೇ. 95ರಷ್ಟು ಜಾತಿ ಪ್ರಮಾಣ ಪತ್ರಗಳು ನಿಜವಾದ್ದಾಗಿರುತ್ತದೆ. ಒಂದು ವೇಳೆ ಆರ್ಥಿಕತೆಯನ್ನಾಧರಿಸಿ ಮೀಸಲಾತಿ ಜಾರಿಗೆ ಬಂದರೆ ಗ್ರಾಮೀಣ ಪ್ರದೇಶದಲ್ಲಿನ ಶ್ರೀಮಂತರು, ಬಲಿಷ್ಠರು ಎಲ್ಲಾ ಸವಲತ್ತುಗಳನ್ನು ಕಬಳಿಸುವುದರಲ್ಲಿ ಸಂದೇಹವೇ ಇಲ್ಲ. ಆದಾಯ ಪ್ರಮಾಣ ಪತ್ರವನ್ನು ನಮ್ಮ ಭ್ರಷ್ಟ ವ್ಯವಸ್ಥೆಯಲ್ಲಿ ಎಷ್ಟು ಸುಲಭವಾಗಿ ಪಡೆಯಬಹುದೆಂದು ವಿವರಿಸಬೇಕಿಲ್ಲ. ಆದರೆ ಈಗ ಕೇಂದ್ರ ಸರ್ಕಾರವು ಮೇಲ್ಜಾತಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವ ಬಗ್ಗೆ ನೀತಿಯನ್ನು ರೂಪಿಸಲು ಸಮಿತಿಯೊಂದನ್ನು ರಚಿಸುತ್ತಿರುವುದರಿಂದ ಇದು ಇನ್ನೂ ಹಲವು ವರ್ಷಗಳು ವಾದ ವಿವಾದಗಳಲ್ಲೆ ಕಾಲೆಳೆಯುತ್ತವೆ.

ಇಲ್ಲಿ ಗಮನಾರ್ಹ ಅಂಶವೆಂದರೆ ಮೀಸಲಾತಿ ನೀತಿಯು ಸಾಮಾಜಿಕ ನ್ಯಾಯ ಒದಗಿಸುವ ಧ್ಯೇಯ ಹೊಂದಿತೇ ವಿನಃ ಬಡತನವನ್ನು ಹೋಗಲಾಡಿಸುವ ಉದ್ದೇಶ ಹೊಂದಿರಲಿಲ್ಲ. ಹಾಗೆ ಬಡತನ ಹೋಗಲಾಡಿಸುವ ಅನೇಕ ಕಾರ್ಯಕ್ರಮಗಳನ್ನು ಸರ್ಕಾರಗಳು ಹಮ್ಮಿಕೊಂಡಿವೆ. ಈ ದೃಷ್ಟಿಯಿಂದ ನೋಡಿದಾಗ ಆರ್ಥಿಕ ಮೀಸಲಾತಿಯಿಂದ ಇಡೀ ಮೀಸಲಾತಿ ನೀತಿಯನ್ನೇ ಅವಹೇಳನ ಮಾಡಿದಂತಾಗುತ್ತದೆ. ಜಾತ್ಯಾಧಾರಿತ ಮೀಸಲಾತಿಗೆ ಪ್ರತಿರೋಧವಾಗಿ ಆರ್ಥಿಕ ಮೀಸಲಾತಿಯನ್ನು ಮಂಡಿಸಿದರೂ ಒಂದು ವೇಳೆ ಆರ್ಥಿಕ ಮೀಸಲಾತಿ ನೀತಿ ಜಾರಿಗೆ ಬಂದಲ್ಲಿ ಇಡೀ ಮೀಸಲಾತಿ ಪ್ರಕ್ರಿಯೆಯೇ ಹಾಳಾಗುವ ಸಾಧ್ಯತೆಗಳಿವೆ. ಈಗಾಗಲೇ ಸರ್ಕಾರೀ ಉದ್ದಿಮೆಗಳಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ನೇಮಕಾತಿ ಸ್ಥಗಿತಗೊಂಡಿದೆ. ಕೇಂದ್ರ ರಾಜ್ಯ ಸರ್ಕಾರಗಳು ಸರ್ಕಾರಿ ಉದ್ದಿಮೆಗಳಲ್ಲಿ ಬಂಡವಾಳ ಹಿಂತೆಗೆತ ತೀವ್ರಗೊಳಿಸಿವೆ. ಒಂದೆಡೆ ನೇಮಕಾತಿಯೇ ಇಲ್ಲವಾದರೆ, ಇನ್ನೊಂದೆಡೆ ಮೀಸಲಾತಿಯಲ್ಲಿ ಖಾಲಿ ಇರುವ ಹುದ್ದೆಗಳು ಅಪಾರ ಸಂಖ್ಯೆಯಲ್ಲಿವೆ. ಆದಾಗಿ ಈಗಿನ ಪರಿಸ್ಥಿತಿಯಲ್ಲಿ ಸಾರ್ಕಾರಿ ನೌಕರಿಯೇ ನಿಶ್ಯೇಷವಾಗಿರುವಾಗ ಮೀಸಲಾತಿ ಎಷ್ಟರ ಮಟ್ಟಿಗೆ ಪರಿಣಾಮಕಾರಿ ಎಂದು ಯೋಚಿಸಬೇಕಾಗಿದೆ.

ಒಂದೆಡೆ ಸರ್ಕಾರವು ಸಾಕ್ಷರತೆಯನ್ನು ಹೆಚ್ಚಿಸುವುದರಲ್ಲಿ ವಿಫಲವಾಗಿದೆ. ಸಾಕ್ಷರತಾ ಆಂದೋಲನಗಳು ಕೇವಲ ಅಧಿಕಾರ ಶಾಹಿಗಳ ಬೊಕ್ಕಸ ತುಂಬಲು ಸಹಾಯಕಾರಿಯಾಗಿದೆ. ಇಂದು ದೇಶದಲ್ಲಿ ದಲಿತರಿಗೆ ಹಿಂದುಳಿದವರಿಗೆ ಅಲ್ಪಸಂಖ್ಯಾತರಿಗೆ ಕೊರತೆಯಿರುವುದು ಅಕ್ಷರ ಜ್ಞಾನವೇ ಆದರೆ ಸರ್ಕಾರ ಈ ನಿಟ್ಟಿನಲ್ಲಿ ಯಾವುದೇ ರೀತಿಯ ಕಾರ್ಯಕ್ರಮ

ಹಮ್ಮಿಕೊಂಡಿಲ್ಲ. ಇನ್ನು ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸರ್ಕಾರಗಳು ಸಂಪೂರ್ಣ ಸೋತಿವೆ ಎಂದೇ ಹೇಳಬಹುದು. ಇಂತಹ ಪರಿಸ್ಥಿತಿಯಲ್ಲಿ ಮೀಸಲಾತಿ ನೀತಿಯು ಸರ್ಕಾರೀ ಕ್ಷೇತ್ರದಲ್ಲಿಯೇ ಅಷ್ಟಾಗಿ ಯಶಸ್ಸು ಕಂಡಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಪರಿಶಿಷ್ಟ ಜಾತಿಗಳ ಜನಸಂಖ್ಯೆ ಶೇ. 16.5ರಷ್ಟಿದೆ. ಪರಿಶಿಷ್ಟ ಪಂಗಡ ಶೇ. 6ರಷ್ಟಿದೆ ಆದರೂ ಸರ್ಕಾರೀ ಕ್ಷೇತ್ರದಲ್ಲಿ ಮೀಸಲಾತಿಯ ಸಂಖ್ಯೆ ನೋಡಿದರೆ 2000ದ ಅಂಕಿಅಂಶಗಳ ಪ್ರಕಾರ ಎ ವರ್ಗದಲ್ಲಿ ಶೇ. 11.29 ಪ್ರವರ್ಗದಲ್ಲಿ 12.68ರಷ್ಟು ಪರಿಶಿಷ್ಟ ಜಾತಿಯವರಿಗೆ ನೌಕರಿ ನೀಡಲಾಗಿದೆ. ಪರಿಶಿಷ್ಟ ಪಂಗಡದ ಪ್ರತಿನಿಧಿತ್ವ ಇನ್ನೂ ಕಡಿಮೆ ಇದೆ. ಬ್ಯಾಂಕ್ ಇನ್ಸುರೆನ್ಸ್ ಕ್ಷೇತ್ರದಲ್ಲಿ ಇದೇ ವಿದ್ಯಮಾನ ಕಂಡುಬರುತ್ತದೆ. ಬಹುತೇಕ ಮೀಸಲಾತಿ-ಹುದ್ದೆಗಳು ಡಿ ವರ್ಗದಲ್ಲಿ ಕಂಡುಬರುವುದು, ನಮ್ಮ ದೇಶದ ಸಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿದಂತಿದೆ.

ಇಂತಹ ಸನ್ನಿವೇಶದಲ್ಲಿಯೂ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡುವ ಪ್ರಸ್ತಾಪ ಇದೇ ಆಳುವ ವರ್ಗಗಳಿಂದ ರಾಜಕೀಯ, ಪಕ್ಷಗಳಿಂದ ಬರುತ್ತಿರುವುದು ಹಾಸ್ಯಾಸ್ಪದವೆನಿಸುತ್ತದೆ. ಏಕೆಂದರೆ ಮೀಸಲಾತಿ ನೀತಿಯನ್ನು ಸರ್ಕಾರೀ ಕ್ಷೇತ್ರದಲ್ಲಿಯೇ ಸಮರ್ಥವಾಗಿ ಒದಗಿಸಲಾರದವರು, ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡುವುದು ಕನಸಿನ ಮಾತೇ ಸರಿ. ಈ ಪ್ರಸ್ತಾವನೆ ದಲಿತ ಸಂಘಟನೆಗಳಿಂದ ಬಹಳ ವರ್ಷಗಳಿಂದ ಕೇಳಿ ಬರುತ್ತಿರುವುದು ಸ್ವಾಗತಾರ್ಹ. ಇಂದಿಗೂ ಹಲವು ದಲಿತ ಸಂಘಟನೆಗಳು ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಪಡೆಯಲು ತೀವ್ರ ಹೋರಾಟ ನಡೆಸುತ್ತಿವೆ. ಆದರೆ ಸರ್ಕಾರದ ವತಿಯಿಂದ ಈ ನಿಟ್ಟಿನಲ್ಲಿ ಯಾವುದೇ ರಚನಾತ್ಮಕ ಪ್ರಯತ್ನ ನಡೆದಿಲ್ಲ. ಸರ್ಕಾರದಿಂದ ಅನುದಾನ ಪಡೆಯುವ, ಸಬ್ಸಿಡಿ ಪಡೆಯುವ, ಟೆಂಡರ್‌ಗಳಲ್ಲಿ ಭಾಗವಹಿಸುವ, ಖಾಸಗಿ ಉದ್ದಿಮೆಗಳ ಬಗ್ಗೆ ಒಂದು ಸಂಪೂರ್ಣ ಅಧ್ಯಯನ ಮಾಡಿಯೇ ಇಲ್ಲ. ಮೀಸಲಾತಿ ನೀತಿಯನ್ನು ವಿಶಾಲ ತಳಹದಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆಯೂ ಸರ್ಕಾರ ಯೋಚಿಸಿಲ್ಲ. ಸಂವಿಧಾನ ಪರಾಮರ್ಶೆಯ ಸಮಿತಿಯ ವರದಿಯಲ್ಲೂ ಸಹ ಈ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿದೆ. "ಯಾವುದೇ ಉದ್ದಿಮೆಯ ಮೂಲ ಸಂವಿಧಾನದಲ್ಲಿಯೇ ಆ ಉದ್ದಿಮೆ ಖಾಸಗೀಕರಣವಾದ ಮೇಲೂ ಸಹ ಮೀಸಲಾತಿ ಮುಂದುವರಿಯಬೇಕು ಎಂಬ ನಿರ್ಣಯ ಖಡ್ಡಾಯವಾಗಿ ಇರಬೇಕು" ಎಂದು ಈ ವರದಿಯಲ್ಲಿ ಹೇಳಲಾಗಿದೆ.

ಈ ರಚನಾತ್ಮಕ ಸಲಹೆಯ ಬಗ್ಗೆ ಯೋಚಿಸುವ ಬದಲು ಸರ್ಕಾರವು ಮೇಲ್ಜಾತಿಯವರಿಗೆ ಮೀಸಲಾತಿ ನೀಡಲು ಮುಂದಾಗಿರುವುದು ಮುಳುಗುತ್ತಿರುವ ದೋಣಿಯಲ್ಲಿ ಜನರನ್ನು ತುಂಬಿದಂತಾಗಿದೆ. ಮೇಲ್ಜಾತಿಯವರಲ್ಲಿ ಹಿಂದುಳಿದವರು ಅಂದರೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಅವರಿಗೆ ಮೀಸಲಾತಿಯ ಅವಶ್ಯಕತೆ ಇದೆಯೇ, ಎಂಬ ಅಂಶಗಳ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಒಂದು ವೇಳೆ ಈ ವರ್ಗದವರು ಅಲ್ಪಸಂಖ್ಯೆಯಲ್ಲಿದ್ದರೂ ಎಷ್ಟು ಜನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಣಿ ಮಾಡಿಸಿರುತ್ತಾರೆ ಎಂಬ ಪ್ರಶ್ನೆ ಏಳುತ್ತಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಸರ್ಕಾರಿ ನೌಕರಿಯನ್ನು ಸೃಷ್ಟಿಸುವುದೇ ಒಂದು ದೊಡ್ಡ ಸವಾಲಾಗುತ್ತದೆ. ಈ ಸವಾಲಿನ ನಡುವೆಯೂ ನಮ್ಮ ಸಮಾಜದಲ್ಲಿನ ಅಸ್ಪೃಶ್ಯತೆ ಎಂಬ ಅನಿಷ್ಟದ ಬಗ್ಗೆ ತಿಳುವಳಿಕೆ ಮೂಡಿಸುವುದರಲ್ಲಿ ಶಿಕ್ಷಣ ವ್ಯವಸ್ಥೆ ಯಶಸ್ವಿಯಾಗಬೇಕು. ಮೇಲ್ಜಾತಿಯವರೂ ಸಹ ನಮ್ಮ ವ್ಯವಸ್ಥೆಯನ್ನು ಬದಲಿಸುವ ನಿಟ್ಟಿನಲ್ಲಿ ಸಕಾರಾತ್ಮಕವಾಗಿ ಯೋಚಿಸಬೇಕು. ಶತಮಾನಗಳಿಂದ ಜಾರಿಯಲ್ಲಿರುವ ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಿ ಜಾತಿಯ ನೆಪದಲ್ಲಿ ನಿರ್ಮಿತವಾಗಿರುವ ಗೋಡೆಯನ್ನು ತೊಡೆದುಹಾಕಬೇಕು. ಮುಖ್ಯವಾಗಿ ಮೇಲ್ಜಾತಿಯವರಲ್ಲಿನ ಮನೋಭಾವ ಬದಲಾಗಬೇಕಾಗಿದೆ. ಈ ದಿಕ್ಕಿನಲ್ಲಿ ಅಲ್ಪಮಟ್ಟದ ಬದಲಾವಣೆ ಕಂಡುಬಂದರೂ ಅದು ನಗರಗಳಿಗೆ ಮಾತ್ರ ಸೀಮಿತವಾಗಿದ್ದು, ಹಲವಾರು ಸಂದರ್ಭಗಳಲ್ಲಿ ಸಮಯಸಾಧಕ ಸ್ವರೂಪ ಪಡೆಯುತ್ತಿದೆ. ಇನ್ನೊಂದೆಡೆ ದಲಿತರಲ್ಲೂ ಸಹ ಎಲ್ಲಾ ರಾಜ್ಯಗಳಲ್ಲೂ ಎರಡು ಪಂಗಡಗಳು ಪರಸ್ಪರ ಕಚ್ಚಾಡುತ್ತಿರುವುದರ ಹಿನ್ನೆಲೆಯಲ್ಲಿ, ಮೀಸಲಾತಿ ನೀತಿಯ ಬಗ್ಗೆ ಒಂದು ಅಮೂಲಾಗ್ರ ಅಧ್ಯಯನ ಈಗ ಅಗತ್ಯವೆನಿಸಿದೆ. ದಲಿತ ಸಂಘರ್ಷ ಸಮಿತಿಗಳು ಈ ನಿಟ್ಟಿನಲ್ಲಿ ಕಾರ್ಯತತ್ಪರರಾಗುವುದು ಒಳಿತು. ●

ದ್ರಾವಿಡ ಜನಾಂಗದ ಸಾಂಸ್ಕೃತಿಕ ವಾರಸುದಾರರು!

(17ನೇ ಪುಟದಿಂದ)

"ಉಳ್ಳವರ ಕಾನೂನಿನ ನೆಲವಾಗಿದ್ದ ಅಂದಿನ ಭಾರತದಲ್ಲಿ ತಮ್ಮ ಹೋರಾಟ, ಅಸಹನೆ, ಹೊಟ್ಟೆಪಾಡಿಗಾಗಿ-ಅದೇ ಉಳ್ಳವರ ಸರಕುಗಳನ್ನು ಕೊಳ್ಳೆ ಹೊಡೆಯಲು ಶುರುವಿಟ್ಟರು. ಇಷ್ಟಕ್ಕೂ ಅಂದು ಅವರು ಕದ್ದಿರಬಹುದಾದ ವಸ್ತುಗಳೆಂದರೆ-ಅಗತ್ಯವಿದ್ದಷ್ಟು ಜೋಳದ ತೆನೆ, ಕಾಯಿ-ಕಸರು, ಕೋಳಿಗಳನ್ನು, ಪಟ್ಟಭದ್ರರ ಕಣ್ಣಲ್ಲಿದೇ ದೊಡ್ಡ ಅಪರಾಧವಾಯಿತು. Criminal Tribe ಎಂಬ ಹಣೆಪಟ್ಟೆಯೂ ಬಿತ್ತು. ವ್ಯವಸ್ಥೆಯ ಕ್ರೌರ್ಯದ ಫಲವಾಗಿ ಬಂದ ಡಕಾಯಿತರೆಂಬ ಹಣೆಪಟ್ಟಿಯನ್ನು ಕಳಚಲು ಕೊರಚ ಜನಾಂಗ ಇಂದಿಗೂ ಪರದಾಡುತ್ತಿದೆ" ಎಂದು ನಾಟಕ ಅಕಾಡೆಮಿಯ ಸದಸ್ಯರಾಗಿರುವ H.R. ಸ್ವಾಮಿಯವರು ಜುಲೈ 4ರ 'ಅಗ್ನಿ' ಪತ್ರಿಕೆಗೆ ಬರೆದ ಲೇಖನದಲ್ಲಿ ವಿವರಿಸಿದ್ದಾರೆ. ಕೊರಚ ಜನಾಂಗದ ಹೆಮ್ಮೆಯ ಮುಕುಟದ ಮಣೆಯಾಗಿರುವ ಇವರು ತಮ್ಮ ಜನಾಂಗದ ಬಗ್ಗೆ ಸಾಂಸ್ಕೃತಿಕ ಅಧ್ಯಯನ ನಡೆಸುತ್ತಿದ್ದಾರೆ.

ಕೊರಚರ ತಲೆಗೆ Criminal Tribal ಎಂಬ ಕಿರೀಟ ಜಡಿದಿರುವುದರಲ್ಲಿ, ಗೋಡ್ಸೆಯ ಸಂತಾನದವರಿಂದ ಹಿಡಿದು ಆಂಗ್ಲರ ದಬ್ಬಾಳಿಕೆಯವರೆಗೆ, ಅಲ್ಲಿಂದ ಜಾತಿವಾದಿ-ಭೂಮಾಲೀಕರ ಅಟ್ಟಹಾಸದವರೆಗೆ, ಒಂದು ದೊಡ್ಡ ಶೋಷಣೆಯ ಸರಪಳಿಯೇ ಇದೆ. ಈ ಸರಪಳಿಯನ್ನು ತುಂಡರಿಸಲು ಕೊರಚರು ಸತತವಾದ ಸ್ವಾತಂತ್ರ್ಯ ಸಂಗ್ರಾಮವನ್ನೇ ನಡೆಸಿದ್ದಾರೆ. ಸಮಸ್ತ ಶೋಷಿತರ ಬಂಡಾಯದ ಧ್ವನಿಯಾಗಿ 1970ರ ದಶಕದಲ್ಲಿ ನಾಡಿನಾದ್ಯಂತ ದಲಿತ ಚಳುವಳಿ ಸಿಡಿದೆದ್ದಾಗ ಕೊರಚ ಜನಾಂಗವೂ, ಆ ಹೋರಾಟದ ಹಾದಿಯಲ್ಲಿ ಒಂದಾದ ಐತಿಹಾಸಿಕ ನಿದರ್ಶನವಿದೆ. ಕರ್ನಾಟಕದ ದಲಿತ ಸಂಘರ್ಷ ಸಮಿತಿ, ಆಂಧ್ರದ ದಲಿತ ಮಹಾಸಭಾ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಕಟ್ಟುವಲ್ಲಿ ಕೊರಚ ನಾಯಕರ ತಾಯ್ತನದ ಮೊಲೆ ಹಾಲೂ ಸೇರಿದೆ.

ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಧಾರ್ಮಿಕ ಬದಲಾವಣೆಯನ್ನು ಅನುಸರಿಸಿದ ಹೊಲೆಮಾದಿಗರೊಂದಿಗೆ ಕೊರಚರೂ ಹೆಜ್ಜೆ ಹಾಕಿದ್ದುಂಟು. ಮಹಾರಾಷ್ಟ್ರದಲ್ಲಿ ಬುದ್ಧನೆಡೆಗೆ, ಆಂಧ್ರದಲ್ಲಿ ಕ್ರಿಸ್ತನೆಡೆಗೆ ನಡೆದುಹೋಗಿರುವ ಕೊರಚರ ಸಂಖ್ಯೆಯೇನೂ ಕಡಿಮೆಯಿಲ್ಲ. ಕರ್ನಾಟಕದ ರಾಯಚೂರು ಜಿಲ್ಲೆಯ ಮರಿಮ್ಮನಹಳ್ಳಿ ಸಂಪೂರ್ಣ ಕೊರಚ ಕ್ರೈಸ್ತರೇ ಇರುವ ಹಳ್ಳಿ. ಇಲ್ಲಿ ಜರ್ಮನ್ ಮಾದರಿಯ ವಿಶಿಷ್ಟ ಶೈಲಿಯ ಛಾವಣಿಯಿಲ್ಲದ ಓಪನ್ ಚರ್ಚ್ ಇದೆ. ಅದು ಕಥೋಲಿಕ ಚರ್ಚ್. ಚರ್ಚ್‌ನವರು ನಡೆಸುವ ಪ್ರಸಿದ್ಧ ಸ್ಕೂಲ್ ಮತ್ತು ಹಾಸ್ಟೆಲ್ ಇದೆ. ಕೊರಚರು ಕ್ರೈಸ್ತರಾಗುವುದಕ್ಕಿಂತ ಮುಂಚೆ ಈ ಹಳ್ಳಿಯ ಹೆಸರು -ಯರದಾಳ!

ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿ ತಾಯ್ತನದ ಸ್ಥಾನದಲ್ಲಿ ನಿಂತಿರುವ ಕೊರಚ ಸಮಾಜ ಇಂದು ಕರ್ನಾಟಕದ ಭೂಪಟದಲ್ಲಿ ಅಕ್ಷರಶಃ ಕಳೆದುಹೋಗಿದೆ. ಪರಿಶಿಷ್ಟ ಜಾತಿಯ 101 ಜಾತಿಗಳಲ್ಲಿ ಒಂದಾಗಿರುವ ಕೊರಚ ಜನಾಂಗವನ್ನು ಶೈಕ್ಷಣಿಕ, ಔದ್ಯೋಗಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ದುರ್ಬೀನು ಹಾಕಿಕೊಂಡು ಹುಡುಕಬೇಕಾಗಿದೆ. ಅಕ್ಷರಲೋಕದಿಂದ ದೂರವಿರುವ ಕೊರಚರು ರಾಜಕೀಯವಾಗಿ ಸೋತು ಸುಣ್ಣವಾಗಿದ್ದಾರೆ. ಹಾಲಿ ವಿಧಾನಸಭೆ-ವಿಧಾನಪರಿಷತ್‌ಗಳಲ್ಲಿ ಜನಾಂಗದ ಸಮಸ್ಯೆಗಳ ಬಗೆಗೆ ದನಿ ಎತ್ತಲು ಒಬ್ಬ ಪ್ರತಿನಿಧಿಯೂ ಇಲ್ಲ. ಕಳೆದ ಜನತಾದಳದ ಆಳ್ವಿಕೆಯಲ್ಲಿ ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಮೀಸಲು ಕ್ಷೇತ್ರದಿಂದ ಆರಿಸಿಬಂದಿದ್ದ ಚಂದ್ರಣ್ಣನವರು, ಕೊರಚ ಜನಾಂಗವನ್ನು ಪ್ರತಿನಿಧಿಸಿದ್ದರು.

ಕೈಯಲ್ಲಿ ಇಷ್ಟೊಂದು ವಿಭಿನ್ನ ಕಸುಬುಗಳಿದ್ದರೂ, ಕೊರಚ ಜನಾಂಗ ಆರ್ಥಿಕವಾಗಿ ದರಿದ್ರ ಸ್ಥಿತಿಯಲ್ಲಿದೆ. ಬಿದಿರಿನ ಜಾಗಕ್ಕೆ ಪ್ಲಾಸ್ಟಿಕ್ ಬಂದಿದೆ. ಜಾಗತೀಕರಣದ ರಭಸಕ್ಕೆ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆ ಇಲ್ಲವಾಗಿದೆ. ಬಿದಿರಿನ ವಸ್ತುಗಳ ಬೆಲೆಗಿಂತ ಕಚ್ಚಾ ಬಿದಿರು ದುಬಾರಿಯಾಗಿದೆ. ಇದರಿಂದಾಗಿ ಬಿದಿರು ಸಂಬಂಧಿತ ದಂಧೆ ಹಳ್ಳ ಹಿಡಿದಿದೆ. ಸೌದೆ ಬದಲು ಗ್ಯಾಸ್ ಹಳ್ಳಿಗಳಿಗೆ ಕಾಲಿಟ್ಟಾಗಿದೆ. ರೆಡಿಮೇಡ್ ಹಗ್ಗ ಅಗ್ಗವಾಗುತ್ತಿವೆ. ಕೃಷಿ ಚಟುವಟಿಕೆಗಳಲ್ಲಿ ಎತ್ತಿನ ಸ್ಥಾನವನ್ನು ಟ್ರ್ಯಾಕ್ಟರ್‌ಗಳು ಅಲಂಕರಿಸಿವೆ. ಹೀಗೆ, ಜಾಗತೀಕರಣ, ಯಾಂತ್ರೀಕರಣ ಮತ್ತು ಮುಕ್ತ ಮಾರುಕಟ್ಟೆಯ ಮಾರಿ ಕೊರಚರ ಕರುಳನ್ನೇ ಕಿವುಚಿಹಾಕುತ್ತಿದೆ. ಇವರ ಶ್ರಮ ಮತ್ತು ಕುಶಲತೆಗೆ ಸರ್ಕಾರದ ಆಸರೆ ಸಿಗುತ್ತಿಲ್ಲ. ಉದ್ಯೋಗವನ್ನರಸಿ ಕರುಳಿನ ಚೀಲ ತುಂಬಿಸಲು ಅನೇಕ ಜನ ಆಂಧ್ರ, ಮಹಾರಾಷ್ಟ್ರ, ಕೇರಳ, ಗೋವ ಇತ್ಯಾದಿ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಭೂಹೀನರಾಗಿರುವ ಕೊರಚರಿಗೆ ಸರ್ಕಾರ ಭೂಮಿಯನ್ನೇನಾದರೂ ಕೊಟ್ಟರೆ, ಈ ವಲಸೆಯ ಪ್ರಮಾಣವನ್ನು ತಗ್ಗಿಸಬಹುದಿತ್ತು. ಕೊರಚರ ಬಗೆಗಿನ ಸರ್ಕಾರದ ತಾತ್ಸಾರದ ಧೋರಣೆ ಮತ್ತು ಈ ಜನಾಂಗದಲ್ಲಿನ ರಾಜಕೀಯ ಮತ್ತು ಸಂಘಟನಾತ್ಮಕ ನಾಯಕತ್ವದ ಕೊರತೆ ಕೊರಚರನ್ನು ಮತ್ತಷ್ಟು ಪ್ರಪಾತಕ್ಕೆ ತಳ್ಳಲು ಪೈಪೋಟಿ ನಡೆಸಿವೆ.

ಈ ಜನರ ಆರ್ಥಿಕ ಸ್ಥಿತಿ ಎಷ್ಟೊಂದು ಬಿಗಡಾಯಿಸಿದೆ ಎಂದರೆ 'ಚೌಲಿ' ಮತ್ತು hair pin ಮಾರಿ ತುತ್ತಿನ ಚೀಲ ತುಂಬಿಸುವಷ್ಟು! (ಮಹಿಳೆಯರು ತಲೆ ಬಾಚಿಕೊಳ್ಳುವಾಗ ಉದುರಿದ ಕೂದಲುಗಳನ್ನು ಸಂಗ್ರಹಿಸಿ ಚೌಲಿಯನ್ನು ಮಾಡುತ್ತಾರೆ. ಸಣ್ಣ, ಮೋಟು ಕೂದಲಿರುವ 40ರ ಪ್ರಾಯಮೀರಿದ ಮಹಿಳೆಯರು ಈ ಚೌಲಿಯನ್ನು ತಮ್ಮ ಕೂದಲಿನಟ್ಟುಕೊಂಡು ತುರುಬು ಕಟ್ಟಿಕೊಳ್ಳುತ್ತಾರೆ) ಚೌಲಿ ಕೂದಲನ್ನು, ಉತ್ತರ ಕರ್ನಾಟಕದ ಕೆಲವೆಡೆ ಚೌರಿಕೂದಲು ಎನ್ನಲಾಗುತ್ತದೆ.

ಈ ದೇಶದ ಮೂಲ ನಿವಾಸಿ ಬುಡಕಟ್ಟು ಗಳಲ್ಲೊಂದಾದ, ದ್ರಾವಿಡ ಫೋರ್ಸ್ ಇರುವ ಕೊರಚ ಜನಾಂಗಕ್ಕೆ ಸರಿಯಾದ ಉತ್ಪಾದನಾ ಚಟುವಟಿಕೆಗಳು ಕೈಗೆಟುಕದೆ, ಸಂಪನ್ಮೂಲಗಳಲ್ಲಿ ಪಾಲುಸಿಕ್ಕದೆ ಸಮಾಜ ಮತ್ತು ಸರ್ಕಾರದ ತಿರಸ್ಕಾರದಿಂದ, ಇಡೀ ಸಮುದಾಯವೇ ಬೆತ್ತಲಾಗಿ ನಿಂತಿದೆ. ಈ ಹಿಂದೆ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕೊರಚ ಸಮುದಾಯವನ್ನು ಶೋಷಿತರೆಂದು ಪರಿಗಣಿಸಿ ಮೈದಡವಿದ್ದರು. ಆದರೆ, ಚುನಾವಣೆಯ ಮೂಲಕ ಗೆದ್ದು ಬಂದ ಸರ್ಕಾರದ ಪ್ರತಿನಿಧಿಗಳು, ಇವರನ್ನು ಕೇವಲ ಓಟುಬ್ಯಾಂಕ್‌ಗಳನ್ನಾಗಿ ಜೋಪಾನವಾಗಿ ಕಾಯ್ದುಕೊಂಡು ಬರುತ್ತಿದ್ದಾರೆ.

ರಾಜಧಾನಿ ಬೆಂಗಳೂರಿನ ಶಿವಾಜಿನಗರ, ಪಾರ್ವತೀಪುರ, ಲಗ್ಗೆರೆಯಿಂದ ಹಿಡಿದು ಕರ್ನಾಟಕದಾದ್ಯಂತ 28 ಲಕ್ಷಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿರುವ ಈ ಜನ ಆಧುನಿಕ ಗೋಡ್ಸೆ 'ರಬೆ'ಯಂತಹ ಜಾತಿವಾದಿಗಳ ದೌರ್ಜನ್ಯಕ್ಕೆ ಸಿಕ್ಕು, ಮಾನಸಿಕವಾಗಿ ಸೋತು ಜರ್ಝರಿತವಾಗಿರುವ ಕೊರಮ! ಕೊರಚ ಜನಾಂಗ, ಒಂದು ಸಾಮಾಜಿಕ ಹಾಗೂ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲು ಸೂಕ್ತ ಸನ್ನಿವೇಶ ಸೃಷ್ಟಿಯಾಗಿದೆ. ಈ ದಿಸೆಯಲ್ಲಿ ಈಗಾಗಲೇ ರಾಜ್ಯಾದ್ಯಂತ ಗುರುತು ಹಾಕುತ್ತಿರುವ 'ಅಖಿಲ ಕರ್ನಾಟಕ ಕೊರಮರ ಸಂಘ' ಪ್ರಗತಿಪರ ಸಂಘಟನೆಗಳ ಬೆಂಬಲವನ್ನು ಕ್ರೋಢೀಕರಿಸಿ, ಸ್ವಾಭಿಮಾನ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ರಾಜಿರಹಿತ ಸಮರಸಾರಿದೆ. ಈ ಸಮರದ ರಣಕಹಳೆಗೆ ಎಲ್ಲರೂ ಧ್ವನಿಗೂಡಿಸಿ, ಜೊತೆಯಾಗಿ ನಡೆಯೋಣ. ದಂಗೆ ಎದ್ದರೆ ಜಯ ಕೊರಚರದೇ! ಈ ದೇಶದ ಮೂಲನಿವಾಸಿಗಳ ಸಾಂಸ್ಕೃತಿಕ ವಾರಸುದಾರರದೇ! ●

ಮತಾಂತರ ಅನಿವಾರ್ಯ, ಅದೇ ಪರಿಹಾರವಲ್ಲ



○ ಡಾ|| ಜಿ. ಎಸ್. ಶಿವರುದ್ರಪ್ಪ

ಖ್ಯಾತ ಕವಿಗಳು, ಚಿಂತಕರು

ಪುರೋಹಿತಶಾಹಿಗಳ ಧಾರ್ಮಿಕ ಕಂದಾಚಾರಗಳು ಮತ್ತು ಪಟ್ಟಭದ್ರರ ಸಾಮಾಜಿಕ-ಆರ್ಥಿಕ ಅಸಮಾನತೆಗಳ ಸಂಕೋಲೆಗಳಿಗೆ ಸಿಕ್ಕು, ಶತಮಾನಗಳಿಂದಲೂ ಶೋಷಣೆಗೆ ಒಳಗಾಗಿ ನಲುಗುತ್ತಿದ್ದ ದಲಿತರು, ಅಂಬೇಡ್ಕರ್‌ರವರ ಹೋರಾಟ-ತ್ಯಾಗ ಮತ್ತು ಸಂವಿಧಾನಬದ್ಧ ಹಕ್ಕು-ಅವಕಾಶಗಳಿಂದಾಗಿ ಒಂದಿಷ್ಟು ಸ್ಥಾನ-ಮಾನಗಳನ್ನು ಪಡೆಯುವಂತಾಗಿದ್ದರೂ, ಇದರಿಂದ ಇಡೀ ದಲಿತ ಸಮುದಾಯದ ಪ್ರಗತಿಯಾಗಲೀ, ಬಾಬಾ ಸಾಹೇಬರ ಕನಸು ಹಾಗೂ ಸಂವಿಧಾನದ ಆಶಯವಾಗಲೀ ಈಡೇರಿದಂತಾಗಿಲ್ಲದಿರುವುದು ಇತಿಹಾಸದ ಅಣಕವೇ ಸರಿ.

ಒಂದು ಕಡೆ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ದಲಿತರ ಬಗ್ಗೆ ಬರೀ ಭರವಸೆಗಳನ್ನು ನೀಡುತ್ತಾ, ಸಿಗುತ್ತಿದ್ದ ಅಷ್ಟಿಷ್ಟು ಅವಕಾಶಗಳೂ ಕೈಗೆಟುಕದಂತೆ ನೋಡಿಕೊಳ್ಳುತ್ತಾ, ತಮ್ಮ ಕುತಂತ್ರದಿಂದ ದಲಿತರ ಒಗ್ಗಟ್ಟಿಗೂ ಕಲ್ಲು ಹಾಕುತ್ತಿದ್ದರೆ, ಮತ್ತೊಂದು ಕಡೆ ಕೇವಲ ಕ್ಷುಲ್ಲಕ ಕಾರಣದಿಂದ ಬಲಿಷ್ಠರ ಕೈಗೊಂಬೆಗಳಾಗಿರುವ ದಲಿತ ಸಮುದಾಯದಲ್ಲೇ ಪರಸ್ಪರ ನಂಬಿಕೆ, ಒಗ್ಗಟ್ಟು ಮತ್ತು ಪ್ರಗತಿಯ ಆಶಯಗಳಿಗೆ ದಕ್ಕೆಯಾಗುವ ಪ್ರಸಂಗಗಳು ಹೆಚ್ಚುತ್ತಿರುವುದು ವಿಷಾದನೀಯ.

ಈ ಎಲ್ಲಾ ಒತ್ತಡಗಳ ಮಧ್ಯೆಯು ದಲಿತರು-ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಹೊಸ ಆಲೋಚನೆಗಳತ್ತ ಕೊಂಡೊಯ್ದು ಸಂಕಷ್ಟದಲ್ಲಿರುವ ಈ ವರ್ಗಗಳನ್ನು ಉತ್ತಮ ಬದುಕು, ಚಿಂತನೆ, ಸಂಘಟನೆ ಹಾಗೂ ಅಭಿವೃದ್ಧಿಯತ್ತ ಯೋಚಿಸುವಂತೆ ಮಾಡುವ ಉದ್ದೇಶ ಹೊತ್ತಿರುವ "ಸಂವಾದ"ವು ಸಮಾಜದ ಮುಖ್ಯವಾಹಿನಿಯಲ್ಲಿರುವ ಚಿಂತಕರಿಗೆ ಕೆಲವು ಪ್ರಶ್ನೆಗಳನ್ನುಕೇಳಿತು. ಕೆಲವು ಸಂಚಿಕೆಗಳಲ್ಲಿ ಈ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ಪ್ರಕಟಿಸುವ ಮೂಲಕ ಅರ್ಥಪೂರ್ಣ ಚರ್ಚೆಗೆ ಸಂವಾದ ವೇದಿಕೆಯಾಗಲಿದೆ. ಓದುಗರೂ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

1) ಅಂಬೇಡ್ಕರ್ ವಾದದ ಪ್ರಸ್ತುತತೆ ಬಗ್ಗೆ ನಿಮ್ಮ ಅಭಿಪ್ರಾಯವೇನು ಹಾಗೂ ಅಂಬೇಡ್ಕರ್ ವಾದದಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯವೆ?

2) ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲವೇಕೆ? ದಲಿತರ ರಾಜಕೀಯ ಗೊತ್ತುಗುರಿ ಹೇಗಿರಬೇಕು? ಬಿಎಸ್‌ಪಿ ದಲಿತರ ಹಿತ ಕಾಯಬಲ್ಲುದೆ?

3) ಧಾರ್ಮಿಕವಾಗಿ ದಲಿತರ ಆಯ್ಕೆ ಏನು? ದಲಿತರು ಹಿಂದೂ ಸಮಾಜದೊಳಗೇ ಇದ್ದು ಗೌರವಯುತ ಅಸ್ತಿತ್ವ ಪಡೆಯಲು ಸಾಧ್ಯವೆ? ಅಥವಾ ಮತಾಂತರ ದಲಿತರ ಸಮಸ್ಯೆಗೆ ಪರಿಹಾರವೇ?

4) ಮೀಸಲಾತಿಯಿಂದ ದಲಿತರಲ್ಲಿ ಸ್ಪರ್ಧಾತ್ಮಕ ಮನೋಭಾವ ಕಡಿಮೆಯಾಗುತ್ತಿದೆಯೆ? ದಲಿತರ ಪ್ರಗತಿಗೆ ಮೀಸಲಾತಿಯೇ ಪರ್ಯಾಯವೇ? (18%ನೊಳಗೇ ಸಿಕ್ಕಿಕೊಂಡು 82% ಅವಕಾಶಗಳಿಂದ ವಂಚಿತರಾಗುತ್ತಿಲ್ಲವೇ?)

5) ಜಾಗತೀಕರಣದಿಂದ ದಲಿತರ ಬದುಕು ಬದಲಾದೀತೆ? ಸಮಾಜದ ಮುಖ್ಯವಾಹಿನಿಯಲ್ಲಿ ದಲಿತರು ತಮ್ಮ ಗೌರವಯುತ ಪಾಲು ಪಡೆಯಲು ಏನು ಮಾಡಬೇಕು?

(ಈ ಬಗೆಗಿನ ಚರ್ಚೆಯನ್ನು ಈ ಸಂಚಿಕೆಯೊಂದಿಗೆ ಮುಕ್ತಾಯಗೊಳಿಸುತ್ತಿದ್ದೇವೆ. — ಸಂಪಾದಕ)

1) ಈ ದೇಶದ ದಲಿತರಿಗೆ ಸಮಾನವಾದ ಅಧಿಕಾರ ಮತ್ತು ಅವಕಾಶಗಳು ಬದುಕಿನ ಎಲ್ಲಾ ಕ್ಷೇತ್ರದಲ್ಲೂ ಲಭಿಸಬೇಕು ಮತ್ತು ದಲಿತರಲ್ಲಿ ಒಂದು ಆತ್ಮ ಪ್ರತ್ಯಯವನ್ನು ಪ್ರತಿಭಟನೆಯ ಮನೋ ಧರ್ಮವನ್ನೂ ಹುಟ್ಟಿಸುವುದರ ಜೊತೆಗೆ ದಲಿತೇತರ ಮೇಲ್ವರ್ಗದವರಲ್ಲಿ ಒಂದು ಬಗೆಯ ಪಾಪ ಪ್ರಜ್ಞೆ ಮತ್ತು ಆತ್ಮಾವಲೋಕನದ ಮನೋ ಧರ್ಮವನ್ನು ಮೂಡಿಸಬೇಕು ಎನ್ನುವುದು ಅಂಬೇಡ್ಕರ್ ವಾದದ ಸಾರಾಂಶ ಎಂದು ನಾನು ತಿಳಿದಿದ್ದೇನೆ.

ಸ್ವತಂತ್ರ ಭಾರತದ ಸಂವಿಧಾನವನ್ನು ರೂಪಿಸಿದ ಅಂಬೇಡ್ಕರ್‌ರವರು ಯಾವ ಪ್ರಜಾಪ್ರಭುತ್ವವಾದ ನಿಲುವುಗಳನ್ನು ಪ್ರತಿಪಾದಿಸುತ್ತಾರೋ ಅವೆಲ್ಲ ಕಾರ್ಯಗತವಾಗಬೇಕಾದರೆ ಅಂಬೇಡ್ಕರ್‌ವಾದ ಈ ಹೊತ್ತು ಹೆಚ್ಚು ಪ್ರಸ್ತುತವಾಗಿದೆ ಎಂದು ನನಗೆ ತೋರುತ್ತದೆ. ಭಾರತದ ಯಾವುದೇ ಪ್ರಜ್ಞಾವಂತರು ಗಾಂಧೀ ಅಂಬೇಡ್ಕರ್ ಲೋಹಿಯ ವಿಚಾರ ಸಾರಗಳಿಂದ ತಮ್ಮ ವೈಚಾರಿಕತೆಯನ್ನು ಬೆಳೆಸಿಕೊಳ್ಳದೇ ಇದ್ದರೆ ಅವರು ಅಪ್ರಸ್ತುತರಾಗುತ್ತಾರೆ ಎಂದೇ ನನ್ನ ತಿಳಿವಳಿಕೆ.

ಈ ಶತಮಾನದ ವೈಚಾರಿಕತೆಯನ್ನು ರೂಪಿಸಿದವರು ಗಾಂಧೀ. ಅಂಬೇಡ್ಕರ್ ಮತ್ತು ಲೋಹಿಯ ಇವರಷ್ಟೆ ಅಲ್ಲದೆ ಇವರಿಗೆ ಹಿನ್ನೆಲೆಯಾದ 19ನೇ ಶತಮಾನದ ಭಾರತೀಯ ಸಂತರ ವಿಚಾರಧಾರೆಯು ಬಹಳ ಮುಖ್ಯವಾದದ್ದು, ಯಾಕೆಂದರೆ ಈ ಎಲ್ಲಾ ಸಂತರು ಒಂದು ರೀತಿಯಲ್ಲಿ ಸಮಾನತೆಯ ಹಾಗೂ ದಲಿತರ ಏಳಿಗೆಯ ಪರವಾಗಿ ಮಾತನಾಡಿದವರೇ. ಈ ದೃಷ್ಟಿಯಿಂದ ಅಂಬೇಡ್ಕರ್‌ವಾದ ಒಂದೇ ದಲಿತರ ವಿಮೋಚನೆಗೆ ದಾರಿಯೆಂದು ನಾನು ತಿಳಿದಿಲ್ಲ.

2) ಒಂದೇ ಸಮುದಾಯವಾಗಿ ಯೋಚನೆ ಮಾಡುವ ರೀತಿಯೇ ಸರಿಯಾದುದಲ್ಲ ಎಂದೇ ನನ್ನ ತಿಳಿವಳಿಕೆ. ಒಂದೇ ಸಮುದಾಯವಾಗಿ ಹೋರಾಡುವುದನ್ನು ನಾನು ಒಪ್ಪುತ್ತೇನೆ. ಒಂದೇ ಸಮುದಾಯವಾಗಿ ಯೋಚನೆ ಮಾಡುವುದೆಂದರೆ ವ್ಯಕ್ತಿ ವಿಶಿಷ್ಟವಾಗಿ ಆಲೋಚನೆ ಮಾಡುವ ಕ್ರಮಕ್ಕೆ ತಿಲಾಂಜಲಿ ನೀಡಿದಂತೆ. ಪ್ರತಿಯೊಬ್ಬ ವ್ಯಕ್ತಿ ವಿಶಿಷ್ಟವಾಗಿ ಸಮುದಾಯದ ಸಮಸ್ಯೆಗಳನ್ನು ಕುರಿತು ಯೋಚಿಸುವುದು ಒಳ್ಳೆಯದು, ಆದರೆ ಯಾರು ಸಮುದಾಯವನ್ನು ಮುನ್ನಡೆಸುವ ನಾಯಕತ್ವವನ್ನು ವಹಿಸಿಕೊಳ್ಳುತ್ತಾರೋ ಅವರಿಗೆ ವೈಚಾರಿಕವಾಗಿ ಹೆಚ್ಚು ಜವಾಬ್ದಾರಿಗಳಿರುತ್ತವೆ. ಒಂದು ಸಮುದಾಯವನ್ನು ವೈಚಾರಿಕವಾಗಿ ಬೆಳೆಸುವ ಜವಾಬ್ದಾರಿಯು ಇಂತಹ ನಾಯಕರಿಗೆ ಇರುತ್ತದೆ. ಕಳೆದ ಶತಮಾನದಲ್ಲಿ ದಲಿತ ಸಮುದಾಯದ ಇಂತಹ ನೇತಾರರಾದವರು ಅಂಬೇಡ್ಕರ್‌ರವರು ಎನ್ನುವುದನ್ನು ಗಮನಿಸಬೇಕು.

ಶತಮಾನಗಳಿಂದ ತಮಗೆ ವಂಚಿತವಾದ ಸವಲತ್ತುಗಳನ್ನು ಅವಕಾಶಗಳನ್ನು ಮತ್ತು ಅಧಿಕಾರಗಳನ್ನು ಪಡೆದುಕೊಳ್ಳುವುದೇ ದಲಿತರ ರಾಜಕೀಯ ಉದ್ದೇಶವೂ ಆಗಬೇಕು ಎನ್ನುವುದು ನನ್ನ ತಿಳಿವಳಿಕೆ. ಈ ದೃಷ್ಟಿಯಿಂದ ಮೀಸಲಾತಿಯ ಸೌಲಭ್ಯಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಅಗತ್ಯ.

3) ದಲಿತರು ಹಿಂದೂ ಧರ್ಮದ ಕನಿಷ್ಠ ವರ್ಗವಾದ ಪಂಚಮ ಅಥವಾ ಅನಾಮಿಕ ವರ್ಗಕ್ಕೆ ಸೇರಿದವರಾದರೂ ಅವರಿಗೆ ತಮ್ಮದೇ ಆದ ಒಂದು ಇತಿಹಾಸ, ಚರಿತ್ರೆ, ಪುರಾಣ ಇತ್ಯಾದಿಗಳು ಅವರ ಧಾರ್ಮಿಕ ನಿಲುವನ್ನು ರೂಪಿಸಿದಂತೆ ತೋರುತ್ತದೆ. ಇದನ್ನು ದಲಿತ ಧರ್ಮವೆಂದು ಮತ್ತು ದಲಿತರು ಇದರಲ್ಲೇ ಇರಬೇಕೆಂದು ನಾನು ಹೇಳುತ್ತಿಲ್ಲ. ಅಂಬೇಡ್ಕರ್‌ರವರು ಯಾವ ಹಿಂದೂ ಧರ್ಮ

(25ನೇ ಪುಟಕ್ಕೆ)

ಗೌರವಯುತ ಅಸ್ತಿತ್ವಕ್ಕಾಗಿ ಒಗ್ಗೂಡಬೇಕು



○ ಹೆಚ್.ಎಸ್. ದೊರೆಸ್ವಾಮಿ
ಹಿರಿಯ ಗಾಂಧಿವಾದಿಗಳು

1. ಅಂಬೇಡ್ಕರರು ದಲಿತರ ವಿಮೋಚನೆ ಬಗೆಗೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಎಲ್ಲ ದೃಷ್ಟಿಯಿಂದಲೂ ವಿವೇಚನೆ ಮಾಡಿದ್ದಾರೆ. ಆದ್ದರಿಂದ ಇನ್ನಷ್ಟು ಚಿಂತಕರ ಅಭಿಪ್ರಾಯಗಳನ್ನು ಇದಕ್ಕೆ ಕೂಡಿಸಿ, ಗೊಂದಲ ಎಬ್ಬಿಸುವುದು ಬೇಡ. ಗುರಿ ಮತ್ತು ಗುರಿ ಸಾಧಿಸುವ ಮಾರ್ಗ ಯೋಗ್ಯವಾಗಿದ್ದರೆ, ಅಂಬೇಡ್ಕರರ ವಿಚಾರ ಧಾರೆಗನುಸಾರ ಗುರಿ ಸಾಧಿಸುವುದು ಕಷ್ಟವೆನಿಸುವುದಿಲ್ಲ.

2. ದಲಿತರಲ್ಲಿ ಸಾಮರಸ್ಯವಿಲ್ಲದಿರುವುದೇ ಎಲ್ಲ ವಿಫಲತೆಗೂ ಕಾರಣ. ಸಾಮರಸ್ಯ ಮೂಡಿಸಲು ಏನು ಮಾಡಬೇಕು ಎಂದು ಗಂಭೀರವಾಗಿ ವಿಚಾರ ಮಾಡಬೇಕು. ಸಾಮರಸ್ಯಕ್ಕೆ ಅಡ್ಡಿ ಬರುವ ಸಮಸ್ಯೆಗಳನ್ನು ಅವು ನ್ಯಾಯವಾದುವೇ, ಅನ್ಯಾಯವಾದುವೇ ಎಂಬುದನ್ನೂ ಪರಿಗಣಿಸಬೇಕು.

ದಲಿತರೆಲ್ಲ ಒಂದುಗೂಡಿ ಹೋರಾಡಿದರೆ ಮಾತ್ರ ಬಡತನ ನಿವಾರಣೆಯಾದೀತು; ಅಜ್ಞಾನ ನಿವಾರಣೆಯಾದೀತು. 'ಎಲ್ಲರಿಗೂ ಸಮಪಾಲು' ಎಂಬ ತತ್ವ ನನಸಾದೀತು.

ಈ ಸಮಸ್ಯೆಗಳೆಲ್ಲ ಪರಿಹಾರವಾಗಬೇಕಾದರೆ ದಲಿತರ ಒಗ್ಗೂಡುವಿಕೆ ಅಗತ್ಯವಾಗಿ ಕೂಡಲೇ ಆಗಬೇಕು. ದಲಿತ ನಾಯಕ ವರ್ಗ ಎಲ್ಲ ದಲಿತರ ಪ್ರೀತಿ ವಿಶ್ವಾಸಗಳನ್ನೂ ಗಳಿಸಿಕೊಳ್ಳಬೇಕು. ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ನಾಯಕವರ್ಗದಲ್ಲಿ ಒಡಕು ಇರಬಾರದು. ಉದಾತ್ತ ಧ್ಯೇಯಗಳನ್ನಿಟ್ಟುಕೊಂಡು ಹೊರ ಬರುವ ದಲಿತ ನಾಯಕ ವರ್ಗ ಗಂಭೀರವಾದ ನಾಯಕತ್ವ ನೀಡುವವರಾಗಬೇಕು. ಕೆಳಮಟ್ಟಕ್ಕೆ ಎಂದೂ ಇಳಿಯಬಾರದು.

ಯಾವುದೇ ರಾಜಕೀಯ ಪಕ್ಷದ ಬಾಲಂಗೋಚಿಯಾಗುವುದು ದಲಿತ ಸಂಘರ್ಷ ಸಮಿತಿಗೆ ಶೋಭಿಸದು. ಎಲ್ಲ ರಾಜಕೀಯ ಪಕ್ಷದಿಂದ ಸಮಾನಂತರದಲ್ಲಿ ದೂರವಿರಬೇಕು. ರಾಜಕೀಯದ ಕಿರೀಟ ಸಂಘರ್ಷ ಸಮಿತಿಗೆ ಹೊಕ್ಕಿತೆಂದರೆ ಅದು ಛಿದ್ರಛಿದ್ರವಾದೀತು.

3. ದಲಿತರು ಹಿಂದೂ ಮತದಲ್ಲಿ ಮುಂದುವರಿಯಬೇಕೆ, ಅನ್ಯ ಧರ್ಮಗಳಿಗೆ ಮತಾಂತರಗೊಳ್ಳಬೇಕೆ ಎಂಬ ಪ್ರಶ್ನೆ ದಲಿತರ ನಾಯಕರನ್ನೂ ಕಾಡುತ್ತಿರುವುದು ನಿಜ. ದಲಿತರು ಅನ್ಯಮತಕ್ಕೆ ಹೋದದ್ದರಿಂದ, ಆ ಮತದವರ ಓಟುದಾರರ ಸಂಖ್ಯೆ ಜಾಸ್ತಿಯಾಗಬಹುದು ಅಷ್ಟೇ. ಅದರಿಂದ ದಲಿತರಿಗೆ ಲಾಭ ಏನಾಗಬಹುದು ಎಂಬುದನ್ನು ಕುರಿತು ಯೋಚನೆ ಮಾಡಬೇಕು. ದಲಿತರನ್ನು ಎಲ್ಲ ಸ್ತರದಲ್ಲೂ ಸಮಾನಸ್ಕಂದರಾಗಿ ಕಾಣುವುದಾದರೆ, ಅವರಲ್ಲಿ ಹಿಂದೂ ಮತದಲ್ಲಿದೆ ಎನ್ನಲಾದ ಮಲತಾಯಿ ಮನೋಭಾವ ಇಲ್ಲ ಎನ್ನುವುದಾದರೆ, ಆ ಅನ್ಯ ಮತಕ್ಕೆ ಸೇರಲು ಅಡ್ಡಿ ಇಲ್ಲ ಅನ್ಯ ಮತಕ್ಕೆ ದಲಿತರು ಸೇರಿದ್ದರಿಂದ, ಆ ಮತ ಅಥವಾ ಧರ್ಮಕ್ಕೆ ಯಾವ ಮಹತ್ವವೂ ಬರುವುದಿಲ್ಲ.

4. ಮೀಸಲಾತಿಯಿಂದ ದಲಿತರಲ್ಲಿ, ಊರುಗೋಲು ಹಿಡಿದು ನಡೆಯುವ ಹೆಳವನ ದುಸ್ಥಿತಿ ಬಂದಿದೆ ಎಂದು ಹೇಳುವವರಿದ್ದಾರೆ. ತಮ್ಮ ಜಾತಿಯ ಹೆಸರು ಹೇಳಿಕೊಂಡು ಮೀಸಲಾತಿಯ ಸೌಲಭ್ಯವನ್ನು ಒಕ್ಕಲಿಗ ಮುಖಂಡರು, ಲಿಂಗಾಯತ ಮುಖಂಡರು ಇತ್ಯಾದಿಗಳು ಸ್ವಾರ್ಥಕ್ಕೆ ಬಳಸಿಕೊಂಡಂತೆ, ಈ ಮೀಸಲಾತಿಯನ್ನು ಹರಿಜನ, ಮುಖಂಡರೂ, ಸರ್ಕಾರದ ಉನ್ನತ ಹರಿಜನ ಅಧಿಕಾರಿಗಳೂ ಕಬಳಿಸಿದ್ದಾರೆ ಎನ್ನುವ ಮಾತೂ ಇದೆ.

ಈ ಹಿಡಿ ಮಂದಿ ಪಟ್ಟಭದ್ರರಿಗೆ, ಅವರ ಮಕ್ಕಳಿಗೆ ಸರ್ಕಾರದ ಎಲ್ಲ ಸೌಲಭ್ಯ ದೊರೆತಿರುವಾಗ, ಅವರಿಂದ ವಂಚಿತರಾದ ಹರಿಜನರೇ ಸಿಂಹಪಾಲು ಇರುವಾಗ, ಹರಿಜನರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆದಿಲ್ಲ ಎಂದು ದೂರುವುದು ಅರ್ಥವಿಲ್ಲದ ಮಾತಾಗುತ್ತದೆ. ದಲಿತರೆಲ್ಲರಿಗೂ ಮೀಸಲಾತಿಯಿಂದ, ಸಾಕಷ್ಟು ಪ್ರಯೋಜನವಾಗಿದೆಯೇ? ಆಗಿದ್ದರೆ ಅವರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಲು ಏನು ಮಾಡಬೇಕು ಎಂದು ಆಲೋಚಿಸುವುದರ ಅಗತ್ಯ ಬೀಳುತ್ತದೆ. ಆದರೆ ಸಾಮಾಜಿಕ ನ್ಯಾಯವನ್ನೂ, ಅದರಿಂದ ವಂಚಿತರಾದ ದಲಿತರಿಗೂ ದೊರಕಿಸುವುದು ಹೇಗೆ ಎಂಬುದನ್ನೂ ಕುರಿತು ವಿಚಾರ ಮಾಡಿ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕು. ಎಂದಿದ್ದರೂ ಎಲ್ಲ ದಲಿತರೂ ಮುಖ್ಯವಾಹಿನಿಗೆ ಬರಲೇಬೇಕು. ಅದನ್ನು ಇಂದೇ ಸಾಧಿಸುವ ಕೆಲಸವನ್ನು ದಲಿತ ಸಂಘರ್ಷ ಸಮಿತಿ ಕೈಗೆತ್ತಿಕೊಳ್ಳಲಿ.

5. ಜಾಗತೀಕರಣದಿಂದ, ಯಾವ ಭಾರತೀಯರ ಬದುಕೂ ಬದಲಾಗದು. ಬದಲಾಗುವುದೇ ಆದರೆ ಅದು ಭಾರತೀಯರ ಬದುಕನ್ನೂ ಮತ್ತಷ್ಟು ದುರ್ಗತಿಗೆ ದೂಡಬಹುದು ಅಷ್ಟೇ.

ಜಾಗತೀಕರಣ ಭಾರತದಲ್ಲಿರುವ ಶೇ. 10 ಮಂದಿ ಉದ್ಯೋಗಪತಿಗಳು, ಪಟ್ಟಭದ್ರರು, ಸಮಯಸಾಧಕರು, ರಾಜಕೀಯ ನಾಯಕರು ಇವರಿಗೆ ಮಾತ್ರ ಪ್ರಯೋಜನಕಾರಿ. ಉಳಿದವರಿಗೆಲ್ಲ ಇದು ಮಾರಕ. ಜಾಗತೀಕರಣ ಸ್ವತಂತ್ರ ಭಾರತವನ್ನು ತನ್ನ ಅಡಿಯಾಳಾಗಿ ಮಾಡಿಕೊಳ್ಳುವ ಒಂದು ಷಡ್ಯಂತ್ರ. ಸರ್ಕಾರ ನಡೆಸುವವರು, ರಾಜಕೀಯ ಪಕ್ಷಗಳು ಅದರ ಶಾಸಕರು, ಪಾರ್ಲಿಮೆಂಟ್ ಸದಸ್ಯರು ಜಾಗತೀಕರಣದ ಏಜೆಂಟರು ಎಂದರೆ ತಪ್ಪಾಗಲಾರದು. ಸರ್ಕಾರವನ್ನು ನಡೆಸುವವರು ಐ.ಎಂ.ಎಫ್., ವಿಶ್ವಬ್ಯಾಂಕ್‌ಗಳೊಂದಿಗೆ ಮಾಡಿಕೊಂಡಿರುವ ಅಪಮಾನಕರ ಒಪ್ಪಂದಗಳೇ ಇದಕ್ಕೆ ಸಾಕ್ಷಿ.

ಸಮಾಜದ ಮುಖ್ಯವಾಹಿನಿಯಲ್ಲಿ ದಲಿತರು ತಮ್ಮ ಗೌರವಯುತವಾದ ಪಾಲು ಪಡೆಯಲು ಏನು ಮಾಡಬೇಕು ಎಂಬುದು ಬಹಳ ಪ್ರಸ್ತುತವಾದ ಪ್ರಶ್ನೆ.

ದಲಿತರು ಸ್ವಯಂ ಮರ್ಯಾದೆಗೆ ಮಹತ್ವ ನೀಡಬೇಕು. ಆತ್ಮ ಗೌರವಕ್ಕೆ ಕುಂದುಂಟಾದ ಸಂದರ್ಭದಲ್ಲಿ ಸೆಟೆದುನಿಲ್ಲಬೇಕು. ತನ್ನ ಗೌರವ ಸಂಪಾದನೆಗೆ ಬೇರೆಯವರ ಪ್ರಾಣ ತೆಗೆಯಬಾರದು. ಸಾಮೂಹಿಕ ಹೋರಾಟದ ಮುಖಾಂತರ ತಮ್ಮ ಪ್ರಾಣ ಕೊಟ್ಟಾದರೂ ತಮ್ಮ ಆತ್ಮ ಗೌರವವನ್ನು ಕಾಪಾಡಿಕೊಳ್ಳಬೇಕು.

ದಲಿತರಿಗೆ ಸಮಾಜದಲ್ಲಿ ಸ್ಥಾನಮಾನ ದೊರಕಬೇಕಾದರೆ, ಆರ್ಥಿಕವಾಗಿ ಅವರು ಬಲಗೊಳ್ಳಬೇಕು. ಇದರಷ್ಟು ಪರಿಣಾಮಕಾರಿಯಾದ ಪರಿಹಾರ ಮಾರ್ಗ ಬೇರೆ ಯಾವುದೂ ಇಲ್ಲ. ದಲಿತರು ತಮ್ಮ ಆರ್ಥಿಕ ಬೆಳವಣಿಗೆಗಾಗಿ ಆದ್ಯತೆಯ ಮೇಲೆ ಹೋರಾಟ ಹೂಡಬೇಕು. ಭೂಮಿ ಹಂಚಿಕೆ ನ್ಯಾಯಯುತವಾಗಿ ನಡೆದಿಲ್ಲ. ಭೂಕಾಯಿದೆ ಅವಾಸ್ತವವಾಗಿದೆ. ಶೇ. 23 ಜನ ಭೂಮಿ ರಹಿತ, ಕೃಷಿ ಕಾರ್ಮಿಕರಿದ್ದಾರೆ. ಇವರಿಗೆಲ್ಲ ಕನಿಷ್ಠ 5 ಎಕರೆ ಖುಷ್ಕಿ ಭೂಮಿ ಅಥವಾ 3 ಎಕರೆ ತರೀಭೂಮಿ ಇಲ್ಲವೇ ಒಂದು ಎಕರೆ ತೋಟದ ಭೂಮಿ ಸಿಗುವುದಾಗಬೇಕು.

ನಿರುದ್ಯೋಗದಿಂದ ನರಳುತ್ತಿರುವವರ ಕೈಗೆ ಉತ್ಪಾದನೆಯ ಸಾಧನ ದೊರಕುವಂತೆ ಆಗಬೇಕು. ಹೊಲ ಇಲ್ಲದವನಿಗೆ ಹೊಲ, ಯಂತ್ರ ಇಲ್ಲದವನಿಗೆ ಯಂತ್ರ ಜೀವನ ನಿರ್ವಹಣೆಗಾಗಿ ಯಾವುದಾದರೂ ಗೌರವಯುತ ಉದ್ಯೋಗ, ವಿದ್ಯಾವಂತನಾಗಿದ್ದರೆ ಅವನಿಗೆ ತನ್ನದೇ ಉದ್ಯೋಗ ನಡೆಸಿಕೊಳ್ಳಲು ಬೇಕಾದ ಬಂಡವಾಳ ಒದಗಿಸುವುದು ಸರ್ಕಾರದ ನೀತಿಯಾಗಬೇಕು.

ಆರ್ಥಿಕವಾಗಿ ಸಮಾನತೆಯನ್ನು ದಲಿತರು ಸಾಧಿಸಿದರೆ, ತಾನೇ ತಾನಾಗಿ ಸಾಮಾಜಿಕ ಸಮಾನತೆ ಅವನಿಗೆ ದೊರೆತೇ ದೊರೆಯುತ್ತದೆ.

ದಲಿತ ಸಂಘರ್ಷ ಸಮಿತಿ, ಇತರೇಯವರನ್ನು ವಾಚಾಮಗೋಚರವಾಗಿ ಬಯ್ದು, ಆಡಿ ಸಮಾನತೆಯನ್ನು ಸಮಾಜದಲ್ಲಿ ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಸಮಾಜದ ಎಲ್ಲರೊಡನೆ ಹೊಂದಿಕೊಂಡು ಬಾಳುವುದನ್ನು, ಕಲಿಯಬೇಕು. ಬಯ್ಯುವುದರಿಂದ ಶತ್ರುಗಳನ್ನು ತಾವೇ ಹುಟ್ಟು ಹಾಕಿದಂತೆ ಆಗುತ್ತದೆ. ಹಾಗೆಂದ ಮಾತ್ರಕ್ಕೆ ದಲಿತರಿಗೆ, ದಲಿತ ಸಮೂಹಕ್ಕೆ ಅನ್ಯಾಯವಾದರೆ ಅವಹೇಳನವಾದರೆ, ಪ್ರಾಣ ಹಾನಿ, ಮಾನ ಹಾನಿಯಾದರೆ ಕೈಕಟ್ಟಿಕೂಡಬೇಕೆಂದಲ್ಲ. ಸಮಾಜದ ಇತರ ಸಜ್ಜನರನ್ನೂ, ಸಮಾನ ಮನಸ್ಕರನ್ನೂ ಕೂಡಿಕೊಂಡು ಹೋರಾಡಿ ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳಬೇಕು. ●

ದಲಿತಾನ ನೆಲೆಯಿಂದ :

ವೈದಿಕ ಸಂಸ್ಕೃತಿ ನಿರಾಕರಿಸುವತ್ತಾ...

1. ತಳ ನೆಲೆಯಿಂದ ದೇಶವನ್ನು ಕಟ್ಟಲು ಇಂಟಿಗ್ರೇಟೆಡ್ ಅಭಿವೃದ್ಧಿಯನ್ನು ಸಾಧಿಸಲು ಅಂಬೇಡ್ಕರ್‌ವಾದ ಈ ಹೊತ್ತಿಗೂ ಪ್ರಸ್ತುತ. ದಲಿತರಿಗೆ ಅಂಬೇಡ್ಕರ್ ಆತ್ಮ ಹಾಗೂ ಭಾರತ ಸಂಸ್ಕೃತಿಯ ದೇಹ ಇರಬೇಕು. ಅಂಬೇಡ್ಕರ್‌ವಾದ ದಲಿತ ಬೆಂಬಲ ಉದ್ದೇಶಿ ಮಾತ್ರವಾಗಿದೆ. ದಲಿತರ ಅಭಿವೃದ್ಧಿ ಒಟ್ಟು ಭಾರತದ ಅಭಿವೃದ್ಧಿಯನ್ನು ಉದ್ದೇಶಿಸಿದ ಚಿಂತನೆಯಿಂದ ಸಾಧ್ಯವಾಗುತ್ತದೆ.

2. ದಲಿತ ಪದದ ಅರ್ಥ ವಿಸ್ತಾರಗೊಳ್ಳಬೇಕು. ನನಗೆ ಅನಿಸುವ ಹಾಗೆ ಅಸ್ಪೃಶ್ಯ ದಲಿತ ಮತ್ತು ಸ್ಪೃಶ್ಯ ದಲಿತ ಎಂಬ ಎರಡು ವರ್ಗಗಳಿವೆ. ಮೀಸಲಾತಿ ಎಂಬುದು ಈ ಇಬ್ಬರನ್ನೂ ಆಂತರಿಕ ಕಚ್ಚಾಟದಲ್ಲಿಟ್ಟಿದೆ. ಅಸ್ಪೃಶ್ಯ ದಲಿತರು ಮೀಸಲಾತಿಯೆ ತಮ್ಮ ಸರ್ವಸ್ವ ಎಂದು ತಿಳಿದುಕೊಂಡಿದ್ದಾರೆ. ಇತರ ದಲಿತರು ಅಂಥದೊಂದು ನಿರ್ದಿಷ್ಟ, ಸ್ಪಷ್ಟ ಬೆಂಬಲ ಮತ್ತು ಭದ್ರತೆ ತಮಗೆ ಇಲ್ಲವಲ್ಲ ಎಂದು ಆತಂಕಗೊಂಡಿದ್ದಾರೆ ಮತ್ತು ಕೆಲಮಟ್ಟಿಗೆ ಅಸ್ಪೃಶ್ಯರ ಬಗ್ಗೆ ಅಸೂಯೆ ಹೊಂದಿದ್ದಾರೆ. ಇವರಿಗೊಂದು ಭದ್ರತೆ ಬೇಕು.

ಅಸ್ಪೃಶ್ಯರಲ್ಲಿಯೆ ಎಡ ಮತ್ತು ಬಲ ಈಗ ತಿಕ್ಕಾಟದ ಕಂದಕಗಳಾಗಿವೆ. ಮೀಸಲಾತಿಯ ಸಮಾನ ಹಂಚಿಕೆ ಆಗದಿರುವುದರ ಫಲ ಇದು. ಮೇಲಾಗಿ ಮೀಸಲಾತಿಯ ಹೊರಗೆ ತಮ್ಮ ಸಮಾಜವನ್ನು ಸೃಜನ ಗೊಳಿಸುವ ಶಕ್ತಿ, ಅವಕಾಶ ಮತ್ತು ದೂರ ದೃಷ್ಟಿ ದಲಿತರಲ್ಲಿ ಕಾಣುತ್ತಿಲ್ಲ. ಭಾರತದ ಇತರೆಲ್ಲರಂತೆ ಭಾರತದ ಭೌತಿಕ ಸಂಪತ್ತನ್ನೂ, ಬ್ರಾಹ್ಮಣರು ತಮ್ಮದಾಗಿ ಸೃಷ್ಟಿಸಿಕೊಂಡ ಸಂಸ್ಕೃತಿಯನ್ನು ಹಂಚಿಕೊಳ್ಳುವುದರಲ್ಲಿ ಆಸಕ್ತರಾಗಿದ್ದಾರೆ. ಭಾರತಕ್ಕೆ ಯಾವ ಅಭಿವೃದ್ಧಿ ಸಿದ್ಧಾಂತ ಬಂದರೂ ಅದು ಈ ರೀತಿ ಹಂಚಿಕೆ ತತ್ವವಾಗಿ ಮಾರ್ಪಡುತ್ತದೆ. ತಿನ್ನುವುದನ್ನೇ ಸಂಸ್ಕೃತಿ, ಪೂಜೆಯನ್ನೇ ಕ್ರಿಯಾಶೀಲತೆಯಾಗಿ ಕಲಿಸಿದ ವೈದಿಕ ಸಂಸ್ಕೃತಿಯ ಪ್ರಸಾದ ಇದು.

ನನ್ನ ದೃಷ್ಟಿಯಲ್ಲಿ ಬಿ.ಎಸ್.ಪಿ. ಈಗಿರುವಂತೆ ಒಂದು ಅಸಹ್ಯ. ಒಂದು ಜಾತಿ/ಪಂಗಡದ ಪಕ್ಷವೆಂಬುದೆ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಹಾಗೂ ದ್ರೋಹ. ದಲಿತರು ಪಕ್ಷವನ್ನು ಪ್ರತ್ಯೇಕ ಇಟ್ಟುಕೊಂಡರೆ ಈ ದೇಶದ ಪಾಪಿಗಳು ಅದನ್ನು ಅಸ್ಪೃಶ್ಯ ಮಾಡಿ ದೂರ ಇಡುತ್ತಾರೆ. ಅಲ್ಲೆ ಇರಲಿ ಬಿಡಿ, ಸ್ಪಷ್ಟವಾಗಿ ತಮ್ಮನ್ನು ಹೇಳಿಕೊಂಡಿದ್ದಾರಲ್ಲ ಎಂದು ಹೇಳಿ ಆ ಕಡೆಗೆ ಕಲ್ಲು ಎಸೆಯಲು ಮಸಲತ್ತು ಮಾಡುತ್ತಾರೆ. ಆಗ ಮತ್ತೆ ಈಗಿನ ಉತ್ತರ ಪ್ರದೇಶದ ಬಿ.ಎಸ್.ಪಿ.ಯಂತೆ ಕೃಪಾ ಪೋಷಿತ ರಾಜಕೀಯ ಮಾಡಬೇಕಾಗುತ್ತದೆ.

ದಲಿತರಿಗೆ ಮೂರು ನಿಚ್ಚಳ ಶತ್ರುಗಳಿದ್ದಾರೆ ಒಂದು ಜಾತಿ ಬ್ರಾಹ್ಮಣ್ಯ, ಎರಡು ಅಧಿಕಾರಶಾಹಿ ಬ್ರಾಹ್ಮಣ್ಯ ಮತ್ತು ರಾಜಕೀಯ ಬ್ರಾಹ್ಮಣ್ಯ. ಇವು ನಿರಂತರ ಸಂಪತ್ತು

○ ಪ್ರೊ ಹಿ.ಶಿ. ರಾಮಚಂದ್ರೇಗೌಡ

ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂರಕ್ಷಕ ಶಕ್ತಿಗಳು. ಇವುಗಳಲ್ಲಿ ಯಾವುದನ್ನು ಮುದ್ದು ಮಾಡಿದರೂ ಅವರು ದಲಿತರಿಗೆ ಸುಣ್ಣ ಹಚ್ಚುತ್ತಾರೆ. ದಲಿತರ ಪಕ್ಷ ಸಮಾನತೆಯನ್ನು ಉದ್ದೇಶಿಸಿದ್ದೇ ಆಗಿರಬೇಕು. ಜಾತಿಯ ಆಧಾರದ ಮೇಲೆ ಹೋದರೆ ದಲಿತರು ಕೆಳಜಾತಿ ಆಗುವಂತೆ ಅವರ ಪಕ್ಷವೂ ಕೆಳಜಾತಿ ಪಕ್ಷ ಆಗುತ್ತದೆ.

3. ಈಗ ದಲಿತರು ಇಟ್ಟುಕೊಂಡವರ ಸ್ಥಿತಿಯಲ್ಲಿದ್ದಾರೆ. ಈಗ ಅವರು ತುಂಬಿಕೊಳ್ಳಬೇಕು ಮತ್ತು ಭದ್ರವಾಗಿ ನೆಲೆ ನಿಲ್ಲಬೇಕು. ತುಂಬಿಕೊಳ್ಳುವುದೆಂದರೆ ಹೊರಗಿನ ಕಸಕಡ್ಡಿಗಳಿಂದ ಅಲ್ಲ; ಒಳಗಿನ ದರ್ಪತ್ತಿನಿಂದ. ಭದ್ರವಾಗುವುದೆಂದರೆ ಪುರೋಹಿತಶಾಹಿಯ ಪೂಜಾ ಪುರಸ್ಕಾರಗಳನ್ನು ನಡು ಬಗ್ಗಿಸಿ ನಡೆಸಿಕೊಡುವುದರಿಂದ ಅಲ್ಲ; ತಮ್ಮ ಬದುಕನ್ನು ಕುರಿತ ನಡವಳಿಕೆಗಳಿಂದ. ದಲಿತರಲ್ಲಿ ಇರುವಷ್ಟು ಮಾನವೀಯ ಮೌಲ್ಯಗಳು ಬೇರೆಯವರಲ್ಲಿ ಇಲ್ಲ, ಆದರೆ ದಲಿತರು ಅವುಗಳನ್ನು ಗುರುತಿಸಿ ಗೌರವಿಸಿಲ್ಲ. ದೊಡ್ಡದಾಗಿ ಓದಿ ನೌಕರಿ ಪಡೆದ ಮೇಲೂ ಅವರು ತಮ್ಮ ಸ್ವತಂತ್ರ ಸಂಸ್ಕೃತಿಯ ಅಸ್ತಿತ್ವದ ಬಗ್ಗೆ ಚಿಂತಿಸಿಲ್ಲ. ಯಾರ ಮತ್ತು ಯಾವ ಅಪಮೌಲ್ಯಗಳ ವಿರುದ್ಧ ಹೋರಾಡಿ ಮೇಲೆದ್ದರೂ ಅವುಗಳನ್ನೇ ಅವರು ಪೂಜಿಸುತ್ತಿದ್ದಾರೆ. ಆದ್ದರಿಂದಲೇ ವಿದ್ಯಾವಂತ-ದಲಿತ ನೌಕರರು ದಲಿತಾಭಿವೃದ್ಧಿಯ ಅಪವಾದದ ಭಾಗಗಳಾಗಿದ್ದಾರೆ. ಈ ನಗರ ಸೃಷ್ಟಿಯಾದುದರಿಂದಲೇ ದಲಿತ ಸಂಘಟನೆ ಸೋತಿದೆ.

ಧರ್ಮ ಎಂದರೆ ನಂಬಿಕೆ, ಸಂಸ್ಕೃತಿ ಎಂದರೆ ನಡವಳಿಕೆ. ತಮ್ಮ ಅಥವಾ ತಾವು ಸೃಷ್ಟಿಸಿದ ನಂಬಿಕೆಯನ್ನು ನಡವಳಿಕೆ ಮಾಡಿಕೊಂಡು ಬದುಕುವುದೆ ಜೀವನಮಾರ್ಗ. ನಾವು ಈ ದೇಶದ ಪುರೋಹಿತಶಾಹಿಯನ್ನು ವಿರೋಧಿಸಿ ಹೊರಗುಳಿದ ವಿಚಾರವಂತರು ಅಥವಾ ನಾವು ಬೌದ್ಧ ಧರ್ಮದ ಪತನದ ನಂತರ ಹಿಂದೆ ಬಿದ್ದ ಅಥವಾ ಅವಗಣಿಸಲ್ಪಟ್ಟ ಬೌದ್ಧರು ಎಂಬ ಒಂದು ನಂಬಿಕೆಯನ್ನು ಇಟ್ಟುಕೊಂಡು ಅದರಂತೆ ನಡವಳಿಕೆಗಳನ್ನು ಕಟ್ಟಿಕೊಂಡರೆ ಸಾಕು; ದಲಿತರು ಭೌತಿಕ ಭಾರತದ ಅಥವಾ ಭಾರತ ಜ್ಞಾನ-ವಿಜ್ಞಾನದ ಪಿತಾಮಹರಾಗುತ್ತಾರೆ.

ಸ್ವತಂತ್ರವಾದ ಅಸ್ತಿತ್ವ, ಆರ್ಥಿಕ ದೃಷ್ಟಿಕೋನ ಮತ್ತು ಸಂಘಟನಾತ್ಮಕತೆಯ ಅರಿವು ಇಲ್ಲವದನು ಎಲ್ಲಿದ್ದರೂ, ಎಲ್ಲಿಗೆ ಹೋದರೂ ಸೊನ್ನೆಯೇ ಆಗಿರುತ್ತಾನೆ. ಸೊನ್ನೆಯನ್ನು ಕೂಡಿಸಿಕೊಳ್ಳಬೇಕು ಇಲ್ಲವೆ ಸೊನ್ನೆಯನ್ನು ಒಡೆಯಬೇಕು. ಆಗ ಮೌಲ್ಯ ಮತ್ತು ಅಕ್ಷರಗಳು ಹುಟ್ಟುತ್ತವೆ. ಜೀವನ ಚೈತನ್ಯವಾಗುತ್ತದೆ.

ಹಿಂದುತ್ವದಲ್ಲಿ ಜೀವವಿಲ್ಲ, ಜೀವನವೂ ಇಲ್ಲ. ಅದರಲ್ಲಿ ಸಂಸ್ಕೃತಿ ಇಲ್ಲ, ಅದರೊಳಕ್ಕೆ ಯಾಕೆ ಒಕ್ಕೊಳ್ಳಬೇಕು. ಭಾರತೀಯ ಎನ್ನಿ. ಭಾರತದ ನೂರಾರು ದಲಿತ ಪಂಗಡಗಳಲ್ಲಿ ಇರುವ "ಜೀವನ ಧರ್ಮ"ವನ್ನು ಹೆಕ್ಕಿ ತೆಗೆಯಿರಿ. ಅಲ್ಲಿ ನಿಮಗೆ ನೂರಾರು ಬುದ್ಧರು ಸಿಗುತ್ತಾರೆ. ಅವರನ್ನು ಕೂಡಿಸಿ; ಭಾರತ ಬಾಳುವ ಧರ್ಮ ಸಿಗುತ್ತದೆ. ಅದು ಬಿಟ್ಟು ಅವರಿವರನ್ನು ವೈಭವಿಸುತ್ತ, ಅವರ ಪಾದಕ್ಕೆ, ಪಂಚೆಯೊಳಕ್ಕೆ, ಚಡ್ಡಿ ಸೀರೆಯೊಳಕ್ಕೆ ನುಸುಳಿಕೊಂಡು ಯಾಕೆ ಉಸಿರಾಡಬೇಕು. ರಾಜಕೀಯ ಧ್ರುವೀಕರಣಕ್ಕೆ ಪ್ರಯತ್ನಿಸುವಷ್ಟೇ ಭಾರತ ದಲಿತ ಧರ್ಮ ಧ್ರುವೀಕರಣಕ್ಕೆ ಪ್ರಯತ್ನಿಸಲಿ. ಗಡತ್ತಾಗಿ ಚಿಂತಿಸಿ, ಗಡತ್ತಾಗಿ ಬದುಕಿ.

4. ಮೀಸಲಾತಿಯಿಂದ ದಲಿತರಲ್ಲೇ ಯಾಕೆ ಸ್ಪರ್ಧಾತ್ಮಕತೆ ಕಡಿಮೆಯಾಗುತ್ತಿದೆ. ಜಾತಿಯ ಮೀಸಲಾತಿ ಇರುವ ಎಲ್ಲರಲ್ಲೂ ಸ್ಪರ್ಧಾತ್ಮಕತೆ ಇಲ್ಲ. ನಮ್ಮ ಜಾತಿಯ ಜನರನ್ನು ಬಿಡಿ, ನೌಕರವರ್ಗವನ್ನು ತೆಗೆದುಕೊಳ್ಳಿ. ಇವರಲ್ಲಿ ಬಹುತೇಕರು ಜಾತಿ ಬೀಜಗಳಲ್ಲವೆ. ಇವರು ಸ್ಪರ್ಧಾತ್ಮಕವಾಗಿ ದುಡಿದು ಈ ದೇಶವನ್ನು ಅಂಬರಕ್ಕೆ ಏರಿಸಿದ್ದಾರಾ? ಈ ದೇಶದ ಸ್ಪರ್ಧಾತ್ಮಕತೆಯನ್ನು ಭೋಜನ ಭಕ್ಷಕರು ಯಾವಾಗಲೋ ನಾಶಮಾಡಿದ್ದಾರೆ. ಅದನ್ನು ದಲಿತ ಮಾತ್ರರಿಂದ ಬಯಸುವುದೇನು? ತಮ್ಮ ಸಮಾಜದ ಅಭಿವೃದ್ಧಿ ದೃಷ್ಟಿಯಿಂದ ಅವರು ಸ್ಪರ್ಧಾತ್ಮಕವಾಗಿಲ್ಲ, ಅಷ್ಟೆ. ಇವರು ಮೀಸಲಾತಿ ಅಭಿವೃದ್ಧಿ ಸಿದ್ಧಾಂತ ಅಲ್ಲ, ಒಂದು ಪೋಷಕವಾದ ಎಂದು ಸರಿಯಾಗಿ ತಿಳಿದುಕೊಂಡರೆ ಸಾಕು.

ನಿಜ, ಇಂದೂಧರ್ ನೀವು ಸರಿಯಾಗಿ ಯೋಚಿಸಿ ಬೆಸೆಸಿದ್ದೀರಿ. ದಲಿತರು 82% ಮೀಸಲಾತಿ ಅಥವಾ ಅವಕಾಶಗಳಿಂದ ವಂಚಿತರಾಗಿದ್ದಾರೆ. ಇದು ನಿಜವಾಗಿ ಇಂಟಿಗ್ರೇಟೆಡ್ ಚಿಂತನೆ. 18%ನ ಜನ ಎಂದರೆ ಒಟ್ಟು ಸಮಾಜದಿಂದ ಬೇರೆ ಮಾಡಿದ ಅಥವಾ ಹೊರಗೆ ಹಾಕಲ್ಪಟ್ಟವರು ಎಂದು ಅರ್ಥ. ಹೋಗಿ ಬಿದ್ದಿ ಮಕ್ಕಳ ಹಾಕಿದಷ್ಟು ತಿಂದುಕೊಂಡಿರಿ ಎಂದಂತೆ ಸಾಂಸ್ಕೃತಿಕವಾಗಿ

ಎದ್ದು ನಿಂತರೆ, ಈಗಿರುವ ಸಂಸ್ಕೃತಿಯ ಅಮಲನ್ನು ಗುಡಿಸಿ ಗುಂಡಾಂತರ ಮಾಡಿದರೆ ದಲಿತರು ಎಲ್ಲರಂತೆ ಎಲ್ಲರೊಳಗೂ ಇರಬಹುದು. ಆ ತಾಕತ್ತನ್ನು ದಲಿತ-ಕಲಿತ ಯಾರೂ ತೋರಿಸುತ್ತಿಲ್ಲವಲ್ಲ!

ದಲಿತರ ಪ್ರಗತಿಗೆ ಮೀಸಲಾತಿ ಪರ್ಯಾಯ ಅಲ್ಲ. ಮೀಸಲಾತಿ ಪ್ರಗತಿ ತತ್ವವೇ ಅಲ್ಲ; ಅದೊಂದು ಪೋಷಕ ಸಿದ್ಧಾಂತ. ಪೋಷಕನಿಂದ ಸೇವಕ ಎಷ್ಟು ದಿನ ಸೌಲಭ್ಯ ಪಡೆಯಲು ಸಾಧ್ಯ. ಒಂದೊಮ್ಮೆ ಅವನು ಯಾರ‍್ಯಾರು ಎಲ್ಲಿರಬೇಕೋ ಅಲ್ಲಿರಬೇಕು ಎಂದರೆ? ಭಾರತದ ಒಟ್ಟು ಅಭಿವೃದ್ಧಿಯಲ್ಲಿ ದಲಿತ ಹೆಚ್ಚು ಕ್ರಿಯಾಶೀಲನಾಗಬೇಕು. ಅಭಿವೃದ್ಧಿ ಬರಬೇಕಾಗಿರುವುದು ಅವನ ಕಡೆಗೇ. ಪಾಲು ಕೇಳುತ್ತಾ ಕೂರಕೂಡದು, ಅದು ಒಡಕೊಳ್ಳುವ ಸಾಮಾಜಿಕ ಕ್ರಿಯೆ.

5) ಜಾಗತೀಕರಣವೆಂದರೆ ಉದ್ಯಮೀಕರಣ, ಉದ್ಯಮೀಕರಣ ಎಂದರೆ ಖಾಸಗೀಕರಣ, ಖಾಸಗೀಕರಣ ಎಂದರೆ ಬಂಡವಾಳೀಕರಣ, ಬಂಡವಾಳೀಕರಣ ಎಂದರೆ ಭಾರತದಲ್ಲಿ ಜಾತೀಕರಣ, ಅಲ್ಲವೆ? ಜಾತಿ ಹಂಚಿದ್ದುಂಟೆ. ಸಂಗ್ರಹಿಸಿಟ್ಟುಕೊಳ್ಳುವುದು ಅದರ ವೃತ್ತಿ ಮತ್ತು ಪ್ರವೃತ್ತಿ. ಆರ್ಥಿಕ ಸೌಲಭ್ಯಗಳನ್ನು ತನಗಾಗಿ ಮತ್ತು ತನ್ನ ಪೀಳಿಗೆಗಾಗಿ ಸಂಗ್ರಹಿಸಿಟ್ಟುಕೊಳ್ಳುವ ಆರ್ಥಿಕ ನಡವಳಿಕೆಗಳ, ಕಾನೂನು ಕಟ್ಟಳೆಗಳೆ ಜಾತಿ ನಡವಳಿಕೆ ಅದನ್ನು ಒಪ್ಪಿ ನಡಕೊಳ್ಳುವುದು ಜಾತಿ ಸಂಸ್ಕೃತಿ. ಕೋಣ ಹಾಲು ಕೊಡುವುದಿಲ್ಲ ಅಡುತ್ತದೆ!

ಈ ಐವತ್ತೈದು ವರ್ಷಗಳ ಭಾರತದ ಸಮಾಜವಾದ ನೀತಿಯಿಂದ ಚಲಿಸಿದಷ್ಟು ಜಾಗತೀಕರಣದಿಂದ ದಲಿತರು ಚಲಿಸಲಾರರು ಎಂಬುದು ನನ್ನ ನಂಬಿಕೆ. ಜಾಗತೀಕರಣ ಎಂಬುದು ಭೌತಿಕ ವಸ್ತುಗಳ ಮಾರಾಟ. ಅದು ಹಿಂದೂ ಕಟ್ಟಳೆಯನ್ನು ಮೀರಿ ದಲಿತರಿಗೆ ತಲುಪುತ್ತದೆ. ಆದ್ದರಿಂದ ದಲಿತರು ಇನ್ನಷ್ಟು ಭಾರತವನ್ನು ಬ್ರಿಟಿಷರು ಆಳುತ್ತಿದ್ದ ಕಾಲಕ್ಕಿಂತ, ಸಮಾಜವಾದಿ ಸ್ವತಂತ್ರ್ಯ ಭಾರತಕ್ಕಿಂತ ಹೆಚ್ಚಿನ ಸೌಲಭ್ಯಗಳನ್ನು ಪಡೆಯುತ್ತದೆ ಎಂದು ತಿಳಿಯಲಾಗಿದೆ. ಬ್ರಿಟಿಷರು ತಮ್ಮ ಭೌತಿಕ ಶೋಧನೆಯನ್ನು ಭಾರತದ ಬೇರೆ ಬೇರೆ ಜನರಿಗೆ ಹಂಚುವುದಕ್ಕೆ ಕಾರಣವಿತ್ತು. ಬೌದ್ಧಿಕವಾಗಿ ಭಾರತದ ಬಹುತೇಕ ಜನ ಬ್ರಾಹ್ಮಣರು ಸೃಷ್ಟಿಸಿದ ನಂಬಿಕೆಯಲ್ಲಿ ಕೂಡಿಹಾಕಲ್ಪಟ್ಟಿದ್ದರು. ಆಸೆಗಳ ಮೂಲಕ ಮಾತ್ರ ಅವರನ್ನು ಹೊರ ತರಲು ಸಾಧ್ಯವಿತ್ತು. ಆಗ ಎಂದೂ ಏನೂ ಭೌತಿಕ ಸುಖವನ್ನೇ ಕಾಣದಿದ್ದ ಜನರಿಗೆ ಹಣ. ಅಧಿಕಾರ ಮತ್ತು ವಸ್ತುಗಳನ್ನು ಹಂಚಿದರು. ಈ ಹಿಂದಿನ ಭಾರತ ಸರ್ಕಾರ ಓಟಿನ ರಾಜಕೀಯ, ಜಾತಿ ಮತ್ಸರ-ಪ್ರೀತಿ, ಬಿಡುಗಡೆ ಮತ್ತು ಸಮಾನತೆಯ ಆಸೆಗಾಗಿ ಸಂಪತ್ತನ್ನು ಹಂಚಿತು. ಅದರಲ್ಲಿ ಮೀಸಲಾತಿ ಒಂದು ತುಣುಕು.

ಕೆಲವು ಸ್ಟಿರಿಯೋ ಟೈಪ್ಡ್ ಚಿಂತಕರು ಹೇಳುತ್ತಾರೆ: ಜಾಗತೀಕರಣ ವಿರೋಧಿಗಳು ತಳಕೆಳ ವರ್ಗಗಳನ್ನು ಅವರ ವೃತ್ತಿಗಳನ್ನು ಇರುವ ಹಾಗೆ ಇಡಲು ಪ್ರಯತ್ನಿಸುತ್ತಿದ್ದಾರೆ ಎಂದು ಭೂಮಾಲಿಕತ್ವ ಮತ್ತು ಜಾತಿ ಮಾಲಿಕತ್ವ ಇರುವಾಗ ಇದು ನಿಜ. ಈಗ ಭೂಮಿ ಬಂಡವಾಳ ಸಂಗ್ರಹ ಮತ್ತು ರಾಜಕೀಯ ಶಕ್ತಿ ಸಂಚಯದ ಮೂಲವಾಗಿ ಉಳಿದಿಲ್ಲ. ಭೂಮಿ ಈಗ ದಲಿತರ ಮಟ್ಟಕ್ಕೆ ಇಳಿದಿದೆ. ಭೂ ಬಂಡವಾಳ ಮಾತ್ರದಿಂದ ರಾಜಕೀಯ ಶಕ್ತಿ ಧ್ರುವೀಕರಣವಾಗುತ್ತಿಲ್ಲ. ಯಾರು ಭೂಮಿಯ ಜೊತೆಗೆ ಆಧುನಿಕ ಮಾರ್ಗದಲ್ಲಿ ಸಂಪತ್ತು ಸಂಚಯಿಸುತ್ತಾನೋ, ಮಠ ಮಾನ್ಯಗಳ ಹತ್ತಿರ ಇದ್ದಾನೋ ಮತ್ತು ನಗರ ಕೇಂದ್ರದಲ್ಲಿ ತನ್ನ ನೆಲೆ ಮತ್ತು ವಹಿವಾಟನ್ನು ನಿರ್ವಹಿಸುತ್ತಿದ್ದಾನೋ ಅವನು ಮತ್ತು ಅವನ ತಳಿ ರಾಜಕೀಯ ಶಕ್ತಿಯನ್ನು ಪೋಷಕವಾಗಿ ಪಡೆಯುತ್ತಿದೆ. ಹಳ್ಳಿಯ ರಾಜಕೀಯ ಗುಜರಿ ರಾಜಕೀಯ, ನಗರದ ರಾಜಕೀಯ ಬಂಡವಾಳದ ರಾಜಕೀಯ ಆಗುತ್ತಿದೆ. ಹಳ್ಳಿಗಳಲ್ಲಿ ನಾಯಕತ್ವ ಸೃಷ್ಟಿಯಾಗದೆ ನಗರದ ಹಿರಿಯ ರಾಜಕಾರಣಿಗಳ ಮಕ್ಕಳು ನವ ನಾಯಕರಾಗಿ ಹಳ್ಳಿಗಳಿಗೆ ರವಾನೆಯಾಗುತ್ತಿರುವುದು ಇದೆ ಕಾರಣದಿಂದ.

ಈಗ ನಮ್ಮ ಪ್ರತಿಯೊಂದು ನಗರದಲ್ಲೂ ನ್ಯೂಯಾರ್ಕ್, ಲಂಡನ್, ಟೋಕಿಯೋಗೆ ಸರ್ವರ್‌ಗಳಾಗಿವೆ. ಅಂದರೆ ಈಗ ಭೂಮಾಲೀಕ ಹಳ್ಳಿಯಲ್ಲಿ ಉಳಿದಿಲ್ಲ; ರಾಜ್ಯ, ರಾಷ್ಟ್ರ ಮತ್ತು ಜಾಗತಿಕ ಪ್ರಭುಗಳಿಗೆ ಮಧ್ಯವರ್ತಿಯಾಗಿದ್ದಾನೆ ಅವನಿಗೆ ಭೂಮಿ ಒಂದು ಗುರುತು ಮಾತ್ರ. ಈಗ ಭೂಮಿ ಮೌಲ್ಯವೂ ಅಲ್ಲ, ಅಲ್ಲಿ ಮಾಲೀಕತ್ವವೂ ಇಲ್ಲ ಆದ್ದರಿಂದಲೇ "ಹೆಂಡ ಬೇಡ ಭೂಮಿಬೇಕು" ಎನ್ನುತ್ತಿದ್ದ ದಲಿತ ಈಗ ಅನ್ನುವುದಿಲ್ಲ. ಆದರೆ ಭೂಮಿಯನ್ನು ಅವಲಂಬಿಸಿ ಬದುಕುತ್ತಿರುವವನಿಗಿಂತ ಭೂಮಿಯೆ ಇಲ್ಲದ ದಲಿತ ಇನ್ನೂ ಅಪಾರ ಕಷ್ಟದಲ್ಲಿ ಇದ್ದಾನೆ.

ಪಾಶ್ಚಾತ್ಯ ಜಗತ್ತಿನಿಂದ ಈಗಿನಂತೆ ಸಿದ್ಧ ವಸ್ತುಗಳು ಮಾತ್ರ ಬರದೆ ಆ ವಸ್ತುಗಳನ್ನು ತಯಾರಿಸುವ ಜ್ಞಾನವೂ ಬರುತ್ತಿದ್ದುದರಿಂದ ದಲಿತ ಅಂಥ ಜ್ಞಾನ ಮಾದರಿಯ ಸಂಸ್ಥೆಗಳಲ್ಲಿ ಕೆಲಸ ಪಡೆಯುತ್ತಿದ್ದನು. ಹಿಂದಿನ ಆಧುನಿಕ ಜ್ಞಾನ ಮಾನವ ಆಧಾರಿತ ಉತ್ಪತ್ತಿಯನ್ನು ಅವಲಂಬಿಸಿದ್ದರಿಂದ ಉದ್ಯೋಗ ಕೂಲಿಯ ಅವಕಾಶವಿತ್ತು. ಈಗ ಕಂಪ್ಯೂಟರ್ ಬಂದು ಅದಕ್ಕೆ ಅವಲಂಬಿತವಾದ ಕೆಲಸಗಾರರನ್ನು ಕೊಲ್ಲುತ್ತಿದೆ. ಇದು ಪ್ರಜಾ ವಿರೋಧಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರುತ್ತಿರುವ ಸಂದರ್ಭ. ಇಲ್ಲಿ ದಲಿತರಿಗೆ ಯಾವ ಪಾಲೂ ಇಲ್ಲ, ಕೂಲಿಯೂ ಇಲ್ಲ. ಎಡ-ಬಲ ಎಂಬ ಪಾಕೃತ ಸಿದ್ಧಾಂತ ಮೂಲ ಮಾದರಿಗಳ ಮೇಲೆ ನಾವು ಮತಾಡುತ್ತಾ ಹೊರಟರೆ ಜನರನ್ನು ಹಳ್ಳಕ್ಕೆ ತಳ್ಳುವುದು ಗ್ಯಾರಂಟಿ.

ದಲಿತರು ಸಮಾಜದ ಮುಖ್ಯವಾಹಿನಿಗೆ ಬರುವುದು ಹೇಗೆ? ದಲಿತರು ಪೂರಾ ಬಡವರಾಗಿದ್ದರೂ, ದಲಿತರಲ್ಲಿ ಅಸ್ಪೃಶ್ಯರು ಅಲ್ಲದವರೂ ಇದ್ದಾರೆ. ನೂರೆಂಟು ಚಿಕ್ಕ ಗುಂಪುಗಳಲ್ಲಿ ಪ್ರತ್ಯೇಕ ಹೆಸರಿಂದ ಬದುಕುತ್ತಿರುವ ಕೆಳ-ತಳ ಜನ ವರ್ಗದವಲು ಬಹಳ ಕಷ್ಟದಲ್ಲಿದ್ದಾರೆ. ಅವರಿಗಾಗಿರುವುದು ಒಂದೇ ತಾವು ಎಲ್ಲರ ಜೊತೆಗೂ ಮುಟ್ಟಿಸಿಕೊಳ್ಳಬಹುದು ಎಂಬುದು. ಕರ್ನಾಟಕದ ಬ್ರಾಹ್ಮಣರು, ವೀರಶೈವರು, ಒಕ್ಕಲಿಗರು ಮತ್ತು ಕುರುಬರನ್ನು ಬಿಟ್ಟು ಉಳಿದವರೆಲ್ಲ ದಲಿತ ಪರಿಕಲ್ಪನೆಯಲ್ಲಿ ಒಂದುಗೂಡಬಹುದು. ಆದರೆ ಇವರೆಲ್ಲ ಸಣ್ಣ ಸಣ್ಣ ಸ್ವಾಮಿ ಮತ್ತು ಮಠಗಳನ್ನು ಮಾಡಿಕೊಳ್ಳುತ್ತಾ ಬಡಕೊಳ್ಳುತ್ತಿದ್ದಾರೆ. ರಾಜಕೀಯ ಶಕ್ತಿಯನ್ನು ಪಡೆಯಬೇಕೆಂಬುದೇ ಈ ಬಗೆಯ ಕೇಂದ್ರೀಕರಣಕ್ಕೆ ಕಾರಣ. ಆದರೆ ಅದು ಎಷ್ಟು ಸಾಧು ಮತ್ತು ಸಾಧ್ಯತೆಯನ್ನು ಒಳಗೊಂಡಿದೆ ಎಂಬುದನ್ನು ಮುಂದೆ ನೋಡಬೇಕು.

ದಲಿತ, ಕೆಳ ತಳವರ್ಗದ ಜನರು ಸಮಾನವಾಗಿ ಬದುಕಲು ಮೊದಲು ತೆಗೆದುಕೊಳ್ಳಬೇಕಾದ ಕ್ರಮ ಪುರೋಹಿತ ಶಾಹಿಯ ಎಲ್ಲ ಮೂಲಭೂತವಾದಿ ಚಿಂತನೆಯನ್ನು ತಮ್ಮ ಮನ ಮತ್ತು ಮನೆಯಿಂದ ಓಡಿಸುವುದು. ಎಲ್ಲ ಜಾತಿಗಳಲ್ಲಿ ಬಡವರೂ, ಕಡು ಬಡವರೂ ಇದ್ದಾರೆ. ಅವರಿಗೆ ಹೊಟ್ಟೆಯ ಸಮಸ್ಯೆ ಮಾತ್ರ ಇದೆ. ದಲಿತರಿಗೆ ಮಾನದ ಪ್ರಶ್ನೆ ಮುಖ್ಯವಿದೆ. ಆದ್ದರಿಂದಲೇ ದಲಿತರು ಸಾರಾಸಗಟು ವೈದಿಕ ಸಂಸ್ಕೃತಿಯನ್ನು ನಿರಾಕರಿಸಬೇಕು. ●

ಮತಾಂತರ ಅನಿವಾರ್ಯ,...

(22ನೇ ಪುಟದಿಂದ)

ತಮ್ಮನ್ನು ನಾಯಿ ನರಿಗಳಿಗಿಂತ ಕಡೆಯಾಗಿ ನಡೆಸಿಕೊಂಡಿತೋ ಅಂತಹ ಧರ್ಮದಲ್ಲಿ ಇರಲು ತಾವು ಒಪ್ಪದೇ ಬೌದ್ಧ ಧರ್ಮವನ್ನು ಸ್ವೀಕರಿಸುವ ಮೂಲಕ ಅವರು ತಮ್ಮ ಧಾರ್ಮಿಕ ಆಯ್ಕೆಯನ್ನು ಸ್ಪಷ್ಟಪಡಿಸಿದ್ದು ಉಚಿತವಾಗಿಯೇ ಇದೆ. ಅಂಬೇಡ್ಕರ್‌ರವರು ಮಂತಾತರಗೊಳ್ಳುವ ಸಂದರ್ಭದಲ್ಲಿ ಇದ್ದ ನಮ್ಮ ದೇಶದ ಸಾಮಾಜಿಕ ಪರಿಸ್ಥಿತಿ ಈಗ ಸ್ವಲ್ಪಮಟ್ಟಿಗೆ ಬದಲಾಗಿರುವುದಾದರೂ ಮುಖ್ಯವಾಗಿ ದಲಿತ ವರ್ಗದ ಅದರಲ್ಲೂ ಕೆಳ ದಲಿತ ವರ್ಗದ ಪರಿಸ್ಥಿತಿಯಲ್ಲಿ ಅಂತಹ ಹೇಳಿಕೊಳ್ಳಬಹುದಾದ ಬದಲಾವಣೆ ಆಗಿಲ್ಲವೆಂಬುದು ನಮ್ಮ ದಿನ ನಿತ್ಯದ ವಿದ್ಯಮಾನಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ.

ಈ ಹಿನ್ನೆಲೆಯಲ್ಲಿ ಧಾರ್ಮಿಕವಾಗಿ ದಲಿತರ ಆಯ್ಕೆಯ ಪ್ರಶ್ನೆಯನ್ನು ಕುರಿತು ನಿಖರವಾಗಿ ಉತ್ತರ ಹೇಳುವುದು ತುಂಬ ಕಷ್ಟದ ಕೆಲಸ. ಹಿಂದೂ ಸಮಾಜದೊಳಗೆ ಇದ್ದು ಗೌರವಯುತವಾದ ಅಸ್ತಿತ್ವವನ್ನು ಪಡೆದುಕೊಳ್ಳುವುದು ಸಾಧ್ಯವಾಗದಿದ್ದರೆ ಅವರು ತಮಗೆ ಇಷ್ಟವಾದ ಧರ್ಮಕ್ಕೆ ಮತಾಂತರಗೊಳ್ಳುವುದು ಅನಿವಾರ್ಯವಾಗುತ್ತದೆ. ಆದರೆ ಈಗಾಗಲೇ ಕಂಡಂತೆ ಈ ಮತಾಂತರಗಳೂ ಕೂಡ ಸೃಷ್ಟಿಸುವ ವರ್ಗಬೇಧದ ಪರಿಣಾಮಗಳನ್ನು ನೋಡಿದರೆ ಮತಾಂತರ ದಲಿತರ ಸಮಸ್ಯೆಗೆ ಪರಿಹಾರವಾಗಲಾರದೆಂದೇ ತೋರುತ್ತದೆ.

4) ಸ್ವತಂತ್ರ ಬಂದ ನಂತರ ಮೀಸಲಾತಿಯ ಸೌಲಭ್ಯದ ಮೂಲಕ ಮುಂದೆ ಬಂದ ದಲಿತರು, ಆ ಸೌಲಭ್ಯವನ್ನು ನಿರಾಕರಿಸಿ, ಸ್ವಾವಲಂಬನೆಯಿಂದ ನಿಲ್ಲುವ ಧೈರ್ಯವನ್ನು ಮಾಡಬೇಕಾಗಿದೆ. ದಲಿತರು ಮೀಸಲಾತಿಯಿಂದ ಮಾತ್ರವೇ ತಮ್ಮ ಪ್ರಗತಿ ಸಾಧ್ಯವೆಂದು ತಿಳಿದರೆ ಸ್ಪರ್ಧಾತ್ಮಕ ಮನೋಭಾವಕ್ಕೆ ಧಕ್ಕೆ ಉಂಟಾಗುವುದರಲ್ಲಿ ಸಂದೇಹವಿಲ್ಲ. ಈಗಾಗಲೇ ಮೀಸಲಾತಿಯ ಮೂಲಕ ಮುಂದುವರಿದ ದಲಿತರು ತಮ್ಮ ಸಮಾಜದಲ್ಲಿ ಯಾವುದೇ ಸವಲತ್ತುಗಳನ್ನು ಪಡೆಯದ ದಲಿತ ವರ್ಗದವರ ಪ್ರಗತಿಯ ಬಗೆಗೆ ಗಂಭೀರವಾದ ವಿಚಾರ ಹಾಗೂ ಪ್ರಯತ್ನಗಳನ್ನು ಮಾಡಬೇಕಾಗಿದೆ. ಮತ್ತು ನಮ್ಮ ದಲಿತ ಹೋರಾಟಗಳು ದಲಿತರ ಆರ್ಥಿಕ ಸಾಮಾಜಿಕ ಪ್ರಗತಿಯ ಕಡೆಗೆ ಹೇಗೋ ಹಾಗೆ. ಒಂದು ಜನಾಂಗದ ಪ್ರಜ್ಞಾ ಸ್ತರಗಳನ್ನು ವಿಸ್ತರಿಸುತ್ತ ಅವರನ್ನು ಸಮಗ್ರ ಮಾನವರನ್ನಾಗಿ ರೂಪಿಸುವುದು ಹೇಗೆ ಎನ್ನುವುದನ್ನು ಕುರಿತು ಯೋಚಿಸಬೇಕಾಗಿದೆ. ●

ದುರ್ಬಲರ ದನಿಯಾದ ಅರಸು

ಕರ್ನಾಟಕದ ಮೂಲಕ ತಮ್ಮ 4 ದಶಕಗಳ ವಿಶಿಷ್ಟ ರಾಜಕಾರಣದಿಂದಾಗಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡವರು ದಿವಂಗತ ಡಿ. ದೇವರಾಜ ಅರಸುರವರು. 8 ವರ್ಷಗಳ ಕಾಲ ರಾಜ್ಯ ಮುಖ್ಯಮಂತ್ರಿಗಳೂ ಆಗಿದ್ದ ಅರಸುರವರು ಅನೇಕ ಅಡೆ-ತಡೆಗಳ ನಡುವೆಯೂ ದಲಿತರ-ಹಿಂದುಳಿದವರ ಏಳಿಗೆಗಾಗಿ ಕೈಗೊಂಡ ಕ್ರಾಂತಿಕಾರಿ ನಿರ್ಧಾರಗಳು ಅವರ ಸಾಮಾಜಿಕ ಕಳಕಳಿಗೆ ಹಿಡಿದ ಕೈಗನ್ನಡಿ. ಇದೇ ಆಗಸ್ಟ್ 20, ಶೋಷಿತರಿಗೆ /ದುರ್ಬಲರ ಪರವಾಗಿ ಸದಾ ತುಡಿಯುತ್ತಿದ್ದ ಅರಸುರವರ ಜನ್ಮದಿನ. ದಲಿತರು-ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಒಂದೇ ವೇದಿಕೆಗೆ ತರಬಯಸಿರುವ "ಸಂವಾದ" ಅರಸುರವರನ್ನು ಗೌರವದಿಂದ ಸ್ಮರಿಸುವ ಈ ಲೇಖನ ನಿಮಗಾಗಿ.

○ ಡಾ. ಚಂದ್ರಮಾ ಎಸ್. ಕಣಗಲಿ

ಜಗತ್ತಿನಾದ್ಯಂತ ಶೋಷಣೆ ವಿವಿಧ ರೂಪದಲ್ಲಿರುವುದನ್ನು, ಶೋಷಿತವರ್ಗವನ್ನು ಮೇಲೆತ್ತಲು ಕಾಲಕಾಲಕ್ಕೆ ಪ್ರಯತ್ನಗಳಾಗಿರುವುದನ್ನು ಇತಿಹಾಸ ತೋರಿಸುತ್ತದೆ. ದುರ್ಬಲರನ್ನು ಪ್ರಬಲರು, ಇಲ್ಲದವರನ್ನು ಉಳ್ಳವರು ಶೋಷಿಸುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಇತ್ತೀಚೆಗೆ "ಮಾನವ ಹಕ್ಕು"ಗಳಿಗಾಗಿ ನಡೆದಿರುವ ಆಂದೋಲನವನ್ನು ಕೂಡ ಗಮನಿಸಬಹುದಾಗಿದೆ. ವರ್ಣಭೇದ, ವರ್ಗಭೇದ, ಧರ್ಮಭೇದ, ಜಾತಿಭೇದ ನಿವಾರಿಸಲು ಪ್ರಯತ್ನಗಳನ್ನು ದಾರ್ಶನಿಕರು ಕಾಲಕಾಲಾಂತರದಿಂದ ಮಾಡುತ್ತಾ ಬಂದಿರುತ್ತಾರೆ.

ನಮ್ಮ ರಾಜ್ಯದ ಸ್ವಾತಂತ್ರ್ಯಾ ನಂತರದ ಇತಿಹಾಸವನ್ನು ಗಮನಿಸಿದಾಗ ಇಂಥ ದಾರ್ಶನಿಕರ ಸಾಲಿನಲ್ಲಿ ಸಹಜವಾಗಿ ಮೂಡಿಬರುವ ವ್ಯಕ್ತಿ ದಿವಂಗತ ಡಿ. ದೇವರಾಜ ಅರಸು, ಸ್ವಾತಂತ್ರ್ಯಾನಂತರ, ರಾಜತ್ವ ಹೋಗಿ ಪ್ರಜಾಪ್ರಭುತ್ವ ಬಂದ ನಂತರವೂ, ಅರಸರು ಸ್ವತಃ ಅರಸು ಕುಲಕ್ಕೆ ಸೇರಿದ್ದರೂ ಪ್ರಜೆಗಳನ್ನೆ ಪ್ರಭುಗಳನ್ನಾಗಿ ಮಾಡಿದರು. ವರ್ಗಭೇದ ಹೋಗಲಾಡಿಸಲು ಸಾಮಾನ್ಯರಲ್ಲಿ ಅತಿ ಕೆಳಸ್ತರದವರನ್ನು ಮೇಲೆತ್ತಿದವರು, ಅರಸು. ದುರ್ಬಲರಿಗೆ ಬಲಕೊಟ್ಟು ಅವರಲ್ಲಿ ನಾಯಕತ್ವ ಬೆಳೆಸಿದವರು ಅರಸು. ಅಂಥವರಿಂದು ಪ್ರಭುಗಳಾಗಿ ಆಳುವಂತೆ ಮಾಡಿದವರು ದೇವರಾಜು ಅರಸು. ಸುಮಾರು 40 ವರ್ಷಗಳ ತಮ್ಮ ಯಶಸ್ವಿ ರಾಜಕೀಯ ಜೀವನದಲ್ಲಿ ಸುಮಾರು 8 ವರ್ಷಗಳ ದೀರ್ಘಾವಧಿಯ ಮುಖ್ಯಮಂತ್ರಿತ್ವದ ಕಾಲದಲ್ಲಿ ಅಪಾರ ದಾರ್ಶನಿಕತೆ ತೋರಿ ಕಾರ್ಯಸಾಧನೆ ಮಾಡಿದರು ದೇವರಾಜ ಅರಸುರವರು.

ಕರ್ನಾಟಕದ ಇತಿಹಾಸದಲ್ಲಿ ತನ್ನ ಸ್ವಂತ ಪ್ರತಿಭೆ ಸ್ವಸಾಮರ್ಥ್ಯದಿಂದ ರಾಜಕೀಯ ಶಿಖರವನ್ನು ತಲುಪಿದ ದೊಡ್ಡಮನೆ ದೇವರಾಜ ಅರಸು ಹುಟ್ಟಿದ್ದು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ಆಗಸ್ಟ್ 20, 1915ರಂದು. ಸುಭಾಷ್ ಚಂದ್ರಬೋಸರ ಬಗ್ಗೆ ಅಪಾರ ಒಲವುಳ್ಳ ಅರಸು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ವಿಜ್ಞಾನದಲ್ಲಿ ಪದವೀಧರರಾದವರು. ಹುಣಸೂರಿನ ಶ್ರೀನಿವಾಸ ಅಯ್ಯಂಗಾರ್, ಸಾಹುಕಾರ ಚೆನ್ನಯ್ಯ ಮತ್ತು ಜಿ. ಕೃಷ್ಣಮೂರ್ತಿಯವರ ಬೆಂಬಲದಿಂದ ಅರಸು ಅವರು 1941ರಲ್ಲೆ ತನ್ನ 25ರ ಪ್ರಾಯದಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಚುನಾಯಿತರಾದರು. 1945ರಲ್ಲಿ ಪುನಃ ಒತ್ತಾಯದ ಮೇರೆಗೆ ಸ್ಪರ್ಧಿಸಿ ಜಯಗಳಿಸಿದ ದೇವರಾಜ ಅರಸರಿಗೆ ನಂತರ ರಾಜಕೀಯವೇ ಉಸಿರಾಯಿತು.

ರಾಜ್ಯದಲ್ಲಿ ಕೆಂಗಲ್ ಹನುಮಂತಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ, 1952ರಲ್ಲಿ ಪ್ರಥಮ ಮಹಾ ಚುನಾವಣೆಯಲ್ಲಿ ಅರಸುರವರು ಹುಣಸೂರು ಕ್ಷೇತ್ರದಿಂದ ರಾಜ್ಯದ ವಿಧಾನ ಸಭೆ ಪ್ರವೇಶಿಸಿದರು. ಮತ್ತೆ 1957ರಲ್ಲಿ ಅವರಿಗೆ ಗೆಲುವು ಸುಲಭ ಸಾಧ್ಯವಾಯಿತು. 1952ರಿಂದ 1962ರವರೆಗೆ ಶಾಸನ ಸಭಾ ಸದಸ್ಯರಾಗಿದ್ದು, ಅರಸು ಅವರು ತದನಂತರ ಅನೇಕ ಖಾತೆಗಳಾದ ಸಾರಿಗೆ, ಕಾರ್ಮಿಕ, ಪ್ರವಾಸೋದ್ಯಮ, ಪಶು ಸಂಗೋಪನೆ, ವಾರ್ತಾ ಮತ್ತು ಪ್ರಚಾರ, ಮೀನುಗಾರಿಕೆ ಮತ್ತು ರೇಷ್ಮೆ ಉದ್ಯಮ-ಮಂತ್ರಿಗಳಾಗಿ ಅಪಾರ ರಾಜಕೀಯ ಅನುಭವ ಪಡೆದರು. ಪ್ರಜಾ ಸೋಷಿಯಲಿಸ್ಟ್ ಪಕ್ಷ, ಸ್ವತಂತ್ರ ಪಕ್ಷ, ಆಗಿನ ರಾಜ್ಯಮಟ್ಟದ ಜನತಾ ಪಕ್ಷಗಳೆಲ್ಲ ಆಡಳಿತ ಕಾಂಗ್ರೆಸ್ಸಿನ ಅಡಿಯಲ್ಲಿ ಒಂದಾಗಿ ಆ ಪಕ್ಷ ಬಲಗೊಂಡ ಹಂತದಲ್ಲಿ ಅರಸುರವರು ಕಾಂಗ್ರೆಸ್ಸಿನ ರಾಜ್ಯ ಸಂಚಾಲಕರಾಗಿದ್ದರು. ರಾಜ್ಯದ ಎಲ್ಲಾ 27 ಲೋಕಸಭಾ ಕ್ಷೇತ್ರಗಳಿಗೂ ಸೂಕ್ತ ಅಭ್ಯರ್ಥಿಗಳನ್ನು ನಿಲ್ಲಿಸಿದ ಅರಸು 1971ರ ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷ ಬಹುಮತದ ಗೆಲುವು ಪಡೆಯುವಂತೆ ಶ್ರಮಿಸಿ "ಗೆಲುವಿನ ಶಿಲ್ಪಿ" ಎನ್ನಿಸಿಕೊಂಡರು. ಅವರೇ 1972ರ ಮಾರ್ಚ್ 20ರಂದು ಕರ್ನಾಟಕದ 8ನೇ ಮುಖ್ಯಮಂತ್ರಿಯಾದರು. ಉತ್ತರ ಭಾರತದಲ್ಲಿ ಯಶಸ್ವಿಯಾಗದ ಅನೇಕ ಯೋಜನೆಗಳು, ಕಾರ್ಯಕ್ರಮಗಳು ಅರಸರ ಕಾಲದಲ್ಲಿ ಕರ್ನಾಟಕದಲ್ಲಿ ಯಶಸ್ಸು ಕಂಡವು.

ದೇವರಾಜ ಅರಸುರವರು ಸಾಮಾಜಿಕ ಕಳಕಳಿಯುಳ್ಳ ದಕ್ಷತೆ ಮತ್ತು ಬದ್ಧತೆಯುಳ್ಳ ಕೆಲವೇ ವಿಭಿನ್ನ ರಾಜಕಾರಣಿಗಳಲ್ಲೊಬ್ಬರು. ಸಮಾಜದಲ್ಲಿ ಪ್ರತಿಯೊಬ್ಬರೂ ಗೌರವಯುತವಾಗಿ ಬಾಳಬೇಕು ಎಂಬ ಮನೋಭಾವನೆಯ ಅರಸು ಸಮಾಜವಾದ ಹೇಳುವುದನ್ನು ಅನುಷ್ಠಾನಕ್ಕೆ ತಂದ ಮಹಾನುಭಾವರು. ಸಮಾಜದಲ್ಲಿ ದನಿಯಿಲ್ಲದವರಿಗೆ ಮಾತಿನ ಬಲಕೊಟ್ಟರು. ಯಾರನ್ನು ಸಮಾಜ ಗಮನಿಸುತ್ತಿರಲಿಲ್ಲವೋ ಅವರಿಗೆ ಶಕ್ತಿ ಕೊಟ್ಟು, ಅವರನ್ನು ಸಮಾಜ ಗುರುತಿಸುವಂತೆ, ಗೌರವಿಸುವಂತೆ ಮಾಡಿದರು. ದುರ್ಬಲರಿಗೆ ಧೈರ್ಯ ಆತ್ಮಸ್ಥೈರ್ಯ ತಂದುಕೊಟ್ಟರು. ಈ ದಿಸೆಯಲ್ಲಿ ಅರಸು ಅವರ ಭೂ ಸುಧಾರಣೆ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದದ್ದು ಒಂದು ದಿಟ್ಟಹೆಜ್ಜೆ. ನಮ್ಮ ದೇಶದ ರಾಜಕೀಯ ಇತಿಹಾಸದಲ್ಲಿ ಅದೊಂದು ಮೈಲಿಗಲ್ಲು.

ಅತಿ ಮುಖ್ಯವಾಗಿ ವರ್ಗ-ಜಾತಿಗಳನ್ನು ವೈಜ್ಞಾನಿಕವಾಗಿ ಗುರುತಿಸಿ, ದುರ್ಬಲ ವರ್ಗದ ಮತ್ತು ದಲಿತರ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ದೇವರಾಜ ಅರಸುರವರು ಹಾವನೂರು ಸಮಿತಿಯನ್ನು ರಚಿಸಿದರು. ಈ ನಿಟ್ಟಿನಲ್ಲಿ ಅನೇಕ ಜನಪರ ಕಾಯ್ದೆ ಜಾರಿಗೊಂಡವು.

ದೇವರಾಜ ಅರಸುರವರು ಸಾಮಾಜಿಕ ಕಳಕಳಿಯುಳ್ಳ ದಕ್ಷತೆ ಮತ್ತು ಬದ್ಧತೆಯುಳ್ಳ ಕೆಲವೇ ವಿಭಿನ್ನ ರಾಜಕಾರಣಿಗಳಲ್ಲೊಬ್ಬರು. ಸಮಾಜದಲ್ಲಿ ಪ್ರತಿಯೊಬ್ಬರೂ ಗೌರವಯುತವಾಗಿ ಬಾಳಬೇಕು ಎಂಬ ಮನೋಭಾವನೆಯ ಅರಸು ಸಮಾಜವಾದ ಹೇಳುವುದನ್ನು ಅನುಷ್ಠಾನಕ್ಕೆ ತಂದ ಮಹಾನುಭಾವರು. ಸಮಾಜದಲ್ಲಿ ದನಿಯಿಲ್ಲದವರಿಗೆ ಮಾತಿನ ಬಲಕೊಟ್ಟರು. ಯಾರನ್ನು ಸಮಾಜ ಗಮನಿಸುತ್ತಿರಲಿಲ್ಲವೋ ಅವರಿಗೆ ಶಕ್ತಿ ಕೊಟ್ಟು, ಅವರನ್ನು ಸಮಾಜ ಗುರುತಿಸುವಂತೆ, ಗೌರವಿಸುವಂತೆ ಮಾಡಿದರು. ದುರ್ಬಲರಿಗೆ ಧೈರ್ಯ ಆತ್ಮಸ್ಥೈರ್ಯ ತಂದುಕೊಟ್ಟರು. ಈ ದಿಸೆಯಲ್ಲಿ ಅರಸು ಅವರ ಭೂ ಸುಧಾರಣೆ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದದ್ದು ಒಂದು ದಿಟ್ಟಹೆಜ್ಜೆ. ನಮ್ಮ ದೇಶದ ರಾಜಕೀಯ ಇತಿಹಾಸದಲ್ಲಿ ಅದೊಂದು ಮೈಲಿಗಲ್ಲು.



"ಯಾವುದೇ ಸಹಾಯ ಅಥವಾ ಯೋಜನೆ ಸಮರ್ಪಕವಾಗಿರಬೇಕು, ಅದು ಆರಂಭದಿಂದ ಕೊನೆಯವರೆಗೂ ಹಂತ ಹಂತವಾಗಿ ಬೆಳೆಯಬೇಕು, ಆಗಲೇ ಅದು ಫಲದಾಯಕವಾಗುವುದು" ಎಂದು ಬಲವಾಗಿ ನಂಬಿದ್ದ ದೇವರಾಜ ಅರಸುರವರ ಆಡಳಿತ ಕಾಲದಲ್ಲಿ ಭೂ ಸುಧಾರಣೆ ಅರ್ಥಪೂರ್ಣವಾಗಿ ಜಾರಿಗೆ ಬಂದಿತ್ತು. ನಮ್ಮದು ಕೃಷಿ ಪ್ರಧಾನವಾದ ನಾಡು, ಆದರೆ ಕೃಷಿ ಸಂಬಂಧಿತ ಸಾಂಸ್ಥಿಕ ರಚನೆಯನ್ನು ಗಮನಿಸಿದಾಗ ಕಂಡು ಬರುವುದೇನೆಂದರೆ ಉಳುವವನ ಬಳಿ ಭೂಮಿ ಇಲ್ಲ. ಆದ್ದರಿಂದ ಭೂ ಸುಧಾರಣೆ ಸರ್ವ ಪ್ರಗತಿಯ ಮೂಲಾಧಾರ ಎಂದರಿತವರು ದೇವರಾಜ ಅರಸರು. ಆ ವೇಳೆಗಾಗಲೇ ಸಮಾಜವಾದಿ ಹೋರಾಟ ಶಾಂತವೇರಿ ಗೋಪಾಲಗೌಡರ ಮೂಲಕ ಕರ್ನಾಟಕವನ್ನು ತಲುಪಿ ಕೃಷಿಕರನ್ನು ಪ್ರಚೋದಿಸುತ್ತಿತ್ತು. "ಉಳುವವನೇ ಹೊಲದ ಒಡೆಯ" ಎನ್ನುವ ಮಾತನ್ನು ನಿಜವಾಗಿಸಲು ಗೇಣಿದಾರರು ಉತ್ಸುಕರಾಗಿದ್ದರು. 1972 ರಿಂದ 1977ರ ಅವಧಿಯಲ್ಲಿ ಕರ್ನಾಟಕ ಭೂ ಸುಧಾರಣೆಗಳ ಕಾಯ್ದೆಯ ರಚನೆಯಾಯಿತು. ಶಾಸನ ಸಭೆಯಲ್ಲಿ ಅದರ ಮಂಡನೆ, ಚರ್ಚೆ ಮತ್ತು ತಿದ್ದುಪಡಿಗಳು ಆದವು. ಮುಂದೆ ಅದಕ್ಕೆ ರಾಷ್ಟ್ರಪತಿಗಳ ಅಂಗೀಕಾರವು ದೊರೆಯಿತು. ಆದರೆ ಭೂ ಸುಧಾರಣೆ ನ್ಯಾಯ ಮಂಡಳಿ ಜಾರಿಯಾಗದೇ ಹೋಗಿದ್ದರೆ, ಭೂ ಸುಧಾರಣೆ ಕಾಯ್ದೆ ಖಂಡಿತ ಯಶಸ್ಸು ಸಾಧಿಸುತ್ತಿರಲಿಲ್ಲ. ಭೂ ಸುಧಾರಣೆ ಮಂಡಳಿ ಪ್ರಬಲ ಕೋವುಗಳಿಂದ ಗೇಣಿದಾರರನ್ನು ರಕ್ಷಿಸಿತು. ಸಂಘಟಿತರಲ್ಲದ ಅಮಾಯಕ, ಅವಿದ್ಯಾವಂತ, ದುರ್ಬಲ ವರ್ಗಕ್ಕೆ ನ್ಯಾಯ ದೊರಕಿತು. ಏಕೆಂದರೆ ಭೂಮಿಯನ್ನೇ ನೆಚ್ಚಿಕೊಂಡ ಗೇಣಿದಾರರಿಗೆ ವ್ಯವಹಾರ ಲೋಕದ ನೀತಿ ನಿಯಮಗಳು ತಿಳಿದಿರಲಿಲ್ಲ. ಅವರಲ್ಲಿನ ವಿದ್ಯಾವಂತ ಅಲ್ಪಸಮುದಾಯದಲ್ಲಿ ಹೋರಾಟ ಮನೋಭಾವ ಇರಲಿಲ್ಲ. ಆದಕಾರಣ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಸರ್ಕಾರ ಪರಿಹಾರ ಧನ ನೀಡಿ ಕೊಂಡುಕೊಂಡಿತು. ಇಂತಹ ಭೂಮಿಗಳು ಕೃಷಿ ಕಾರ್ಮಿಕರಿಗೆ ಜೀತದಿಂದ ವಿಮುಕ್ತಿಗೊಂಡವರಿಗೆ, ಕಡು ಬಡವರಿಗೆ ದೊರಕಿತು. ಭೂ ಸುಧಾರಣಾ ಕಾನೂನಿನ ಕಾರ್ಯಾಚರಣೆಯಿಂದಾಗಿ ಕರ್ನಾಟಕದ ಗ್ರಾಮಗಳಲ್ಲಿ ಪರೋಕ್ಷವಾಗಿ ಒಂದು ಕ್ರಾಂತಿಯೇ ಆರಂಭವಾಯಿತು. ಭೂ ಸುಧಾರಣೆ ಸಂಬಂಧಿಸಿದಂತೆ ಗ್ರಾಮಸ್ಥರು ನ್ಯಾಯಾಲಯಕ್ಕೆ ಅಲೆದಾಡುವ ಬದಲಾಗಿ ಅವರ ಬಳಿಯೇ ಭೂ ಸುಧಾರಣಾ ಮಂಡಳಿಗಳು ರಚನೆಗೊಂಡವು. ಆ ಮಂಡಳಿಗಳಲ್ಲಿ ರೈತ ಪ್ರತಿನಿಧಿಗಳು, ಶಾಸಕರು, ದಲಿತ ಪ್ರತಿನಿಧಿಗಳು ಇರುತ್ತಿದ್ದರು. ಬಡ ಅವಿದ್ಯಾವಂತ ಗೇಣಿದಾರ ತನ್ನ ಹಕ್ಕು, ನ್ಯಾಯ ಪಡೆಯುವಂತೆ ವ್ಯವಸ್ಥೆ ಆಯಿತು.

ದೇವಾಲಯದ ಉಂಬಳಿ ಜಮೀನುಗಳು ಕೂಡ ಭೂ ಸುಧಾರಣೆ ಕಾನೂನಿಗೆ ಒಳಪಟ್ಟವು. ದೇವಾಲಯದ ಭೂಮಿಯನ್ನು ಗೇಣಿದಾರನೇ ಇರಲಿ ಅಥವಾ ಪೂಜಾರಿಯೇ ಗೇಣಿ ಮಾಡುತ್ತಿದ್ದರೆ, ಅದು ಆತನಿಗೆ ದೊರೆಯುತಕ್ಕದ್ದು ಎಂದಾಯಿತು. ದೇವಾಲಯಕ್ಕೆ ಸರ್ಕಾರವೇ ಒಂದು ಮೊಬಲಗಿನ ಹಣ ನೀಡುವುದು ಎಂದು ತೀರ್ಮಾನವಾಯಿತು. ಸ್ವಾಧೀನ ಪಡಿಸಿಕೊಂಡ ಎಲ್ಲಾ ಭೂಮಿಗಳಿಗೂ ಸರ್ಕಾರ ಪರಿಹಾರ ಧನ ಪಾವತಿಸುತ್ತಿತ್ತು. ಭೂ ಸುಧಾರಣೆ ಕಾನೂನಿನಡಿಯಲ್ಲಿ ಅರಸು ಅವರ ಅನೇಕ ಮಿತ್ರರೂ, ಭೂ ಮಾಲೀಕರು, ರಾಜಕಾರಣಿಗಳೂ, ಕಾಂಗ್ರೆಸ್ ಪಕ್ಷದ ಮಂತ್ರಿಗಳು, ಶಾಸಕರು, ಬಂಡವಾಳಶಾಹಿಗಳು ಭೂಮಿಯನ್ನು ಕಳೆದುಕೊಂಡರು. ಆದರೆ ದೇವರಾಜ ಅರಸುರವರು ಯಾರ ಪ್ರಭಾವಕ್ಕೂ ಒಳಗಾಗದೇ ಕಟ್ಟುನಿಟ್ಟಾಗಿ ಭೂ ಸುಧಾರಣೆ ಕೈಗೊಂಡಿದ್ದು ಒಂದು ದೊಡ್ಡ ಸಾಧನೆ ಎನ್ನಬಹುದು.

ಸಮೃದ್ಧ ಕರ್ನಾಟಕ ಕಟ್ಟುವುದೇ ಅರಸುರವರ ಕನಸಾಗಿತ್ತು. ಈ ನಿಟ್ಟಿನಲ್ಲಿ ಅವರು ರಾಜ್ಯಕ್ಕೆ ಕೊಟ್ಟ ಕೊಡುಗೆಗಳು ಅನೇಕ. ಮುಖ್ಯವಾಗಿ ಮೊಟ್ಟ ಮೊದಲು ಕನ್ನಡಿಗರೆಲ್ಲ ಹೆಮ್ಮೆಪಡುವ ಸಂತೋಷಪಡುವ ಕೆಲಸವನ್ನು ಅರಸು ಮಾಡಿದ್ದು ರಾಜ್ಯದ ನಾಮಕರಣ. 1-11-1973ರಂದು ಮೈಸೂರು ರಾಜ್ಯ "ಕರ್ನಾಟಕ" ಎನ್ನುವ ಹೆಸರು ಪಡೆದುಕೊಂಡು ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬಂದು "ಕನ್ನಡ ಡಿಂಡಿಮ" ಬಾರಿಸತೊಡಗಿದ್ದು ದೇವರಾಜ ಅರಸರಿಂದಾಗಿಯೇ.

ಶಿಕ್ಷಣಕ್ಕೆ ಆದ್ಯತೆ, ವಿವಿಧ ಭತ್ಯೆಗಳ ಮಂಜೂರಾತಿ, ನೀರಾವರಿ ಕಾಮಗಾರಿಗಳ ಅನುಷ್ಠಾನ, ಕೃಷಿಯ ಆಧುನೀಕರಣ, ಒಣ ಭೂಮಿ ಬೇಸಾಯಕ್ಕೆ ಪ್ರೋತ್ಸಾಹ, ಕೈಗಾರಿಕಾ ವಿಕೇಂದ್ರೀಕರಣ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ, ಯುವ ಪೀಳಿಗೆಗಾಗಿ ಪೂರಕ ಉದ್ಯೋಗ ಕಾರ್ಯಕ್ರಮ, ಗ್ರಾಮೀಣರಿಗೆ ಉದ್ಯೋಗ ಖಾತ್ರಿ ಯೋಜನೆ ಮುಂತಾದ ದೇವರಾಜ ಅರಸರ ಕಾರ್ಯ ಯೋಜನೆಗಳು ಹಂತ ಹಂತವಾಗಿ ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ಹರಡಿದವು. ಅವರ ಕಾಲದಲ್ಲಿ ಪ್ರಪ್ರಥಮ ಬಾರಿಗೆ ಜೀತ ಪದ್ಧತಿಯಿಂದ ಜೀತದಾಳುಗಳು ಬಿಡುಗಡೆ ಹೊಂದಿದರು. ಗ್ರಾಮೀಣ ಪ್ರದೇಶಗಳಲ್ಲಿ ಜೀತ ಪದ್ಧತಿಯನ್ನು ಬೇರು ಸಹಿತ ಕಿತ್ತು ಹಾಕಿದವರು ದೇವರಾಜ ಅರಸುರವರು. ಅರಸುರವರ ಸರ್ಕಾರ ದುಡಿಯುವವರಿಗೆ ಕನಿಷ್ಠ ಕೂಲಿಯನ್ನು ನಿಗದಿಪಡಿಸಿತು. ಭೂ ಸುಧಾರಣೆಯಂತೂ ಸಾಮಾಜಿಕ ಪರಿವರ್ತನೆಯ ನಾಂದಿಯಾಯಿತು. ಬಡತನದಿಂದ ಮಂಕಾಗಿದ್ದ; ಸಾಮಾಜಿಕವಾಗಿ ಕೆಳಸ್ತರದಲ್ಲಿದ್ದ ಜನರ ಬದುಕಿನ ಸಮಗ್ರ ಬದಲಾವಣೆಗಾಗಿಯೇ ಅರಸು ಅವರು ಎಲ್.ಜಿ. ಹಾವನೂರರ ವರದಿಯನ್ನು ಅನುಷ್ಠಾನಕ್ಕೆ ತಂದರು. ಹಿಂದುಳಿದ ವರ್ಗಗಳ ಯುವ ಜನಾಂಗ ಶಿಕ್ಷಣ ಪಡೆದರು. ಉದ್ಯೋಗದಲ್ಲಿ ಮೀಸಲಾತಿ ಪಡೆದರು. ಹಳ್ಳಿಯ ಮುಗ್ಧ ಅನಕ್ಷರಸ್ಥ ವಿಧವೆಯರಿಗಾಗಿ ವಿಧವಾ ವೇತನ ನೀಡುವ ಯೋಜನೆ ಜಾರಿಗೆ ಬಂದಿತು. ಅದೇ ರೀತಿ ನಾಡಿನ ಹಿರಿಯ ನಾಗರೀಕರಾದ ವೃದ್ಧರಿಗೆ ವೃದ್ಧಾಪ್ಯ ವೇತನವನ್ನು ಕೊಡಲು ಆರಂಭವಾಯಿತು. ಶಿಕ್ಷಣದ ಗಂಧವೇ ಇಲ್ಲದ ಹಿಂದುಳಿದ ವರ್ಗದವರಿಗಾಗಿ ದೇವರಾಜ ಅರಸುರವರು ಪ್ರಾಥಮಿಕ ಹಂತದಲ್ಲಿಯೇ ವಿದ್ಯಾರ್ಥಿನಿಲಯಗಳ ಸ್ಥಾಪನೆ ಮಾಡಿದರು. ಅವರು ಉನ್ನತ ಶಿಕ್ಷಣ ಹಾಗೂ ಕಾಲೇಜು ಶಿಕ್ಷಣದ ಬಗ್ಗೆಯೂ ತೀವ್ರ ಕಾಳಜಿಯನ್ನು ತೋರಿದರು. 1977ಕ್ಕೆ ಮುಂಚೆ ಖಾಸಗಿ ಶಾಲಾ ಕಾಲೇಜುಗಳು ಅವ್ಯವಸ್ಥೆಯ ಆಗರಗಳಾಗಿದ್ದವು. ಸಿಬ್ಬಂದಿಯ ಸ್ಥಿತಿ ಶೋಚನೀಯವಾಗಿತ್ತು. ಅವರಿಗೆ ಯಾವುದೇ ಸೇವಾ ಭದ್ರತೆಯಾಗಲೀ, ಸರಿಯಾದ ವೇತನವಾಗಲಿ ದೊರಕುತ್ತಿರಲಿಲ್ಲ. ಅಂತಹ ಸಮಯದಲ್ಲಿ ಅರಸು ಸರ್ಕಾರವು ಸಿಬ್ಬಂದಿ ವರ್ಗ ಮತ್ತು ಆಡಳಿತ ವರ್ಗದ ಜೊತೆ ಪ್ರತ್ಯೇಕವಾಗಿ ಚರ್ಚಿಸಿ ಸಂವಾದಿಸಿದರು. ಆ ಒಪ್ಪಂದಗಳ ಫಲವಾಗಿ ಶಿಕ್ಷಣ ಕ್ಷೇತ್ರದಲ್ಲಿನ ಶೋಷಿತರು ಸರಿಯಾದ ವೇತನ ಹಾಗೂ



ದೇವರಾಜ ಅರಸುರವರು ಕರ್ನಾಟಕದ ಅಭಿವೃದ್ಧಿಗಾಗಿ, ರಾಜ್ಯದ ರಾಜಕೀಯ, ಆರ್ಥಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ರಾಜಕೀಯದಲ್ಲಿ ಎಲ್ಲಾ ಜನಾಂಗಗಳು ಇರಬೇಕೆಂದು ಬಯಸಿದ ಅರಸುರವರು ಹಿಂದುಳಿದ ವರ್ಗದವರನ್ನು ಮತ್ತು ಅಲ್ಪ ಸಂಖ್ಯಾತರನ್ನು ರಾಜಕೀಯ ಮುಖ್ಯವಾಹಿನಿಯಲ್ಲಿ ತಂದರು. ಭೂ ಸುಧಾರಣೆಯಂತಹ ಶಾಸನವನ್ನು ಜಾರಿಗೆ ತರುವಾಗ ಅಲ್ಪ ಸಂಖ್ಯಾತ ಕೋಮಿನಿಂದ ಬಂದ ಅರಸುರವರು ಹಿಂದುಳಿದ ವರ್ಗ, ದುರ್ಬಲ ವರ್ಗ, ದಲಿತರು ಹಾಗೂ ಪ್ರಬಲ ಕೋಮುಗಳು ಎಲ್ಲವನ್ನು ರಾಜಕೀಯ ನೆಲೆಯಲ್ಲಿ ಒಂದುಗೂಡಿಸಿದರು.

ಸೇವಾ ಭದ್ರತೆ ಪಡೆಯುವಂತಾಯಿತು. ಚೆಕ್ ಮೂಲಕ ವೇತನ ಜಾರಿಗೆ ಬಂದು ಶಿಕ್ಷಕರು ಒಂದು ರೀತಿಯ ಜೀತದಿಂದ ಮುಕ್ತರಾದರು.

ಶಿಕ್ಷಕರಂತೆಯೇ ಒಂದು ಬಲಿಷ್ಠ ಸಮಾಜದಲ್ಲಿ ಹೊಣೆಗಾರಿಕೆಯಿರುವ ಇನ್ನೊಂದು ವರ್ಗ ಪೊಲೀಸರದು. ಮಹತ್ವದ ಹೊಣೆಗಾರಿಕೆಯಿರುವ ಪೊಲೀಸರಿಂದ ದಕ್ಷತೆ, ಪ್ರಾಮಾಣಿಕತೆ ದೊರೆಯಬೇಕಾದರೆ ಅವರಿಗೆ ಅನುಕೂಲಗಳನ್ನು ಮಾಡಿಕೊಡಬೇಕೆಂದರಿತ ಅರಸುರವರ ಸರ್ಕಾರ ಪೊಲೀಸ್ ಇಲಾಖೆಯ ಪ್ರಗತಿಗೆ ಕೆಲವು ಮುಖ್ಯ ಸುಧಾರಣೆಗಳನ್ನು ಕೈಗೊಂಡಿತು. ಇಲಾಖೆಯಲ್ಲಿಯ ಸಿಬ್ಬಂದಿಯನ್ನು ಹೆಚ್ಚಿಸಲಾಯಿತು. ಅವರಿಗೆ ವಸತಿ ಸೌಕರ್ಯ ಕಲ್ಪಿಸಲಾಯಿತು. ವೇತನ ಭತ್ಯೆ ಹೆಚ್ಚಿಸಲಾಯಿತು. ಪೊಲೀಸ್ ಅಧಿಕಾರಿಗಳಿಗೆ ತರಬೇತಿ ನೀಡುವುದು ಮತ್ತು ತರಬೇತಿಯನ್ನು ಪುನರ್ ನವೀಕರಣಗೊಳಿಸುವ ಯೋಜನೆಗಳು ಕಾರ್ಯರೂಪಕ್ಕೆ ಬಂದವು.

"ಜಾತಿಗಿಂತ ಬಡತನವೇ ಮನುಷ್ಯನ ಶತ್ರು" ಎಂದು ನಂಬಿದ್ದ ದೇವರಾಜ ಅರಸುರವರು ಕರ್ನಾಟಕದ ಅಭಿವೃದ್ಧಿಗಾಗಿ, ರಾಜ್ಯದ ರಾಜಕೀಯ, ಆರ್ಥಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ರಾಜಕೀಯದಲ್ಲಿ ಎಲ್ಲಾ ಜನಾಂಗಗಳು ಇರಬೇಕೆಂದು ಬಯಸಿದ ಅರಸುರವರು ಹಿಂದುಳಿದ ವರ್ಗದವರನ್ನು ಮತ್ತು ಅಲ್ಪ ಸಂಖ್ಯಾತರನ್ನು ರಾಜಕೀಯ ಮುಖ್ಯವಾಹಿನಿಯಲ್ಲಿ ತಂದರು. ಭೂ ಸುಧಾರಣೆಯಂತಹ ಶಾಸನವನ್ನು ಜಾರಿಗೆ ತರುವಾಗ ಅಲ್ಪ ಸಂಖ್ಯಾತ ಕೋಮಿನಿಂದ ಬಂದ ಅರಸುರವರು ಹಿಂದುಳಿದ ವರ್ಗ, ದುರ್ಬಲ ವರ್ಗ, ದಲಿತರು ಹಾಗೂ ಪ್ರಬಲ ಕೋಮುಗಳು ಎಲ್ಲವನ್ನು ರಾಜಕೀಯ ನೆಲೆಯಲ್ಲಿ ಒಂದುಗೂಡಿಸಿದರು. "ದೇಶದಲ್ಲಿ ಬಡವರಿಗೂ ಶ್ರೀಮಂತರಿಗೂ ಇರುವ ಅಂತರ ಆದಷ್ಟೂ ಕಡಿಮೆಯಾಗಬೇಕು. ದೇಶದಲ್ಲಿನ ಉತ್ಪಾದನೆ ಹೆಚ್ಚಾಗಬೇಕು. ಈ ಉತ್ಪಾದನೆಯಲ್ಲಿ ತೊಡಗಿರುವ ಜನರಿಗೆ ಅವರವರ ಯೋಗ್ಯತಾನುಸಾರ ಲಾಭದ ಹಂಚಿಕೆಯಾಗಬೇಕು ಎನ್ನುವ ಗುರಿಯತ್ತ ಕಾರ್ಯಸಾಧನೆ ಮಾಡಿದರು ದೇವರಾಜ ಅರಸುರವರು". ಯಾವುದೇ ವರ್ಗದ್ವೇಷ ಇರದ ಅರಸು ಸಾಮಾಜಿಕ ನ್ಯಾಯದ ದೃಷ್ಟಿಕೋನವುಳ್ಳವರಾಗಿದ್ದರು. ಅವರದು ಸೈದ್ಧಾಂತಿಕ ಹೋರಾಟವಾಗಿತ್ತು. ಮನೆ ಕಟ್ಟಲು ಆರ್ಥಿಕ ಸಹಾಯ, ಅನಿಷ್ಠ ಪದ್ಧತಿಗಳ ನಿಷೇಧ ಒಳಗೊಂಡಂತೆ ಅನೇಕ ಯೋಜನೆಗಳನ್ನು ದೇವರಾಜ ಅರಸುರವರು ಕಾರ್ಯರೂಪಕ್ಕೆ ತಂದರು. ಈ ಯೋಜನೆಗಳಲ್ಲಿ ಗೃಹ ನಿರ್ಮಾಣ ಸಂಸ್ಥೆಗಳ ಮೂಲಕ ಕಟ್ಟಿದ್ದ ಮನೆಗಳಲ್ಲಿ ಅರ್ಧದಷ್ಟು ಮನೆಗಳನ್ನು ಹಿಂದುಳಿದ ವರ್ಗದವರಿಗೆ ಮೀಸಲಿಡಲಾಯಿತು. ಅತಿ ಮುಖ್ಯವಾಗಿ ಪ್ರಬಲ ಕೋಮುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಸುರವರು ಕಾರ್ಯ ಸಾಧನೆಗೈದರು. ದಲಿತರು, ಬಡವರು ಮತ್ತು ಹಿಂದುಳಿದ ವರ್ಗಗಳಿಗೆ ಸಮರ್ಪಕ ನೆರವು ನೀಡಲು ದೇವರಾಜ ಅರಸುರವರು ಈ ಎಲ್ಲಾ ವರ್ಗಗಳನ್ನು ಪ್ರತಿನಿಧಿಸುವ ನಾಯಕರನ್ನು ತಯಾರುಗೊಳಿಸುವ ಬಗ್ಗೆ ಯೋಚಿಸಿ ದುರ್ಬಲ ವರ್ಗದವರನ್ನು ಸಂಘಟಿಸಿದರು. ಆ ವರ್ಗಗಳ ವಿದ್ಯಾವಂತ ಯುವಕರನ್ನು ಆಕರ್ಷಿಸಿ ರಾಜಕೀಯ ದೀಕ್ಷೆ ನೀಡಿ, ಕರ್ನಾಟಕದ ರಾಜಕೀಯ ನಕ್ಷೆಯನ್ನೇ ವ್ಯವಸ್ಥಿತವಾಗಿ ಬದಲಾಯಿಸಿದರು ಹಾಗೂ ಒಂದೊಂದಾಗಿ ಸುಧಾರಣೆಗಳನ್ನು ಆರಂಭಿಸಿದರು. ಆಡಳಿತ ಕ್ಷೇತ್ರದಲ್ಲಿಯೂ ಸಹ ಅರಸುರವರು ಆಯಕಟ್ಟಿನ ಸ್ಥಳಗಳಲ್ಲಿ ದುರ್ಬಲ ವರ್ಗದ ಹಾಗೂ ತಮ್ಮ ಚಿಂತನೆಗೆ ಸ್ಪಂದಿಸುವ ಮೇಲ್ಜಾತಿಯ ಅಧಿಕಾರಿಗಳನ್ನು ನೇಮಿಸಿದರು.

ಅರಸು ಸಮಾಜವಾದದ ನಿಟ್ಟಿನಲ್ಲಿ ಮಾನವತಾವಾದದ ನೆಲೆಯಲ್ಲಿ ಕಾರ್ಯರೂಪಕ್ಕೆ ತಂದ ಯೋಜನೆಗಳೂ ಅನೇಕ. ಅವುಗಳಲ್ಲಿ ಅತಿ ಮುಖ್ಯವಾಗಿ ಗಮನಿಸತಕ್ಕವು ಜೀತ ಪದ್ಧತಿ ಹಾಗೂ ಮಲಹೊರುವ ಪದ್ಧತಿ ನಿಷೇಧ, ಗುಲಾಮಗಿರಿಗಿಂತ ಕೀಳಾದ ಅನಿಷ್ಠ ಪದ್ಧತಿಗಳು ನಮ್ಮ ನಾಡಿನಲ್ಲಿ ಆಚರಣೆಯಲ್ಲಿದ್ದವು. ಹಿರಿಯರು ಮಾಡಿದ ಸಾಲಕ್ಕೂ, ತಾವು ಅನಿವಾರ್ಯವಾಗಿ ಮಾಡಿದ ಕನಿಷ್ಠ ಸಾಲಕ್ಕೂ ಬಡ್ಡಿ ರೂಪದಲ್ಲಿ ದುಡಿಯುತ್ತಾ ಮಡಿದವರನೇಕ ಅಮಾಯಕರು. ಅನಕ್ಷರಸ್ಥರಾದ ಅಂಥವರನ್ನು ಪಶುಗಳಿಗಿಂತ ಕೀಳಾಗಿ ಕಂಡು ನಿರ್ಧಯವಾಗಿ ಶೋಷಣೆ ಮಾಡುವ ಜೀತಪದ್ಧತಿಯನ್ನು ದೇವರಾಜ ಅರಸುರವರು ಬೇರು ಸಹಿತ ಕಿತ್ತರು. ಜೀತದಾಳುಗಳಿಗೆ ಶೋಷಿತ ಬದುಕಿನಿಂದ ಮುಕ್ತಿ ಕೊಡಿಸಿದರು. ದೀನದಲಿತರು ಸ್ವಾತಂತ್ರ್ಯದ ಗಾಳಿಯನ್ನು ನಿಜವಾಗಿ ಸೇವಿಸುವಂತಾಯಿತು. ಯಾರ ಹಂಗಿನಲ್ಲಿರದೆ ತಮ್ಮ ದುಡಿಮೆಯ ಫಲವನ್ನು ತಾವೇ ಉಣ್ಣುವಂತಾಯಿತು. ಅದೇ ರೀತಿ ಇನ್ನೊಂದು ಅತಿ ಅನಿಷ್ಠ ಪದ್ಧತಿ ಮಲಹೊರುವುದನ್ನು ತೆಗೆದುಹಾಕಿದವರು ಅರಸರು. ತಮ್ಮ ಸಹೋದ್ಯೋಗಿಯ ಸೂಚನೆಯನ್ನು ಕಾರ್ಯರೂಪಕ್ಕೆ ತಂದು ಆ ಅನಿಷ್ಠ ಪದ್ಧತಿಯನ್ನು ನಿಷೇಧಿಸಿದರಲ್ಲದೇ ಶೋಷಿಸಲ್ಪಟ್ಟ ಅಂಥ ಕೆಲಸದಲ್ಲಿ ಬಳಸುವ ಜನರನ್ನೆಲ್ಲ ಪೌರಕಾರ್ಮಿಕರನ್ನಾಗಿ ಖಾಯಂ ಆಗಿ ನೇಮಿಸಿದರು. ಇದು ಅವರ ಮಾನವೀಯ ಗುಣಕ್ಕೊಂದು ನಿದರ್ಶನ ಈ ದಿಸೆಯಲ್ಲಿ ಅವರು ಮಾಡಿದ ಮಹತ್ಕಾರ್ಯಗಳಲ್ಲೊಂದು.

"ಬಡತನ ನಿವಾರಣೆಗಾಗಿ ಭೂಮಿಯಲ್ಲಿ ಉತ್ಪತ್ತಿಯಾಗಬೇಕು, ಕಾರ್ಖಾನೆ ಕೈಗಾರಿಕೆಗಳಲ್ಲಿ ಉತ್ಪತ್ತಿಯಾಗಬೇಕು, ಇವೆರಡರ ನಡುವೆ ಈ ವ್ಯವಹಾರಗಳನ್ನು ನೋಡತಕ್ಕ ದಕ್ಷತೆಯಿರುವ ಜನ ಬೇಕು" ಎನ್ನುವ ಮಾತನ್ನು ಒತ್ತಿ ಹೇಳಿದ ಅರಸರ ವಿಚಾರಧಾರೆ ಈ ನಿಟ್ಟಿನಲ್ಲಿ ಇತರರಿಗಿಂತ ಭಿನ್ನವಾಗಿತ್ತು. ಮುಖ್ಯವಾಗಿ ನಮ್ಮ ದೇಶದ ಜನರಲ್ಲಿರತಕ್ಕ ಕೌಶಲ್ಯವನ್ನು ಉಪಯೋಗ ಮಾಡಿಕೊಂಡು ತನ್ಮೂಲಕ ನಾಡಿನ ಅಭಿವೃದ್ಧಿ ಮಾಡಬೇಕು ಎಂಬ ಸಿದ್ಧಾಂತದ ದೇವರಾಜ ಅರಸು ಅದನ್ನು ಅಳವಡಿಸಲು ಸಣ್ಣ ಕೈಗಾರಿಕೆಗಳ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಒಲವು ತೋರಿಸಿದ್ದರು. ಉತ್ಪತ್ತಿ, ದುಡಿಮೆ, ಪ್ರತಿಫಲ ಇವುಗಳ ಬಗ್ಗೆ ನಮ್ಮ ದೃಷ್ಟಿಕೋನ ಬದಲಾಗಬೇಕೆನ್ನುವ ಅರಸುರವರು ತುಂಬಾ ಪ್ರಾಯೋಗಿಕವಾಗಿ ಯೋಚನೆ ಮಾಡಿ ಪ್ರತಿಯೊಂದು ಸಮಸ್ಯೆಗೂ ಪ್ರಾಯೋಗಿಕವಾಗಿಯೇ ಪರಿಹಾರ ಕಂಡು ಹಿಡಿಯುತ್ತಿದ್ದರು.

1971 ರಿಂದ 1979ರವರೆಗೆ ಕರ್ನಾಟಕದ ಅಭಿವೃದ್ಧಿಗೆ ಭದ್ರಬುನಾದಿ ಹಾಕಿದ ಅರಸು ಪ್ರಗತಿಪರ ಶಾಸನ, ಆಡಳಿತದ ಮೂಲಕ ನಾಡಿನಲ್ಲಿ ಅನೇಕ ಸುಧಾರಣೆಗಳನ್ನು ತಂದರು. ದೀನ ದಲಿತರು, ದುರ್ಬಲರು ಸ್ವಾಭಿಮಾನದಿಂದ ಬದುಕಲು ಅವಕಾಶ ದೊರಕಿದ್ದು ಅರಸು ಕಾಲಮಾನದ ಹಿರಿಮೆ. ಹಿಂದುಳಿದ ವರ್ಗದವರ ಪ್ರಗತಿಗಾಗಿ ಹಾವನೂರು ಆಯೋಗವನ್ನು ರಚಿಸಿ ಅದರ ಶಿಫಾರಸ್ಸುಗಳನ್ನು 1977ರಲ್ಲಿ ಸಂವಿಧಾನದ ಚೌಕಟ್ಟಿನಲ್ಲಿ ಜಾರಿಗೆ ತಂದರು. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಜನಾಂಗವನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ ಪ್ರತ್ಯೇಕವಾದ "ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ"ಯನ್ನು 1977ರಲ್ಲಿ ಸೃಜಿಸಿದ ಹಿರಿಮೆ



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು/ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :

'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

ದೇವರಾಜ ಅರಸರದು. ಸಂವಿಧಾನದನ್ವಯ ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿ ಸೌಲಭ್ಯವನ್ನು ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರಿಗೆ ಕಲ್ಪಿಸಲಾಯಿತು. ರಾಜ್ಯಮಟ್ಟದಲ್ಲಿ ನಿರ್ದೇಶನಾಲಯದ ಜೊತೆಗೆ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಒಂದು ನಿಗಮವನ್ನು 1977ರಲ್ಲಿ ಸ್ಥಾಪಿಸಲಾಯಿತು. ಅದೇ ರೀತಿ ಮುಂದೆ 1993ರಲ್ಲಿ ದೇವರಾಜ ಅರಸು ಸಂಶೋಧನಾ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ಈ ಎಲ್ಲ ಇಲಾಖೆ, ನಿಗಮ, ನಿರ್ದೇಶನಾಲಯಗಳ ಕಾರ್ಯಕ್ರಮಗಳಡಿಯಲ್ಲಿ ಅನೇಕ ಸಾಮಾಜಿಕ, ಶೈಕ್ಷಣಿಕ ಬದಲಾವಣೆಗಳಾದವು. ತತ್ಪರಿಣಾಮವಾಗಿ ಇತ್ತೀಚಿನ 25 ವರ್ಷಗಳಲ್ಲಿ ಎಲ್ಲಾ ಬಗೆಯ ಉನ್ನತ ಶಿಕ್ಷಣದ ಕೋರ್ಸುಗಳಲ್ಲಿ ಹಿಂದುಳಿದ ವರ್ಗಗಳ, ಅಲ್ಪ ಸಂಖ್ಯಾತರ ದಾಖಲಾತಿಯಲ್ಲಿ ಏರಿಕೆಯುಂಟಾಯಿತು. ಸರ್ಕಾರಿ ಉದ್ಯೋಗಗಳಲ್ಲಿಯು ಅವರ ಪ್ರಾತಿನಿಧ್ಯ ಹೆಚ್ಚಾಯಿತು. ವೈದ್ಯರು, ವಕೀಲರು, ಪ್ರಾಧ್ಯಾಪಕರು, ಅಧಿಕಾರಿಗಳು, ಇನ್ನೂ ಅನೇಕ ಹುದ್ದೆಗಳಲ್ಲಿ ಹಿಂದುಳಿದ ವರ್ಗದವರು ಮೂಡಿಬರತೊಡಗಿದರು. ದಲಿತರು, ಕ್ರಿಶ್ಚಿಯನ್, ಮುಸ್ಲಿಂ ಸಮುದಾಯದವರೂ ಪ್ರಾತಿನಿಧ್ಯ ಹಾಗೂ ಮೀಸಲಾತಿ ಸೌಲಭ್ಯ ಸರಕಾರಿ ಕ್ಷೇತ್ರಗಳಲ್ಲಿ ಪಡೆಯುವಂತಾಯಿತು.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರಿಗಾಗಿ ದೇವರಾಜ ಅರಸು ಒದಗಿಸಿದ ಕಾನೂನು ಕಾರ್ಯಯೋಜನೆಗಳನ್ನು ಅನುಸರಿಸಿ ತದನಂತರವೂ ಅನೇಕ ಕಾರ್ಯಕ್ರಮಗಳನ್ನು ಸರಕಾರದಿಂದ ಹಮ್ಮಿಕೊಳ್ಳಲಾಗಿದೆ. ಇಂಥ ಯೋಜನೆಗಳಲ್ಲಿ ಮುಖ್ಯವಾದವುಗಳು ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆಗಳು, ವಸತಿ ಶಾಲೆಗಳು, ಮಹಿಳಾ ಕಲ್ಯಾಣ ಕೇಂದ್ರಗಳು, ವಿದ್ಯಾರ್ಥಿವೇತನ, ಕಾನೂನು ಪದವೀಧರರಿಗೆ ಶಿಷ್ಯವೇತನ, 'ಬೆಳ್ಳ ಬೆಳಕು', 'ಮಾಂಗಲ್ಯ ಭಾಗ್ಯ' ಹಾಗೂ 'ಗಂಗಾ ಕಲ್ಯಾಣ'.

ನೇರ ನಡೆ, ನೇರ ನುಡಿಯ ದೇವರಾಜ ಅರಸರದು ಧೀಮಂತ ವ್ಯಕ್ತಿತ್ವ. ಅವರೊಬ್ಬ ವಿಭಿನ್ನ ರಾಜಕಾರಣಿ, ಮರೆಯಲಾಗದ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕದಲ್ಲಿ ಪವಾಡಸದೃಶ್ಯವಾಗಿ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಏಕಕಾಲಕ್ಕೆ ಸಾಧಿಸಲು ಅವರ ದೃಢಸಂಕಲ್ಪ, ಬದ್ಧತೆ, ಕಾರ್ಯ ತತ್ಪರತೆಗಳೇ ಕಾರಣ. ಪರಿಪಕ್ವ ಮಾತುಗಾರರಾದ ಅರಸು ವಿಷಯ ಮಂಡನೆ ಹಾಗೂ ಚರ್ಚೆಯಲ್ಲಿ ನಿಖರತೆ ಹೊಂದಿದ್ದರು. ಅವರ ನುಡಿಗಳಲ್ಲಿ ಕಾರ್ಯಗಳಲ್ಲಿ ಅರ್ಥಪೂರ್ಣತೆ ಕಂಡು ಬರುತ್ತಿತ್ತು. ಅವುಗಳಲ್ಲಿ ಅರಸುರವರ ಮಾನವೀಯ ನಿಲುವು, ದಲಿತ, ದುರ್ಬಲರ ಬಗ್ಗೆ ಒಲವು, ಸಾಮಾಜಿಕ ಕಳಕಳಿಯನ್ನು ನಿಚ್ಚಳವಾಗಿ ಕಾಣಬಹುದು; ಇವುಗಳ ಜೊತೆಗೆ ಅವರ ರಾಜಕೀಯ ಪ್ರಜ್ಞೆ, ವೈಚಾರಿಕತೆ ಅರಸುರವರ ವ್ಯಕ್ತಿತ್ವಕ್ಕೊಂದು ವೈಶಿಷ್ಟತೆಯನ್ನು ತಂದುಕೊಟ್ಟಿದ್ದವು. ಅಂಥ ವ್ಯಕ್ತಿತ್ವದ ದೇವರಾಜ ಅರಸರ ಚಿಂತನೆ, ಸಾಧನೆಗಳ ಪುನರಾವಲೋಕನ ಇಂದು ಸಕಾಲಿಕ. ರಾಜಕಾರಣಿಗಳಿಗೆ ಮಾದರಿಯಾಗಿರುವ ಅವರ ಕಾರ್ಯಗಳ ಪುನರ್ಮನನ ಅತ್ಯಂತ ಪ್ರಸ್ತುತ. ●

(ಲೇಖಕರು : ದೇವರಾಜ ಅರಸು ಸಂಶೋಧನಾ ಸಂಸ್ಥೆಯ ನಿರ್ದೇಶಕರು)

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗ ಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸ ಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

– ಸಂಪಾದಕ

ವಿಳಾಸ :

'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

ಮಾತಂಗನನ್ನು ಅರ್ಥೈಸುವ ಬಗೆ



ಮಾತಂಗ ಎನ್ನುವ ಒಬ್ಬ ನಿಜವಾದ ವ್ಯಕ್ತಿ ಜೀವಿಸಿದ್ದ ಎನ್ನುವುದಕ್ಕೆ ನಮಗೆ ದೊರೆಯುವ ಅತ್ಯಂತ ಪುರಾತನ ಸಾಕ್ಷಿಯೆಂದರೆ ಚೈನಾ ಜನರಿಂದ. ಬಹುಶಃ ಈ ಚೈನಾದವರೇ ಪುರಾತನ ಜಗತ್ತಿನ ಚಾರಿತ್ರಿಕ ದಾಖಲೆಗಳನ್ನು ಇಟ್ಟಿರುವುದು. ಅವರ ದಾಖಲೆಯ ಮೇರೆಗೆ ಸಾಮಾನ್ಯ ಶಕೆ 65ರಲ್ಲಿ ತಕ್ಷಿಲದಿಂದ ಚೈನಾದೆಡೆಗೆ ಸಾಗಿದವರೆಂದರೆ ಇಬ್ಬರು ಬೌದ್ಧ ಭಿಕ್ಕುಗಳು (ಸನ್ಯಾಸಿಗಳು). ಇವರು ಹಿಂದೂ ಪರ್ವತ ಶ್ರೇಣಿಯನ್ನು ಏರಿ, ಅತ್ಯಂತ ಕಠಿಣ ಹಾದಿಯಲ್ಲಿ ಸಾಗಿ, ಬೌದ್ಧ ಸ್ತೂಪಗಳ ಪಳೆಯುಳಿಕೆ ಮತ್ತು ಕುಶಾನ ದೊರೆಗಳ ದಾಖಲೆಗಳನ್ನು ನೋಡುತ್ತಾ, ಅದ್ಭುತವಾದ ಹಿಮಶ್ರೇಣಿಯನ್ನು ಹತ್ತಿಳಿದು ಕೊನೆಗೆ ಚೈನಾದ ತುಷ್ಕರ್‌ಗಾನ್‌ಗೆ ಬರುತ್ತಾರೆ. ಅಂದರೆ ಅವರ ಪ್ರಯಾಣವು ಪಾಕಿಸ್ತಾನ ನಿಯಂತ್ರಣದಲ್ಲಿರುವ ಕಾಶ್ಮೀರ ಭಾಗವಾದ ಕರಕೊರಂ ಹಾದಿಯ ಮೂಲಕ ನಡೆದಿತ್ತು. ಇದೇ ಪ್ರದೇಶದಲ್ಲಿ 1970ರ ಕೊನೆಯಲ್ಲಿ ಪಾಕಿಸ್ತಾನಿ ಮತ್ತು ಚೈನಾದ ಇಂಜಿನಿಯರುಗಳು ಸೇರಿ 'ಜಗತ್ತಿನ 8ನೇ ಅಚ್ಚರಿ'ಯೆನ್ನುವಂತಹ ಹೆದ್ದಾರಿಯನ್ನು ನಿರ್ಮಿಸಲಾರಂಭಿಸುತ್ತಾರೆ. ಪರ್ವತ ಶ್ರೇಣಿಯ ಎತ್ತರದಲ್ಲಿ ನಿರ್ಮಿಸಿದ ಈ ಹೆದ್ದಾರಿಯು ಹೊಸದೇನೂ ಆಗಿರದೆ, 2000 ವರ್ಷಗಳ ಹಿಂದೆಯೇ ಇತ್ತು ಎಂಬುದು ಅವರನ್ನು ದಂಗಾಗಿಸುತ್ತದೆ. ಈ ಹೆದ್ದಾರಿಯನ್ನೇ ಇಂಡಿಯಾದ ಆ ಇಬ್ಬರು ಬೌದ್ಧ ಸನ್ಯಾಸಿಗಳು ದಾಟುತ್ತಾರೆ (ಅನಂತರದಲ್ಲಿ ಹ್ಯುಯೆನ್‌ತ್ಸಾಂಗ್ ಮುಂತಾದವರು ಬಾಕ್ಟ್ರಿಯಾ ಎನ್ನುವ ಅಷ್ಟೇನು ಕಠಿಣವಲ್ಲದ ಹಾದಿಯಲ್ಲಿ ಸಾಗುತ್ತಾರೆ. ವಿವರಗಳಿಗೆ ನೋಡಿ, ಜೌನ್‌ರೇ ಬರೆದಿರುವ ಇಂಡಿಯಾ: ಒಂದು ಚರಿತ್ರೆ, ಮ್ಯಾಕ್ ಮಿಲನ್ ಪ್ರಕಾಶನ, ರೂ. 295)

ಚೈನಾದವರ ಪ್ರಕಾರ ಆ ಇಬ್ಬರು ಬೌದ್ಧ ಸನ್ಯಾಸಿಗಳ ಹೆಸರುಗಳೆಂದರೆ ಧರ್ಮರಕ್ಷಾ ಮತ್ತು ಕಶ್ಯಪ ಮಾತಂಗ. ಈ ಕಶ್ಯಪ ಮಾತಂಗ ಎನ್ನುವುದು ಕೇವಲ ಒಂದು ಸಾಮಾನ್ಯ ಬೌದ್ಧ ಹೆಸರೆಂದು ಕಾಣದೆ ಅದೊಂದು ವಿಭಿನ್ನ ವ್ಯಕ್ತಿತ್ವವನ್ನು ಸೂಚಿಸುತ್ತದೆ. 'ಕಶ್ಯಪ' ಕಾಶ್ಮೀರವನ್ನು ನಿರ್ಮಿಸಿದ ಒಬ್ಬ ಪ್ರಸಿದ್ಧ ಋಷಿಯನ್ನು ಸೂಚಿಸುತ್ತದೆ. ಪಾಳಿಯಲ್ಲಿ ಅದು "ಕಸ್ಸಪ" ಎಂದರೆ "ಹಿಂದಿನ ಬುದ್ಧ", ಅಂದರೆ ಮಾತಂಗ ಎನ್ನುವುದು ಒಬ್ಬ ಶ್ರೇಷ್ಠ ಚಾಂಡಾಲನ ಹೆಸರಾಗಿ ಪಾಳಿ ಸಾಹಿತ್ಯದಲ್ಲಿ ವಿಶೇಷವಾಗಿರುವ ಮಾತಂಗ ಜಾತಕ (ಅನಂತರದಲ್ಲಿ ಅದು ಪ್ರಚಲಿತಕ್ಕೆ ಬಂದಿರಬಹುದು)ವಾಗುತ್ತದೆ.

ಇಲ್ಲಿ 'ಕಶ್ಯಪ ಮಾತಂಗನೇ ಚಾಂಡಾಲನೆನ್ನುವುದಕ್ಕೆ ವಿಶೇಷ ಸೂಚನೆಯೇನೂ ದೊರೆಯುವುದಿಲ್ಲ. ಅಲ್ಲದೆ, ಚಾರಿತ್ರಿಕವಾಗಿ ಈ ಕೆಳಗೆ ತೋರಿಸಿದಂತೆ ಚಾಂಡಾಲರು ಪೂರ್ವ ಪ್ರದೇಶಗಳಲ್ಲಿದ್ದರು. ಅಂದರೆ ನಮ್ಮ ಪ್ರಕಾರ ಹೇಳುವುದಾದರೆ 'ಮಾತಂಗನೆನ್ನುವುದು ಮೂಲ ವ್ಯಕ್ತಿಯಾಗಿರದೆ (ಎ) ಮಾತಂಗ ಎನ್ನುವುದು ತಳ ಸಮುದಾಯದಿಂದ ಬಂದು ಪ್ರಸಿದ್ಧನಾದ ಭಿಕ್ಕುವನ್ನು ಸೂಚಿಸುತ್ತದೆ. (ಬಿ) ಅಥವಾ ಅದೊಂದು ಸಾಮಾನ್ಯ ನಾಮ ಪದವಾಗಿ ಅನೇಕ ಭಿಕ್ಕುಗಳಿಗೆ ಅನ್ವಯವಾಗುತ್ತಿತ್ತು ಎನ್ನುವುದು.

ಕಶ್ಯಪ ಮಾತಂಗ ಎನ್ನುವುದು ಕೇವಲ ಒಂದು ಸಾಮಾನ್ಯ ಬೌದ್ಧ ಹೆಸರೆಂದು ಕಾಣದೆ ಅದೊಂದು ವಿಭಿನ್ನ ವ್ಯಕ್ತಿತ್ವವನ್ನು ಸೂಚಿಸುತ್ತದೆ. 'ಕಶ್ಯಪ' ಕಾಶ್ಮೀರವನ್ನು ನಿರ್ಮಿಸಿದ ಒಬ್ಬ ಪ್ರಸಿದ್ಧ ಋಷಿಯನ್ನು ಸೂಚಿಸುತ್ತದೆ. ಪಾಳಿಯಲ್ಲಿ ಅದು "ಕಸ್ಸಪ" ಎಂದರೆ "ಹಿಂದಿನ ಬುದ್ಧ", ಅಂದರೆ ಮಾತಂಗ ಎನ್ನುವುದು ಒಬ್ಬ ಶ್ರೇಷ್ಠ ಚಾಂಡಾಲನ ಹೆಸರಾಗಿ ಪಾಳಿ ಸಾಹಿತ್ಯದಲ್ಲಿ ವಿಶೇಷವಾಗಿರುವ ಮಾತಂಗ ಜಾತಕ (ಅನಂತರದಲ್ಲಿ ಅದು ಪ್ರಚಲಿತಕ್ಕೆ ಬಂದಿರಬಹುದು)ವಾಗುತ್ತದೆ. ಮಾತಂಗ ಎನ್ನುವುದು ತಳ ಸಮುದಾಯದಿಂದ ಬಂದು ಪ್ರಸಿದ್ಧನಾದ ಭಿಕ್ಕುವನ್ನು ಸೂಚಿಸುತ್ತದೆ.

ಮೂಲ : ಗೇಲ್ ಒಂವಿಡ್ತ್   ಅನು : ಡಿ.ದಾ.ಚ.

ಸುತ್ತ ನಿಪಾತದ ಮಾತಂಗ : 'ವಸಲ ಸುತ್ತ' ಹೆಸರಿನ ಸುತ್ತ ನಿಪಾತ (ಉರಗವಗ್ಗ) ಎನ್ನುವ ಒಂದು ಬೌದ್ಧ ಕೃತಿಯಲ್ಲಿ ಮೊದಲನೆ ಸಲ ಮಾತಂಗ ಎನ್ನುವ ಹೆಸರಿನ ಉಲ್ಲೇಖ ಕಂಡುಬರುತ್ತದೆ. ಪಾಳಿ ಶಬ್ದವಾದ 'ವಸಲೊ' ಅಂಬೇಡ್ಕರ್‌ರರ ಪಾಳಿ ಶಬ್ದಕೋಶದಲ್ಲಿ ಅನುವಾದವಾಗಿರುವಂತೆ 'ಅಂತ್ಯಜ, ಪರಯ; ಸಂಸ್ಕೃತದಲ್ಲಿ

ಕೆಳವರ್ಗದ ವ್ಯಕ್ತಿ, ಭ್ರಷ್ಟ, ಮರಾಠಿಯಲ್ಲಿ ಅದಕ್ಕೆ ಸಮಾನವಾದ ಪದ 'ವೃಶಲಾ'. ಇದನ್ನು ಕುರಾಬಿ ಜನಾಂಗವನ್ನು ಅವಮಾನಿಸಲು ಬಳಸಲಾಗಿತ್ತು. ಈ ಸುತ್ತದ ವಾದವೇಂದರೆ ಒಬ್ಬ ವ್ಯಕ್ತಿ ಹುಟ್ಟಿನಿಂದಲ್ಲದೆ, ಕ್ರಿಯೆಯಿಂದ ಮಾತ್ರ 'ವಸಲ'ನೆಂದಾಗುತ್ತಾನೆ. ಇದಕ್ಕೆ ಸಮಾನವಾದುದು ಮೂರನೇ ಪುಸ್ತಕದಲ್ಲಿರುವ ವಸೆತ್ತಾ ಸುತ್ತ (ದಿ ಮಹಾವಗ್ಗ). ಇದರ ಪ್ರಕಾರ ಬ್ರಾಹ್ಮಣನೆನ್ನುವುದು ಹುಟ್ಟಿನಿಂದ ಅಲ್ಲ. ಅದು ಕ್ರಿಯೆಯಿಂದ ಎನ್ನುತ್ತದೆ. ಅದಕ್ಕೆ ಮುಖ್ಯವಾದ ಉದಾಹರಣೆಯೆಂದರೆ ಮಾತಂಗ. ನಾ ಇಲ್ಲಿ ಮೊದಲಿಗೆ ಪಾಳಿಯನ್ನು ನೀಡಿ, ಅನಂತರ ಇಂಗ್ಲೀಷ್ ಅನುವಾದವನ್ನು ನೀಡುತ್ತೇನೆ. ಇದರ ಚಲ್ಮೇರಾರ ಕೃತಿ 'ಅಂಬೇಡ್ಕರ್‌ರವರ ಪಾಳಿ ಶಬ್ದಕೋಶವನ್ನು ಆಧರಿಸಿದ್ದಾಗಿದೆ.'

"ನ ಜಕ್ಕಾ ವಸಲೊ ಹೊತಿ-ನ ಜಕ್ಕಾ ಹೊತಿ ಬ್ರಾಹ್ಮಣೊ
ಕಮ್ಮನಾ ವಸಲೊ ಹೊತಿ, ಕಮ್ಮನಾ ಹೊತಿ ಬ್ರಾಹ್ಮಣೋ
ತದಾ ಅಮಿನಪಿ ಜಾನಾತ ಯಥಾಮಿ 'ದಂ ನಿ ದಸ್ಸನಂ
ಚಾಂಡಾಲೋ ಪುಟ್ಟೋ ಸೊಪಾಕೊ ಮಾತಂಗೊ ಇತಿ ವಿಸ್ಸುತೊ
ಸೊ ಯಸಂ ಪರಮಂ ಪಟ್ಟೊ ಮಾತಂಗೊ ಯಂ ಸುದುಲ್ಲಾಭಂ;
ಆಗಂಚುಂ ತಸ್ಸೌ ಉಪತ್ಥಾನಂ ಖಟ್ಟಿಯಾ ಬ್ರಾಹ್ಮಣ ಬಹೂ
ಸೊ ದೇವಯಾನಂ ಆರುಯೌಹ ವಿರಜಂ ಸೊ ಮಹಾಪಂಥ
ಕಾಮರಾಗಂ ವಿಹಿಜೀತ್ವಾ ಬ್ರಹ್ಮಲೋಕೂಪಾಗೊ ಅಹು;
-ನ ತಂ ಜಾತಿ ನಿವಾರೆನಿ ಬ್ರಹ್ಮಲೊಕು ಪಪಟ್ಟಿಯ
ಅಜ್ಝಾಯಕಕುಲೆ ಜಾತಾ ಬ್ರಾಹ್ಮಣಾ ಮಂತಬಂಧವಾ
ತೆ ಚ ಪಾಪೆಸು ಕಮ್ಮೇಸು ಅಭಿನೌಹಂ ಉಪದಿಸಾರೆ
ದೀಕ್ಷೆ ವ ಧಮ್ಮೇ ಗಾರಯೌಹಾ ಸಂಪರಾಯೆ ಚ ದುಗ್ಗತಿ;
ನನೆ ಜಾತಿ ನಿವಾರೆತಿ ದುಗ್ಗಚ್ಚಾ ಗರಹಾಯ ವಾ.
ಹುಟ್ಟು ಮಾಡುವುದಿಲ್ಲ ಅಂತ್ಯ ಜಗ,
ಹುಟ್ಟು ಮಾಡದು ಒಬ್ಬ ಬ್ರಾಹ್ಮಣನ
ಕ್ರಿಯೆ ಮಾಡುತ್ತದೆ ವ್ಯಕ್ತಿಯೊಬ್ಬನ ಕೀಳು,
ಕ್ರಿಯೆಯಿಂದಲೇ ಆತ ಶ್ರೇಷ್ಠ
ಈ ನನ್ನ ಸಮರ್ಥನೆಗಾಗಿ ಉದಾಹರಣೆಯೊಂದನ್ನು ಕೊಡುವೆ ಇಲ್ಲಿ-
ಪ್ರಸಿದ್ಧನಾದ ಚಾಂಡಾಲನ ಮಗ ದಲಿತ ಮಾತಂಗನ,
ಈ ಮಾತಂಗ ಸಾಧಿಸಿದ ಅತ್ಯುನ್ನತಿಯನು
ಬ್ರಾಹ್ಮಣ ಮತ್ತು ಕ್ಷತ್ರಿಯ ಜನರೆಲ್ಲ
ಆತನ ಸೇವೆಗೆ ಸೆಳೆಯಲ್ಪಟ್ಟರು
ಅವರು ಹೇಳುವಂತೆ ಆತನೇರಿದನು ದೈವ ರಥವನು,
ಕಾಮ ಮತ್ತು ದ್ವೇಷವನ್ನು ಗೆದ್ದು, ರಾಗಾದಿಗಳಿಂದ ಮುಕ್ತನಾಗಿ
ಪರಮಾನಂದವನ್ನು ಪಡೆಯಲು ಆತನ ಹುಟ್ಟು ಅಥವಾ ಜಾತಿ ಅಡ್ಡಿಯಾಗಲಿಲ್ಲ!
ಆದರೆ ಬ್ರಾಹ್ಮಣರಾಗಿ ಹುಟ್ಟಿದವರು ಅದು ಅಲ್ಲಿ, ಮಂತ್ರ-ಅರಿತ ಸಂಬಂಧಿಗಳ

ಎಲ್ಲೋರ ಗುಹೆಯಲ್ಲಿರುವ ಮಾತಂಗ ವಿಗ್ರಹ

ಪಾತಕ ಕೃತ್ಯಗಳು ಅವರನ್ನು ಮತ್ತೆ ಮತ್ತೆ ಬಯಲುಗೊಳಿಸಿವೆ,
ನಂಬಿಗಸ್ತ ಮತ್ತು ಸಭ್ಯರಿಂದ ದೂಷಣೆಗೊಳಗಾಗಿ,
ಭವಿಷ್ಯದ ಸರ್ವನಾಶವನ್ನು ಎದುರುಗೊಳ್ಳಲಿದ್ದಾರೆ
-ಅವರ ಬ್ರಾಹ್ಮಣ ಹುಟ್ಟು, ಒದಗುವ ದೂಷಣೆಯನ್ನು ಅಥವಾ ನಂತರದ ಸರ್ವನಾಶವನ್ನು ತಡೆಯಲಾಗುವುದು.
(ಸುತ್ತ ನಿಪಾತ 136 ರಿಂದ 39, ವಸಲಿ ಸುತ್ತ; ಅಂಬೇಡ್ಕರ್‌ರವರ ಪ್ಪಾ ಶಬ್ದಕೋಶ ಮತ್ತು ಲಾರ್ಡ್ ಚಾಲ್‌ಮೋರ್ಸ್ 1931ರ ಅನುವಾದವನ್ನು ಬಳಸಿಕೊಳ್ಳಲಾಗಿದೆ)

ದಲಿತ ನಾಯಕನಿಗಾಗಿ ಶೋಧ

ಪ್ರಸಿದ್ಧ ದಲಿತ ಕವಿ ಬಾಬುರಾವ್ ಬಾಗುಳ್‌ರವರು ವಿಷಾದದಿಂದ ಹೇಳುವುದೇನೆಂದರೆ 'ಭಾರತೀಯ ಸಾಹಿತ್ಯದಲ್ಲಿ ದಲಿತ ನಾಯಕರಿಲ್ಲ' ಅವರ ಪ್ರಕಾರ 'ಕರ್ಣ ಅಥವಾ ಏಕಲವ್ಯರವರ ವರ್ಣ ವ್ಯವಸ್ಥೆಯೊಡನೆ ರಾಜಿಯಾದವರು. ಅವರು ಧೈರ್ಯಶಾಲಿಗಳು. ಆದರೆ ವ್ಯವಸ್ಥೆಯಲ್ಲಿ ಅವರಿಗೆ ಸಿಗಬೇಕಾದ ಗೌರವ ಸಿಗದ ಕಾರಣ ಅವರು ಬದುಕನ್ನು ಕಷ್ಟವೆಂದು ಮಾತ್ರ ಅರ್ಥೈಸುತ್ತಾರೆ...ಇಂಥ ನಾಯಕರು ಕಷ್ಟವನ್ನು ಮಾತ್ರ ಒದಗಿಸುತ್ತಾರೆ, ಅತಿಯಾದ ನಾಟಕೀಯತೆಯಿಂದಾಗಿ, ಅವರು ಅತಿ ರಂಜಕತೆಯನ್ನು ನೀಡುತ್ತಾರೆ. (ಆದರೆ) ಅವರು ಸುಲಭವಾಗಿ ವಿಧಿಯಾಟದ ನಿಲುವನ್ನು ಅಭಿವ್ಯಕ್ತಗೊಳಿಸುತ್ತಾರೆ...ಇಂಥ ಕಲಾ ನಿರೂಪಣೆಗಳು ಹಿಂದೂ ಪುರಾಣ ಮೌಲ್ಯಗಳು ಮತ್ತು ಪ್ರಜ್ಞೆಯನ್ನು ತೋರುತ್ತವೆಯಷ್ಟೆ. (ವಿಷಕಾರಿರೊಟ್ಟಿ, ಪು. 285)

ಹೀಗಿದ್ದಾಗ್ಯೂ, ಪುರಾತನ ಬೌದ್ಧ ಸಾಹಿತ್ಯದಲ್ಲಿ ಒಬ್ಬ ದಲಿತ ಹೀರೋ ಸಿಗುತ್ತಾನೆ. ಆತ ಪ್ರತಿರೋಧ ಮತ್ತು ಹೆಮ್ಮೆಯ ಸಂಕೇತವಾಗಿದ್ದಾನೆ. ಆತನೇ ಚಾಂಡಾಲನಾದ ಮಾತಂಗ.

ಪುರಾತನ ಕಾಲದಿಂದಲೂ ಆತನೊಬ್ಬನೇ ದಲಿತ ನಾಯಕನಾಗಿರುವುದಲ್ಲದೆ, ಆತ ಒಬ್ಬ ಮಹಾ ಪುಣ್ಯ ಪುರುಷನೆಂದು ಬೌದ್ಧ ಪವಿತ್ರ ಗ್ರಂಥಗಳು ಉಲ್ಲೇಖಿಸುತ್ತವೆ. ಆದ್ದರಿಂದ ಈ ಬೌದ್ಧ ಗ್ರಂಥಗಳನ್ನಿಟ್ಟುಕೊಂಡು ಮಾತಂಗ ಯಾರು? ಮತ್ತು ಚಾಂಡಾಲರೆಂದು ಯಾರನ್ನು ಕರೆಯುತ್ತಾರೆಂದು ತಿಳಿಯುವುದು ಮುಖ್ಯವಾಗುತ್ತದೆ.

ಈ ಹಿಂದೆ ಉಲ್ಲೇಖಿಸಿದಂತೆ 'ಮಾತಂಗ' ಎನ್ನುವ ಹೆಸರು ವಸಲ ಸುತ್ತದಲ್ಲಿ ಬುದ್ಧನ ಬಾಯಿಯ ಮೂಲಕ ಬರುತ್ತದೆಯಾದರೂ, ಆ ಸುತ್ತ ಪ್ರಕಟಗೊಂಡಿರುವುದು ಬುದ್ಧನ ಅನಂತರದಲ್ಲಿ. ಅಸ್ಪೃಶ್ಯತೆ ಅಥವಾ ಚಾಂಡಾಲರು ಬುದ್ಧನ ಜೀವಿತ ಕಾಲದಲ್ಲಿ ಇತ್ತು ಎನ್ನುವುದಕ್ಕೆ ಆಧಾರಗಳೇನು ಸಿಗುವುದಿಲ್ಲ. ಅನೇಕ ಜಾತಕ ಕಥೆಗಳು ಚಾಂಡಲರ ಬಗ್ಗೆ ಸುಳಿವು ನೀಡುತ್ತವಾದರೂ, ಅವುಗಳೆಲ್ಲ ಅನಂತರದಲ್ಲಿ ಬಂದವುಗಳು. ಅಂದರೆ ಸುಮಾರು ಕ್ರಿ.ಪೂ. 4ನೇ ಶತಮಾನಕ್ಕೆ ಸಂಬಂಧಿಸಿದ್ದವು. 5ನೇ ಶತಮಾನದ ಆರಂಭದಲ್ಲಿ ನೇರವಾಗಿ ಚಾಂಡಾಲರ ಬಗ್ಗೆ ವಿವರಗಳು ದೊರೆಯುವುದು ಚೈನಾದ ಪ್ರವಾಸಿಗ ಫಾಹ್ಯೆನ್‌ನಿಂದ. ಆತ ಗುಪ್ತರಾಳಿದ್ದ ಪ್ರದೇಶಗಳಿಗೆ ಭೇಟಿಯಿತ್ತಾಗ ಗಮನಿಸಿದ್ದಾಗಿದೆ. ಆತನ ಬರಹದ ಪ್ರಕಾರ, "ಚಾಂಡಾಲರೆಂದರೆ ಕೆಟ್ಟ ಜನ" ಮತ್ತು ಅವರು ಬೇರೆಯವರಿಂದ ಬೇರೆಯಾಗಿ ವಾಸವಾಗಿದ್ದಾರೆ; ಅವರೇನಾದರೂ ಪಟ್ಟಣ ಅಥವಾ ಮಾರುಕಟ್ಟೆಗೆ ಪ್ರವೇಶ ಮಾಡುವಾಗ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು, ಅವರ ಸಣ್ಣ ಮರದ ತುಂಡಿನಿಂದ ಶಬ್ದ ಮಾಡುತ್ತಿದ್ದರು. ಅದನ್ನು ಅರಿತ ಜನ ಅವರಿಂದ ದೂರ ಸರಿಯುತ್ತಿದ್ದರು. ಈ ದೇಶದಲ್ಲಿ ಅವರು ಹಂದಿ ಅಥವಾ ಕೋಳಿಯನ್ನು ಸಾಕುತ್ತಿರಲಿಲ್ಲ ಮತ್ತು ಪಶುಗಳನ್ನು ಸಹ ಹೊಂದಿರಲಿಲ್ಲ; ಅವರಿಗೆ ಮಾರುಕಟ್ಟೆ ಜಾಗದಲ್ಲಿ ಕಸಾಯಿಖಾನೆಯಾಗಲಿ ಅಥವಾ ವೈನ್ ಅಂಗಡಿಗಳಾಗಲಿ ಇರಲಿಲ್ಲ. ಅವರು ಕವಡೆ ಚಿಪ್ಪುಗಳನ್ನು ಮಾರುತ್ತಿದ್ದರು. ಚಾಂಡಾಲರು ಬೇಟೆಯಾಡಿದ ಮಾಂಸವನ್ನು ಮಾರುತ್ತಿದ್ದರು. (ಬೀಲ್, I : XXXVIII).

ಹೀಗಿದ್ದಾಗ್ಯೂ, ಫಾಹ್ಯೆನ್ ಅನೇಕ ರೀತಿಯಲ್ಲಿ ತಪ್ಪು ತಪ್ಪಾಗಿ ವಿವರಿಸಿದ್ದಾನೆ, ಮತ್ತು ಅವನ ನಂತರದ ಪ್ರವಾಸಿ (ನಿರ್ದಿಷ್ಟ ವಿವರಗಳು ದೊರೆಯುತ್ತವೆ). ಹ್ಯೂಯೆನ್‌ತ್ಸ್ಯಾಂಗ್ ಚಾಂಡಾಲರ ಬಗ್ಗೆ ಉಲ್ಲೇಖವನ್ನೇನು ಮಾಡುವುದಿಲ್ಲ. ಆದರೂ ಈ ಕಾಲದಿಂದ ನಿಜವಾಗಿಯೂ ಚಾಂಡಾಲರು ಇದ್ದು, ಆ ಸಮುದಾಯದ ಜನರೇ ಅಸ್ಪೃಶ್ಯರೆಂದು ವರ್ಗೀಕೃತಗೊಂಡು, ಕನಿಷ್ಠರೆಂದು ಪರಿಗಣಿತರಾಗಿದ್ದರು. ಈ ಮೇಲಿನ ವಿವರಗಳಿಂದ ತಿಳಿದು ಬರುವ ಸಂಗತಿಯೆಂದರೆ ಬೇಟೆ ಮತ್ತು ಸಂಗ್ರಹ ಬದುಕನ್ನು ನಡೆಸುತ್ತಿದ್ದ ಮೂಲನಿವಾಸಿಗಳೆಂದು ತಿಳಿಯುತ್ತದೆ.

ಚಾಂಡಾಲರ ಜಾತಕ ಕಥೆಗಳು ಅವರನ್ನು ಕನಿಷ್ಠರೆಂದು ಚಿತ್ರಿಸುವುದಿಲ್ಲ. ಮೊದಲನೆಯದಾಗಿ, ಈ ಕಥೆಗಳು ಮುಖ್ಯವಾಗಿ ಕರ್ಮ ಮತ್ತು ಪುನರ್‌ಜನ್ಮ ಕಲ್ಪನೆಗಳ ಮೇಲೆ ಇದ್ದರೂ ಸಹ, ಅವುಗಳು ಬ್ರಾಹ್ಮಣ ಉಪದೇಶಗಳಾದ ಜಾತಿ ಅಥವಾ ಕಸುಬನ್ನಾಧರಿಸಿ 'ಕನಿಷ್ಠ'ವೆಂದು ಒಪ್ಪುವುದಿಲ್ಲ. ನರಕದಲ್ಲಿ ಜನ್ಮ ತಾಳುವುದರಿಂದ ಪಾಪ

ಕೃತ್ಯಗಳಿಗೆ ಶಿಕ್ಷೆಯಾಗುತ್ತದೆ ಅಥವಾ ದುರಾದೃಷ್ಟಗಳು ನಿರ್ದಿಷ್ಟವಾಗಿರುತ್ತವೆ. ಅಲ್ಲದೆ ಹುಟ್ಟಿನ ಯಾವುದೇ ಸ್ಥಾನ, ಕಸುಬು ಅಥವಾ ಮಾನವ ಗುಂಪುಗಳು ಪುಣ್ಯ ಕೃತ್ಯಗಳಿಂದ ಎಂದು ಪರಿಗಣಿತವಾಗಿವೆ. ಆದ್ದರಿಂದ ಬೋಧಿಸತ್ವ-ಭವಿಷ್ಯ ಬುದ್ಧನು-ಈ ಎಲ್ಲಾ ಜಾತಕ ಕಥೆಗಳಲ್ಲಿ ಬಡವನಾಗಿ ಅಥವಾ ಕನಿಷ್ಠ ಮಾನವ ವ್ಯಕ್ತಿಯಾಗಿ ತೋರಿಸುತ್ತವೆ. ಅಂದರೆ ಆತನ ಯಾವುದೇ ಶ್ರೇಷ್ಠ ಗುಣಗಳು ಮುಖ್ಯವಾಗುವುದಿಲ್ಲ. ನಾಲ್ಕು ಜಾತಕ ಕಥೆಗಳು ಆತ ಚಾಂಡಾಲನಾಗಿ ಹುಟ್ಟಿದನೆಂದೂ, ಮತ್ತು 'ಸರಿಪುತ್ತ' ಜಾತಕದಲ್ಲಿ ಬುದ್ಧ ಮೆಚ್ಚಿನ ಶಿಷ್ಯ ಚಾಂಡಾಲನಾಗಿ ಹುಟ್ಟಿದ್ದನ್ನು, ತೋರಿಸುತ್ತವೆ.

ಈ ಎಲ್ಲಾ ಕಥೆಗಳು ಕುತೂಹಲಕಾರಿಯಾಗಿವೆ. ಅವೆಲ್ಲಾ ತೋರುವ ಲಕ್ಷಣಗಳೆಂದರೆ ಚಾಂಡಾಲರು ಪ್ರತ್ಯೇಕವಾದ ಗ್ರಾಮಗಳಲ್ಲಿ ಜೀವಿಸುತ್ತಿದ್ದು, ತಮ್ಮದೇ ಆದ ಭಾಷೆಯಲ್ಲಿ ಸಂಭಾಷಿಸುತ್ತಿದ್ದರು. ಅವರನ್ನು ಅನೇಕ ಬಾರಿ ಬೇಟೆಗಾರರೆಂದೂ, ಬೆಸ್ತರೆಂದೂ ಚಿತ್ರಿಸಲಾಗಿದೆ. ಅವರಿಗೆ ಒಂದು ರೀತಿಯ ಜ್ಞಾನಕ್ಕೆ ಅವಕಾಶವಿದ್ದು, ಮಂತ್ರ, ಮಾಟ ಮತ್ತು ಆಧ್ಯಾತ್ಮ ವಿವೇಕವನ್ನು ಹೊಂದಿದ್ದರು. ಅವರನ್ನು ಅಸ್ಪೃಶ್ಯರೆಂದು ಸಮಾಜದ ಅನೇಕ ವಿಭಾಗಗಳು ಗುರುತಿಸುತ್ತಿದ್ದರೂ ಅವರ ದೊಡ್ಡ ಜಗಳವಿರುತ್ತಿದ್ದದ್ದು ಬ್ರಾಹ್ಮಣರೊಡನೆ, ಅನೇಕ ಬಾರಿ ಇತರ ಗುಂಪುಗಳು ಮೈಲಿಗೆಯ ಬಗ್ಗೆ ಅಷ್ಟೇನು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅಲ್ಲದೆ, ತಮ್ಮ ಮೇಲೆ ಬಲತ್ಕಾರಿಕವಾಗಿ ಹೇರುತ್ತಿದ್ದ ಅಸ್ಪೃಶ್ಯತೆಯನ್ನು ಅವರು ಯಾವಾಗಲೂ ಪ್ರತಿಭಟಿಸುತ್ತಿದ್ದರೆಂದು ಚಿತ್ರಿಸಲಾಗಿದೆ.

ಉದಾಹರಣೆಗೆ, ಒಂದು ಜಾತಕದಲ್ಲಿ ಚಾಂಡಾಲನಾಗಿ ಹುಟ್ಟಿದ ಬೋಧಿಸತ್ವ, ಒಬ್ಬ ವೈರಾಗಿಗೆ ಮರ್ಯಾದೆ ಕೊಡಲಿಲ್ಲವೆಂದು ರಾಜನನ್ನು ಖಂಡಿಸುತ್ತಾನೆ. ಅದಕ್ಕೆ ರಾಜನ ಪ್ರತಿಕ್ರಿಯೆಯೆಂದರೆ ಆತ ಉನ್ನತ ಜಾತಿಯಲ್ಲಿ ಜನಿಸುತ್ತಿದ್ದಲ್ಲಿ ಆತನಿಗೆ ತನ್ನ ರಾಜ್ಯವನ್ನೇ ನೀಡುತ್ತಿದ್ದನೆಂದೂ, ಆದರೀತ ಕನಿಷ್ಟ ವ್ಯಕ್ತಿಯಾಗಿರುವುದರಿಂದ ರಾತ್ರಿಯಲ್ಲಿ ಮಾತ್ರ ರಾಜನಾಗಿ, ತಾನು ಹಗಲಲ್ಲಿ ರಾಜನಾಗಿರುತ್ತೇನೆ ಎನ್ನುತ್ತಾನೆ. (ಜಾತಕ 309) ಇಲ್ಲಿ ರಾಜ ಕನಿಷ್ಟ ಹುಟ್ಟಿನ ಪರಿಣಾಮವನ್ನು ಅಲ್ಪಮಟ್ಟಿಗೆ ಗುರುತಿಸುತ್ತಾನಾದರೂ, ಆತ ಚಾಂಡಾಲನಿಗೆ ರಾಜಪದವಿಯನ್ನು ಪಾರ್ಶ್ವಿಕವಾಗಿ ನೀಡುತ್ತಾನೆ.

ಮತ್ತೊಂದು ಜಾತಕದಲ್ಲಿ ಸಮಾನತೆಯ ಅಂಶ ಎದ್ದು ಕಾಣುತ್ತದೆ. ಒಬ್ಬ ವ್ಯಕ್ತಿ ಚಾಂಡಾಲ ಗುರುವಿನಿಂದ ಮಾಟ-ಮಂತ್ರ ಕಲಿಯಲು ಆತನ ಹಳ್ಳಿಯಲ್ಲೇ ವಾಸಿಸಿ, ಮೈಲಿಗೆಯಿಲ್ಲದೆ ಆತನ ಮನೆಯಲ್ಲಿ ಕೆಲಸ ಮಾಡುತ್ತಾನೆ. ಆತನಿಗೆ ಮಂತ್ರ ವಿದ್ಯೆ ಲಭಿಸುತ್ತದೆ. ಆತ ತನ್ನ ಗುರುವಿಗೆ ತಕ್ಕ ಮರ್ಯಾದೆಯನ್ನು ನೀಡುವಂತೆ ಸೂಚಿಸಲಾದರೂ, ಮಂತ್ರವಿದ್ಯೆಯನ್ನು ಒಬ್ಬ ಚಾಂಡಾಲನಿಂದ ಕಲಿತೆನೆಂದು ಹೇಳಿಕೊಳ್ಳಲು ನಾಚಿ, ದುಃಖಿತನಾಗುತ್ತಾನೆ. ಈ ಕತೆಯ (474) ನೀತಿಯೆಂದರೆ 'ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯನಾಗಲಿ, ಆತ ಯಾವ ಮನುಷ್ಯನಿಂದ ಸರಿಯಾದುದನ್ನು ಕಲಿಯುತ್ತಾನೋ-ಶೂದ್ರನಿರಲಿ,

> **ಚಾಂಡಾಲರ ಜಾತಕ ಕಥೆಗಳು ಅವರನ್ನು ಕನಿಷ್ಠರೆಂದು ಚಿತ್ರಿಸುವುದಿಲ್ಲ. ಮೊದಲನೆಯದಾಗಿ, ಈ ಕಥೆಗಳು ಮುಖ್ಯವಾಗಿ ಕರ್ಮ ಮತ್ತು ಪುನರ್‌ಜನ್ಮ ಕಲ್ಪನೆಗಳ ಮೇಲೆ ಇದ್ದರೂ ಸಹ, ಅವುಗಳು ಬ್ರಾಹ್ಮಣ ಉಪದೇಶಗಳಾದ ಜಾತಿ ಅಥವಾ ಕಸುಬನ್ನಾಧರಿಸಿ 'ಕನಿಷ್ಠ'ವೆಂದು ಒಪ್ಪುವುದಿಲ್ಲ. ನರಕದಲ್ಲಿ ಜನ್ಮ ತಾಳುವುದರಿಂದ ಪಾಪ ಕೃತ್ಯಗಳಿಗೆ ಶಿಕ್ಷೆಯಾಗುತ್ತದೆ ಅಥವಾ ದುರಾದೃಷ್ಟಗಳು ನಿರ್ದಿಷ್ಟವಾಗಿರುತ್ತವೆ. ಅಲ್ಲದೆ ಹುಟ್ಟಿನ ಯಾವುದೇ ಸ್ಥಾನ, ಕಸುಬು ಅಥವಾ ಮಾನವ ಗುಂಪುಗಳು ಪುಣ್ಯ ಕೃತ್ಯಗಳಿಂದ ಎಂದು ಪರಿಗಣಿತವಾಗಿವೆ. ಆದ್ದರಿಂದ ಬೋಧಿಸತ್ವ-ಭವಿಷ್ಯ ಬುದ್ಧನು-ಈ ಎಲ್ಲಾ ಜಾತಕ ಕಥೆಗಳಲ್ಲಿ ಬಡವನಾಗಿ ಅಥವಾ ಕನಿಷ್ಠ ಮಾನವ ವ್ಯಕ್ತಿಯಾಗಿ ತೋರಿಸುತ್ತವೆ.**

ಚಾಂಡಾಲನಿರಲಿ, ಪುಕ್ಕಸನಾಗಿರಲಿ-ಆತನೇ ನಿಜವಾಗಿಯೂ ಪ್ರಧಾನವ್ಯಕ್ತಿಯಾಗಿ ಕಾಣುವುದು!

ಮತ್ತೊಂದು ಜಾತಕ (498) ಕಥೆಯ ಪ್ರಕಾರ ಬೋಧಿಸತ್ವ ಮತ್ತು ಆನಂದರಿಬ್ಬರೂ ಚಾಂಡಾಲರಾಗಿ ಹುಟ್ಟುತ್ತಾರೆ. ಗಾಢ ಸ್ನೇಹಿತರಾದ ಇವರು 'ಬ್ರಾಹ್ಮಣ'ರೆಂದು ಪರಿಗಣಿತವಾಗುವಾಗ, ಅವರ ಭಾಷೆಯಿಂದಾಗಿ ಗುರುತಿಸಲಾಗಿ, ಅವರನ್ನು ಹಿಂಸೆಗೆ ಗುರಿಪಡಿಸಲಾಗುತ್ತದೆ. ಅವರು ಸತ್ತು ಜಿಂಕೆಯಾಗಿ, ಅನಂತರ ಹಕ್ಕಿಗಳಾಗಿ, ಅಂತಿಮವಾಗಿ ರಾಜಮಕ್ಕಳಾಗಿ ಕೊನೆಗೆ ಪೂಜಾರಿಗಳಾಗುತ್ತಾರೆ. ಉದ್ದಕ್ಕೂ ಅವರು ಸ್ನೇಹಿತರಾಗಿ, ನೈತಿಕ ಬದುಕಿನ ಮಾದರಿಗಳಾಗಿ ಕಾಣಲಾಗುತ್ತದೆ. ಅಲ್ಲದೆ, ಅವರು ಅಸ್ಪೃಶ್ಯತೆಯಿಂದ ಮುಕ್ತರಾಗಲು ಹೆಣಗುವುದು, ಸಮರ್ಥನೀಯವೆಂದು ಪರಿಗಣಿಸಲಾಗುತ್ತದೆ. ಇದೆಲ್ಲಾ ದಲಿತ ಭಕ್ತಿ ಸಂತರ ಅಸ್ಪೃಶ್ಯತೆಯ ತೊಳಲಾಟದ ಆ ನೋವನ್ನು ಅನುಭವಿಸುತ್ತಾರೆಯೇ ವಿನಃ ಪ್ರತಿಭಟಿಸುವುದಿಲ್ಲ. (ಪ್ರತಿಭಟಿಸಿದ್ದರೂ ಅದಕ್ಕೆ ಚಾರಿತ್ರಿಕ ಪುರಾವೆಯೇನೂ ಇಲ್ಲ).

ಚಾಂಡಾಲ-ಬ್ರಾಹ್ಮಣ ವೈರತ್ವ : ಚಾಂಡಾಲ ಮತ್ತು ಬ್ರಾಹ್ಮಣರ ನಡುವಿನ ಅತ್ಯಂತ ಹೆಚ್ಚಿನ ವೈರತ್ವವನ್ನು ತೋರುವ ಕಥೆ (377)ಯಲ್ಲಿ ಬುದ್ಧನ ಕಾಲದಲ್ಲಿ ಉನ್ನತ ಗೌರವವನ್ನು ಪಡೆದ ಭಿಕ್ಕು ಸರಿಪುತ್ತ ಚಾಂಡಾಲನಾಗಿ ಜನ್ಮ ತಾಳುತ್ತಾನೆ. ಒಮ್ಮೆ ಒಬ್ಬ ಗರ್ವಿ ಬ್ರಾಹ್ಮಣನೊಂದಿಗೆ ಭೇಟಿಯಾದ ಪ್ರಸಂಗ ಇಂತಿದೆ.

ಆತ ಎದುರು ದಿಕ್ಕಿನಿಂದ ಬರುವ ಗಾಳಿಯಿಂದಾಗಿ ಚಾಂಡಾಲನ ದೇಹ ತನಗೆ ತಟ್ಟಬಹುದೆಂದು ಹೆದರಿ ಕೂಗುತ್ತಾನೆ: "ಶಾಪ ನಿನಗೆ, ಅಶುಭ ಚಾಂಡಾಲ ನೀನು, ಪಕ್ಕಕ್ಕೆ ಸರಿ' ಎನ್ನುತ್ತಾ, ಚಂಗನೆ ನೆಗೆದು ಗಾಳಿಯ ಕಡೆಗೆ ನಡೆದ. ಆದರೆ ಆತನಿಗಿಂತ ವೇಗವಾಗಿ ಚಾಂಡಾಲನ ಗಾಳಿಗೆ ಎದುರಾಗಿ, ಆತನೆದುರು ನಿಲ್ಲುತ್ತಾನೆ. ಆಗ ಆ ಬ್ರಾಹ್ಮಣ ಮತ್ತಷ್ಟು ಶಾಪ ಹಾಕುತ್ತಾ ಬೈಯುತ್ತಾನೆ...ಚಾಂಡಾಲ ಅವನಿಗೆ ಹೇಳಿದ : "ಯಾರು ನೀನು?" "ನಾನೊಬ್ಬ ಬ್ರಾಹ್ಮಣ ವಿದ್ಯಾರ್ಥಿ" "ಒಳ್ಳೇದು, ನೀನು ಅದೇ ಆಗಿದ್ದಲ್ಲಿ ನಾ ಕೇಳುವ ಪ್ರಶ್ನೆಗೆ ಉತ್ತರ ಕೊಡು...ಉತ್ತರ ಕೊಡದಿದ್ದಲ್ಲಿ ನಿನ್ನನ್ನು ನನ್ನ ಕಾಲುಗಳ ಮಧ್ಯೆ ಹಾಕುತ್ತೇನೆ" ಬ್ರಾಹ್ಮಣ ಆತ್ಮವಿಶ್ವಾಸದಿಂದ "ಮುಂದುವರಿ" ಎನ್ನುತ್ತಾನೆ. ಚಾಂಡಾಲ ಆತನಿಗೆ ಪ್ರಶ್ನಿಸುತ್ತಾನೆ" ಬ್ರಾಹ್ಮಣನೇ ಚತುರ್ಥಾಂಶ ಎಂದರೇನು?" "ಚತುರ್ಥಾಂಶ ಎಂದರೆ ನಾಲ್ಕು, ಪೂರ್ವ ಮತ್ತು ಉಳಿದದ್ದು". ಚಾಂಡಾಲ ಹೇಳಿದ. "ನಾ ಕೇಳಿದ್ದು ಆ ಚತುರ್ಥಾಂಶವನ್ನಲ್ಲ. ಅದನ್ನು ತಿಳಿಯದ ನೀನೊಬ್ಬ ದಡ್ಡ. ನನ್ನನ್ನು ಮುಟ್ಟಿದ ಗಾಳಿಯಿಂದ ನೀನು ಆವರಿಸಿಕೊಳ್ಳುವಂತಾಗಲಿ" ಎನ್ನುತ್ತಾ ಆತನ ಭುಜವನ್ನೆಳೆದು ತನ್ನ ಪಾದಗಳ ನಡುವೆ ಅಮುಕುತ್ತಾನೆ. (111.154)

ಈ ಎಲ್ಲಾ ಸಂಗತಿಯನ್ನು ಬೋಧಿಸತ್ವನಿಗೆ ಅರುಹಿದಾಗ, ಆ ಬ್ರಾಹ್ಮಣ ವಿದ್ಯಾರ್ಥಿಯನ್ನು ಕೋಪಗೊಂಡಿದ್ದಕ್ಕೆ ತಿದ್ದುತ್ತಾನೆ. ಆ ಬ್ರಾಹ್ಮಣ-ಕಪಣ ವೈರಾಗ್ಯವನ್ನು ಪ್ರತಿನಿಧಿಸುತ್ತಾನೆ. ಚಾಂಡಾಲ ಸತ್ಯಕ್ಕೆ ಸಾಕ್ಷಿಯಾಗುತ್ತಾನೆ. ಇಲ್ಲಿ ಮುಖ್ಯವಾದ ಅಂಶವೆಂದರೆ ಇಡೀ ಕಥೆಯುದ್ದಕ್ಕೂ ಚಾಂಡಾಲ ಮತ್ತು ಬ್ರಾಹ್ಮಣರ ನಡುವೆ ಇರುವ ವೈಷಮ್ಯವನ್ನು ಎತ್ತಿ ತೋರಿಸುತ್ತದೆಯಲ್ಲದೆ, ಚಾಂಡಾಲರು ಅಸ್ಪೃಶ್ಯತೆಯ ವಿರುದ್ಧ ತಿರುಗಿ ಬೀಳುವುದನ್ನು ಕಾಣುತ್ತೇವೆ.

ಅಂತಿಮವಾಗಿ, ನಾವು ಚಾಂಡಾಲ ಹೀರೋನಾದ ಮಾತಂಗನನ್ನೇ ಸಂಧಿಸೋಣ. ಆತ ಬ್ರಾಹ್ಮಣರೊಡನೆ ನೇರವಾಗಿ, ಸಂಘರ್ಷಕ್ಕಿಳಿಯುವುದನ್ನು ಕಾಣುತ್ತೇವೆ. ಮಾತಂಗ-ಜಾತಕ (497)ದಲ್ಲಿ ಆತ ಒಬ್ಬ ಶ್ರೀಮಂತ ವ್ಯಾಪಾರಿ ಕುಟುಂಬಸ್ಥನ ಹೆಂಡತಿಯನ್ನು ಅಪಹರಿಸುತ್ತಾನೆ. ಅನಂತರದಲ್ಲಿ ಪ್ರಸಿದ್ಧಿ ಮತ್ತು ಶಕ್ತಿಯನ್ನು ಪಡೆಯಲು ಭೈರಾಗಿಯಾಗುತ್ತಾನೆ. ತದನಂತರ ದುರಹಂಕಾರಿಯಾದ ತನ್ನ ಮಗನನ್ನು ತಿದ್ದುತ್ತಾನೆ. ಮುಂದೆ ಮತ್ತೊಬ್ಬ ಗರ್ವಿ ಬ್ರಾಹ್ಮಣನನ್ನು ವಿನಯಿಯನ್ನಾಗಿಸಲು ನಿರ್ಧರಿಸುತ್ತಾನೆ. ಅನಂತರ ತನ್ನ ಮಗನನ್ನು ದಿಕ್ಕು ತಪ್ಪಿಸಿದ ಹದಿನಾರು ಸಾವಿರ ಬ್ರಾಹ್ಮಣರನ್ನು ಹದ್ದುಬಸ್ತಿಗೆ ತರುತ್ತಾನೆ. ಹೀಗಿರುವಲ್ಲಿ ಬ್ರಾಹ್ಮಣರ ದ್ವೇಷದಿಂದಾಗಿ ಒಬ್ಬ ರಾಜನ ಮೂಲಕ ಆತನನ್ನು ಕೊಲ್ಲಲಾಗುತ್ತದೆ. ಆಗ ಅದಕ್ಕೆ ಪ್ರತೀಕಾರವಾಗಿ ದೇವರುಗಳಿಂದ ಆ ಇಡೀ ಸಾಮ್ರಾಜ್ಯವೇ ಸರ್ವನಾಶವಾಗುತ್ತದೆ: "ಅವರು ಹೇಳುವಂತೆ ಆ ಇಡೀ ಮೆಜ್ಜಾ ಸಾಮ್ರಾಜ್ಯವಿಡೀ ನಾಶವಾಯಿತೇ; ಆ ವೈಭವಪೂರಿತ ಮಾತಂಗನ ಸಾಲಿಗಾಗಿ ಆ ಇಡೀ ಸಾಮ್ರಾಜ್ಯವೇ ತೂರಲಾಯಿತು" ಈ ಇಡೀ ಜಾತಕ ಕಥೆಯು ಒಂದು ದೊಡ್ಡ ಹೋರಾಟದ ಅಲ್ಪ ಸೂಚನೆಯೇ ಆಗಿದೆ.

ನಿಜವಾಗಿಯೂ ಮಾತಂಗ ಎನ್ನುವುದು ಪ್ರಸಿದ್ಧರಾದ ಚಾಂಡಾಲ ಅಥವಾ ಅಸ್ಪೃಶ್ಯರಾಗಿರುವ "ಶ್ರೇಷ್ಠ" ಹೆಸರಾಗಿದೆ. ತಾರಾನಾಥ ಎನ್ನುವ ಟಿಬೆಟಿನ ಬೌದ್ಧ ಸನ್ಯಾಸಿ

ಇಂಡಿಯಾಕ್ಕೆ ಭೇಟಿಕೊಟ್ಟು, 17ನೇ ಶತಮಾನದಲ್ಲಿ ಇಂಡಿಯಾದಲ್ಲಿದ್ದ ಬೌದ್ಧ ಚರಿತ್ರೆಯನ್ನು ಕುರಿತು ಬರೆಯುವಾಗ ಅನೇಕ ಮಂದಿ ಮಾತಂಗಗಳ ಬಗ್ಗೆ ಉಲ್ಲೇಖಿಸುತ್ತಾನೆ. ಅವರಲ್ಲೊಬ್ಬ ಮಾತಂಗ ಚೈನಾಕ್ಕೆ ಹೋದವನು, ಮತ್ತೊಬ್ಬ ಮಾತಂಗಿಪ ಎನ್ನುವವನು ನಾಗಾರ್ಜುನನ ಶಿಷ್ಯನೆಂದು ಹೇಳಲಾಗಿದೆ. ಮತ್ತೊಬ್ಬ ಒಬ್ಬ ತಾಂತ್ರಿಕ ಸಿದ್ಧಿಯಾಗಿದ್ದ.

ಇಲ್ಲಿ ಮತ್ತೊಂದು ಕುತೂಹಲಕರ ಪ್ರಶ್ನೆ ಎದುರಾಗುತ್ತದೆ. ಈ ಚಾಂಡಾಲರು ಯಾರು? ಬ್ರಿಟಿಷರ ಸಂದರ್ಭದಲ್ಲಿ ಬಂಗಾಳ ರಾಜ್ಯದಲ್ಲಿ ಮಾತ್ರ ಚಾಲಿಸಾಲರೆಂದು ಕರೆಯುವ ಒಂದು ಅಸ್ಪೃಶ್ಯ ಸಮುದಾಯವಿತ್ತು. (ನಾವು ಶೂದ್ರರೆಂದು ಕರೆದುಕೊಂಡಿರುವ ಇವರು ಒಂದು ದೊಡ್ಡ ಸಾಮಾಜಿಕ ಆಂದೋಲನವನ್ನೇ ಮಾಡುತ್ತಾರೆ). ಆದರೆ ಬೌದ್ಧ ಪಾಳಿ ಗ್ರಂಥಗಳಲ್ಲಿ (ಫಾ ಹ್ಯೆನ್ ಚರಿತ್ರೆಕಾರ ಉಲ್ಲೇಖಿಸಿದಂತೆ) ಬರುವಂತೆ ಆ ಚಾಂಡಾಲರು ಗಂಗಾಕಣಿವೆ ಪ್ರದೇಶದಲ್ಲಿದ್ದವರು.

ಅಂದರೆ ಇಲ್ಲಿ ಒಂದು ಸಂಬಂಧ ಇರಬಹುದೇನೋ. ಚರಿತ್ರೆಕಾರ ರಿಚರ್ಡ್ ಈಟನ್ ಗುರುತಿಸುವಂತೆ ತನ್ನ ಪ್ರಶಸ್ತಿ ಪಡೆದ ಕೃತಿ "ದಿ ರೈಸ್ ಆಫ್ ಇಸ್ಲಾಂ ಆಂಡ್ ದಿ ಬೆಂಗಾಲ್ ಫ್ರಾಂಟಿಯರ್"ಲ್ಲಿ ಬಂಗಾಳದ ಮೂಲನಿವಾಸಿ ಜನ ಆದಿಮುಂಡ ಭಾಷಿಕರಾಗಿದ್ದು ಅವರು ಆಸ್ಟ್ರೋ ಏಷಿಯಾಟಿಕ್ ಭಾಷೆಯನ್ನು ಮಾತನಾಡುತ್ತಿದ್ದಾರೆ. ಮುಂದೆ ಅದು ಪಶ್ಚಿಮದಲ್ಲಿ ಇಂಡೋ ಆರ್ಯನ್ ಮತ್ತು ದ್ರಾವಿಡ ಭಾಷೆಗಳಲ್ಲಿ ಬೆರೆತುಹೋಗುತ್ತದೆ. ಚಾಂಡಾಲ ಎನ್ನುವ ಪದ ಮುಖ್ಯವಾಗಿ ಮುಂಪಾರಿ ಮಾತನಾಡುವ ಪರಿಶಿಷ್ಟ ಪಂಗಡವಾದ ಇಂದಿನ ಸಂತಾಲರನ್ನು ಸೂಚಿಸುತ್ತದೆ.

> ನಿಜವಾಗಿಯೂ ಮಾತಂಗ ಎನ್ನುವುದು ಪ್ರಸಿದ್ಧರಾದ ಚಾಂಡಾಲ ಅಥವಾ ಅಸ್ಪೃಶ್ಯರಾಗಿರುವ "ಶ್ರೇಷ್ಠ" ಹೆಸರಾಗಿದೆ. ತಾರಾನಾಥ ಎನ್ನುವ ಟಿಬೆಟಿನ ಬೌದ್ಧ ಸನ್ಯಾಸಿ ಇಂಡಿಯಾಕ್ಕೆ ಭೇಟಿಕೊಟ್ಟು, 17ನೇ ಶತಮಾನದಲ್ಲಿ ಇಂಡಿಯಾದಲ್ಲಿದ್ದ ಬೌದ್ಧ ಚರಿತ್ರೆಯನ್ನು ಕುರಿತು ಬರೆಯುವಾಗ ಅನೇಕ ಮಂದಿ ಮಾತಂಗಗಳ ಬಗ್ಗೆ ಉಲ್ಲೇಖಿಸುತ್ತಾನೆ. ಅವರಲ್ಲೊಬ್ಬ ಚೈನಾಕ್ಕೆ ಹೋದವನು, ಮತ್ತೊಬ್ಬ ಮಾತಂಗಿಪ ಎನ್ನುವವನು ನಾಗಾರ್ಜುನನ ಶಿಷ್ಯನೆಂದು ಹೇಳಲಾಗಿದೆ.

ಆದ್ದರಿಂದ ಇಲ್ಲಿ ಆಧಾರಭೂತವಾಗಿ ಮಾಡುವ ವಾದವೆಂದರೆ, ಈ ಮೂಲ ಮುಂಡ ಮಾತನಾಡುತ ಬೆಂಗಾಲದಿಂದ ಮಧ್ಯಭಾರತದವರೆಗೆ ಹರಡಿಕೊಂಡಿರುವ ಹಾಗೂ ಗಂಗಾ ಪ್ರದೇಶದಲ್ಲಿರುವ ಜನರೇ ಚಾಂಡಾಲರು. ಬ್ರಾಹ್ಮಣ್ಯ ಸಿದ್ಧಾಂತವು ಮೇಲಕ್ಕೆ ಬಂದಂತೆ (ಇದು ಪೂರ್ವ ಗಂಗಾಕಣಿವೆಯಲ್ಲಿತ್ತು) ಅನೇಕ ಸ್ಥಳೀಯ ಮುಂಡಾರಿ ಮಾತನ್ನಾಡುವವನರನ್ನು ಆಕ್ರಮಣಕ್ಕೊಳಪಡಿಸಿ ಅಧೀನಕ್ಕೊಳಪಟ್ಟವರೇ ಚಾಂಡಾಲರೆಂದಾಗಿರಬೇಕು. ಅನಂತರದಲ್ಲಿ ಅವರನ್ನು ಪ್ರತಿಭಟಿಸುವ ಕಾರಣಕ್ಕೆ ಅಸ್ಪೃಶ್ಯರೆಂದು ಪರಿಗಣಿಸಿದ್ದಾರೆ. ಇತರ ದೂರಪ್ರದೇಶಗಳಲ್ಲಿ ವಾಸಿಸುತ್ತಿರುವವರು ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುತ್ತಾರೆ. ಅಂಥದರಲ್ಲಿ ಬಂಗಾಳದ ಗುಂಪುಗಳು ಸ್ವತಂತ್ರವಾಗಿದ್ದು ಬೌದ್ಧ ಧರ್ಮವನ್ನು ಜೀವಿಸುತ್ತಿದ್ದರು. ಆದ್ದರಿಂದಾಗಿ ಈ ಬೌದ್ಧ ಪರಂಪರೆಯು ಬಂಗಾಳದಲ್ಲಿ ಉಳಿದುಕೊಂಡಿತ್ತು. ಹೀಗಿರುವಾಗ ಬೌದ್ಧ ಧರ್ಮ ನಶಿಸುತ್ತಿರುವಂತೆ ಅನೇಕರು ಇಸ್ಲಾಮಿಗೆ ಮತಾಂತರಗೊಳ್ಳುತ್ತಾರೆ. ಯಾಕೆಂದರೆ ಅದೊಂದೇ ಸಮಾನತೆಯನ್ನು ಎತ್ತಿಹಿಡಿಯುವ ಧರ್ಮವಾಗಿ ಅವರಿಗೆ ತೆರೆದುಕೊಂಡದ್ದು. ಹೀಗೆ ಅನೇಕ ಮಂದಿ ಹಿಂದಿನ ಚಾಂಡಾಲರು ಬಂಗಾಳದಲ್ಲಿ ಇಸ್ಲಾಂಗೆ ಮತಾಂತರ ಗೊಳ್ಳುತ್ತಾರೆ. ಹೀಗೆ ಚಾಂಡಾಲರೆನ್ನುವ ತಮ್ಮ ಐಡೆಂಟಿಟಿಯನ್ನು ಕಳೆದುಕೊಳ್ಳುತ್ತಾರೆ. ಉಳಿದವರು ಬ್ರಾಹ್ಮಣ್ಯಕ್ಕೊಳಗಾಗಿ ಹಿಂದೂಗಳೆಂದು ಅಸ್ಪೃಶ್ಯರಾಗಿ (ಚಾಂಡಾಲರಾಗಿ) ಮೀನು ಹಿಡಿಯುವಿಕೆಯನ್ನು ಮಾಡುತ್ತಾರೆ. ಅಂದರೆ ಮಾತಂಗ ಎನ್ನುವ ಹೆಸರು ಒಂದು ವ್ಯಾಪಕವಾಗಿ ಹರಡಿದ ಸಮುದಾಯದ ನಾಯಕರುಗಳಲ್ಲಿ ಒಬ್ಬನನ್ನು ದಾಖಲಿಸುತ್ತದೆ. ಆತನೇ ಒಂದು ಪ್ರಬಲವಾದ ಪ್ರತಿರೋಧವನ್ನು ಜಾತಿ ಮತ್ತು ಪ್ರಭುತ್ವ ಶ್ರೇಣೀಕರಣಗಳ ವಿರುದ್ಧ ನಡೆಸಿದವನಾಗಿ ಪೌರಾಣಿಕ ನೆಲೆಯನ್ನು ಪಡೆದುಕೊಂಡಿದ್ದಾನೆ. ●

ಪ್ರಿಯ ದಲಿತೇತರರೇ, ದಯವಿಟ್ಟು ಕೇಳಿ

(9ನೇ ಪುಟದಿಂದ)

ಪ್ರಭುತ್ವವು ತಡೆದಿದೆಯೇ? ಪ್ರೀತಿಯ ದಲಿತೇತರರೇ, ದಲಿತರಿಗೆ ಸಮಾಜ ಮತ್ತು ಪ್ರಭುತ್ವದ ನಡುವಿನ ಸಾಮಾಜಿಕ ತತ್ತ್ವದ ಆಯ್ಕೆಯನ್ನು ಮಾಡಲು ಅವಕಾಶಕೊಟ್ಟರೆ, ಅವರು ಪ್ರಭುತ್ವದ ಸಾಮಾಜಿಕ ದರ್ಶನವನ್ನು ಆಯ್ಕೆ ಮಾಡುತ್ತಾರೆ. ಪ್ರಭುತ್ವ ಮತ್ತು ಸಮಾಜವು ಪರಸ್ಪರ ಸಂಬಂಧವುಳ್ಳದ್ದು. ಈ ಮಾನದಂಡದಿಂದ ಪ್ರಭುತ್ವವು ದಲಿತರ ಹತ್ತಿರದ ಸಂಬಂಧಿಯಾಗಿದೆ. ಪ್ರಭುತ್ವವು ದಲಿತರ ಹತ್ತಿರದ ಸ್ನೇಹಿತನಾಗಿದೆ. ಪ್ರಭುತ್ವವು ದಲಿತರ ಉತ್ತಮ ಹಿತಚಿಂತಕನಾಗಿದೆ.

ಮುಕ್ತ ಕಾರಾಗೃಹ :

ಇನ್ನೊಂದು ತುದಿಯಲ್ಲಿ, ಸಮಾಜವು ದಲಿತರ ಮೊತ್ತಮೊದಲ ಹಿಂಸಕನಾಗಿದೆ. ಇದು ದಲಿತರಿಗೆ ಮುಕ್ತ ಕಾರಾಗೃಹವಾಗಿದೆ. ಇಲ್ಲಿ ಇವರು ಮುಕ್ತವಾಗಿ ಓಡಾಡುವಾಗೇ ಇಲ್ಲ. ದಲಿತನೊಬ್ಬ ಚಲಿಸುತ್ತಿರುವ ರೈಲಿನಲ್ಲಿ ಮುಕ್ತವಾಗಿ ಸಿಗರೇಟು ಸೇದಬಹುದು. (ಇತ್ತೀಚೆಗೆ ಎಲ್ಲ ಪ್ರಯಾಣಿಕರಿಗೆ ನಿಷೇಧಿಸದವರೆಗೆ), ಆದರೆ ಥೇವಾರರು ಪ್ರಾಧಾನ್ಯತೆ ಪಡೆದ ಹಳ್ಳಿಯಲ್ಲಿ ಅದೇ ಸ್ವಾತಂತ್ರ್ಯದ ನೆಲೆಯಲ್ಲಿ ದಲಿತನೊಬ್ಬ ಸಿಗರೇಟ್ ಸೇದಬಹುದೇ, ಪ್ರೀತಿಯ ದಲಿತೇತರರೇ, ನಾವು ನಿಮ್ಮ ಮಿತಿಗಳನ್ನು ಅರ್ಥಮಾಡಿಕೊಂಡಿದ್ದೇವೆ. ನಾವು ಸಾಮಾಜಿಕವಾಗಿ ಅಲ್ಪಸಂಖ್ಯಾತರು, ರಾಷ್ಟ್ರೀಯ ಸಂಪತ್ತಿನಲ್ಲಿ ನಾವೇನಾದರೂ ಪಾಲು ಪಡೆದಿದ್ದೇವೆಯೇ? ನಮ್ಮಲ್ಲಿ ಯಾರೂ ರಾಷ್ಟ್ರೀಯ ಮಾಧ್ಯಮಗಳಲ್ಲಿಲ್ಲ. ನಮಗೆ ಅಕಾಡೆಮಿಯಲ್ಲಿ ತೋರಿಕೆಯ ಪಾಶಸ್ತ್ಯ ಮಾತ್ರ. 'ಸ್ವಾಯತ್ತತೆ'ಯ ಹೆಸರಿನಲ್ಲಿ ಶೈಕ್ಷಣಿಕ ಸಂಸ್ಥೆಗಳು ರಾಜ್ಯಾಂಗದ ಸಕಾರಾತ್ಮಕ ಕ್ರಿಯಾನೀತಿಗಳನ್ನು ಉಲ್ಲಂಘಿಸುತ್ತವೆ. ಆದ್ದರಿಂದ ನಾವೇನೂ ಮಾಡಲಾಗುವುದಿಲ್ಲ.

ಪ್ರಿಯ ದಲಿತೇತರರೇ, ನಿಮ್ಮ ಸಮಾಜವು ಕೋಪಗೊಂಡಾಗ ನಮ್ಮ ಮಹಿಳೆಯರನ್ನು ವಿವಸ್ತ್ರಗೊಳಿಸಿ, ಬೀದಿಗಳಲ್ಲಿ ಬೆತ್ತಲೆಯಾಗಿ ಮೆರವಣಿಗೆ ಮಾಡಲಾಗುತ್ತದೆ. ನಾವು ಸಹ ಕೆಲವು ಸಂದರ್ಭಗಳಲ್ಲಿ ನಿಮ್ಮ ಬಗ್ಗೆ ಸಿಟ್ಟುಗೊಂಡಿದ್ದೇವೆ. ಆದರೆ ಅದು ಅಷ್ಟಕ್ಕೆ ನಿಂತಿದೆ. ನಮ್ಮ ಸಿಟ್ಟು ನಮ್ಮೊಳಗೆ ಉಳಿದುಕೊಳ್ಳುತ್ತದೆ. ಇದು ನಮ್ಮನ್ನೇ ಸುಡುತ್ತದೆ. ಆದರ ಬಿಸಿ ತಟ್ಟುತ್ತದೆ. ನೋವನ್ನು ಅನುಭವಿಸುತ್ತೇವೆ. ನಾವು ಬಿಡುಗಡೆಗಾಗಿ ಸ್ವಾತಂತ್ರ್ಯವನ್ನು ಅತಿಯಾಗಿ ಬಯಸುತ್ತೇವೆ. ಅಂಥ ಸಂದರ್ಭಗಳಲ್ಲಿ, ನಾವು ಸಹ ನಮ್ಮ ಸಿಟ್ಟನ್ನು ವ್ಯಕ್ತಪಡಿಸುತ್ತೇವೆ. ಆದರೆ ಅದಕ್ಕೆ ಚಿಂತಿಸಬೇಕಿಲ್ಲ. ನೀವೂ ಮನುಷ್ಯರು, ಎಲ್ಲ ಮಾನವ ದೌರ್ಬಲ್ಯಗಳಿಂದ ಜೀವಿಸುತ್ತಿರುವವರು. ನಾವು ಕೂಡ ನಮ್ಮನ್ನು ಮನುಷ್ಯರೆಂದು ತಿಳಿದಿದ್ದೇವೆ. ಎಲ್ಲ ಮಾನವೀಯ ಮೌಲ್ಯಗಳೊಂದಿಗೆ ಬದುಕಲು ಇಚ್ಛಿಸುತ್ತೇವೆ. ಆದ್ದರಿಂದ ನಾವು ನಮ್ಮ ಮಹಿಳೆಯರನ್ನು ಮಾಡಿದಂತೆ ನಿಮ್ಮ ಮಹಿಳೆಯರಿಗೆ ಮಾಡುವುದಿಲ್ಲ. ನಾವು ಅವರ ಅತೀ ಹೆಚ್ಚು ಗೌರವ ಮತ್ತು ಸ್ವಾತಂತ್ರ್ಯವನ್ನು ಹೊಂದಿದ್ದೇವೆ.

ಆದರೆ ನಾವು ನಿಮ್ಮನ್ನು ವಿವಸ್ತ್ರಗೊಳಿಸುತ್ತೇವೆ, ನಿಮ್ಮ ಬೌದ್ಧಿಕತೆ, ನಿಮ್ಮ ದರ್ಶನ ಮತ್ತು ದೃಷ್ಟಿಕೋನಗಳನ್ನು ವಿವಸ್ತ್ರಗೊಳಿಸುತ್ತೇವೆ. ನಿಮ್ಮನ್ನು ಬೌದ್ಧಿಕವಾಗಿ ವಿವಸ್ತ್ರಗೊಳಿಸಿ, ತಿರುನಲ್ವೇಲಿ ಬೀದಿಗಳಲ್ಲಿ, ಲಕ್ನೋ ಬೀದಿಗಳಲ್ಲಿ, ದೆಹಲಿ ಬೀದಿಗಳಲ್ಲಿ, ತೀನ್ ಮೂರ್ತಿಯ ಲಾನ್‌ಗಳ ಬದಿಯಲ್ಲಿ ಮೆರವಣಿಗೆ ಮಾಡುತ್ತೇವೆ. ರಾಷ್ಟ್ರವು ಕೆಂಪು ಬಾವುಟ, ಹಸಿರು ಅಥವಾ ಕೇಸರಿ ನಡುವೆ ಏನು ಅಡಗಿದೆ ಎಂಬುದನ್ನು ನೋಡುತ್ತದೆ. ಚಿಂತಿಸಬೇಡಿ. ನಾವು ನಿರಾಶರಾಗಬೇಕಿಲ್ಲ, ನಮ್ಮ ಕಾಲವು ಬರುತ್ತದೆ. ನಾವು ಮೂರು ಸಾವಿರ ವರ್ಷಗಳಿಂದ ಕಾಯುತ್ತಿದ್ದೇವೆ. ನಾವು ಮತ್ತೊಂದು ಸಾವಿರ ವರ್ಷ ಕಾಯುತ್ತೇವೆ. ನನ್ನ ಪ್ರೀತಿಯ ದಲಿತೇತರರೇ, ಆದರೆ ನೀವು ಸುಮ್ಮನೆ ಇರಲಾಗುವುದಿಲ್ಲ. ●

ಗಾಢ ಅಂಧಕಾರದಲ್ಲಿ! ನೆಟ್ಟ ಇರುಳಕತ್ತಲಲ್ಲಿ
ಸತಿಗೆ ಸುತಗೆ ನಮಿಸಿ ಹೊರಟ। ಬೆಳಕಹುಡುಕಲು।
ಕಾಡು ಮೇಡು ಹತ್ತಿ ಇಳಿದು, ಸುಖದ ಬೆಸುಗೆಕಳಚಿ ಎಸೆದು।
ಚಳಿಗೆ ಮಳೆಗೆ ಮೈಯ ಒಡ್ಡಿ, ಛಲದಿ ಕುಳಿತ ತಪವಗೈಯಲು।।

ಮಾರ ಬಂದು ಕಾಡುತಿರಲು। ದಿಟ್ಟ ಶಪಥ ತೊಟ್ಟು ನುಡಿದ।
ಪರ್ವತಗಳು ಕದಲಬಹುದು। ಸಾಗರಗಳು ಬತ್ತಬಹುದು।
ಸೂರ್ಯ ಚಂದ್ರ ನಿಲ್ಲಬಹುದು। ಗಾಳಿಚಲನೆ ಮರೆಯಬಹುದು।

ಸಿದ್ಧ ಬಿಡನು ತಪದ ಪಥವ। ಗುರಿಯ ಮುಟ್ಟದೆ।।
ಸಿದ್ಧ ಹೋಗಿ ಬುದ್ಧ ಬಂದ। ಕಾಡ ಗರ್ಭದಿ।
ಪಡೆದುದೆಲ್ಲ ಹಂಚ ಬಂದ। ನಾಡ ಮಧ್ಯದಿ।
ಬರಿದೆ ಕೊಟ್ಟ ಬೇಡಿದವಗೆ । ಜ್ಞಾನದಾ ಸಿರಿ।

ದಿಟದಿ ನಡೆದ ದಲಿತರೆಡೆಗೆ। ಪ್ರೀತಿ ಭಾವದಿ।
ವೇದ ಶಾಸ್ತ್ರ ಮಂತ್ರ। ತಿಳಿದ ಜನರ ತಂತ್ರ।
ಬ್ರಹ್ಮ ಆತ್ಮ ದೈವ ಮಿಥ್ಯ, ನಿನಗೆ ನೀನೇ ಕರ್ತ ।
ದಯೆಯೇ ಧರ್ಮ ರಕ್ಷೆ। ಪ್ರೀತಿ ಸಹನೆ ಬಾಳಕಕ್ಷೆ।
ಆಸೆಗಿರಲಿ ಮಿತಿಯಬಂಧ। ಬಾಳಕಡಲು ದಾಟಲು।।



ಬುದ್ಧ ನುಡಿದ ಅಮರ ಮಂತ್ರ।
ಬಾಳ ಬಂಡಿ ಎಳೆವ ಯಂತ್ರ।
ಬುದ್ಧಂ ಶರಣಂ ಗಚ್ಛಾಮಿ।
ಧರ್ಮ ಶರಣಂ ಗಚ್ಛಾಮಿ ।
ಸಂಘಂ ಶರಣಂ ಗಚ್ಛಾಮಿ।।

○ ದೇವದಾಸ್ ಮೊದಲಿಗ

ಮುಕ್ತ ಉದ್ಯಮಗಳ ಭರಾಟೆ

(10ನೇ ಪುಟದಿಂದ)

ಕಾಣದಷ್ಟು ಪ್ರಗತಿಯನ್ನು ಮಾಡಲಾಗಿದೆ. ಕೆಲ ವರ್ಷಗಳ ಹಿಂದೆ ರಾಜ್‌ಕೃಷ್ಣರವರು ಭಾರತದ ದುರ್ಬಲರ ಅಂದರೆ ಶೇ. 3.5 ಆರ್ಥಿಕ ಬೆಳವಣಿಗೆಯನ್ನು ಹಿಂದುರೇಟ್ ಆಫ್ ಗ್ರೋತ್ ಎಂದು ಹೀಯಾಳಿಸಿದ್ದರು. ಅಂತಹ ದೌರ್ಬಲ್ಯಗಳಿಂದ ಹೊರಬಂದು ಕಳೆದ ಐದು ವರ್ಷಗಳಲ್ಲಿ ಸರಾಸರಿ ಶೇ. 5ರಷ್ಟು ಪ್ರಗತಿಯಾಗುತ್ತಿದೆ.

ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಅಪಮಾನಕರ ದಿನಗಳು ಬಹಳಷ್ಟು ಮಂದಿಗೆ ನೆನಪಿಲ್ಲ. ಆದರೆ ಇಂದು ಲಕ್ಷಾಂತರ ಟನ್ನು ದವಸ ಧಾನ್ಯಗಳು ಭಾರತದ ಗೋದಾಮುಗಳಲ್ಲಿ ತುಂಬಿಕೊಂಡಿದೆ. ವರ್ಷಕ್ಕೆ ಸರಾಸರಿ ಶೇ. 20ರಷ್ಟಿದ್ದ ಬೆಲೆ ಏರಿಕೆಯ ಪ್ರಮಾಣ ಕೆಳಗಿಳಿದು ಶೇ. 3 ರಿಂದ 4ರ ಆರೋಗ್ಯಕರ ಸ್ಥಿತಿಯಲ್ಲಿದೆ. 1991ರಲ್ಲಿ ವಿದೇಶಿ ವಿನಿಮಯದ ಭಾರಿ ಕೊರತೆಯಿಂದಾಗಿ ಭಾರತ ಚಿನ್ನವನ್ನು ಗಿರವಿ ಇಡಬೇಕಾಯಿತು. ಆದರೆ ಇಂದು ಪರಿಸ್ಥಿತಿ ಸುಧಾರಿಸಿದೆ. ವಿದೇಶಗಳಿಂದ ಪಡೆದ ದುಬಾರಿ ಬಡ್ಡಿಯ ಸಾಲಗಳನ್ನು ಹಿಂತಿರುಗಿಸುವುದರ ಜೊತೆಗೆ ಬಡರಾಷ್ಟ್ರಗಳ ನೆರವಿಗೆ ಸಾಲ ಕೊಡುತ್ತಿದ್ದೇವೆ. ಸುಮಾರು 15 ವರ್ಷಗಳಿಂದ ಅಮೇರಿಕಾ ಡಾಲರ್ ವಿರುದ್ಧ ಮೌಲ್ಯ ಕಳೆದುಕೊಂಡು ಒಂದು ಡಾಲರ್‌ಗೆ ಐವತ್ತು ರೂಪಾಯಿಯಾಗಿದ್ದ ಪರಿಸ್ಥಿತಿ ಈಗ ಸುಧಾರಿಸಿ ದಿನೆ ದಿನೇ ಡಾಲರ್ ವಿರುದ್ಧ ರೂಪಾಯಿಯ ಮೌಲ್ಯ ವೃದ್ಧಿಯಾಗುತ್ತಿದೆ.

ಎಂದಿನಂತೆ ಕೃಷಿ ಮತ್ತು ಕೈಗಾರಿಕಗಳನ್ನಷ್ಟೆ

ಅವಲಂಬಿಸಿಕೊಂಡಿಲ್ಲ. ಭಾರತವು ಇಂಟರ್‌ನೆಟ್‌ನಂತಹ ತಂತ್ರಜ್ಞಾನದ ಪರಿಣಾಮವಾಗಿ ಸೇವಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದೆ. ದೇಶದಲ್ಲಿನ ಒಟ್ಟು ಉತ್ಪನ್ನಗಳು ಹೆಚ್ಚಾಗುತ್ತಿವೆ. ನಮ್ಮ ಶಿಕ್ಷಣ ಸಂಸ್ಥೆಗಳು ಲಕ್ಷಾಂತರ ಮಂದಿ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳನ್ನು ರೂಪಿಸಲಾಗಿ ಇಂದು ಭಾರತ ವಿಶ್ವದಲ್ಲೇ ಎರಡನೇ ಅತಿ ಹೆಚ್ಚಿನ ತಂತ್ರಜ್ಞಾನಿಗಳುಳ್ಳ ದೇಶವೆನ್ನಲಾಗುತ್ತಿದೆ. ಪ್ರತಿವರ್ಷ ಅಮೇರಿಕ ದೇಶ ವಿದೇಶಿಯರಿಗಾಗಿ ನೌಕರಿಗಾಗಿ ನೀಡುವ ಹೆಚ್1ಬಿ ವೀಸಾಗಳಲ್ಲಿ ಶೇ. 45ರಷ್ಟು ಭಾರತೀಯರಿಗೆ ಲಭಿಸುತ್ತಿವೆ. ಇದರಿಂದ ನ್ಯೂಜರ್ಸಿ ಯಂತಹ ಕೆಲ ಅಮೇರಿಕಾ ರಾಜ್ಯಗಳು ವಿದೇಶಿಯರಿಗೆ ತಡೆಯೊಡ್ಡುವ ಶಾಸನಗಳನ್ನು ಮಾಡಲಿಚ್ಛಿಸಿವೆಯಾದರೂ ಚಿಂತಿಸುವ ಅಗತ್ಯವಿಲ್ಲ. ಏಕೆಂದರೆ ವಿಶ್ವದ 500 ಅದೃಷ್ಟವಂತ (ಫಾರ್ಚುನ್) ಉದ್ಯಮಗಳ ಪೈಕಿ 220 ತಮ್ಮ ಸಾಫ್ಟ್‌ವೇರ್ ಸಂಬಂಧಿ ಕೆಲಸಗಳನ್ನು ಭಾರತದಲ್ಲಿರುವ ಉದ್ಯಮಗಳಿಂದ ಕೊಂಡು ಪಡೆಯುತ್ತಿವೆ.

ಈ ಪ್ರಗತಿ ಸಾಧನೆಗಳೆಲ್ಲಾ ನಾವು ಸ್ವಲ್ಪ ಖುಷಿ ಪಡಬೇಕಾದ ವಿಚಾರವೇ, ಅಥವಾ ಮುಖ್ಯ ಕ್ಷೇತ್ರಗಳಾದ ಬಡತನ ನಿರ್ಮೂಲನೆ ಅಥವಾ ಮೂಲಭೂತ ಸೌಕರ್ಯಗಳಲ್ಲಿ ಹಿಂದುಳಿದಿರುವುದರಿಂದ ಸಾಧನೆ ಎನ್ನುವುದು ಸರಿಯಲ್ಲವೇ? ಈ ಕ್ಷೇತ್ರಗಳಲ್ಲಿ ಶೇ. 30.2ರಷ್ಟು ಗ್ರಾಮೀಣ ಬಡತನ ಮತ್ತು ಶೇ. 24.7ರಷ್ಟು ನಗರ ಬಡತನ ತೀರಾ ನಿರಾಶಾದಾಯಕ ಲಕ್ಷಣ ಮತ್ತು 1960ರ ದಶಕದಲ್ಲಿ ಲೋಹಿಯಾ ಪ್ರತಿಪಾದಿಸಿದ್ದ ದಿನಕ್ಕೆ ಮೂರಾಣೆ ತಲಾದಾಯಕ್ಕೂ ಸಹ ದೂರ. ಆದ್ದರಿಂದ ಭಾರತ ಇಂದು ಧರೆಯ ಮೇಲಿನ ಸ್ವರ್ಗವೆನ್ನಲಾಗದು ಆದರೆ ಪರಿಸ್ಥಿತಿ ಹದಗೆಡುತ್ತಿಲ್ಲವೆಂದಂತೂ ಖಂಡಿತ ಹೇಳಬಹುದು. ಮಂದಿರ ಮಸೀದಿಗಳಂತಹ ರಾಜಕಾರಣಿಗಳ ಬೂಟಾಟಿಕೆ ನೀತಿ ಅನಾವಶ್ಯಕ. ಇಲ್ಲಿಯೂ ಸಹ ಸ್ವತಃ ಆಗುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಿಂದಾಗಿ ರಾಜಕಾರಣಿಗಳ ಹಸ್ತಕ್ಷೇಪಕ್ಕೆ ತಡೆಯಾಗುತ್ತಿದೆ. ಯಾವುದೇ ಆಡಳಿತಾರೂಢ ಅಥವಾ ವಿರೋಧ ಪಕ್ಷ ಮುಷ್ಕರಕ್ಕೆ ಕರೆ ನೀಡುತ್ತಿಲ್ಲವೆಂಬುದು ಒಳ್ಳೆಯ ಅಂಶ. ಒಮ್ಮೆ ಬ್ರಿಟಿಷರ ರಾಜಕಾರಣಿಯೊಬ್ಬರು ಹೇಳಿದ್ದರು" ಮನಸಾರೆ ನಾವು ಅರ್ಧ ಸಮಾಜವಾದಿಗಳೆಂದು", ಇಂದಿನ ಭಾರತದಲ್ಲಿ ಬ್ಯಾನರ್ ಹಿಡಿದು ನಿಲ್ಲುವ ಕಮ್ಯುನಿಸ್ಟರು ಮತ್ತು ಎಡಸಿದ್ಧಾಂತದ ಕಾಂಗ್ರೆಸಿಗ ಎ.ಕೆ. ಆಂಥೋಣಿಯೂ ಸೇರಿದಂತೆ ನಾವೆಲ್ಲರೂ ಮುಕ್ತ ಉದ್ಯಮಶೀಲರು, ತುಸು ಬದಲಾವಣೆ, ಏನು? ●

(ದಿನಾಂಕ 6-7-2003ರ ಎಕನಾಮಿಕ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ)

ಜಂಬಣ್ಣ ಅಮರಚಿಂತರ ಎರಡು ಹಾಡುಗಳು

ಪಲ್ಲಕ್ಕಿ ಹೊತ್ತ ಬೋವಿಗಳ ಹಾಡು



ಅಯ್ಯಾಹೋ, ಅಯ್ಯಾ, ಅಯ್ಯಾ ಹೋ ಅಯ್ಯಾ
ತಗ್ಗು ಮಿಟ್ಟದಾರಿಯಲಿ, ಪಟ್ಟಾ ಪಟ್ಟಾ ಹೆಜ್ಜೆಯಿಟ್ಟು
ಹೆಣಭಾರದ ಮೇನೆಯನು ಹೆಗಲ ಮೇಲೆ ಹೊತ್ತು
ಹೊತ್ತು ಗೊತ್ತು ಗುರಿಯಿಲ್ಲದೆ, ಮಳೆ ಚಳಿ ಬಿಸಿಲೆನ್ನದೆ
ಸಾಗಿ ನಡೆದೆವು ಮುಂದೆ ಮುಂದೆ ದಾರಿ ಆಯ್ತು ಹಿಂದೆ ಹಿಂದೆ
ಅಯ್ಯಾಹೋ ಅಯ್ಯಾ; ಅಯ್ಯಾ ಹೋ ಅಯ್ಯಾ

೨

ಕಾಲುಯಿರದ ಕುಂಟರ; ರಾಜ, ರಾಣಿ, ರಾಯರ
ಕಂತ್ರಿ ಮಂತ್ರಿವರ್ಯರ, ಸುಲ್ತಾನವಜೀರರ
ಬಿಸಿಲಿಗೆ ಬಾಡದಂತೆ ಧಣಿಗಳ ಡೋಲಿ ಹೊತ್ತು
ಕಲ್ಲು ಮುಳ್ಳು ದಾರಿಯಲಿ ಬೆವರು ಹನಿಸಿ ರಕ್ತ ಸುರಿಸಿ
ಹೆಗಲೆಲ್ಲ ಕಾಯಿಗಟ್ಟಲು ಹಗಲೆಲ್ಲ ನಡೆದವು
ಅಯ್ಯಾಹೋ, ಅಯ್ಯಾ, ಅಯ್ಯಾಹೋ ಅಯ್ಯಾ

(ಆಸಾಮಿನ ಪ್ರಸಿದ್ಧ ಗಾಯಕ ಭೂಪೇನ್‌ಹಜಾರಿಕಾರ ಹಾಡಿನಿಂದ ಪ್ರೇರಿತ)

೩

ಮೇನೆಯೊಳಗೆ ಮತ್ತನೆ, ಮೆತ್ತೆ ಮೇಲೆ ಕೂತವರೆ
ಪೀತಾಂಬರಿಧಾರಿ ಭೋಗವಂತಜನಕೆ
ನಿಮ್ಮ ಹೊತ್ತ ಬೆತ್ತಲೆ ಬೋವಿಗಳೊಮ್ಮೆ ನೋಡಿರೊ
ಭೂಮಿಗಿಳಿದು ಮನುಷ್ಯರಾಗಿ ನಡೆಯದೊ ಕಲಿಯಿರೊ
ಅಯ್ಯಾಹೋ ಅಯ್ಯಾ, ಅಯ್ಯಾಹೋ ಅಯ್ಯಾ

೪

ಎಷ್ಟಂತ ಹೊರೋದು ನಿಮ್ಮ ಸುಖರೋಗಿ ಭೂಪರೆ
ಹೊತ್ತು ಹೊತ್ತು ಮೇನೆ ಮೈ ತುಂಬಾ ಬೇನೆ
ಬೀಸಾಡುವೆವು ಮೇನೆಯನ್ನು ಹೆಗಲೇರಿದ ಭೂತವನ್ನು
ಶತಮಾನಗಳ ಹೆಣಭಾರ ಕಂದಕಕ್ಕೆ ನೂಕಿ ನಾವು
ಕಿರಣಗಳ ಹಾದಿ ಹಿಡಿದು ಮೂಡಲಕೆ ಸಾಗುವೆವು
ಅಯ್ಯಾಹೋ ಅಯ್ಯಾ, ಅಯ್ಯಾಹೋ ಅಯ್ಯಾ

ಪಂಚಮ ಕೋಗಿಲೆ ಹಾಡು



ಎಲ್ಲೆಲ್ಲೋ ಹಾಡಿ ಬಂತವ್ವ ಕೋಗಿಲೆ
ಕಂಚು ಕಂಠದ ಕಪ್ಪು ಕೋಗಿಲೆ
ವಸಂತಗಳೇಸೋ ಸುತ್ತಿ ಸುತ್ತಿ
ಧ್ವನಿ ಸುರುಳಿ ಬಿಚ್ಚಿತು ಜಾಣಕೋಗಿಲೆ

೨

ಬಾಳೆಂಬ ಬನದಾಗ ಬಾಗಿ ಕೋಗಿಲೆ
ಬತ್ತೀಸುರಾಗ ಹಾಡಿತು ಕೋಗಿಲೆ
ಬತ್ತಿದ ವನಗಳ ದೀಪದ ಬತ್ತಿ
ಜಗ್ಗನೆ ಬೆಳಗಿತು ನೋಡವ್ವ ಕೋಗಿಲೆ

೩

ಮೆಲ್ಲುತ ಮಾವಿನ ಚಿಗುರು ಕೋಗಿಲೆ
ಭೀಮಪಲಾಸ ಹಾಡಿತು ಕೋಗಿಲೆ
ಮೂಕರಿಗೆಲ್ಲ ಬಾಯಿಬಂದಂತಾಗಿ
ಕೋಟಿಕಲರವ ಕೇಳವ್ವ ಕೋಗಿಲೆ

೪

ಪರತಂತ್ರವೆಂಬ ಸುವರ್ಣ ಪಂಜರ
ಬೇಧಿಸಿ ಬಂತವ್ವ ಪಂಚಮ ಕೋಗಿಲೆ
ಕಪ್ಪು ಕಾಡಿನ ತುಂಬಾ ಹಾಡು ಪ್ರಜ್ವಲಿಸಿ
ದಾಸ್ಯ ಕಳಚಿತು ಮುಕ್ತಾಯ ಕೋಗಿಲೆ

೫

ಕೋಗಿಲ ಅಂದರೆ ಕೋಗಿಲೆಯವ್ವಾ
ಜಯಭೀಮ ಬೆಳಸಿದ ಜಾಣ ಕೋಗಿಲೆ
ತುಂಬಿತು ಅಣು ಅಣುಅನುರಾಗದ ರಾಗ
ಪಂಚಮಸ್ವರದಿ ಪಾಡಲು ಕೋಗಿಲೆ

ಬ್ರಹ್ಮನ ಭ್ರೂಣ ಬೆಳೆದಿದ್ದೆಲ್ಲಿ?

ದೊಂಡಿಬಾ : ಮನುಸ್ಮೃತಿಯ ಪ್ರಕಾರ ಬ್ರಹ್ಮನು ಬ್ರಾಹ್ಮಣರನ್ನು ತನ್ನ ಬಾಯಿಯಿಂದ ಸೃಷ್ಟಿಸಿದರೆ ಶೂದ್ರರನ್ನು ಬ್ರಾಹ್ಮಣರ ಸೇವೆಗಾಗಿಯೇ ತನ್ನ ಪಾದಗಳಿಂದ ಸೃಷ್ಟಿಸಿದನಂತೆ. ಆದರೆ ಕರುಣಾಮಯಿಗಳಾದ ಬ್ರಿಟಿಷ್, ಫ್ರೆಂಚ್ ಮತ್ತಿತರೆ ಯೂರೋಪ್ ಸರ್ಕಾರಗಳು ಗುಲಾಮಗಿರಿಯನ್ನು ನಿಷೇಧಿಸಿದೆ.. ಇದರಿಂದ ಬ್ರಹ್ಮನ ನಿಯಮಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗಲಿಲ್ಲವೇ?

ಫುಲೆ : ಯುರೋಪಿಯನ್ನರು ತಮ್ಮ ದೇಶದಲ್ಲಿ ಗುಲಾಮಗಿರಿಯನ್ನು ನಿಷೇಧಿಸಿ ಬ್ರಹ್ಮನ ನಿಯಮಗಳಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎನ್ನುತ್ತೀರಿ. ಬ್ರಿಟಿಷರಂತಹ ಬಹಳಷ್ಟು ವಂಶಗಳು ಧರೆಯ ಮೇಲೆ ಜೀವಿಸುತ್ತಿವೆ. ಮನುಸ್ಮೃತಿಯ ಪ್ರಕಾರ ಬ್ರಹ್ಮನ ಯಾವ ಭಾಗದಿಂದ ಈ ಜನರು ಹುಟ್ಟಿದರು?

ದೊಂಡಿಬಾ : ಈ ಪ್ರಶ್ನೆಗೆ ಬ್ರಾಹ್ಮಣರು ಹೇಳುವ ಉತ್ತರ ಒಂದೇ. ಬ್ರಿಟೀಷ್ ಮತ್ತಿತರ ವಂಶಗಳ ಬಗ್ಗೆ ಮನುಸ್ಮೃತಿಯು ಏನನ್ನು ಹೇಳಿಲ್ಲ. ಏಕೆಂದರೆ ಅವರು ಮೂಲತಃ ಅಲೆಮಾರಿಗಳು.

ಫುಲೆ : ಅಂದರೆ ನಮ್ಮ ಬ್ರಾಹ್ಮಣರಲ್ಲಿ ಮೂಲತಃ ಅಲೆಮಾರಿಗಳಿಲ್ಲ ಎನ್ನುತ್ತೀರಾ.

ದೊಂಡಿಬಾ : ಸೂಕ್ತವಾಗಿ ಪರೀಕ್ಷಿಸಿ ನೋಡಿದರೆ ಮೂಲತಃ ಅಲೆಮಾರಿಗಳು ನಮ್ಮ ಬ್ರಾಹ್ಮಣದಲ್ಲಿ ಹೆಚ್ಚು ಮಂದಿ ಇದ್ದಾರೆ.

ಫುಲೆ : ಹಾಗಿದ್ದಲ್ಲಿ ಹಾಗೆ ಸುತ್ತಿ ಬಂದ ಬ್ರಾಹ್ಮಣರ ಬಗ್ಗೆ ಮನುಸ್ಮೃತಿಯಲ್ಲಿ ಉಲ್ಲೇಖಿಸಿದ್ದಾದರೂ ಹೇಗೆ?

ದೊಂಡಿಬಾ : ಇದು ಎಲ್ಲಾ ಜನರಿಗೆ, ಅನ್ವಯಿಸದ ಕಾರಣ ಮಾನವ ಕುಲವನ್ನು ಬ್ರಹ್ಮ ತನ್ನ ಶರೀರದಿಂದ ಸೃಷ್ಟಿಸಿದನೆಂಬ ಸಿದ್ಧಾಂತ ತಪ್ಪಾಗುತ್ತದೆ.

ಫುಲೆ : ಆದ್ದರಿಂದಲೇ ಬುದ್ಧಿವಂತ ಬ್ರಿಟಿಷ್ ಜನರು ಆಧಾರವಿಲ್ಲದ ಬ್ರಹ್ಮನ ಸಿದ್ಧಾಂತವನ್ನು ಬದಿಗೊತ್ತಿ ಗುಲಾಮಗಿರಿಯನ್ನು ನಿಷೇಧಿಸಿದ್ದಾರೆ. ಮಾನವ ಕುಲವೆಲ್ಲಾ ಬ್ರಹ್ಮನಿಂದಲೇ ಸೃಷ್ಟಿಯಾಗಿದ್ದರೆ ಯೂರೋಪಿಯನ್ನರು ಗುಲಾಮಗಿರಿಯನ್ನು ನಿಷೇಧಿಸುತ್ತಿರಲಿಲ್ಲ. ಪ್ರಕೃತಿದತ್ತ ನಿಯಮಾನುಸಾರ ವಿಶ್ಲೇಷಿಸಿದರೆ ಬ್ರಹ್ಮನು ತನ್ನ ಅಂಗಾಂಗಳಿಂದ ಮಾನವ ಕುಲವನ್ನು ಸೃಷ್ಟಿಸಿದನೆಂಬ ಮನುವಿನ ಸಿದ್ಧಾಂತ ಸಂಪೂರ್ಣವಾಗಿ ಹುಸಿಯಾಗುತ್ತದೆ.

ದೊಂಡಿಬಾ : ಅದು ಹೇಗೆಂಬುದನ್ನು ತಿಳಿದುಕೊಳ್ಳಬಹುದೇ?

ಫುಲೆ : ಮನುಸ್ಮೃತಿಯ ಪ್ರಕಾರ ಬ್ರಹ್ಮ ತನ್ನ ಬಾಯಿಯಿಂದ ಬ್ರಾಹ್ಮಣನನ್ನು ಸೃಷ್ಟಿಸಿದ ಎಂದು ಹೇಳುವ ಮನು ಬ್ರಾಹ್ಮಣರ ಮೂಲ ತಾಯಿ ಯಾರೆಂಬ ಬಗ್ಗೆ ಏಕೆ ಮೌನ ತಾಳಿದ್ದಾನೆ. ಬ್ರಹ್ಮನ ಯಾವ ಅಂಗದಿಂದ ಅವಳನ್ನು ಸೃಷ್ಟಿಸಲಾಯಿತು?



ಫುಲೆ : ಬ್ರಾಹ್ಮಣರು ಈ ಜಗತ್ತಿನಲ್ಲಿ ತಾವೇ ದೇವತೆಗಳು ಮತ್ತು ಶ್ರೇಷ್ಠರೆಂದು ಹೇಳುತ್ತಿರುವಾಗ ಅವರ ತಾಯಿಯು ಸಹ ಬ್ರಾಹ್ಮಣಳಾಗಿರಬೇಕಲ್ಲವೇ? ಅವಳನ್ನು ಮುಸ್ಲಿಂ ಎನ್ನಲು ನಿಮಗೆಷ್ಟು ಧೈರ್ಯ. ಮಧ್ಯಪಾನ ಮತ್ತು ಗೋಮಾಂಸವನ್ನು ಅವಳು ಹೇಗೆ ಮರೆತಳು? ದೊಂಡಿಬಾ ನೀವು ಎಲ್ಲೋ ಕೇಳಿ ಬಂದ ಮಾತನ್ನು ಹೇಳುತ್ತಿದ್ದೀರಾ.

ದೊಂಡಿಬಾ : ಮಹಾ ಸಮಾರಂಭದಲ್ಲಿ ಬ್ರಾಹ್ಮಣರ ಪೂರ್ವಜರು ಗೋಮಾಂಸದ ತಿಂಡಿ ತಿನಿಸುಗಳನ್ನು ಸೇವಿಸುತ್ತಿದ್ದರು ಎಂದು ನೀವೇ ಸಾರ್ವಜನಿಕ ಸಭೆಗಳಲ್ಲಿ ಉಪನ್ಯಾಸ ನೀಡಿದ್ದೀರಿ. ಹೀಗಿರುವಾಗ ಬ್ರಾಹ್ಮಣರ ಮೂಲತಾಯಿ ಗೋಮಾಂಸ ತಿನ್ನಲಿಲ್ಲವೆಂದು ನೀವೇಗೆ ಹೇಳುತ್ತೀರಿ.

ಬ್ರಿಟಿಷರು ಚಿರಾಯುವಾಗಲಿ. ಆದರೆ ಬ್ರಿಟಿಷ್ ಅಧಿಕಾರಿಗಳು ಉಂಡ ನಂತರ ಉಳಿದ ಗೋಮಾಂಸದ ಆಹಾರವನ್ನು ನಮ್ಮ ಬ್ರಾಹ್ಮಣ ಅಧಿಕಾರಿಗಳು ಅಡುಗೆಯವರಿಗೂ ತಿಳಿಸದೇ ಸವಿಯುತ್ತಿದ್ದಾರೆ. ಇದನ್ನು ತಿಳಿದ ಮಹಾರ್ ಅಡಿಗೆಯವರು ಚಿಂತೆಗೀಡಾಗಿದ್ದಾರೆ. ಮನುವು ಸಹ ಬ್ರಾಹ್ಮಣರ ಮೂಲ ತಾಯಿ ಯಾರೆಂಬ ಬಗ್ಗೆ ಮೌನ ವಹಿಸಿದ್ದಾನೆ. ಇದಕ್ಕೆ ಮನುವನ್ನು ಖಂಡಿಸುವ ಬದಲು, ನನ್ನನ್ನೇಕೆ ಯಾರೊ ಹೇಳಿದ್ದನ್ನು ಹೇಳುತ್ತಿರುವೆ ಎಂದು ನಿಂದಿಸುತ್ತೀರಿ?

ಮರಾಠಿಯಿಂದ ಇಂಗ್ಲೀಷ್‌ಗೆ :

ಪಿ.ಜೆ. ಪಾಟೀಲ್

ಕನ್ನಡಕ್ಕೆ : ಜೆ. ಪಾಂಡುನಾಯಕ್.

ಬ್ರಹ್ಮ ಬ್ರಾಹ್ಮಣ ಮಗುವಿಗೆ ಎದೆ ಹಾಲು ನೀಡಿ ಬೆಳೆಸಿದನೋ ಅಥವಾ ಬಾಟಲ್ ಹಾಲು ನೀಡಿ ಬೆಳೆಸಿದನೋ?

ದೊಂಡಿಬಾ : ಬ್ರಾಹ್ಮಣರ ಸಿದ್ಧಾಂತದ ಪ್ರಕಾರ ಅವಳು ಮೂಲವಾಸಿ ಎನ್ನಲಾಗುತ್ತದೆ. ಆದರೆ ಸದ್ಯಕ್ಕೆ ಅವಳು ಮುಸ್ಲಿಂ ಅಥವಾ ವಿದೇಶಿ ಎಂದುಕೊಳ್ಳೋಣ.

ಫುಲೆ : ಸರಿ ನೀವು ಹೇಳಿದಂತೆಯೇ ಆಗಲಿ. ದೊಂಡಿಬಾರವರೇ ಬ್ರಾಹ್ಮಣರು ಬ್ರಹ್ಮನ ಬಾಯಿಯಿಂದ ಜನಿಸಿದರೆ ಅವರ ಬಾಯಿ ಜನನೇಂದ್ರಿಯವಾಗುತ್ತದೆ. ಹಾಗಿದ್ದಲ್ಲಿ ಇದು ಪ್ರಕೃತಿ ನಿಯಮಾನುಸಾರ ತಿಂಗಳಿಗೊಮ್ಮೆ ಋತುಸ್ರಾವವಾಗಬೇಕಾಗಿತ್ತು. ಹಾಗಾದರೆ ಈ ಸ್ರಾವದ ದಿನಗಳಲ್ಲಿ ಬ್ರಹ್ಮ ಮನೆಯಿಂದ ಹೊರಗಿರುತ್ತಿದ್ದನೇ? ಅಥವಾ ಲಿಂಗಾಯಿತ ಮಹಿಳೆ ಸ್ರಾವ ದಿನಗಳಲ್ಲಿ ಭಸ್ಮ ಹಚ್ಚಿಕೊಂಡು ಶುದ್ಧಿ ಮಾಡಿಕೊಳ್ಳುವುದನ್ನು ಬ್ರಹ್ಮ ಒಪ್ಪುತ್ತಿದ್ದನೇ? ಎಂಬ ಬಗ್ಗೆ ಮನು ಏನೆಂದು ಹೇಳುತ್ತಾನೆ.

ದೊಂಡಿಬಾ : ಇಲ್ಲಾ, ಬ್ರಾಹ್ಮಣರ ಸೃಷ್ಟಿಕರ್ತನಾದ ಬ್ರಹ್ಮ ಲಿಂಗಾಯಿತ ಮಹಿಳೆಯರ ಈ ದುಡಿತನವನ್ನು ಒಪ್ಪುವುದಾದರೂ ಹೇಗೆ? ಬದಲಿಗೆ ತಮ್ಮ ಮಹಿಳೆಯರು ಮಾಸಾಂತ್ಯದಲ್ಲಿ ಹೊರಗಿರುವ ಸಂಪ್ರದಾಯವನ್ನು ಪಾಲಿಸುವುದಿಲ್ಲವೆಂದು ಬ್ರಾಹ್ಮಣರು ಲಿಂಗಾಯತರನ್ನು ಹಿಯಾಳಿಸುತ್ತಾರೆ. ಹಾಗಿದ್ದಲ್ಲಿ ಈ ಸ್ರಾವದಿನಗಳಲ್ಲಿ ಮನೆಕೆಲಸವನ್ನು ಯಾರು ಮಾಡುತ್ತಿದ್ದರೆಂಬ ಬಗ್ಗೆ ಮನು ಏನು ಹೇಳಿದ್ದಾನೆ.

ಫುಲೆ : (ಸ್ವಲ್ಪ ಯೋಚಿಸಿದ ನಂತರ) ದೊಂಡಿಬಾ ಚಾತುರ್ವರ್ಣಗಳು ಬ್ರಹ್ಮನ ಬಾಯಿ, ಬುಜ, ತೊಡೆ ಮತ್ತು ಪಾದದಿಂದ ಸೃಷ್ಟಿಯಾಗಿದ್ದರೆ ಈ ನಾಲ್ಕು ಅಂಗಾಂಗಳನ್ನು ನಾಲ್ಕು ಜನನಾಂಗಗಳೆಂದು ಕರೆಯಬಹುದು. ಪ್ರತಿ ಜನನಾಂಗ ಸ್ರಾವಕ್ಕೆ ನಾಲ್ಕು ದಿನಗಳಂತೆ ನಾಲ್ಕು ಜನನಾಂಗಗಳ ಶುದ್ಧಿಗೆ ತಿಂಗಳಿಗೆ ಹದಿನಾರು ದಿನಗಳು ಬ್ರಹ್ಮ ಮನೆಯಿಂದ ಹೊರಗಿರಬೇಕಾದರೆ ಮನೆ ಕೆಲಸ ಮಾಡುವವರಾರು ಎಂಬ ಪ್ರಶ್ನೆಗೆ ಮನು ಹೇಳಿರುವುದಾದರೂ ಏನು?

ದೊಂಡಿಬಾ : ದುರಾದೃಷ್ಟವಶಾತ್ ಏನನ್ನೂ ಹೇಳಿಲ್ಲ.

ಫುಲೆ : ಬ್ರಾಹ್ಮಣನ ಗರ್ಭ ಕಟ್ಟಿದ್ದು ಬ್ರಹ್ಮನ ಬಾಯಿಯಲ್ಲಾದರೆ ಒಂಬತ್ತು ತಿಂಗಳ ಕಾಲ ಭ್ರೂಣ ಬೆಳೆದದ್ದು ಯಾವ ಅಂಗಾಂಗದಲ್ಲಿ ಎಂಬುದರ ಬಗ್ಗೆ ಮನು ಹೇಳಿರುವುದೇನು?

ದೊಂಡಿಬಾ : ಏನನ್ನು ಹೇಳಿಲ್ಲ.

ಫುಲೆ : ಬ್ರಹ್ಮ ಬ್ರಾಹ್ಮಣನ ಮಗುವಿಗೆ ಹಾಲುಣಿಸುತ್ತಿದ್ದನೇ? ಹಾಗಿದ್ದಲ್ಲಿ ಎದೆ ಹಾಲೋ ಅಥವಾ ಬಾಟಲ್ ಹಾಲೋ ಎಂಬ ಬಗ್ಗೆ ಮನು ಏನೆಂದಿದ್ದಾನೆ.

ದೊಂಡಿ ಬಾ : ಏನು ಹೇಳಿಲ್ಲ.

ಫುಲೆ : ಸಾವಿತ್ರಿ ಬ್ರಹ್ಮನ ಹೆಂಡತಿ ಎಂಬುದು ತಿಳಿದ ವಿಷಯ. ಹಾಗಿರುವಾಗ ಬ್ರಹ್ಮನೇಕೆ ಬ್ರಾಹ್ಮಣ ಶಿಶುವನ್ನು ಒಂಬತ್ತು ತಿಂಗಳು ಬಾಯಲ್ಲಿ ಹೊತ್ತು ಜನ್ಮ ನೀಡುವ ರಾದ್ಧಾಂತಕ್ಕೆ ಸಿಲುಕಿಕೊಂಡ. ತೀರಾ ವಿಚಿತ್ರವಲ್ಲವೇ?

ದೊಂಡಿಬಾ : ಬ್ರಹ್ಮನ ನಾಲ್ಕು ಬಾಯಿಗಳಲ್ಲಿ ಮೂರು ಬಾಯಿಗಳು ಭ್ರೂಣವನ್ನು ಬೆಳೆಸುತ್ತಿರಲಿಲ್ಲ. ಆದರೆ ಈ ನಪುಂಸಕ ಬ್ರಹ್ಮನೇಕೆ ಈ ನಂಬಲನರ್ಹ ಹುಡುಗಾಟಕ್ಕಿಳಿದ.



ಮಹಾತ್ಮಾ ಫುಲೆ ಎಂದೇ ಪ್ರಸಿದ್ಧರಾದ ಜೋತಿರಾವ್ ಗೋವಿಂದರಾವ್ ಪುಲೆಯವರು 'ಗುಲಾಮಗಿರಿ' ಎಂಬ ತಮ್ಮ ಕೃತಿಯನ್ನು ದಿನಾಂಕ 01-06-1873ರಲ್ಲಿ ಹೊರ ತಂದರು. ಅವರ ಬರಹಗಳು ವಿದ್ಯಾವಂತರಿಗಷ್ಟೆ, ಸೀಮಿತವಾಗಿರಲಿಲ್ಲ, ಅವಿದ್ಯಾವಂತರ ತಿಳುವಳಿಕೆಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಭೆ/ಸಮಾರಂಭಗಳನ್ನು ಕರೆದು ಅವರ ಕೃತಿಗಳನ್ನು ಓದಿ ಹೇಳಲಾಗುತ್ತಿತ್ತು. ಐತಿಹಾಸಿಕ ಮಹತ್ವದ ಬದಲು ತಾರ್ಕಿಕತೆಯನ್ನು ವಿಶ್ಲೇಷಿಸಲು ಸಭಿಕರನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಅವರ ಈ ಪ್ರಗತಿಪರ ನಿಲುವುಗಳಿಗೆ ಬ್ರಾಹ್ಮಣವಾದಿ ಪತ್ರಿಕಾ ಮಾಧ್ಯಮ ಛೀಮಾರಿ ಹಾಕುತ್ತಿದ್ದವು. "ಬ್ರಹ್ಮ ಆರ್ಯಲೋಕ್ (ಭಾಗ-1) ಬ್ರಹ್ಮಮೂಲ-ಸರಸ್ವತಿ; ಇರಾನಿಯನ್ನರು ಅಥವಾ ಆರ್ಯರು" ಎಂಬ ಆಯ್ದ ಭಾಗವೊಂದು ಮಹಾತ್ಮಫುಲೆ ಮತ್ತು ದೊಂಡಿಬಾ (ನಾಮದೇವ್ ಕುಂದೀರ್) ನಡುವೆ ನಡೆದ ಸಂಭಾಷಣೆಯ ರೂಪದಲ್ಲಿದೆ.

ಫುಲೆ : ನಾವು ಬ್ರಹ್ಮನನ್ನು ನಪುಂಸಕನೆಂದುಕೊಂಡರೆ ತನ್ನ ಪುತ್ರಿ ಸರಸ್ವತಿಯನ್ನೇಕೆ ಮೋಹಿಸಿದ. ಆದ್ದರಿಂದಲೇ ಮಗಳನ್ನು ಕೆಡಿಸಿದ ಬ್ರಹ್ಮನೆಂದು ಹೆಸರಾಗಿ ಎಲ್ಲಿಯೂ ಯಾರಿಂದಲೂ ಪೂಜಿಸದವನಾದ.

ದೊಂಡಿಬಾ : ಬ್ರಹ್ಮನಿಗೆ ನಾಲ್ಕು ಬಾಯಿಗಳಿದ್ದ ಪಕ್ಷದಲ್ಲಿ ಅವನಿಗೆ ಎರಡು ಸ್ತನಗಳು, ನಾಲ್ಕು ಹೊಕ್ಕಳು, ನಾಲ್ಕು ಮೂತ್ರನಾಳಗಳು ಮತ್ತು ನಾಲ್ಕು ಗುದದ್ವಾರಗಳಿರಬೇಕು. ಆದರೆ ಈ ಬಗ್ಗೆ ಯಾವುದೇ ಪುರಾವೆಗಳಿಲ್ಲ. ಬ್ರಾಹ್ಮಣರ ಪುರಾಣಗಳಲ್ಲಿ ಸರ್ಪವನ್ನಾವರಿಸಿ ನಿಂತ ವಿಷ್ಣುವು ತನ್ನ ಹೊಕ್ಕಳಿನಿಂದ ನಾಲ್ಕು ಮುಖವುಳ್ಳ ಬ್ರಹ್ಮನನ್ನು ಸೃಷ್ಟಿಸಿದನೆಂದು ಹೇಳಲಾಗಿದೆ. ಅದು ಹೇಗೆ ಸಾಧ್ಯ. ಬ್ರಹ್ಮನಂತೆಯೇ ವಿಷ್ಣುವು ಸಹ ನಂಬಲನರ್ಹ ಗೊಂದಲಕ್ಕೆ ಸಿಕ್ಕಿಬಿದ್ದಿದ್ದಾನೆ.

ಫುಲೆ : ಬ್ರಾಹ್ಮಣರು ಅರಬಿ ಸಮುದ್ರದಾಚೆ ಇರುವ ಇರಾನ್ ದೇಶದಿಂದ ಬಂದವರೆಂದು ಹೇಳಬಹುದು. ಬಹಳಷ್ಟು ಪಾಶ್ಚಿಮಾತ್ಯ ತಜ್ಞರ ಪ್ರಕಾರ ಈ ಇರಾನಿಯನ್ನರು ಆರ್ಯರಾದರು. ಈ ಆರ್ಯರ ಹಲವಾರು ಗುಂಪುಗಳು ಸ್ಥಳೀಯ ಭಾರತೀಯರ ಮೇಲೆ ಬಹಳಷ್ಟು ಬಾರಿ ಆಕ್ರಮಣ ಮಾಡಿ ಸ್ಥಳೀಯ ಸಾಮ್ರಾಜ್ಯಗಳನ್ನು ತಲ್ಲಣಗೊಳಿಸಿದರು. ವಾಮನನ ನಂತರ ಬ್ರಹ್ಮ ಇವರ ಮುಖಂಡನಾದ. ಇವನು ಮತ್ತಷ್ಟು ದಾಳಿ ನಡೆಸಿ ಸ್ಥಳೀಯ ಮೂಲನಿವಾಸಿಗರನ್ನು ಗುಲಾಮಗಿರಿಗಿಳಿಸಿದ. ಈ ಬ್ರಹ್ಮ ಬಹಳಷ್ಟು ಅಮಾನವೀಯ ನೀತಿನಿಯಮಗಳನ್ನು ಜಾರಿಗೆ ತಂದು ಆರ್ಯ ಮತ್ತು ದ್ರಾವಿಡರ ಮಧ್ಯೆ ಅಸಮಾನತೆಗಳನ್ನು ಮತ್ತು ವೈರತ್ವವನ್ನು ಬಿತ್ತಿದ. ಬ್ರಹ್ಮನ ಮರಣವಾದ ನಂತರ ಈ ಆರ್ಯನು ತಮ್ಮನ್ನು ತಾವೇ ಬ್ರಾಹ್ಮಣರೆಂದು ಕರೆದುಕೊಂಡರು. ಬ್ರಹ್ಮನ ನಂತರ ಬಂದ ಅಧಿಕಾರಿಗಳು 'ಮನು' ಬ್ರಹ್ಮನು ಜಾರಿಗೆ ತಂದ ಬ್ರಾಹ್ಮಣ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬಂದರು. ಅದಕ್ಕಾಗಿಯೇ ಮನುವಿನಂತಹವರು ಬ್ರಹ್ಮನು ಮಹಾನ್ ಎಂದು ಹೇಳುವ ಉಹಾಪೋಹ ಸ್ಮೃತಿಗಳನ್ನು ರಚಿಸಿ ಭಕ್ತಿ ಭಾವದಿಂದ ಸ್ಥಳೀಯ ಮುಗ್ಧ ಜನರಲ್ಲಿ ನಂಬಿಕೆ ಬರುವಂತೆ ಬೋಧಿಸಿದರು: ಶೇಷಶಾಹಿ ವಿಷ್ಣುವಿನ ಬಗ್ಗೆಯೂ ಇಂತಹ ಕಟ್ಟುಕತೆಯನ್ನು ಸೃಷ್ಟಿ ಮಾಡಿದರು. ಈ ಕತೆ ಪುರಾಣಗಳನ್ನೆಲ್ಲಾ ಪುಸ್ತಕ ರೂಪದಲ್ಲಿ ಸಂಗ್ರಹಿಸಿ ಇವುಗಳ ಬಗ್ಗೆ ಸ್ಥಳೀಯ ಜನರಲ್ಲಿ ನಂಬಿಕೆ ಬರುವಂತೆ ಕಪಟ ನಾರದ ಮುನಿಗಳಂತಹವರು ಬೋಧನೆ ಮಾಡಿದರು. ಇದರಿಂದ ಬ್ರಾಹ್ಮಣಿಕೆ ಮತ್ತಷ್ಟು ವೈಭವೀಕರಿಸಲ್ಪಟ್ಟಿತು.

ಬ್ರಹ್ಮನಂತೆಯೇ ವಿಷ್ಣುವಿನ ಮೂಲವನ್ನು ಶೋಧಿಸುವುದು ಸಮಯ ವ್ಯರ್ಥವಷ್ಟೆ. ಬ್ರಾಹ್ಮಣ ಬರಹಗಾರರು ಕಟ್ಟುಕತೆ ಸೃಷ್ಟಿಸಿ ವಿಷ್ಣುವು ತನ್ನ ಹೊಕ್ಕಳಿನಿಂದ ನಾಲ್ಕು ಮುಖವುಳ್ಳ ಬ್ರಹ್ಮನನ್ನು ಸೃಷ್ಟಿಸಿದನೆಂದು ಕೊಂಡಾಡಿ ಪ್ರಚಾರಗೈದರು. ತನ್ನ ಶೌರತ್ವವನ್ನು ಪ್ರದರ್ಶಿಸಲು ಈಗಾಗಲೇ ಕೆಳಗೆ ಬಿದ್ದ ವ್ಯಕ್ತಿಯನ್ನು ವಧೆಯುವುದು ಖಂಡಿತ ಸಾಧುವಲ್ಲ.

ಸೌಜನ್ಯ : ದಿ ದಲಿತ್

ಮೈಲಿಗೆಯೆ ಮಹಾ ಧರ್ಮ; ಅದೇ ಬ್ರಹ್ಮ ಜ್ಞಾನ

ವಿವೇಕಾನಂದರ ಅದಮ್ಯ ಜನಪರ ಹೋರಾಟ ಹಾಗೂ ಕಾಳಜಿಗಳನ್ನು ಮರೆಮಾಡಿ ಅವರನ್ನು 'ಹಿಂದೂ ವಕ್ತಾರ'ರೆಂದು ಬಣ್ಣಿಸುತ್ತಿರುವ ಮತೀಯವಾದಿಗಳ ಬಣ್ಣ ಬಯಲುಗೊಳಿಸಲೆಂದೇ ವಿವೇಕಾನಂದರ ಈ ವಿಚಾರ ಧಾರೆಯನ್ನು 'ಸಂವಾದ' ಪ್ರಸ್ತುತ ಪಡಿಸುತ್ತಿದೆ. ಶ್ರೀ ಜ.ಹೋ. ನಾರಾಯಣಸ್ವಾಮಿ ಅವರು ಸತತ ಪರಿಶ್ರಮದಿಂದ ಸಂಗ್ರಹಿಸಿ ಪ್ರಕಟಿಸಿರುವ ಈ ವಿಚಾರ ಲಹರಿಗಳನ್ನು ಮೈಸೂರಿನ ಶ್ರೀರಾಮಕೃಷ್ಣಾಶ್ರಮ ಪ್ರಕಟಿಸಿದ 'ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ'ಯ ಹತ್ತು ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ.

○ ಜ. ಹೊ. ನಾರಾಯಣಸ್ವಾಮಿ

ನೀಚರೂ, ಕುತಂತ್ರಿಗಳೂ ಆದ ಪುರೋಹಿತರು ಎಲ್ಲಾ ವಿಧದ ಮೂಢನಂಬಿಕೆಗಳನ್ನು ವೇದ ಮತ್ತು ಹಿಂದೂಧರ್ಮದ ಸಾರ ಎಂದು ಬೋಧಿಸುತ್ತಾರೆ. ಈ ಠಕ್ಕುಗಾರರಾದ ಪುರೋಹಿತರಾಗಲೀ ಅಥವಾ ಅವರ ತಾತ ಮುತ್ತಾತಂದಿರಾಗಲೀ ಕಳೆದ ನಾನೂರು ತಲೆಮಾರುಗಳಿಂದಲೂ ವೇದದ ಒಂದು ಭಾಗವನ್ನೂ ನೋಡಿಲ್ಲ. ಮೂಢಾಚಾರಗಳನ್ನು ಅನುಸರಿಸಿ ಹೀನ ಸ್ಥಿತಿಗೆ ಬರುತ್ತಾರೆ. ಕಲಿಯುಗದಲ್ಲಿ ಬ್ರಾಹ್ಮಣ ವೇಷದಲ್ಲಿರುವ ಈ ರಾಕ್ಷಸರಿಂದ ಮುಗ್ಧ ಜನರನ್ನು ಆ ದೇವರೇ ಕಾಪಾಡಬೇಕು.

ಭರತಖಂಡದಲ್ಲಿ ಧರ್ಮವೇನಾದರೂ ಉಳಿದುಕೊಂಡಿರುವುದೆಂದು ತಿಳಿದುಕೊಂಡಿರುವೆಯೇನು? ಜ್ಞಾನ, ಭಕ್ತಿ, ಯೋಗಗಳ ಮಾರ್ಗವೆಲ್ಲ ಹೋಯಿತು. ಈಗ ಉಳಿದಿರುವುದು ಒಂದೇ ಧರ್ಮ. ಅದೇ "ಮುಟ್ಟಬೇಡ, ಮುಟ್ಟಬೇಡ" ಎಂಬುದು. ಪ್ರಪಂಚವೆಲ್ಲಾ ಮೈಲಿಗೆ, ನಾನೊಬ್ಬನೇ ಮಡಿ! ಆಹಾ! ಎಷ್ಟು ತಿಳಿಯಾದ ಬ್ರಹ್ಮಜ್ಞಾನ"

ನಮ್ಮ ಜನಾಂಗಕ್ಕೆ ಯಾವ ಭರವಸೆಯೂ ಇಲ್ಲ. ಯಾರ ತಲೆಯಲ್ಲೂ ಒಂದು ಹೊಸ ಸ್ವತಂತ್ರ ಆಲೋಚನೆ ಸುಳಿಯುವಂತೆ ಇಲ್ಲ. ಎಲ್ಲ ಹಳೆಯ ಕಂತೆಯ ಪುರಾಣದ ಮೇಲೆಯೇ ಇನ್ನೂ ಕಾದಾಡುತ್ತಿರುವವರು. ತಲೆಯಿಲ್ಲದ ಬಾಲವಿಲ್ಲದ ಕಾಗಕ್ಕ ಗುಬ್ಬಕ್ಕನ ಕಥೆಗಳೇ!- ಇವತ್ತು ದೇವರ ಕೋಣೆಯಲ್ಲಿ ಒಂದು ಘಂಟೆ ಇದೆ. ನಾಳೆ ಒಂದು ಕೊಂಬನ್ನು ಸೇರಿಸುತ್ತೀರಿ. ಅಥವಾ ಇವತ್ತು ಮಂಚ. ನಾಳೆ ಅದರ ಕಾಲಿಗೆ ಬೆಳ್ಳಿಯ ಕಟ್ಟು, ಜನಗಳಿಗೆ ಬೇಕಾದಷ್ಟು ಪ್ರಸಾದ; ಹೀಗೆ ಮಾಡಿ ಒಂದೆರಡು ಸಾವಿರ ಕಟ್ಟುಕಥೆಗಳನ್ನು ನೇಯುತ್ತೀರಿ. ಸ್ವಲ್ಪದರಲ್ಲಿ ಹೇಳಬೇಕಾದರೆ, ನಿಮ್ಮಲ್ಲಿರುವುದು ಬಾಹ್ಯ ಆಚಾರವಿಲ್ಲದೆ ಮತ್ತೇನೂ ಅಲ್ಲ. ಇದಕ್ಕೆ ಆಂಗ್ಲ ಭಾಷೆಯಲ್ಲಿ Imbecility (ಬುದ್ಧಿಮಾಂದ್ಯ) ಎಂದು ಹೆಸರು. ಯಾರ ಬುದ್ಧಿಗೆ ಇಂತಹ ಕೆಲಸಕ್ಕೆ ಬಾರದ ಕಥೆಗಳಲ್ಲದೆ ಬೇರೆ ರುಚಿಸದೋ ಅವರನ್ನು ಕಡು ಮೂರ್ಖರೆಂದು ಕರೆಯುತ್ತಾರೆ.

ಘಂಟೆಯನ್ನು ಬಲಗಡೆ ಬಾರಿಸುವುದೇ ಅಥವಾ ಎಡಗಡೆಯಲ್ಲಿ ಬಾರಿಸುವುದೇ? ಗಂಧದ ಗುರುತನ್ನು ತಲೆಯ ಮೇಲೆ ಇಡುವುದೋ ಅಥವಾ ಇನ್ನೆಲ್ಲಿಯಾದರೂ ಇಡುವುದೋ? ಮಂಗಳಾರತಿಯನ್ನು ಎರಡು ಸಲ ಬೆಳಗುವುದೋ ಅಥವಾ ನಾಲ್ಕು ಸಲ ಬೆಳಗುವುದೋ? ಇಂತಹ ಮಹಾ ಪ್ರಶ್ನೆಗಳನ್ನು ಯಾರ ಮೆದುಳು ಹಗಲಿರುಳು ಆಲೋಚಿಸುತ್ತಿರುವುದೋ, ಇಂತಹವರನ್ನು ದುರ್ಭಾಗ್ಯರೆಂದು ಕರೆಯಬೇಕಾಗುವುದು. ಇಂತಹ ಅಭಿಪ್ರಾಯಗಳು ನಮಗೆ ಇರುವುದರಿಂದಲೇ ನಾವು ಭಾಗ್ಯಹೀನರಾಗಿರುವುದು. ಪಾಶ್ಚಾತ್ಯ ದೇಶಗಳವರು ಪ್ರಪಂಚದ ಒಡೆಯರಾದರೆ ನಾವು ಇನ್ನೊಬ್ಬರಿಂದ ಒದೆಸಿಕೊಳ್ಳುತ್ತಿರುವೆವು. ಅವರ ಧಿಕ್ಕಾರಕ್ಕೆ ಪಾತ್ರರಾಗಿರುವೆವು.

ಕೆಲಸಕ್ಕೆ ಬಾರದ ವಿಷಯಗಳನ್ನು ಕುರಿತು ಚರ್ಚಿಸುವುದನ್ನು ತ್ಯಜಿಸಿ, ಕಳೆದ ಆರು ಏಳು ಶತಮಾನಗಳಿಂದಲೂ ನಮ್ಮ ಅವನತಿಯ ಕಾಲದಲ್ಲಿ ನೂರಾರು ಮಂದಿ ವಿದ್ಯಾವಂತರು, ನಾವು ನೀರನ್ನು ಎಡಗೈಯಿಂದ ಕುಡಿಯುವುದೇ ಅಥವಾ ಬಲಗೈಯಿಂದ ಕುಡಿಯುವುದೇ? ಅದನ್ನು ಮೂರು ಸಲ ತೊಳೆಯುವುದೇ ಅಥವಾ ನಾಲ್ಕು ಸಲ ತೊಳೆಯುವುದೇ? ಬಾಯನ್ನು ಐದು ಸಲ ಮುಕ್ಕಳಿಸುವುದೇ ಅಥವಾ ಆರು ಸಲ ಮುಕ್ಕಳಿಸುವುದೇ?- ಮುಂತಾದುವನ್ನು ಚರ್ಚಿಸುವುದನ್ನು ನೋಡಿ. ಇಂತಹ ಕೆಲಸಕ್ಕೆ ಬಾರದ ವಿಷಯಗಳನ್ನು ಚರ್ಚಿಸುತ್ತಾ, ಅವುಗಳ ಮೇಲೆ ಬೇಕಾದಷ್ಟು ಶಾಸ್ತ್ರವನ್ನೇ ಬರೆಯುವುದರಿಂದ ನೀವು ಏನನ್ನು ನಿರೀಕ್ಷಿಸಬಲ್ಲಿರಿ? ನಮ್ಮ ಧರ್ಮ ಅಡಿಗೆಮನೆಯನ್ನು ಸೇರುವ ಅಪಾಯವಿದೆ. ಮುಕ್ಕಾಲು ಪಾಲು ಜನ ಈಗ ವೇದಾಂತಿಗಳೂ ಅಲ್ಲ, ಪೌರಾಣಿಕರೂ ಅಲ್ಲ, ಶಾಕ್ತರೂ ಅಲ್ಲ; ನಾವು, 'ಮುಟ್ಟಬೇಡಿ ಎನ್ನುವವರು' ಆಗಿರುವೆವು.

ಪ್ರಪಂಚದಲ್ಲಿರುವ ಜನರೆಲ್ಲಾ ಕೆಟ್ಟವರು. ಸ್ವಭಾವತಃ ಅವರಿಗೆ ಎಳ್ಳಷ್ಟು ಧರ್ಮವನ್ನು ಪಡೆಯಲು ಅಧಿಕಾರವಿಲ್ಲ. ಇಂಡಿಯಾ ದೇಶದಲ್ಲಿರುವ ಕೆಲವು ಬ್ರಾಹ್ಮಣರಿಗೆ ಮಾತ್ರ ಅದಕ್ಕೆ ಸಂಪೂರ್ಣ ಅಧಿಕಾರವಿದೆ! ಭಲೇ! ಅದು ನಿಜವಾಗಿಯೂ ಎಷ್ಟು ಪ್ರಬಲವಾದ ಧರ್ಮ! ತಪಸ್ಸು, ಸಾಧನೆ ಇವುಗಳ ಸತ್ಯವೆಲ್ಲ ಒಂದು ಸಂಕ್ಷಿಪ್ತ ಮಾತಿನಲ್ಲಿ ಅಡಗಿದೆ. ಅದು, "ನಾನೇ ಶುದ್ಧ, ಉಳಿದವರೆಲ್ಲರೂ ಅಶುದ್ಧ"ರೆಂಬುದು. ಇದು ಮೃಗೀಯ ರಾಕ್ಷಸೀ ಧರ್ಮ. ನರಕ ಸದೃಶವಾದ ಧರ್ಮ. ಸ್ಪಾರ್ಟನರು ಹೆಲಾಟರನ್ನೂ ಮತ್ತು ಅಮೆರಿಕಾದವರು ನೀಗ್ರೋಗಳನ್ನು ತುಳಿದುದಕ್ಕಿಂತಲೂ ಹೆಚ್ಚಾಗಿ ಕೆಲವು ವೇಳೆ ನಮ್ಮ ದೇಶದ ಶೂದ್ರರು ತುಳಿಯಲ್ಪಟ್ಟಿದ್ದಾರೆ ಎಂಬುದರಲ್ಲಿ ಸಂದೇಹವೇನೂ ಇಲ್ಲ.

ನಮ್ಮ ಮಲಬಾರಿಗೆ ಹೋಗು ಎಂದು ಹೇಳು. ಅಲ್ಲಿಯ ರಾಜನು ಪ್ರಜೆಗಳ ಭೂಮಿಯನ್ನೆಲ್ಲಾ ತೆಗೆದುಕೊಂಡು ಬ್ರಾಹ್ಮಣರ ಅಡಿದಾವರೆಗೆ ಸಮರ್ಪಿಸಿರುವನು. ಅಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ದೊಡ್ಡ ಮಠಗಳಿವೆ. ಎಲ್ಲ ಬ್ರಾಹ್ಮಣರಿಗೂ ಮೃಷ್ಟಾನ್ನದ ಜೊತೆಗೆ ದಕ್ಷಿಣೆ ಇತ್ಯಾದಿಗಳು...ಬ್ರಾಹ್ಮಣ ಸ್ವಂತ ಕೆಲಸ ಸಿದ್ಧಿಸುವುದಾದರೆ ಬ್ರಾಹ್ಮಣೇತರರರನ್ನು ಬೇಕಾದರೂ ಮುಟ್ಟಸಬಹುದು. ನಿಮ್ಮ ಕೆಲಸವಾದ ಮೇಲೆ ಮುಳುಗಿ ಸ್ನಾನ ಮಾಡಿಬಿಡಬಹುದು. ಏಕೆಂದರೆ ಬ್ರಾಹ್ಮಣೇತರರ ಜಾತಿಯೇ ಅಶುದ್ಧ. ಬೇರೆ ಸಮಯಗಳಲ್ಲಿ ಅವರನ್ನು ಮುಟ್ಟಬಾರದು! ಭೈರಾಗಿಗಳು, ಸನ್ಯಾಸಿಗಳು, ಒಂದು ಪಂಗಡದ ಬ್ರಾಹ್ಮಣರು ಈ ದೇಶವನ್ನು ಹಾಳು ಮಾಡಿರುವರು. ಕಳ್ಳತನ, ಮೋಸ ಇವುಗಳನ್ನೇ ಯಾವಾಗಲೂ ಆಲೋಚಿಸುತ್ತಾ ಆ ಜನರು ಧರ್ಮ ಬೋಧಕರಂತೆ ನಟಿಸುವರು! ಇತರ ಜನರಿಂದ ದಾನ ಸ್ವೀಕರಿಸುವರು. ತಕ್ಷಣವೇ ನಮ್ಮನ್ನು ಮುಟ್ಟಬೇಡ ಎಂದು ಕಿರುಚುವರು. ಎಂತಹ ಮಹತ್ಕಾರ್ಯವನ್ನು ಅವರು ಮಾಡುತ್ತಿರುವರು!...ತಮ್ಮ ಕೈಯನ್ನು ತೊಳೆದುಕೊಳ್ಳುವುದಕ್ಕೆ ಮಣ್ಣನ್ನು ಹನ್ನೆರಡು ಸಲ ಉಪಯೋಗಿಸದಿದ್ದರೆ, ಹದಿನಾಲ್ಕು ತಲ ತಲಾಂತರದವರೆವಿಗೂ ನರಕಕ್ಕೆ ಹೋಗುವಿರೋ? ಕಳೆದ ಎರಡು ಸಾವಿರ ವರುಷಗಳಿಂದಲೂ ನಾಲ್ಕನೇ ಒಂದು

ಪಾಲು ಜನ ಸಾಯುತ್ತಿರುವಾಗ, ಇಂತಹ ಗಹನ ಸಮಸ್ಯೆಗಳಿಗೆ ಶಾಸ್ತ್ರೀಯವಾದ ವಿವರಣೆಯನ್ನು ಕಂಡು ಹಿಡಿಯುತ್ತಿರುವರು! ಎಂಟು ವರುಷದ ಹುಡುಗಿಯನ್ನು ಮೂವತ್ತು ವರುಷದ ವರನಿಗೆ ಕೊಟ್ಟು ಮದುವೆ ಮಾಡಿ ತಂದೆತಾಯಿಗಳು ಹಿಗ್ಗುವರು. ಇದನ್ನು ಯಾರಾದರೂ ವಿರೋಧಿಸಿದರೆ "ನಮ್ಮ ಧರ್ಮವನ್ನು ತಲೆಗೆಳಗು ಮಾಡುತ್ತಿರುವವರು" ಎಂಬ ಆಕ್ಷೇಪಣೆ ತೆಗೆಯುವರು" ದಕ್ಷಿಣ ಇಂಡಿಯಾದಲ್ಲಿ ಮೇಲಿನ ವರ್ಗದವರು ಕೆಳಗೆ ಇರುವವರಿಗೆ ಕೊಡುವ ಅತ್ಯಾಚಾರಗಳನ್ನು ಏನೆಂದು ಹೇಳಲಿ! ಗುಡಿಯ ಒಳಗೆ ಕುಡಿತ ನೃತ್ಯ ಸಂಗೀತಗಳು ದರಿದ್ರರ ದುಃಖವನ್ನು ಪರಿಹರಿಸದ, ಮಾನವನನ್ನು ದೇವನ ಸಮಾನನ್ನಾಗಿ ಮಾಡದ ಧರ್ಮ ಧರ್ಮವೇನಯ್ಯ! ನಮ್ಮ ಧರ್ಮದ ಹೆಸರಿಗಾದರೂ ಇದು ಕೀರ್ತಿ ತರುತ್ತದೆಯೇ? ಮುಟ್ಟಬೇಡ ಎಂಬುದೇ ನಮ್ಮ ಧರ್ಮ...ಸುಮಾರು ಹತ್ತು ಇಪ್ಪತ್ತು ಲಕ್ಷ ಸಾಧು ಸಂತರು ಮತ್ತು ಅನೇಕ ಕೋಟಿ ಬ್ರಾಹ್ಮಣರು ಬಡವರ ರಕ್ತವನ್ನು ಹೀರುತ್ತಿರುವರು. ಅವರನ್ನು ಮೇಲೆತ್ತುವುದಕ್ಕೆ ಸ್ವಲ್ಪವೂ ಶ್ರಮಪಡುವುದಿಲ್ಲ. ಇದು ಒಂದು ದೇಶವೋ, ನರಕದ ಬೀಡೋ? ಇಲ್ಲಿರುವುದು ಧರ್ಮವೋ ಅಥವಾ ಪಿಶಾಚಿಯ ನೃತ್ಯವೋ?

ಆಧುನಿಕ ಭರತಖಂಡದಲ್ಲಿ ಧಾರ್ಮಿಕ ಭಾವನೆ ಮಾಯವಾಗಿದೆ. ಬಾಹ್ಯ ಆಚಾರ ಮಾತ್ರ ಉಳಿದಿದೆ. ಜನರು ಹಿಂದೂಗಳೂ ಅಲ್ಲ, ವೇದಾಂತಿಗಳೂ ಅಲ್ಲ. ಅವರು ಕೇವಲ ಅಸ್ಪರ್ಶಿಗಳು ಮಾತ್ರ. ಇಂತಹವುಗಳಲ್ಲಿ ಭಾವನೆ ಹೋಗಬೇಕು. ಇದನ್ನು ಎಷ್ಟು ಬೇಗ ತ್ಯಜಿಸಿದರೆ ಅಷ್ಟೂ ಒಳ್ಳೆಯದು. ನಿಮಗೆ ಏನಾದರೂ ಒಳ್ಳೆಯದಾಗಬೇಕೆಂಬ ಆಸೆ ಇದ್ದರೆ, ನಿಮ್ಮ ಬಾಹ್ಯಾಚಾರಗಳನ್ನೆಲ್ಲಾ ಆಚೆಗೆ ಕಿತ್ತೊಗೆಯಿರಿ. ಬದುಕಿರುವ ದೇವರನ್ನು, ಮಾನವರೂಪವನ್ನು, ತಾಳಿದ ಪ್ರತಿಬಿಂಬವನ್ನು, ವ್ಯಷ್ಟಿ ದೃಷ್ಟಿಯಿಂದಲೂ, ಸಮಷ್ಟಿ ದೃಷ್ಟಿಯಿಂದಲೂ ಆರಾಧಿಸಿ, ದೇವರ ಸಮಷ್ಟಿ ದೃಷ್ಟಿ ಎಂದರೆ ಜಗತ್ತು, ಅದನ್ನು ಪೂಜಿಸುವುದೆಂದರೆ ಸೇವಿಸುವುದು. ಇದೇ ನಿಜವಾದ ಕರ್ಮ. ಕೇವಲ ಬಾಹ್ಯಾಚಾರಗಳಲ್ಲಿ ಮಗ್ನರಾಗುವುದಿಲ್ಲ. ದೇವರ ಮುಂದೆ ಅನ್ನದ ತಟ್ಟೆಯನ್ನು ಹತ್ತು ನಿಮಿಷಗಳು ಇಟ್ಟಿರುವುದೆ ಅಥವಾ ಅರ್ಧಘಂಟೆ ಇಟ್ಟಿರುವುದೆ ಎಂದು ಅನುಮಾನಿಸುವುದು ಕರ್ಮವಲ್ಲ. ಹುಚ್ಚುತನವೆಂದು ಅದಕ್ಕೆ ಹೆಸರು. ಕಾಶಿಯ ಅಥವಾ ಬೃಂದಾವನದ ಗುಡಿಯ ಬಾಗಿಲನ್ನು ತೆರೆಯುವಾಗ ಘಂಟೆ ಹೊಡೆಯಲಿ ಎಂದು ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವರು! ದೇವರು ಈಗ ಸ್ನಾನ ಮಾಡುತ್ತಿರುವನು. ಈಗ ಅವನು ಭೋಜನ ಮಾಡುತ್ತಿರುವನು ಈಗ ನಿಮಗೆ ತಿಳಿಯದ ಯಾವುದೋ ಕಾರ್ಯದಲ್ಲಿ ನಿರತನಾಗಿರುವನು ಎನ್ನುವರು. ನಿಜವಾಗಿ ಬದುಕಿರುವ ದೇವರು ಹೊಟ್ಟೆಗಿಲ್ಲದೆ ವಿದ್ಯೆಯಿಲ್ಲದೆ ಸಾಯುತ್ತಿರುವಾಗ ಬೊಂಬಾಯಿಯ ಮಾರ್ವಾಡಿಗಳು ತಿಗಣೆಗೆ ಆಸ್ಪತ್ರೆ ಕಟ್ಟಿಸುತ್ತಿರುವವರು. ಅವರು ಮನುಷ್ಯನಿಗೆ ಅವನು ಸತ್ತರೂ ಕೂಡ ಏನೂ ಮಾಡುವುದಿಲ್ಲ! ಇಷ್ಟು ಸರಳವಾದ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ನಿಮಗೆ ಬುದ್ಧಿ ಇಲ್ಲ. ಇದೇ ನಮ್ಮ

ಇಡೀ ದೇಶವೆಲ್ಲ ಕೇವಲ "ಮುಟ್ಟಬೇಡ" ಎಂಬ ಮಡಿವಂತರ ಆಟಾಟೋಪದಿಂದ ತುಂಬಿಹೋಗಿದೆ. ಬ್ರಾಹ್ಮಣರು ತೀವ್ರ ದುರ್ಮಾರ್ಗ ವರ್ತಿಗಳಾದರು. ಸ್ವಾರ್ಥ ದೃಷ್ಟಿಯಿಂದ ಅನೇಕ ವಿಚಿತ್ರವಾದ, ವೇದಗಳಲ್ಲಿಲ್ಲದ ದುರಾಚಾರ, ಅಧರ್ಮ ಮತ್ತು ಕುಯುಕ್ತಿಗಳನ್ನು ತಮ್ಮ ಪ್ರತಿಷ್ಠೆ ಕಾಪಾಡಿಕೊಳ್ಳುವುದಕ್ಕಾಗಿ ಪ್ರಚಾರಕ್ಕೆ ತಂದರು. ಈಗ ಅದರ ಫಲವನ್ನುಣ್ಣುತ್ತಿದ್ದಾರೆ.

ದೇಶದಲ್ಲಿರುವ ಒಂದು ಸಾಂಕ್ರಾಮಿಕ ಜಾಡ್ಯ. ದೇಶದಲ್ಲೆಲ್ಲಾ ಹುಚ್ಚರ ಮನೆಗಳು ಹೆಚ್ಚಿವೆ.

ಭಯಂಕರವಾದ ಕೆಸರಗುಂಡಿ ಮುಂದೆ ಇದೆ ಜೋಪಾನ ! ಅನೇಕರು ಅದರಲ್ಲಿ ಬಿದ್ದು ಸಾಯುವರು. ಆ ಕೆಸರೇ ಇದು ಅದೇನೆಂದರೆ ವರ್ತಮಾನ ಕಾಲದ ಹಿಂದೂಗಳ ಧರ್ಮ ವೇದದಲ್ಲಿಲ್ಲ, ಪುರಾಣದಲ್ಲಿಲ್ಲ, ಭಕ್ತಿಯಲ್ಲಿಲ್ಲ ಅಥವಾ ಮುಕ್ತಿಯಲ್ಲಿಲ್ಲ. ಆ ಧರ್ಮವೆಲ್ಲಾ ಅಡಿಗೆ ಮಾಡುವ ಪಾತ್ರೆಯೊಳಗೆ ಪ್ರವೇಶಿಸಿದೆ. ಇಂದಿನ ಹಿಂದೂಧರ್ಮ ಜ್ಞಾನ ಮಾರ್ಗವೂ ಅಲ್ಲ, ಭಕ್ತಿ ಮಾರ್ಗವೂ ಅಲ್ಲ, ಅದರ ಧರ್ಮವೇ ಅಸ್ಪೃಶ್ಯತೆ. ಅಸ್ಪೃಶ್ಯತೆ ಎಂಬ ಕುರುಡು ಧರ್ಮದಲ್ಲಿ ನಿಮ್ಮ ಜೀವ ಹಾಳಾಗದಿರಲಿ, ಜೋಪಾನವಾಗಿ ನೋಡಿಕೊಳ್ಳಿ. "ಆತ್ಮವತ್ ಸರ್ವಭೂತೇಷು" ಎಲ್ಲ ಭೂತಗಳಲ್ಲೂ ಒಂದೇ ಆತ್ಮವನ್ನು ನೋಡಬೇಕೆಂಬ ಉಪದೇಶ ಗ್ರಂಥ'ದಲ್ಲೇ ಕೊನೆಗಾಣಬೇಕೆ? ಹಸಿದವನಿಗೆ ಒಂದು ತುತ್ತು ಅನ್ನವನ್ನು ಕೊಡದವರು ಮೋಕ್ಷವನ್ನು ಹೇಗೆ ಕೊಟ್ಟಾರು? ಮತ್ತೊಬ್ಬರ ಉಸಿರಿನ ಸೋಕಿನಿಂದಲೇ ಇವರು ಪಾಪಿಗಳಾದರೆ ಇನ್ನೊಬ್ಬರನ್ನು ಹೇಗೆ ಶುದ್ಧಿ ಮಾಡುವರು? ಅಸ್ಪೃಶ್ಯತೆ ಎಂಬುದು ಒಂದು ತರಹದ ಮನೋರೋಗ.

ನಮ್ಮ ದೇಶದಲ್ಲಿ ಯಾರಾದರೂ ಕೀಳು ಜಾತಿಯಲ್ಲಿ ಹುಟ್ಟಿದರೆ ಆಯಿತು, ಅವನಿಗೆ ಉಳಿಗಾಲವಿಲ್ಲ. ಅವನಿಗೆ ಭರವಸೆ ಇಲ್ಲ. ಅಭಿವೃದ್ಧಿಗೆ ಬರಲು ದಾರಿಯೇ ಇಲ್ಲ. ಏತಕ್ಕೆ ಇದು, ಇಂತಹ ದಬ್ಬಾಳಿಕೆ ಇದು! ಸಂಕಟದಲ್ಲಿ, ದುಃಖದಲ್ಲಿ ಸಿಕ್ಕಿ, ನರಳುತ್ತಿರುವ ಕೋಟ್ಯಾನುಕೋಟಿ ಭಾರತೀಯರಿಗೆ ಎಷ್ಟು ಜನ ಕಣ್ಣೀರಿಡುವರು? ನಾವು ಮನುಷ್ಯರೇ? ಅವರ ಜೀವನೋಪಾಯಕ್ಕೆ, ಅವರನ್ನು ಉತ್ತಮ ಸ್ಥಿತಿಗೆ ತರುವುದಕ್ಕೆ ನಾವು ಏನೇನು ಮಾಡುತ್ತಿರುವೆವು? ನಾವು ಅವರನ್ನು ಮುಟ್ಟುವುದಿಲ್ಲ. ಅವರ ಸಂಗವನ್ನು ನಿರಾಕರಿಸುವೆವು! ನಾವು ನಿಜವಾಗಿಯೂ ಮನುಷ್ಯರೇ? ದೀನರಾದ, ಅತ್ಯಾಚಾರದಿಂದ ನೊಂದವರಿಗೆ, ಸಾಮಾನ್ಯ ಭಾರತೀಯರಿಗೆ, ಆ ಸಾವಿರಾರು ಮಂದಿ ಬ್ರಾಹ್ಮಣರು ಏನು ಮಾಡುತ್ತಿರುವರು? ನಮ್ಮ ಸನಾತನ ಧರ್ಮ ಅವರ ಕೈಗೆ ಸಿಕ್ಕಿ ಕೊಳಕಾಗಿದೆ. ಎಷ್ಟು ಅಧೋಗತಿಗೆ ಇಳಿದಿದೆ! ಇನ್ನೊಂದು ದೊಡ್ಡ ತಪ್ಪು ಏನೆಂದರೆ, ಜಾತಿ ಭಾವನೆಯೇ ಪರಸ್ಪರ ಭೇದ ಬುದ್ಧಿಯನ್ನು ಕಲ್ಪಿಸುವುದಕ್ಕೆ ಮುಖ್ಯ ಕಾರಣ ಮತ್ತು ಅದೇ ಮಾಯದ ಮೂಲ-ಎಲ್ಲಾ ಜಾತಿಯೂ, ಅದು ಜನನದ ಮೇಲಿರಲಿ ಅಥವಾ ಯೋಗ್ಯತೆಯ ಮೇಲಿರಲಿ ಅದು ಬಂಧನವೆಂಬ ನಿರ್ಧಾರವು ಕ್ರಮೇಣ ನನ್ನ ಮನಸ್ಸಿನಲ್ಲಿ ದೃಢವಾಗುತ್ತಿದೆ. ಕೆಲವು ಸ್ನೇಹಿತರು ಹೀಗೆಂದು ಬುದ್ಧಿವಾದ ಹೇಳುವರು. "ನಿಜ, ಅದೆಲ್ಲವನ್ನು ನಿನ್ನ ಮನಸ್ಸಿನಲ್ಲಿಟ್ಟುಕೊಂಡಿರು. ಆದರೆ, ಹೊರಗೆ ವ್ಯಾವಹಾರಿಕ ಪ್ರಪಂಚದಲ್ಲಿ, ಜಾತಿಯಂತಹ ಭೇದಗಳನ್ನು ಇಟ್ಟುಕೊಂಡಿರಬೇಕಾಗುವುದು. ಅಂತರಾಳದಲ್ಲಿ ಐಕ್ಯತೆಯ ಭಾವ, ಹೊರಗೆ ಪೈಶಾಚಿಕ ನರಕ ಸದೃಶ ಅನ್ಯಾಯ ಮತ್ತು ಕ್ರೂರತನ. ಹೇ! ದೀನರಿಗೆ ಸಾವನ್ನು ತರುವವರೆ! ಆದರೆ ಪಂಚಮನೇನಾದರೂ ಧನಿಕನಾಗಿದ್ದರೆ, ಓ! ಇವನು ಧರ್ಮೋದ್ಧಾರಕ ಎನ್ನುವರು. ಇದೆಲ್ಲ ಆದ ಮೇಲೆ ನನ್ನ ವ್ಯಾಸಂಗದ ಮೂಲಕ ತಿಳಿಯುವುದೇನೆಂದರೆ, ಧಾರ್ಮಿಕ ನಿಯಮಗಳು ಶೂದ್ರರಿಗಲ್ಲ; ಅವನೇನಾದರೂ ಆಹಾರದ ವಿಷಯದಲ್ಲಿ, ಪರದೇಶಕ್ಕೆ ಪ್ರಯಾಣ ಮಾಡುವ ವಿಚಾರದಲ್ಲಿ, ಔಚಿತ್ಯ ಅನೌಚಿತ್ಯಗಳನ್ನು ಕಂಡು ಹಿಡಿಯುವಲ್ಲಿ ಯತ್ನಿಸಿದರೆ, ಎಲ್ಲವೂ ಅವನ ಭಾಗಕ್ಕೆ ನಿಷ್ಪ್ರಯೋಜಕ. ವೃಥಾ ಅಷ್ಟೊಂದು ಕಷ್ಟ. ವ್ಯರ್ಥ, ನಾನೊಬ್ಬ ಶೂದ್ರ. ಒಬ್ಬ ಮ್ಲೇಚ್ಛ, ಆ ತಾಪತ್ರಯದ ತಂಟೆಯೇ ನನಗಿಲ್ಲ. ನನಗೆ ಮ್ಲೇಚ್ಛರ ಆಹಾರವಾದರೇನು? ಪರಯನ ಆಹಾರವಾದರೇನು? ಪುರೋಹಿತರು ಬರೆದ ಪುಸ್ತಕಗಳಲ್ಲಿ ಮಾತ್ರ ಜಾತಿ ಎಂಬ ಹುಚ್ಚು ಸಿಕ್ಕುವುದು, ಹೃದಯ ಪುಸ್ತಕದಲ್ಲಿ ಅಲ್ಲ. ತಮ್ಮ ಪುರಾತನರು ಅರ್ಜಿಸಿದ ಫಲವನ್ನು ಪುರೋಹಿತರು ಅನುಭವಿಸಲಿ. ನಾನು ಯಶಸ್ಸಿರುವ ನನ್ನ ಅಂತಸ್ಸಾಕ್ಷಿಯನ್ನು ಹಿಡಿದು ನಡೆಯುತ್ತೇನೆ.

ಇಡೀ ದೇಶವೆಲ್ಲ ಕೇವಲ "ಮುಟ್ಟಬೇಡ" ಎಂಬ ಮಡಿವಂತರ ಕ್ರಂದನ ಆಟಾಟೋಪದಿಂದ ತುಂಬಿಹೋಗಿದೆ" ಬ್ರಾಹ್ಮಣರು ತೀವ್ರ ದುರ್ಮಾರ್ಗ ವರ್ತಿಗಳಾದರು. ಸ್ವಾರ್ಥ ದೃಷ್ಟಿಯಿಂದ ಅನೇಕ ವಿಚಿತ್ರವಾದ, ವೇದಗಳಲ್ಲಿಲ್ಲದ ದುರಾಚಾರ, ಅಧರ್ಮ ಮತ್ತು ಕುಯುಕ್ತಿಗಳನ್ನು ತಮ್ಮ ಪ್ರತಿಷ್ಠೆ ಕಾಪಾಡಿಕೊಳ್ಳುವುದಕ್ಕಾಗಿ ಪ್ರಚಾರಕ್ಕೆ ತಂದರು. ಈಗ ಅದರ ಫಲವನ್ನುಣ್ಣುತ್ತಿದ್ದಾರೆ. ಬಂಗಾಳದಲ್ಲಿ ನೂರಾರು ಬ್ರಾಹ್ಮಣರು, ಕಾಯಸ್ಥರು ಎಂದು ಹೇಳಿಕೊಳ್ಳುವವರು ಸಾರ್ವಜನಿಕ ಫಲಹಾರ ಮಂದಿರಗಳಿಗೆ ಗೋಪ್ಯವಾಗಿ ಹೋಗಿ ರುಚಿ ರುಚಿಯಾದ ತಿಂಡಿ ತಿಂದು ನಂತರ ಹೊರಕ್ಕೆ ಬಂದು ತಾವು ಸಮಾಜದ ನಾಯಕರು ಎಂದು ಹೇಳಿಕೊಂಡು "ಹೊಲೆಯ ಮುಟ್ಟಬಾರದು' ಎಂಬ ತತ್ವಕ್ಕೇ ಉತ್ತೇಜನ ಕೊಡುವುದನ್ನು ನೋಡುತ್ತಿಲ್ಲವೆ? ಇಂತಹ ಕಪಟಿಗಳು ಆಜ್ಞಾಪಿಸಿದ ಕಾಯಿದೆಗಳು ನಮ್ಮ ಸಮಾಜಕ್ಕೆ ಮಾರ್ಗದರ್ಶಕವಾಗಬೇಕೇನು? ಅದಕ್ಕೆ ಬದಲಾಗಿ ನಾವು ಅವನ್ನು ಹೊಡೆದಟ್ಟಬೇಕು. ಝಾಡಮಾಲಿಗಳನ್ನು ಮತ್ತು ಹೊಲೆಯರನ್ನು ಈಗಿರುವ ಹೀನಸ್ಥಿತಿಗೆ ಯಾರು ತಂದರು? ನಮ್ಮ ನಡತೆಯ ನಿರ್ದಯತೆಯೇ ಕಾರಣ. ಜೊತೆಗೆ ಅದ್ಭುತವಾದ ಅದ್ವೈತವನ್ನು ಬೇರೆ ಬೋಧಿಸುವುದು! ಇದು ಗಾಯಕ್ಕೆ ಉಪ್ಪುನೀರು ಹಾಕಿದಂತಲ್ಲವೆ?

ವಿವೇಕಾನಂದರ ವಿಚಾರಗಳು

ಭರತ ಖಂಡದಲ್ಲಿ ದರಿದ್ರರನ್ನು, ದೀನರನ್ನು ನಾವು ಯಾವ ರೀತಿಯಿಂದ ನೋಡುತ್ತೇವೆ ಎಂದು ಆಲೋಚಿಸಿದಾಗ ನನ್ನ ಎದೆ ಕರಗಿತು. ಅವರಿಗೆ ಸಮಾಜದಲ್ಲಿ ಮೇಲೇರುವುದಕ್ಕೆ ಅವಕಾಶವಿಲ್ಲ. ಇರುವ ಕಷ್ಟದಿಂದ ತಪ್ಪಿಸಿಕೊಳ್ಳಲು ದಾರಿಯಿಲ್ಲ. ಭರತಖಂಡದಲ್ಲಿ ದೀನರಿಗೆ, ದರಿದ್ರರಿಗೆ, ಪಾಪಿಗಳಿಗೆ ಸ್ನೇಹಿತರಿಲ್ಲ. ಅವರಿಗೆ ಸಹಾಯಕರಿಲ್ಲ. ಅವರು ಎಷ್ಟು ಶ್ರಮಪಟ್ಟರೂ ಮೇಲೇರರು. ಪ್ರತಿದಿನವೂ ಅವರು ಅಧಃಪಾತಾಳಕ್ಕೆ ಹೋಗುತ್ತಿರುವರು. ಕ್ರೂರ ಸಮಾಜದಿಂದ ಬೀಳುವ ಪೆಟ್ಟಿನ ಸುರಿಮಳೆಯನ್ನು ಅವರು ಅನುಭವಿಸುವರು. ಯಾವ ಕಡೆಯಿಂದ ಪೆಟ್ಟು ಬೀಳುತ್ತಿದೆ ಎನ್ನುವುದು ಅವರಿಗೆ ತಿಳಿಯದು. ತಾವು ಮಾನವ ವರ್ಗಕ್ಕೆ ಸೇರಿದವರು ಎಂಬುದನ್ನು ಅವರು ಮರೆತಿರುವರು. ಇದರ ಪರಿಣಾಮವೇ ಗುಲಾಮಗಿರಿ. ...ಗೌತಮ ಬುದ್ಧ ಬಂದು ದರಿದ್ರರಿಗೆ, ದುಃಖಿಗಳಿಗೆ, ಪಾಪಿಗಳಿಗೆ ಹೇಗೆ ಮನಕರಗಬೇಕೆಂಬುದನ್ನು ತೋರಿದನು. ಆದರೆ ಅದನ್ನು ನೀವು ಲಕ್ಷಿಸಲಿಲ್ಲ. ರಾಕ್ಷಸರನ್ನು ತಪ್ಪುಮಾರ್ಗಕ್ಕೆ ಎಳೆಯಬೇಕೆಂದು, ದೇವರೇ ಈ ರೂಪ ತಾಳಿ ಬಂದನೆಂದು ಸುಳ್ಳು ಕಥೆಗಳನ್ನು ಕೆಳಗೆ ಉರುಳಿಸಿ ತಾವು ಆ ಸ್ಥಾನವನ್ನು ಆಕ್ರಮಿಸುವರು. ಅವರು, "ನಿಮಗೆ ಆ ಮಂತ್ರ ಶಕ್ತಿ ಗೊತ್ತಿಲ್ಲ. ನಮಗೆ ದಕ್ಷಿಣೆ ಕೊಡಿ. ನಾವು ಮಂತ್ರೋಚ್ಚಾರಣೆ ಮಾಡುತ್ತೇನೆ. ಅದರಿಂದ ನಿಮಗೆ ಬೇಕಾದುದು ದೊರಕುತ್ತದೆ. ನೀವೇ ಆ ಶಬ್ದಗಳನ್ನು ಉಚ್ಚಾರ ಮಾಡಬಲ್ಲಿರಾ? ನಿಮಗೆ ಅದು ಸಾಧ್ಯವಿಲ್ಲ. ಅದನ್ನು ಒಂದು ಸ್ವಲ್ಪ ತಪ್ಪಾಗಿ ಹೇಳಿದರೂ ವಿರೋಧವಾಗಿರುವುದು ಆಗುತ್ತದೆ. ನೀವು ಶ್ರೀಮಂತರಾಗಿ, ಸುಂದರ ಪುರುಷರಾಗಿ ದೀರ್ಘಾಯುಗಳಾಗಿ ಚೆನ್ನಾಗಿರುವ ಗಂಡನನ್ನು ಬಯಸುವಿರೇನು? ಹಾಗಾದರೆ ಪುರೋಹಿತರಿಗೆ ಸಾಕಷ್ಟು ದಕ್ಷಿಣೆ ಕೊಟ್ಟು ಸುಮ್ಮನಿರಿ, ಅದು ಸಿದ್ಧಿಸುವುದು. ಎಂದು ಹೇಳುವರು. ಪ್ರಪಂಚದ ಯಾವ ಧರ್ಮವೂ ಹಿಂದೂ ಧರ್ಮದಷ್ಟು ಭವ್ಯವಾಣಿಯಲ್ಲಿ ಮನುಷ್ಯತ್ವದ ಘನತೆಯನ್ನು ಬೋಧಿಸುವುದಿಲ್ಲ. ಪ್ರಪಂಚದ ಯಾವ ಧರ್ಮವೂ ದೀನ ದಲಿತರ ಕುತ್ತಿಗೆಯನ್ನು ಹಿಂದೂ ಧರ್ಮದಷ್ಟು ಕ್ರೂರವಾಗಿ ತುಳಿಯುವುದಿಲ್ಲ. ತಪ್ಪು ಹಿಂದೂಧರ್ಮದ್ದಲ್ಲ. ಅಲ್ಲಿರುವ ಸಂಪ್ರದಾಯ ಶರಣರದು. ಪುರೋಹಿತರದು: ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಎಂದು ನಾನಾ ಬಗೆಯ ಕ್ರೂರ ಸಾಧನಗಳನ್ನು ಸೃಷ್ಟಿಸುವ ಠಕ್ಕರದು.

ಉತ್ತಮವೂ ಭವ್ಯವೂ ಆದ ಆದರ್ಶಗಳಿಗೆ ಭಾರತ ತೌರೂರು ಎಂದು ಅವರು (ಜಪಾನೀಯರು) ಇನ್ನೂ ತಿಳಿದಿರುವರು. ಆದರೆ ನೀವು ಏನಾಗಿದ್ದೀರಿ? ಒಣಹರಟೆಯಲ್ಲಿ ಜೀವನವನ್ನೆಲ್ಲ ಕಳೆಯುವಿರಿ. ಬರಿಯ ಮಾತಾಳಿಗಳು ನೀವು. ಬನ್ನಿ, ಈ ಜನರನ್ನು ನೋಡಿ, ನಿಮ್ಮ ದೇಶಕ್ಕೆ ಹಿಂದಿರುಗಿ ನಾಚಿಕೆಯಿಂದ ಮುಖ ಮುಚ್ಚಿಕೊಳ್ಳಿ. ನೀವೆಲ್ಲರೂ ಅರುಳು ಮರಳು ಮುದುಕರು, ಹೊರಗೆ ಬಂದರೆ ಜಾತಿ ಕೆಡುವುದು! ನೂರಾರು ವರ್ಷಗಳಿಂದ ಎಡೆಬಿಡದೆ ಹೆಚ್ಚಿ ಬೆಳೆದು ಕಲ್ಲಾದ ಮೂಢನಂಬಿಕೆಯ ಹೊರೆಯನನು ತಲೆಯ ಮೇಲೆ ಹೊತ್ತಿರುವಿರಿ. ನೂರಾರು ವರ್ಷಗಳಿಂದಲೂ ಈ ಆಹಾರ ಮುಟ್ಟಲು ಯೋಗ್ಯವೋ ಎಂಬ ಘನವಿಚಾರವನ್ನು ವಿಮರ್ಶಿಸುವುದರಲ್ಲೇ ನಿಮ್ಮ ಬುದ್ಧಿವಂತಿಕೆಯನ್ನು ವ್ಯಯಮಾಡಿರುವಿರಿ. ಅನೇಕ ಶತಮಾನಗಳಿಂದ ಸಮಾಜವನ್ನು ಸತತವೂ ಪೀಡಿಸುವುದರಲ್ಲಿ ನಿಮ್ಮ ಪುರುಷತ್ವವೆಲ್ಲ ವ್ಯಯವಾಗಿದೆ. ನೀವು ಈಗ ಏನಾಗಿದ್ದೀರಿ? ಯಾವ ಮಹಾ ಕಾರ್ಯವನ್ನು ಮಾಡುತ್ತಿದ್ದೀರಿ?

ಬನ್ನಿ, ಮನುಷ್ಯರಾಗಿ! ಪ್ರಗತಿಗೆ ಯಾವಾಗಲೂ ವಿರುದ್ಧವಾಗಿರುವ ಪುರೋಹಿತರನ್ನು ಒದ್ದೋಡಿಸಿ, ಅವರೆಂದಿಗೂ ತಿದ್ದಿಕೊಳ್ಳುವುದಿಲ್ಲ. ಅವರ ಹೃದಯ ಎಂದಿಗೂ ವಿಶಾಲ ಆಗುವುದಿಲ್ಲ. ಶತಶತಮಾನಗಳಿಂದ ಬಂದ ಮೂಢನಂಬಿಕೆ ಮತ್ತು ದಬ್ಬಾಳಿಕೆಯ ಸಂತಾನ ಅವರು! ಮೊದಲು ಪುರೋಹಿತಶಾಹಿಯನ್ನು ಬೇರು ಸಹಿತ ಕಿತ್ತೊಗೆಯಿರಿ. ಬನ್ನಿ, ಮನುಷ್ಯರಾಗಿ ಮುಂದೆ ಬನ್ನಿ, ಸಂಕುಚಿತ ಬಿಲಗಳಿಂದ ಹೊರಗೆ ಬನ್ನಿ. ಕಣ್ಣುಬಿಟ್ಟು ಹೊರಗೆ ನೋಡಿ. ಇತರ ಜನಾಂಗಗಳು ಹೇಗೆ ಮುಂದುವರಿಯುತ್ತಿವೆ ಎಂಬುದನ್ನು ನೋಡಿ. ನೀವು ಮನುಷ್ಯರನ್ನು ಪ್ರೀತಿಸುವಿರಾ? ನಿಮ್ಮ ದೇಶವನ್ನು ಪ್ರೀತಿಸುವಿರಾ? ಹಾಗಾದರೆ ಬನ್ನಿ, ಉನ್ನತವಾದ ಕೆಲಸಗಳಿಗಾಗಿ ನಾವು ಹೋರಾಡುವ.

ಶಿಷ್ಯ : ಸ್ವಾಮೀಜಿ, ನಮ್ಮ ಸಮಾಜ, ದೇಶ ಇಷ್ಟೊಂದು ಅಧೋಗತಿಗಿಳಿಯಲು ಕಾರಣವೇನು?

ಸ್ವಾಮೀಜಿ : ಅದಕ್ಕೆ ನೀವೇ ಕಾರಣರು (ಶಿಷ್ಯ ಬ್ರಾಹ್ಮಣ ಜಾತಿಗೆ ಸೇರಿದವ)

ಶಿಷ್ಯ : ಅದು ಹೇಗೆ ಸ್ವಾಮೀಜಿ ? ನನಗೆ ಆಶ್ಚರ್ಯವಾಗುತ್ತಿದೆ

ಸ್ವಾಮೀಜಿ : ಬಹು ಕಾಲದಿಂದ ನೀವು ನಮ್ಮ ದೇಶದ ಕೆಳಗಿನ ಶ್ರೇಣಿಯ ಜನರನ್ನು ಹೀನಾಯವಾಗಿ ಕಾಣುತ್ತಿದ್ದೀರಿ. ಅದಕ್ಕೆ ನೀವು ಜಗತ್ತಿನ ದೃಷ್ಟಿಯಲ್ಲಿ ತಿರಸ್ಕೃತರಾಗಿದ್ದೀರಿ. ಪುರೋಹಿತ ವರ್ಗದವರು ಬ್ರಾಹ್ಮಣೇತರರಿಗೆ ವೇದ, ಉಪನಿಷತ್ ಮುಂತಾದ ಶಾಸ್ತ್ರಗಳನ್ನು ಓದಲು ಅವಕಾಶಕೊಡಲಿಲ್ಲ. ಅವುಗಳನ್ನು ಮುಟ್ಟಲೂ ಬಿಡಲಿಲ್ಲ. ಅವರನ್ನು ಕೆಳಕ್ಕೆ ತುಳಿದಿದ್ದೀರಿ. ಕೇವಲ ಸ್ವಾರ್ಥಕತೆಯಿಂದ ನೀವೇ ಈ ರೀತಿ ಮಾಡಿದ್ದೀರಿ. ಪುರೋಹಿತವರ್ಗದವರೇ ಎಲ್ಲಾ ಧರ್ಮಗ್ರಂಥಗಳ ಏಕಮಾತ್ರ ಅಧಿಕಾರಿಗಳಾಗಿ ವಿಧಿ ನಿಷೇಧಗಳನ್ನೆಲ್ಲಾ ತಮ್ಮ ಹಿಡಿತದಲ್ಲೇ ಇಟ್ಟುಕೊಂಡಿದ್ದಾರೆ. ಮತ್ತೂ ಬಾರಿಬಾರಿಗೂ ಇತರೆ ಜಾತಿಯವನ್ನು ಕೀಳೆಂದೂ, ನೀಚರೆಂದೂ ಕರೆದು ಅವರ ತಲೆಯಲ್ಲಿ ಅವರು ನಿಜವಾಗಿಯೂ ಅಂತಹವರೆಂಬ ಭಾವನೆ ಬರುವಂತೆ ಮಾಡಿದ್ದೀರಿ. ನೀನು ಒಬ್ಬ ಮನುಷ್ಯನನ್ನು ಯಾವಾಗಲೂ "ನೀನು ತುಚ್ಛ, ನೀಚ" ಎಂದು ಹೇಳುತ್ತಿದ್ದರೆ ಅವನು ಕ್ರಮೇಣ ನೀಚನೆಂದೇ ಭಾವಿಸುವ ಹಾಗೆ ಆಗುತ್ತದೆ. ಇದೇ ಸಮ್ಮೋಹಿನಿ ನಿದ್ದೆ (Hypnotism). ಈಗ ಬ್ರಾಹ್ಮಣೇತರ ವರ್ಗದವರು ನಿಧಾನವಾಗಿ ಎಚ್ಚೆತ್ತುಕೊಳ್ಳುತ್ತಿದ್ದಾರೆ. ಅವರಿಗೆ ಬ್ರಾಹ್ಮಣ, ಪುರಾಣ, ಮಂತ್ರಗಳ ಮೇಲಣ ಶ್ರದ್ಧೆ ಕಡಿಮೆಯಾಗುತ್ತಿದೆ. ಪಾಶ್ಚಾತ್ಯ ವಿದ್ಯಾಭ್ಯಾಸದ ಹರಡುವಿಕೆಯಿಂದ ಪುರೋಹಿತ ವರ್ಗದವರ ಕುತಂತ್ರವೆಲ್ಲಾ ಕುಸಿದು ಬೀಳುತ್ತಿದೆ.

ಪುರಾತನ ಆರ್ಯ ಮಹರ್ಷಿಕುಲ ಸಂಭೂತರೆಂದು ನೀವೆನಿತು ಹಿಗ್ಗಿದರೂ, ಪುರಾತನ ಆರ್ಯಾವರ್ತದ ಮಹಿಮೆಯನ್ನು, ಗೌರವವನ್ನು ಹಗಲಿರುಳು ನೀವೆನಿತು ಕೀರ್ತಿಸಿದರೂ, ಉಚ್ಚಕುಲ ಪ್ರಸೂತರೆಂದು ನೀವೆನಿತು ಉಬ್ಬಿದರೂ, ಆರ್ಯಾವರ್ತದಲ್ಲಿ ಉತ್ತಮ ವರ್ಗದವರು ಎಂದನಿಸಿಕೊಂಡಿರುವ ನೀವೆಲ್ಲ ಜೀವಂತರೆಂದು ತಿಳಿದಿರುವಿರೇನು? ನೀವೆಲ್ಲಾ ಹೆಣಗಳಾಗಿದ್ದೀರಿ. ಶತ ಶತಮಾನಗಳ ಮಮ್ಮಿಗಳಾಗಿದ್ದೀರಿ. ಯಾರನ್ನು ನಿಮ್ಮ ಪೂರ್ವಿಕರು ಚಲಮಾನ ಸ್ಮಶಾನಗಳೆಂದು ತಿರಸ್ಕರಿಸಿದರೋ, ಅವರಲ್ಲಿ ಮಾತ್ರ ಭರತವರ್ಷದ ಪ್ರಾಣ ಸ್ವಲ್ಪವಾದರೂ ಇನ್ನೂ ಸಂಚರಿಸುತ್ತಿದೆ. ನೀವು ಮಾತ್ರ ನಿಜವಾಗಿಯೂ ಶವಗಳಾಗಿದ್ದೀರಿ. ನಿಮ್ಮ ಮನೆ ಮತ್ತು ಅಲ್ಲಿರುವ ಸಾಮಾನನ್ನು ನೋಡಿದರೆ, ಪ್ರಾಕ್ತನ ವಸ್ತುಸಂಗ್ರಹಶಾಲೆಯ ನೆನಪಾಗುತ್ತದೆ; ಜೀವವಿಲ್ಲ, ನವ್ಯತೆ ಇಲ್ಲ. ನಿಮ್ಮ ರೀತಿ, ನೀತಿ, ಆಚಾರ ವ್ಯವಹಾರಗಳಂತೂ ನೋಡಿದವರಿಗೆ ಅಡುಗೂಲಜ್ಜಿಯ ಕಥೆಯನ್ನು ನೆನಪಿಗೆ ತರುತ್ತವೆ. ಮುಖತಃ ನಿಮ್ಮ ಪರಿಚಯವನ್ನು ಮಾಡಿಕೊಂಡು ಹಿಂದುರಿಗಿದವನಿಗೆ ಯಾವುದೋ ಪುರಾತನ ಚಿತ್ರಶಾಲೆ ಯೊಂದನ್ನು ಸಂದರ್ಶಿಸಿ ಬಂದಂತೆ ಭಾಸವಾಗುತ್ತದೆ. ಈ ಮಾಯಾ ಪ್ರಪಂಚದಲ್ಲಿ ಮಾಯೆಗಳೆಂದರೆ ನೀವೇ! ಉಚ್ಚ ವರ್ಗದವರೆಂದು ಕೂಗಿಕೊಳ್ಳುವ ಭಾರತೀಯರಿರಾ, ನೀವೆಲ್ಲಾ ಛಾಯೆಗಳು, ಮರುಮರೀಚಿಕೆಗಳು, ನಿಮಗಿಂತ ಹೆಚ್ಚಾದ ಛಾಯೆಗಳಿಲ್ಲ. ನೀವೆಲ್ಲಾ ಭೂತಕಾಲದ ಭೂತಗಳಾಗಿದ್ದೀರಿ. ನಿಮ್ಮ ವರ್ತಮಾನತೆ ಒಂದು ಹುಸಿಗನಸು. ಬರಿಯ ಭ್ರಾಂತಿ, ಪಿತ್ತದಿಂದ ಉತ್ಪತ್ತಿಯಾದ ಚಿತ್ತಗ್ಲಾನಿಗೆ ಉದಾಹರಣೆ. ನೀವು ಸೊನ್ನೆಗಳು, ಭವಿತವ್ಯದ ದೃಷ್ಟಿಗೆ ನೀವೆಲ್ಲಾ ಶೂನ್ಯ! ಸ್ವಪ್ನಲೋಕದ ಛಾಯಾ ಮೂರ್ತಿಗಳಿರಾ, ಏಕಿನ್ನು ಉಳಿದಿರುವಿರಿ?

(ಮುಂದುವರಿಯುವುದು)

ಗ್ರಾ.ಪಂ. ಆಡಳಿತಾಧಿಕಾರಿಯಾಗಿ ದಲಿತ ಮಹಿಳೆ

ಬೆಂಗಳೂರು, ಜು. 1 : ಒಂದು ಮಹತ್ವದ ತೀರ್ಪಿನಲ್ಲಿ ಹೈಕೋರ್ಟ್ ಕೊಡಗು ಜಿಲ್ಲೆ ವಿರಾಜಪೇಟೆಯ ಹಲಗುಂದ ಗ್ರಾಮಪಂಚಾಯಿತಿಯ ಸೂಪರ್‌ಸೀಡ್‌ಗೆ ಆದೇಶಿಸಿದ್ದು, ಸದರಿ ಗ್ರಾಮಪಂಚಾಯಿತಿಯ ದಲಿತ ಮಹಿಳಾ ಸದಸ್ಯೆ ಸರೋಜಿನಿ ಅವರನ್ನು ಗ್ರಾಮಪಂಚಾಯ್ತಿಯ ಅಧಿಕಾರಾವಧಿ ಮುಗಿಯುವವರೆಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸುವಂತೆ ಜಿಲ್ಲಾಧಿಕಾರಿಗೆ ನಿರ್ದೇಶಿಸಿದೆ.

ಈ ಸಂಬಂಧ ಸರೋಜನಿ ಅವರು ಸಲ್ಲಿಸಿದ್ದ ಅರ್ಜಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಚಂದ್ರಶೇಖರಯ್ಯ ಅವರು ಸಂವಿಧಾನದ 226ನೇ ವಿಧಿಯನ್ವಯ ಹೈಕೋರ್ಟಿಗಿರುವ ಪರಮಾಧಿಕಾರವನ್ನು ಚಲಾಯಿಸಿ ಈ ಆದೇಶ ಹೊರಡಿಸಿದ್ದಾರೆ.

ಲಾಟರಿಯಲ್ಲಿ ಅಧ್ಯಕ್ಷ ಹುದ್ದೆ ದಲಿತ ಮಹಿಳೆಗೆ ಹಾಗೂ ಉಪಾಧ್ಯಕ್ಷ ಹುದ್ದೆ ಇತರ ಹಿಂದುಳಿದ ವರ್ಗಕ್ಕೆ ಸಲ್ಲಬೇಕೆಂದು ಫಲಿತಾಂಶ ಬಂತು. ಆ ಕಾರಣದಿಂದಾಗಿ ಪಂಚಾಯ್ತಿಯಲ್ಲಿ ಏಕೈಕ ದಲಿತ ಮಹಿಳಾ ಸದಸ್ಯೆಯಾಗಿದ್ದ ಸರೋಜನಿ ಅವರು ಅಧ್ಯಕ್ಷರ ಹುದ್ದೆಗೆ ನಾಮಪತ್ರ ಸಲ್ಲಿಸಿದರು. ಆದರೆ, ಅವರ ಹೆಸರನ್ನು ಯಾರೂ ಅನುಮೋದಿಸಲಿಲ್ಲ ಎಂಬ ಕಾರಣಕ್ಕೆ ಚುನಾವಣಾಧಿಕಾರಿಯವರು ಅವರ ನಾಮಪತ್ರವನ್ನು ತಿರಸ್ಕರಿಸಿ ಹಿಂದಿನ ಅಧ್ಯಕ್ಷರನ್ನೇ ಮುಂದುವರಿಯಲು ತಿಳಿಸಿದ್ದರು ಅದನ್ನು ಪ್ರಶ್ನಿಸಿ ಸರೋಜನಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

(ಜನವಾಹಿನಿ)

ಘರ್ಷಣೆ

ಚನ್ನರಾಯಪಟ್ಟಣ, ಜು. 5 : ಇಲ್ಲಿಗೆ ಸಮೀಪ ಎ. ಚೋಳೇಹಳ್ಳಿ ಗ್ರಾಮದಲ್ಲಿ ದಾರಿ ವಿಷಯಕ್ಕೆ ದಲಿತರು ಮತ್ತು ಸವರ್ಣಿಯರ ನಡುವೆ ಘರ್ಷಣೆ ನಡೆದು ಮೂವರು ದಲಿತ ಮಹಿಳೆಯರು ಗಾಯಗೊಂಡು ಆಸ್ಪತ್ರೆ ಸೇರಿರುವ ಘಟನೆ ವರದಿಯಾಗಿದೆ. ತಾಯಮ್ಮ, ಶೋಭ, ರಾಧ ಎಂಬುವರೇ ಆಸ್ಪತ್ರೆ ಸೇರಿರುವ ಗಾಯಾಳುಗಳು. ಘಟನೆ ನಡೆದ ಸ್ಥಳಕ್ಕೆ ಹೊಳೆನರಸೀಪುರ ಡಿ.ವೈ.ಎಸ್.ಪಿ. ರಮೇಶ್ ಅವರು ಭೇಟಿ ನೀಡಿದ್ದರು.

(ಜನ ವಾಹಿನಿ)

ಮೇರಾ ಭಾರತ್ ಮಹಾನ್

ಉಂಡವರ ಬಾಯಿ ಗೋಮೂತ್ರದಲ್ಲಿ ತೊಳೆದರು

ತುರುವೇಕೆರೆ, ಜು. 8 : ಹರಿಜನರು ಮಾಡಿದ ಅಡುಗೆಯನ್ನು ಊಟ ಮಾಡಿದ ಮಕ್ಕಳನ್ನು ಗೋಮೂತ್ರದಿಂದ ಸ್ನಾನ ಮಾಡಿಸಿ ಬೇವಿನ ಕಡ್ಡಿ ತಿಕ್ಕಿ 'ಮಡಿ' ಮಾಡಿರುವ ಪ್ರಕರಣ ತಾಲ್ಲೂಕಿನ ಚಿಕ್ಕತುರುವೇಕೆರೆಯಲ್ಲಿ ಬೆಳಕಿಗೆ ಬಂದಿದೆ, ಇಲ್ಲಿನ 4ನೇ ತರಗತಿಯವರೆಗಿನ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 23 ವಿದ್ಯಾರ್ಥಿಗಳಿದ್ದು, ಅಕ್ಷರ ದಾಸೋಹ ಜಾರಿಗೆ ಬಂದ ದಿನದಿಂದ ಕೇವಲ 4-5 ಮಾತ್ರ ಮಕ್ಕಳು ಬಿಸಿಯೂಟ ಮಾಡುತ್ತಿದ್ದು, ಮಿಕ್ಕ ಮಕ್ಕಳನ್ನು ಪೋಷಕರು ಶಾಲೆಗೆ ಹೋಗದಂತೆ ತಡೆ ಹಿಡಿದಿದ್ದಾರೆ.

(ಉದಯವಾಣಿ)

ಚಿತ್ರದುರ್ಗ, ಜು. 10 : ಜಾತಿ ಎಂಬ ವಿಷ ಬೀಜವನ್ನು ವಿದ್ಯಾರ್ಥಿಗಳಲ್ಲಿ ಬಿತ್ತಿ ದಲಿತ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಆಸನಗಳ ವ್ಯವಸ್ಥೆ ಮಾಡುವುದರ ಜೊತೆಗೆ ಬಿಸಿಊಟವನ್ನು ನೀಡುವಾಗ ಪ್ರತ್ಯೇಕವಾಗಿ ದಲಿತ ವಿದ್ಯಾರ್ಥಿಗಳಿಗೆ ನೀಡಿದ ಆರೋಪದ ಮೇಲೆ ಪ್ರಾಥಮಿಕ ಶಾಲಾ ಶಿಕ್ಷಕ ತಿಪ್ಪೇಸ್ವಾಮಿ ಎಂಬುವವರನ್ನು ಜಿಲ್ಲಾಧಿಕಾರಿಗಳ ಆದೇಶದಂತೆ ಇಂದು ಅಮಾನತುಗೊಳಿಸಿದ ಪ್ರಸಂಗ ಚಿತ್ರದುರ್ಗ ತಾಲ್ಲೂಕಿನ ಬೊಮ್ಮೇನಹಳ್ಳಿಯಲ್ಲಿ ನಡೆದಿದೆ, ಆದರೆ ಪರಿಶಿಷ್ಟ ಜಾತಿ ವರ್ಗಗಳ ಮೇಲಿನ ದೌರ್ಜನ್ಯ, ತಾರತಮ್ಯ ಪ್ರಕರಣದ ಅಡಿಯಲ್ಲಿ ಪೊಲೀಸ್ ಇಲಾಖೆ ಶಿಕ್ಷಕನನ್ನು ಬಂಧಿಸುವಲ್ಲಿ ವಿಫಲವಾಗಿದೆ.

(ಜನವಾಹಿನಿ)

ಕನ್ನಡ ಪ್ರಭ ವಾರ್ತೆ : ಮಳವಳ್ಳಿ, ಜು. 2: ಸರ್ಕಾರ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚಲಿ ಎಂಬ ಕಾರಣದಿಂದ ಅಕ್ಷರ ದಾಸೋಹ ಯೋಜನೆ ದಾರಿಗೆ ತಂದು ಮಧ್ಯಾಹ್ನದ ಬಿಸಿ ಊಟದ ವ್ಯವಸ್ಥೆ ಮಾಡಿದರೆ ಇಲ್ಲಿಗೆ ಸಮೀಪದ ರಾಗಿ ಬೊಮ್ಮನಹಳ್ಳಿ ಗ್ರಾಮದಲ್ಲಿ ಜನರು ಶಾಲೆಯಲ್ಲಿ ತಮ್ಮ ಮಕ್ಕಳಿಗೆ ಎಲ್ಲಿ ಊಟ ಹಾಕಿ ಬಿಡುತ್ತಾರೋ ಎಂದು ಹೆದರಿ ಶಾಲೆಗೆ ಮಕ್ಕಳನ್ನು ಕಳುಹಿಸದ ಕಾರಣ ಇನ್ನೂ ಮಾಡಿದ ಅಡುಗೆಯನ್ನು ಊಟ ಮಾಡುವವರು ಎಂದೂ ಅಡುಗೆಯನ್ನೇ ಮಾಡಲಿಲ್ಲವೆನ್ನಲಾಗಿದೆ.

(ಕನ್ನಡ ಪ್ರಭ)

ಹೊನ್ನಾವರ, ಜು. 2 : ತಾಲ್ಲೂಕಿನದ್ಯಂತ ಹಲವು ಶಾಲೆಗಳಲ್ಲಿ ಪರಿಶಿಷ್ಟ ಜಾತಿಯ ಮಹಿಳೆಯರನ್ನು ಅಡಿಗೆಗಾಗಿ ನೇಮಕ ಮಾಡಲಾಗಿದೆ. ಆದರೆ ಇದರ ಬೆನ್ನಲ್ಲೇ ಮೇಲ್ವರ್ಗದವರು ಎಂದು ಹೇಳಿಕೊಳ್ಳುವ ಕೆಲವು ಸಮುದಾಯದವರು ತಮ್ಮ ಮಕ್ಕಳನ್ನು ಶಾಲೆಯ ಈ ಬಿಸಿಯೂಟಕ್ಕೆ ಕಳುಹಿಸಲು ಸಾಧ್ಯವಿಲ್ಲ ಎಂದು ಅಪಸ್ವರ ಎತ್ತುತ್ತಿದ್ದಾರೆ.

ಕರ್ಕಿ ಗ್ರಾಮದ ರಾಮೇಶ್ವರ ಕಂಬಿಯಲ್ಲಿ ಅಡಿಗೆ ಸಹಾಯಕಿಯಾಗಿ ಪಾರ್ವತಿ ನಾರಾಯಣ ಮುಕ್ರಿ ಎಂಬ ಮಹಿಳೆ ನೇಮಕಗೊಂಡಿದ್ದರಿಂದ ಊರಿನವರು ಈ ಬಗ್ಗೆ ತೀವ್ರವಾಗಿ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಅದಕ್ಕಾಗಿಯೇ ಬೇರೆ ನೆಪ ಒಡ್ಡಿ ತಮ್ಮ ಶಾಲೆಗೆ ಬಿಸಿಯೂಟ ಯೋಜನೆಯೇ ಬೇಡ ಎಂದು ಪಟ್ಟು ಹಿಡಿದಿದ್ದಲ್ಲದೆ, ತಮ್ಮ ಮಕ್ಕಳ ಆರೋಗ್ಯ ತಮಗೆ ಮುಖ್ಯ. ಹಾಗಾಗಿ ನಮ್ಮ ನಮ್ಮ ಮನೆಯಲ್ಲಿಯೇ ಊಟ ಮಾಡಿಸುತ್ತೇವೆ ಎಂದು ಶಾಲೆಯ ಎಸ್‌ಡಿಎಂಸಿ ಹಾಗೂ ಗ್ರಾಮಸ್ಥರೆಲ್ಲ ಸೇರಿ ಠರಾವು ಪಾಸು ಮಾಡಿ ಸಹಶೀಲ್ದಾರರಿಗೆ ಮನವಿ ಅರ್ಪಿಸಿದ್ದಾರೆ.

(ಪ್ರಜಾವಾಣಿ)

ವಿವಸ್ತ್ರಗೊಳಿಸಿ ದಲಿತ ಮಹಿಳೆಗೆ ಅಪಮಾನ

ತುಮಕೂರು, ಜು. 21 : ಜಮೀನು ವಿವಾದವೊಂದರ ಹಿನ್ನೆಲೆಯಲ್ಲಿ, ಮಧುಗಿರಿ ತಾಲ್ಲೂಕು ಮಿಡಿಗೇಶಿ ಠಾಣಾ ವ್ಯಾಪ್ತಿಯ ಕಸಾಪುರದ ದಲಿತ ಮಹಿಳೆ ಪುಟ್ಟಮ್ಮ ಎಂಬ ಮಹಿಳೆಯನ್ನು ವಿವಸ್ತ್ರಗೊಳಿಸಿ, ಚಿತ್ರಹಿಂಸೆ ನೀಡಿ ಗಾಯಗೊಳಿಸಿದ ಘಟನೆ ನಡೆದಿದೆ.

ಇದಕ್ಕೆ ಮುಂಚೆ ಘಟನೆ ನಡೆದ ತಕ್ಷಣವೆ ಸದರಿ ಮಹಿಳೆ ದೂರು ನೀಡಿದರೆ, ಅದನ್ನು ಹರಿದು ಹಾಕಿದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ರಾಜಕೀಯ ಒತ್ತಡಕ್ಕೆ ಮಣಿದಂತೆ ವರ್ತಿಸಿದ್ದಾರೆ.

ಘಟನೆಗೆ ಕಾರಣರಾದ ಸದರಿ ಗ್ರಾಮದ ಸವರ್ಣೀಯರಾದ ಗೋವಿಂದಪ್ಪ ಮತ್ತು ಆತನ ಮಗನಾದ ಸುರೇಶ್ ಎಂಬುವರು, ದಲಿತ ಮಹಿಳೆಗೆ ಅವಮಾನ, ಹಿಂದೆ ಮಾಡಿರುವುದಲ್ಲದೆ, ಆಕೆಯನ್ನೂ ಕೊಲೆ ಮಾಡುವ ಬೆದರಿಕೆಯನ್ನೂ ಹಾಕಿದ್ದಾರೆಂದು ತಿಳಿದು ಬಂದಿದೆ.

(ಜನವಾಹಿನಿ)

ವಿವಾಹಕ್ಕೆ ಅಡ್ಡಿ : ಸಾವು

ನೆಲಮಂಗಲ, ಜು. 2 : ನವ ತರುಣ-ತರುಣಿಯ ನಡುವೆ ವ್ಯಾಸಂಗದ ದಿನಗಳಲ್ಲಿ ಅಂಕುರಿಸಿದ ಪ್ರೇಮವು ವಿವಾಹದತ್ತ ನಡೆದಾಗ ಜಾತಿ ಲೇಪನ ಮತ್ತು ಬಂಧುಗಳಿಂದ ಅಪಸ್ವರ ಎದುರಾಗಿದ್ದ ಹಿನ್ನೆಲೆಯಲ್ಲಿ ಅಮರ ಪ್ರೇಮಿಗಳಿಬ್ಬರು ವಿಷ ಕುಡಿದು, ಯುವತಿ ಮೃತಪಟ್ಟು ಯುವಕ ತೀವ್ರ ಅಸ್ವಸ್ಥನಾಗಿರುವ ಘಟನೆ ದಾಬಸ್‌ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಶಿವಗಂಗೆಯಲ್ಲಿ ಇಂದು ನಡೆದಿದೆ.

ಪ್ರೇಮಿಗಳಿಬ್ಬರೂ ವಿಭಿನ್ನ ಜಾತಿಯವರಾದ್ದರಿಂದ ಮನೆಯವರಿಂದ ಆಕ್ಷೇಪ ವ್ಯಕ್ತವಾಯಿತು. ಮನೆಯವರ ಆಕ್ಷೇಪವನ್ನು ಉಪೇಕ್ಷಿಸಲಾಗದೇ ವಿರೋಧವನ್ನು ಎದುರಿಸಲಾಗದೆ ಮನೆಯಿಂದ ಇಬ್ಬರೂ ಹೊರ ಬಂದರು. ಅಂದು ಬೆಳಿಗ್ಗೆ ಶಿವಗಂಗೆ ಬೆಟ್ಟ ತಲುಪಿದರು. ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದರು.

(ಸಂಯುಕ್ತ ಕರ್ನಾಟಕ)

ಬೌದ್ಧಧಮ್ಮದ ಮೂಲ ಪರಿಕಲ್ಪನೆಗಳು

1) ಬುದ್ಧನ ಪ್ರಮುಖ ಉಪದೇಶಗಳಾವುವು?

ಬುದ್ಧನ ಅನೇಕಾನೇಕ ಉಪದೇಶಗಳು "ಚತುಃ ಸತ್ಯ"ಗಳ ಪರಿಧಿಯಲ್ಲೇ ಸುಳಿಯುತ್ತವೆ. ಅಕ್ಷದ ಸುತ್ತ ಗಾಲಿಯ ಅರಗಳು ಸುತ್ತುವ ಹಾಗೆ. "ಚತುಃ" ಅಥವಾ ನಾಲ್ಕು ಎಂದು ಕರೆಯಲು ಕಾರಣ ಅವು ಸಂಖ್ಯೆಯಲ್ಲಿ ನಾಲ್ಕಾಗಿರುವುದು. ಅವುಗಳನ್ನು "ಉದಾತ್ತ" ಎನ್ನಲು ಕಾರಣ, ಅವುಗಳನ್ನು ಅರ್ಥಮಾಡಿಕೊಂಡವನು ಉದಾತ್ತ ಮನೋಭಾವದವನಾಗುತ್ತಾನೆ ಎಂಬುದು. ಹಾಗೆಯೇ ಅವು "ಸತ್ಯ"ಗಳು, ಏಕೆಂದರೆ ವಾಸ್ತವತೆಗೆ ಅನುಗುಣವಾಗಿ ಸತ್ಯಗಳಾಗಿರುವುದರಿಂದ.

2) ಮೊದಲನೆಯ ಉದಾತ್ತ ಸತ್ಯ ಯಾವುದು?

ಮೊದಲನೆಯ ಉದಾತ್ತ ಸತ್ಯವೆಂದರೆ ದುಃಖ. ಬದುಕಲು ದುಃಖವನ್ನು ಅನುಭವಿಸುವುದು ಅನಿವಾರ್ಯ. ಯಾವುದಾದರೊಂದು ಬಗೆಯ ದುಃಖವನ್ನು ಅನುಭವಿಸದೇ ಬದುಕುವುದು ಅಸಾಧ್ಯ. ಕಾಯಿಲೆ, ಗಾಯ, ದಣಿವು, ಮುಪ್ಪು ಮತ್ತು ಅಂತಿಮವಾಗಿ ಸಾವು-ಇಂತಹ ದೈಹಿಕ ಯಾತನೆಯನ್ನು ನಾವು ಸಹಿಸಿಕೊಳ್ಳಲೇಬೇಕು. ಹಾಗೆಯೇ ಮಾನಸಿಕ ಯಾತನೆಗಳಾದ ಏಕಾಕಿತನ, ಹತಾಶೆ, ಭಯ, ಮುಜುಗರ, ನಿರಾಸೆ, ಕೋಪಗಳಂತಹವನ್ನೂ ನಾವು ಭರಿಸಬೇಕು.

3) ಇದು ಸ್ವಲ್ಪ ನಿರಾಶಾಭಾವನೆ ಎನ್ನಿಸುವುದಿಲ್ಲವೇ?

ನಿಘಂಟು ನಿರಾಸೆಯನ್ನು ವಿವರಿಸುವುದು ಹೀಗೆ: "ಏನು ಸಂಭವಿಸಲಿದೆಯೋ ಅದು ಕೆಟ್ಟದಾಗಿರುತ್ತದೆ ಎಂದು ಯೋಚಿಸುವ ಅಭ್ಯಾಸ" ಅಥವಾ, "ಕೆಡುಕು ಒಳಿತಿಗಿಂತ ಹೆಚ್ಚು ಶಕ್ತಿಶಾಲಿ ಎಂಬ ನಂಬಿಕೆ" ಬೌದ್ಧಧಮ್ಮವು ಈ ಎರಡನ್ನೂ ಬೋಧಿಸುವುದಿಲ್ಲ. ಅಲ್ಲದೆ, ಸಂತೋಷ ಇಲ್ಲ ಎಂದೂ ಪ್ರತಿಪಾದಿಸುವುದಿಲ್ಲ. ಬದುಕುವುದು ಎಂದರೆ ದೈಹಿಕ ಮತ್ತು ಮಾಸಿಕ ದುಃಖದ ಅನುಭವವನ್ನು ಹೊಂದುವುದು ಎಂದಷ್ಟೇ ಅದು ಹೇಳುತ್ತದೆ. ಇದು ಅಲ್ಲಗಳೆಯಲಾಗದ ವಸ್ತುಸ್ಥಿತಿ. ಬಹುತೇಕ ಧರ್ಮಗಳ ಕೇಂದ್ರ ಬಿಂದುವೆಂದರೆ, ತಾಳೆ ನೋಡಲು ಅಸಾಧ್ಯವಾದ ಪೌರಾಣಿಕತೆ, ಐತಿಹ್ಯ ಅಥವಾ ನಂಬಿಕೆಯಾಗಿರುತ್ತದೆ. ಬೌದ್ಧಧಮ್ಮದ ಆರಂಭಸ್ಥಾನವೆಂದರೆ ನಿರಾಕರಿಸಲಾಗದ ವಸ್ತುಸ್ಥಿತಿ, ಎಲ್ಲರಿಗೂ ತಿಳಿದಿರುವ ಹಾಗೂ ಎಲ್ಲರೂ ಅನುಭವಿಸುವ ಮತ್ತು ಎಲ್ಲರೂ ನಿವಾರಿಸಿಕೊಳ್ಳಲು ಬಯಸುವ ಅನುಭವದಿಂದ ಅದು ಆರಂಭಿಸುತ್ತದೆ. ಹೀಗಾಗಿ ಬೌದ್ಧಧಮ್ಮ ಮಾತ್ರವೇ ನಿಜವಾದ ಮತ್ತು ಏಕೈಕವಾದ ವಿಶ್ವಧರ್ಮ. ಅದು ಪ್ರತಿ ಮಾನವನ ಕಾಳಜಿಯಾದ ದುಃಖ ಮತ್ತು ಅದರ ನಿವಾರಣೆ-ಇವುಗಳ ಬಗ್ಗೆ ನೇರವಾಗಿ ಚಿಂತಿಸುತ್ತದೆ.

4) ಎರಡನೆಯ ಉದಾತ್ತ ಸತ್ಯವಾವುದು?

ಎರಡನೆಯ ಉದಾತ್ತ ಸತ್ಯವೆಂದರೆ, ದುಃಖಕ್ಕೆ ಕಾರಣ ಆಸೆ ಎಂಬುದು. ಮಾನಸಿಕ ದುಃಖದ ಬಗ್ಗೆ ವಿಶ್ಲೇಷಿಸಿದರೆ

ಪರಸ್ಪರ ಪ್ರೀತಿ-ಗೌರವ, ಶಾಂತಿ-ಸಮಾನತೆ ಮತ್ತು ಶಾಂತಿ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧದಮ್ಮ ಜಗತ್ತಿನೆಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ Good Question and Good Answer ಪುಸ್ತಕ ಕನ್ನಡಾನುವಾದವನ್ನು ಓದಿಗರಿಗಾಗಿ ನೀಡುತ್ತಿದೆ. ಅನುವಾದಿಸಿರುವವರು ಡಾ|| ಪಿ.ವಿ. ನಾರಾಯಣ್

ದುಃಖಕ್ಕೆ ಆಸೆ ಹೇಗೆ ಕಾರಣ ಎಂಬುದು ಸುಲಭವಾಗಿ ವಿದಿತವಾಗುತ್ತದೆ. ನಾವು ಯಾವುದಕ್ಕೋ ಆಸೆಪಡುತ್ತೇವೆ. ಆದರೆ ಅದನ್ನು ಪಡೆಯಲು ನಮ್ಮಿಂದಾಗುವುದಿಲ್ಲ. ಆಗ ನಾವು ಹತಾಶರಾಗುತ್ತೇವೆ. ನಾವು ಬಯಸಿದ ರೀತಿಯಲ್ಲಿ ಬೇರೆಯವರು ಇರಬೇಕು ಎಂದು ನಾವು ನಿರೀಕ್ಷಿಸಿ, ಅವರು ಹಾಗೆ ಮಾಡಿದದ್ದರೆ ನಮಗೆ ನೋವಾಗುತ್ತದೆ. ನಾವು ಬಯಸಿದ್ದನ್ನು ಕೆಲವೇಳೆ ಪಡೆದರೂ, ಇದರಿಂದ ಯಾವಾಗಲೂ ಸಂತೋಷವೇ ಉಂಟಾಗುವುದೆಂದೂ ಹೇಳಲಾಗುವುದಿಲ್ಲ; ಏಕೆಂದರೆ, ಬಹು ಬೇಗ ಅದು ನಮಗೆ ಬೇಸರ ತರುತ್ತದೆ. ಅದರಲ್ಲಿ ನಿರಾಸಕ್ತಿ ಮೂಡುತ್ತದೆ, ನಾವು ಅದನ್ನು ಬಿಟ್ಟು ಬೇರೊಂದನ್ನು ಬಯಸುತ್ತೇವೆ. ಸರಳವಾಗಿ ಹೇಳಬೇಕೆಂದರೆ, ಎರಡನೆಯ ಉದಾತ್ತ ಸತ್ಯವು ಪ್ರತಿಪಾದಿಸುವುದು ಏನೆಂದರೆ, ಬಯಸಿದ್ದನ್ನು ಪಡೆಯುವುದರಿಂದ ಸಂತೋಷವು ಖಚಿತ ಎಂದು ಹೇಳಲಾಗುವುದಿಲ್ಲ ಎಂಬುದನ್ನು, ಬಯಸಿದ್ದನ್ನು ಪಡೆಯಲು ನಾವು ನಿರಂತರವಾಗಿ ಹೆಣಗಾಡುವುದರ ಬದಲು, ನಮ್ಮ ಆಸೆಯ ಸ್ವರೂಪವನ್ನೇ ಮಾರ್ಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಆಸೆಯಿಂದ ತೃಪ್ತಿ ಮತ್ತು ಆನಂದಗಳು ದೂರವಾಗುತ್ತವೆ.

5) ಆಸೆ ಮತ್ತು ಕೊರತೆ ಇವುಗಳು ನಮ್ಮ ದೈಹಿಕ ಯಾತನೆಗೆ ಹೇಗೆ ಕಾರಣವಾಗುತ್ತವೆ?

ಜೀವನಪರ್ಯಂತ ಅದು ಬೇಕು ಇದು ಬೇಕು ಎಂದು ಹಂಬಲಿಸುತ್ತಿರುವುದರಿಂದ, ಅದರಲ್ಲೂ ಬದುಕು ಮುಂದುವರೆಯುತ್ತಲೇ ಇರಬೇಕು ಎಂಬುದರಿಂದ, ವ್ಯಕ್ತಿಯ ಪುನರ್‌ಜನ್ಮ ಪಡೆಯಲು ಸಾಕಾಗುವಂತಹ ಪ್ರಬಲ ಶಕ್ತಿಯನ್ನು ಉತ್ಪಾದಿಸುತ್ತದೆ. ನಾವು ಮತ್ತೆ ಹುಟ್ಟಿದಾಗ, ನಮಗೊಂದು ದೇಹವಿರುತ್ತದೆ; ಹಿಂದೆಯೇ ಹೇಳಿದಂತೆ, ದೇಹವು ಗಾಯ ರೋಗಗಳಿಗೆ ಪಕ್ಕಾಗುತ್ತದೆ; ಕೆಲಸದಿಂದ ದೇಹವು ಬಳಲುತ್ತದೆ; ಮುಪ್ಪನ್ನು ಪಡೆದು ಕೊನೆಗೆ ಸಾಯುತ್ತದೆ. ಹೀಗೆ, ಆಸೆಯು ಪುನರ್ಜನ್ಮಕ್ಕೆ ಕಾರಣವಾಗಿ ದೈಹಿಕ ಯಾತನೆ ನಿರಂತರವಾಗಲು ಕಾರಣವಾಗುತ್ತದೆ.

6) ಅದು ಸರಿ, ಬಯಕೆಯನ್ನು ಸಂಪೂರ್ಣವಾಗಿ ತೊರೆದರೆ, ನಾವು ಯಾವುದನ್ನೂ ಪಡೆಯಲು ಅಥವಾ ಸಾಧಿಸಲು ಸಾಧ್ಯವಾಗುವುದಿಲ್ಲವಲ್ಲ.

ನಿಜ. ಆದರೆ ಬುದ್ಧ ಹೇಳುವುದೇನೆಂದರೆ, ನಮ್ಮ ಆಸೆಗಳು, ಬಯಕೆಗಳು ಹಾಗೂ ನಾವು ಪಡೆದಿರುವುದರ ಬಗ್ಗೆ ನಿರಂತರ ಅತೃಪ್ತಿ. ಹೆಚ್ಚು ಹೆಚ್ಚಿನದನ್ನು ಬಯಸುತ್ತಲೇ ಇರುವುದು ನಮ್ಮ ಯಾತನೆಗೆ ಕಾರಣವಾಗುತ್ತದೆ. ಹಾಗಾಗಿ ಇದನ್ನು ನಾವು ನಿಲ್ಲಿಸಬೇಕು ಎಂದು. ಅವಶ್ಯಕತೆ ಹಾಗೂ ಆಸೆ ಇವುಗಳ ನಡುವಣ ವ್ಯತ್ಯಾಸವನ್ನು ಬುದ್ಧ ಸ್ಪಷ್ಟಪಡಿಸಿ, ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತ ಆಸೆಗಳನ್ನು ಮಾರ್ಪಡಿಸಿಕೊಳ್ಳಬೇಕೆಂಬುದನ್ನು ಆತ ಸೂಚಿಸುತ್ತಾನೆ. ಅವಶ್ಯಕತೆಗಳನ್ನು ಪೂರೈಸಬಹುದು. ಆದರೆ ಆಸೆಗಳಿಗೆ ಕೊನೆಯೇ ಇಲ್ಲ. ಅದೊಂದು ತಳವಿರದ ಪಾತಾಳ ಎಂಬುದು ಬುದ್ಧನ ವಿಶ್ಲೇಷಣೆ. ಕೆಲವು ಅನಿವಾರ್ಯವಾದ ಅವಶ್ಯಕತೆಗಳಿವೆ. ಅವುಗಳು ಮೂಲಭೂತವಾದವು ಮತ್ತು ಅವುಗಳನ್ನು ಪಡೆಯಬಹುದು; ಇವುಗಳನ್ನು ಪೂರೈಸಿಕೊಳ್ಳಲು ನಾವು

ಪ್ರಯತ್ನಿಸಬೇಕು ಕೂಡ. ಇದರಿಂದ ಹೊರತಾದ ಆಸೆಗಳು ಬಯಕೆಗಳನ್ನು ಕ್ರಮೇಣ ಕಡಿಮೆ ಮಾಡಿಕೊಳ್ಳಬೇಕು. ನಮ್ಮ ಬದುಕಿನ ಉದ್ದೇಶವೇನು? ಸಂತೃಪ್ತಿ ಅಥವಾ ಸಂತೋಷವನ್ನು ಹೊಂದುವುದು ತಾನೇ?

7) ನೀವು ಪುನರ್ಜನ್ಮದ ಬಗೆ ಮಾತಾಡಿದರಿ. ಆದರೆ ಪುನರ್ಜನ್ಮವಿದೆ ಎಂಬುದಕ್ಕೆ ಏನಾದರೂ ಆಧಾರವಿದೆಯೇ?

ಇದೆ ಎಂಬುದಕ್ಕೆ ಬೇಕಾದಷ್ಟು ಪುರಾವೆಗಳಿವೆ. ಇವುಗಳ ಬಗ್ಗೆ ಆಮೇಲೆ ವಿಶದವಾಗಿ ಪರಿಶೀಲನೆ ಮಾಡೋಣ.

8) ಮೂರನೆಯ ಉದಾತ್ತ ಸತ್ಯವಾವುದು?

ಮೂರನೆಯ ಉದಾತ್ತ ಸತ್ಯವೆಂದರೆ, ದುಃಖವನ್ನು ನಿವಾರಿಸಿ ಸಂತೋಷವನ್ನು ಸಾಧಿಸಬಹುದು ಎಂಬುದು. ಪ್ರಾಯಶಃ ಇದು ಚತುಃ ಸತ್ಯಗಳಲ್ಲಿ ಅತ್ಯಂತ ಪ್ರಮುಖವಾದುದು. ಏಕೆಂದರೆ, ಇದರ ಮೂಲಕ ನಿಜವಾದ ಆನಂದ ಮತ್ತು ತೃಪ್ತಿಗಳನ್ನು ಪಡೆಯಲು ಸಾಧ್ಯ ಎಂದು ಬುದ್ಧ ನಮಗೆ ಭರವಸೆ ನೀಡುತ್ತಾನೆ. ಉಪಯುಕ್ತವಿಲ್ಲದ ಆಸೆಗಳನ್ನು ತೊರೆದು ಅಂದಂದಿನ ಬದುಕನ್ನು ಬಾಳಲು ಕಲಿತರೆ, ತಹತಹವನ್ನುಂಟು ಮಾಡುವ ಆಸೆಗಳನ್ನು ಬಿಟ್ಟು ಬದುಕು ನೀಡುವ ಅನುಭವಗಳನ್ನು ಸವಿಯಲು ಸಾಧ್ಯವಾಗುವುದಾದರೆ, ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಭಯ-ದ್ವೇಷ-ಕೋಪಗಳಿಲ್ಲದೆ ತಾಳ್ಮೆಯಿಂದ ಎದುರಿಸಲು ಆಗುವುದಾದರೆ, ಸಂತೋಷ ಒದಗಿ ನಾವು ಮುಕ್ತರಾಗುತ್ತೇವೆ. ಆಗ ಮಾತ್ರ ನಾವು ಪೂರ್ಣ ಪ್ರಮಾಣದಲ್ಲಿ ಬದುಕಲು ಸಾಧ್ಯವಾಗುವುದು. ಏಕೆಂದರೆ ಆಗ ನಮ್ಮ ಸ್ವಾರ್ಥಪರ ಬಯಕೆಗಳನ್ನು ಪೂರೈಸಿಕೊಳ್ಳುವ ಗುಂಗು ನಮ್ಮನ್ನಾವರಿಸಿರುವುದಿಲ್ಲ. ಹೀಗಾಗಿ ಇತರರ ಬಯಕೆಗಳನ್ನು ಪೂರೈಸಲು ನಮಗೆ ಬೇಕಾದಷ್ಟು ಬಿಡುವು ದೊರೆಯುತ್ತದೆ. ಇದನ್ನೇ ನಿರ್ವಾಣ ಸ್ಥಿತಿ ಎಂದು ಕರೆಯುವುದು. ಇದರಿಂದ ನಾವು ಎಲ್ಲ ಬಗೆಯ ಮಾನಸಿಕ ಕೋಟಲೆಗಳಿಂದ ಬಿಡುಗಡೆ ಗೊಂಡಿರುತ್ತೇವೆ. ಇದನ್ನು ಅಂತಿಮ ನಿರ್ವಾಣ ಸ್ಥಿತಿ ಎನ್ನಲಾಗುತ್ತದೆ.

9) ನಿರ್ವಾಣವೆಂದರೆ ಏನು ಮತ್ತು ಅದು ಎಲ್ಲಿರುತ್ತದೆ?

ಇದು ಕಾಲದೇಶಾತೀತವಾದದ್ದು; ಆದರಿಂದಾಗಿ ಅದರ ಬಗ್ಗೆ ಮಾತನಾಡುವುದಾಗಲೀ ಯೋಚಿಸುವುದಾಗಲೀ ಕಷ್ಟ. ಕಾಲದೇಶ ಬದ್ಧವಾಗಿರುವುದರ ಬಗ್ಗೆ ಮಾತ್ರ ನಾವು ಮಾತನಾಡಬಹುದು. ಆಲೋಚಿಸಬಹುದು. ಆದರೆ ನಿರ್ವಾಣವು ಕಾಲತೀತವಾದ್ದರಿಂದಾಗಿ, ಅದು ಚಲನರಹಿತವಾದದ್ದು; ಅಂದರೆ ಅಲ್ಲಿ ವಯಸ್ಸಾಗುವುದೂ ಇಲ್ಲ. ಸಾವೂ ಇಲ್ಲ. ಹೀಗಾಗಿ ನಿರ್ವಾಣ ಚಿರಂತನವಾದದ್ದು. ಅದು ದೇಶಾತೀತವಾದ್ದರಿಂದಾಗಿ, ಅಲ್ಲಿ ಕಾರಣ ಹಾಗೂ ಎಲ್ಲೆಗಳಿಲ್ಲ. ಸ್ವಂತದ್ದು ಸ್ವಂತದಲ್ಲದ್ದು ಎಂಬ ಪ್ರಶ್ನೆಯಿಲ್ಲ; ಆದ್ದರಿಂದ ಅದು ಚಿರಂತನವಾಗಿರುತ್ತದೆ. ನಿರ್ವಾಣವೆಂಬುದು ಅತ್ಯಾನಂದದ ಅನುಭವವನ್ನು ನೀಡುವಂಥದ್ದು ಎಂದೂ ಬುದ್ಧ ನಮಗೆ ಅಭಯ ನೀಡುತ್ತಾನೆ. ಅವನು ಹೇಳುವುದೆಂದರೆ :



ಅವಶ್ಯಕತೆ ಹಾಗೂ ಆಸೆ ಇವುಗಳ ನಡುವಣ ವ್ಯತ್ಯಾಸವನ್ನು ಬುದ್ಧ ಸ್ಪಷ್ಟಪಡಿಸಿ, ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತ ಆಸೆಗಳನ್ನು ಮಾರ್ಪಡಿಸಿಕೊಳ್ಳಬೇಕೆಂಬುದನ್ನು ಆತ ಸೂಚಿಸುತ್ತಾನೆ. ಅವಶ್ಯಕತೆಗಳನ್ನು ಪೂರೈಸಬಹುದು. ಆದರೆ ಆಸೆಗಳಿಗೆ ಕೊನೆಯೇ ಇಲ್ಲ.

"ನಿರ್ವಾಣವು ಲೋಕೋತ್ತರ ಆನಂದ"

-ಧರ್ಮಪದ 204

9) ಇಂತಹ ಒಂದು ಸ್ಥಿತಿ ಇದೆ ಎಂಬುದಕ್ಕೆ ಯಾವುದಾದರೂ ಆಧಾರವಿದೆಯೇ?

ಇಲ್ಲ, ಯಾವುದೂ ಇಲ್ಲ. ಆದರೆ ಅದರ ಇರುವಿಕೆಯನ್ನು ಊಹಿಸಿಕೊಳ್ಳಬಹುದು. ದೇಶಕಾಲಗಳು ಕ್ರಿಯಾಶೀಲವಾಗಿರುವ ಒಂದು ಸ್ಥಿತಿ ಇರುವುದಾದರೆ- ಅಂದರೆ, ಅದೇ ನಾವು ಅನುಭವಿಸುವ ಜಗತ್ತು- ದೇಶಕಾಲಗಳು ಕ್ರಿಯಾಶೀಲವಾಗಿರದ ಒಂದು ಸ್ಥಿತಿಯನ್ನು ನಾವು ಊಹಿಸಿಕೊಳ್ಳಬಹುದು. ಅದೇ ನಿರ್ವಾಣ, ಅಲ್ಲದೆ, ನಿರ್ವಾಣ ಸ್ಥಿತಿಯನ್ನು ನಾವು ಸಾಧಿಸಿ ತೋರಿಸಲು ಸಾಧ್ಯವಿಲ್ಲವಾದರೂ, ಅದು ಇದೆ ಎಂಬುದಕ್ಕೆ ಬುದ್ಧನ ಮಾತುಗಳೇ ಆಧಾರ:

ಇನ್ನೂ ಹುಟ್ಟರದ, ಇನ್ನೂ ಆಗಿರದ, ಇನ್ನೂ ಮಾಡಿರದ, ಇನ್ನೂ ಸಂಯೋಜನೆಗೊಳ್ಳದ ಒಂದು ಇದೆ. ಈ ಇನ್ನೂ ಹುಟ್ಟರದ, ಇನ್ನೂ ಆಗಿರದ, ಇನ್ನೂ ಮಾಡಿದರದ, ಇನ್ನೂ ಸಂಯೋಜನೆಗೊಳ್ಳದ ಒಂದು ಇಲ್ಲದಿದ್ದರೆ, ಹುಟ್ಟಿರುವ, ಆಗಿರುವ, ಮಾಡಿರುವ ಹಾಗೂ ಸಂಯೋಜನೆಗೊಂಡಿರುವ ಸ್ಥಿತಿಯನ್ನು ನಿರ್ಮಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಈ ಇನ್ನೂ ಹುಟ್ಟರದ, ಇನ್ನೂ ಆಗಿರದ, ಇನ್ನೂ ಮಾಡಿರದ, ಇನ್ನೂ ಸಂಯೋಜನೆಗೊಳ್ಳದ ಒಂದು ಇರುವುದರಿಂದಾಗಿ, ಹುಟ್ಟಿರುವ, ಆಗಿರುವ, ಮಾಡಿರುವ ಹಾಗೂ ಸಂಯೋಜನೆಗೊಂಡಿರುವುದರಿಂದ ಪಾರಾಗುವುದನ್ನು ತಿಳಿದುಕೊಳ್ಳಬಹುದು. ಅದನ್ನು ಪಡೆದಾಗಲೇ ನಮಗೆ ಅದು ತಿಳಿಯುವುದು. ಆ ಕಾಲದವರೆಗೂ ನಾವು ಅಭ್ಯಾಸ ಮುಂದುವರೆಸಬಹುದು.

9) ನಾಲ್ಕನೆಯ ಉದಾತ್ತ ಸತ್ಯವಾವುದು?

ನಾಲ್ಕನೆಯ ಉದಾತ್ತ ಸತ್ಯವೆಂದರೆ, ದುಃಖವನ್ನು ನಿವಾರಿಸಿಕೊಳ್ಳಬಹುದಾದ ಮಾರ್ಗ. ಇದನ್ನು ಅಷ್ಟಾಂಗಿಕ ಮಾರ್ಗ ಎನ್ನುತ್ತಾರೆ. ಆ ಎಂಟು ಅಂಶಗಳೆಂದರೆ, ಸರಿಯಾದ ತಿಳಿವಳಿಕೆ, ಸರಿಯಾದ ಆಲೋಚನೆ, ಸರಿಯಾದ ಮಾತು, ಸರಿಯಾದ ಕ್ರಿಯೆ, ಸರಿಯಾದ ಜೀವನೋಪಾಯ, ಸರಿಯಾದ ಪ್ರಯತ್ನ, ಸರಿಯಾದ ಮನಸ್ಸು ಮತ್ತು ಸರಿಯಾದ ಚಿತ್ತೈಕಾಗ್ರತೆ. ಬೌದ್ಧನೊಬ್ಬನ ಸಾಧನೆಯೆಂದರೆ ಈ ಎಂಟು ಅಂಶಗಳನ್ನು ಮತ್ತಷ್ಟು ಪಕ್ವಗೊಳ್ಳುವವರೆಗೂ ಅಭ್ಯಾಸಮಾಡುವುದು. ಈ ಅಷ್ಟಾಂಗಿಕ ಮಾರ್ಗವು ಜೀವನದ ಎಲ್ಲ ಮಗ್ಗುಲುಗಳನ್ನೂ ಒಳಗೊಳ್ಳು ವುದೆಂಬುದನ್ನು ನೀವು ಗಮನಿಸಬಹುದು; ಬೌದ್ಧಿಕ, ನೈತಿಕ, ಸಾಮಾಜಿಕ-ಆರ್ಥಿಕ ಮತ್ತು ಸಾಮಾಜಿಕ; ಹಾಗಾಗಿ ಇದು ಒಬ್ಬನು ಒಳ್ಳೆಯ ಜೀವನವನ್ನು ನಡೆಸಲು ಆಧ್ಯಾತ್ಮಿಕವಾಗಿ ಬೆಳೆಯಲು ಬೇಕಾದ ಎಲ್ಲವನ್ನೂ ಒಳಗೊಂಡಿದೆ.

(ಮುಂದುವರಿಯುವುದು)

ಪುಸ್ತಕ ಬೇಕಾದಲ್ಲಿ

ಬುದ್ಧ ಜ್ಯೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ. ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ
ಇವರಿಗೆ ಬರೆದು ತರಿಸಿಕೊಳ್ಳಬಹುದು.
ಬೆಲೆ ರೂ. 30/-



ದಯವಿಟ್ಟು ಓದಿರಿ

"ಜಂಗಮಕ್ಕೆ ಜಾತಿಯಿಲ್ಲ ಲಿಂಗಕ್ಕೆ ಹೊಲೆಯಿಲ್ಲ" ಎಂಬುದು ಲಿಂಗಾಯತ ಧರ್ಮದ ಮೂಲ ಸೂಕ್ತಿ. ಆದರೆ ಪುರೋಹಿತಶಾಹಿಗಳ ಕುತಂತ್ರ ಮತ್ತು ಆಡಳಿತ ಶಾಹಿಯ ಆಘಾತದಿಂದಾಗಿ ಶರಣ ಚಳವಳಿಯಲ್ಲಿದ್ದವರೆಲ್ಲರೂ ಚದುರಬೇಕಾಯಿತು. ಹೀಗೆ ಚದುರಿ ಹೋದ ಶರಣರಲ್ಲಿ ಅಸ್ಪೃಶ್ಯ ಮೂಲದ ಹೊಲೆಯರ ಉರಿಲಿಂಗ ಪೆದ್ದಿಯ ಕುಲವೂ ಒಂದು. ಅತ್ತ ಲಿಂಗಾಯಿತರಿಂದಲೂ ಇತ್ತ ಹೊಲೆಯರಿಂದಲೂ ದೂರಾಗಿ ತ್ರಿಶಂಕು ಸ್ಥಿತಿಯಲ್ಲಿರುವ ಈ ವರ್ಗದ ಇತಿಹಾಸ, ಬದುಕು, ವಾಸ್ತವದತ್ತ ಡಾ|| ಸಾಹುಕಾರ್ ಎಸ್. ಕಾಂಬಳೆಯವರು ನಡೆಸಿದ ಪಿಹೆಚ್‌ಡಿ ಸಂಶೋಧನಾ ಕೃತಿಯೇ 'ಲಿಂಗಾಯಿತ ಅಸ್ಪೃಶ್ಯರು'.

ಪ್ರತಿಗಳಿಗಾಗಿ ಸಂಪರ್ಕಿಸಿ : **ವೀರಶೈವ ಅಧ್ಯಯನ ಸಂಸ್ಥೆ,** ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ-582 101

ಬೆಲೆ : ರೂ. **75/-**



ಕನ್ನಡ ಸಾಹಿತ್ಯದ ಇತ್ತೀಚಿನ ತಲೆಮಾರಿನ ವಿಶಿಷ್ಟ ರೀತಿಯ ಸಂವೇದನಾ ಶೀಲ ಲೇಖಕರಲ್ಲಿ ಡಾ|| ನಟರಾಜ್ ಹುಳಿಯಾರ್ ಪ್ರಮುಖರು. ನಾಡಿನ ಪ್ರಗತಿಪರ ಚಳುವಳಿಗಳಲ್ಲೂ ಸಕ್ರಿಯರಾಗಿರುವ ಇವರು ಕಳೆದ 3-4ವರ್ಷಗಳ ಹಿಂದೆ ಲಂಕೇಶ್ ಪತ್ರಿಕೆಯಲ್ಲಿ ಅಂಕಣಕಾರರಾಗಿ ಬರೆದ ಕೆಲವು ಪ್ರಮುಖ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಿಮರ್ಶಾ ಬರಹಗಳನ್ನು ತಮ್ಮ **'ಗಾಳಿ ಬೆಳಕು'** ಕೃತಿಯಲ್ಲಿ ಸಂಕಲಿಸಿದ್ದಾರೆ. ಸಮಕಾಲೀನ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದ ಸೃಜನಶೀಲ ಓದುಗರಿಗೆ ಇದೊಂದು ಉಪಯುಕ್ತ ಕೃತಿ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಚಂದನ ಪ್ರಿಂಟರ್ಸ್,**
ನಂ. 685, ರಾಮಾಂಜನೇಯ ರಸ್ತೆ, ಶ್ರೀನಗರ, ಬೆಂಗಳೂರು - 560 050
ಬೆಲೆ : ರೂ. **75/-**

ಇತ್ತೀಚೆಗೆ ಸಾಮಾನ್ಯರಿಂದ ಹಿಡಿದು ಬುದ್ಧಿಜೀವಿಗಳವರೆಗೆ ಹೆಚ್ಚು-ಬಳಕೆಯಲ್ಲಿ ಚರ್ಚೆಯಲ್ಲಿರುವ ಮಾತುಗಳೆಂದರೆ 'ಜಾಗತೀಕರಣ' ಮತ್ತು 'ಆರ್ಥಿಕ ಉದಾರೀಕರಣ'. ಜಗತ್ತಿನ ಎಲ್ಲಾ ಸಾಮಾಜಿಕ-ಆರ್ಥಿಕ ಸಮಾನತೆಗಳನ್ನು ಪರಿಹರಿಸುವ ಏಕೈಕ ಮಾರ್ಗ ಹಾಗೂ 'ವಿಶ್ವವೇ ಒಂದು ಗ್ರಾಮ' ಎಂಬ ಕಲ್ಪನೆಯೊಂದಿಗೆ ದಾಪುಗಾಲಿಡುತ್ತಿರುವ ಜಾಗತೀಕರಣದ ಹುಟ್ಟು, ಬೆಳವಣಿಗೆ, ಲಕ್ಷಣಗಳು, ಇತ್ಯಾದಿಗಳನ್ನು ಕುರಿತು ಬೆಳಕು ಚೆಲ್ಲುವ ಉಪಯುಕ್ತ ಕೃತಿ 'ಜಾಗತೀಕರಣ'. ಲೇಖಕರು ಮ. ಮಹೇಶನ್

ಪ್ರತಿಗಳಿಗಾಗಿ ಸಂಪರ್ಕಿಸಿ : **ನವ ಕರ್ನಾಟಕ ಪ್ರಕಾಶನ**
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001
ಬೆಲೆ : ರೂ. **95/-**



ನವ ದೆಹಲಿ ಮತ್ತು ಲಕ್ನೋಗಳಿಂದ ಪ್ರಕಟವಾಗುವ ದೇಶದ ಪ್ರತಿಷ್ಠಿತ ಇಂಗ್ಲೀಷ್ ದಿನಪತ್ರಿಕೆ 'ದಿ ಪಯನೀರ್' ನಲ್ಲಿ ಖ್ಯಾತ ದಲಿತ ಲೇಖಕ, ಚಿಂತಕ ಚಂದ್ರ ಬಾನ್ ಪ್ರಸಾದ್ ಅವರು ಪ್ರತಿವಾರ ಬರೆಯುತ್ತಿರುವ ವಿಚಾರ ಪ್ರಚೋದಕ ಜನಪ್ರಿಯ ಅಂಕಣ 'ದಿ ದಲಿತ್ ಡೈರಿ'. ಏಪ್ರಿಲ್ 1999 ರಿಂದ ಏಪ್ರಿಲ್ 29, 2001ರವರೆಗೆ ಬರೆದ ವಿವಿಧ ಲೇಖನಗಳು ಇಲ್ಲಿವೆ. ಅತ್ಯಂತ ಜನಪ್ರಿಯವಾಗಿರುವ ಈ ಅಂಕಣ ತೆಲುಗಿನ 'ವಾರ್ತಾ' ದಿನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದೆ. (ಪ್ರತಿಗಳಿಗಾಗಿ ಇಂಗ್ಲೀಷ್ ಅಥವಾ ಹಿಂದಿಯಲ್ಲಿ ವ್ಯವಹರಿಸಿ)

ಪ್ರತಿಗಳಿಗಾಗಿ ಸಂಪರ್ಕಿಸಿ : **ದಲಿತ್ ಮೀಡಿಯಾ ನೆಟ್‌ವರ್ಕ್**
ನಂ. ಡಿ40/ಎ, ಮಂಡವಾಲಿ, ದೆಹಲಿ - 110 092 ಬೆಲೆ : ರೂ. **500/-**